ರ. ನಂ. ಬಿ ೧೯೪೭ ವಾ. ಚಂ. ಅಚ್ಚೇವೆಚ್ಚ ಸೇರಿ ೪ ರೂಪಾಯಿಗಳು ಮಾತ್ರ.



ಪ್ರತಿ ರವಿವಾರ ಪ್ರಕಟಿಸಲ್ಪಡುವದು.

[illegible] — ಚಾಲ್ತಿ

ಸಂಪಾದಕರು— ವೆಂಕಟೇಶ ರೇತುರಾಜಾಚಾರ್ಯ ಕೆರೂರ

ವರ್ಷ ೬ | ಬಾಗಲಕೋಟೆ ರವಿವಾರ ಮಾಘ ಪುಷ್ಯ ಶು ೧೫ ಶೋಭಕೃತ ಮಾಘ ಬ ೧-೧೯೩೧ | ೩೯

kannadiga Date 1—1—1931

ಎ. ಬಿಳಗಿ [illegible] ಕಂಪನಿ ಲಿಮಿಟೆಡ್ ಬ್ರಾಂಚ್ ಆಫೀಸ್ ಬಾಗಲಕೋಟ್.

ಕೇವ್ಹಾದಾಗಂಗ ಅಮಿಂಡವಾದ ಭವ್ರತೆ.

ಸ್ವಲ್ಪೇ ಕೆಚ್ಚಿನ ಬಡ್ಡಿಯ ಆಶೆಗಾಗಿ ಅಸುರಕ್ಷಿತವಾದ [illegible] ಬಡ್ಡಿಯನ್ನು ಕೊಡಿಯೇ ಕಳೆದುಕೊಳ್ಳಬೇಡಿ

ಪ್ರತಿವರ್ಷವು ನಮ್ಮ ಬ್ಯಾಂಕವನ್ನು ಸರಕಾರಿ ಆಡಿಟರರು ತಿಪಾಸ ಮಾಡುತ್ತಾರೆ. ಶೇರುದಾರರಿಗೆ ೧೦೦ ಕ್ಕೆ ೮ ಟಕ್ಕೆ ದಂತೆ ಡಿವ್ಹಿಡೆಂಡ ಪಂಚಲ್ಪಟ್ಟಿದೆ. ಇದಕ್ಕೆ ಇನ್‌ಕಮ್‌ಟ್ಯಾಕ್ಸ ಬೀಳುವದಿಲ್ಲ.

ಠೇವುಗಳ ಬಡ್ಡೀದರವು ಕೆಳಗಿನಂತಿರುತ್ತದೆ

ಚಾಲತೀ ಠೇವು	ನೂರಕ್ಕೆ ವರ್ಷಕ್ಕೆ	೩॥
ಶೇವ್ಹಿಂಗ್ಸ ಬ್ಯಾಂಕ ಠೇವು	"	೪ ರಂತೆ
ವರ್ಷದ ಮುದ್ದತ ಠೇವು	"	೬ ದಂತೆ

ಹೆಚ್ಚಿನ ವಾಯ್ದದ ಠೇವಿನ ಮೇಲಿನ ಬಡ್ಡಿಯದರದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಸಮಕ್ಷವಾ ವಿಚಾರ ಮಾಡಬೇಕು.
ಹೋಮ ಠೇವ್ಹಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೊಡುತ್ತೇವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆತಿಸುತ್ತೇವೆ.

ಬಾಗಲಕೋಟ. ತಾ॥ ೨೨-೨-೧೯೩೦ | Sd/ D. R. Huddar ಸೆಕ್ರೇಟರಿ | Sd/ M. S. Mangalwedhekar ಜೇರಮನ್

ಮುಂದಿನ ಜೀವನದಬಗ್ಗೆ ವಿಚಾರಿಸಿರಿ.

ಪ್ರತಿ ಒಬ್ಬ ಪ್ರಾಪಂಚಿಕ ಮನುಷ್ಯನು ಮುಂದಿನ ಜೀವನದ ಸಲುವಾಗಿ ಹಣವನ್ನು ಸಂಪ್ರಹಿಸಿ ಇಡ ಬೇಕಾಗುವದು.
ಧನಸಂಪಾದನೆಯ ಶಕ್ತಿಯು ನಷ್ಟ ಹೊಂದುವ ಕಾಲವು ಒದಗಿದಾಗ, ಈ ಜೀವ ವಿಮೆಯೇ
ಅಮೌಲ್ಯವಾದ ಜೀವನದ ಸಾಧನವಾಗಿರುತ್ತದೆ. ಆದದರಿಂದ
ಇಂದೇ ನೀ ಇನ್ಸೂರೆಯಲ್ಲಿ ಸಾಪಿತವಾದ.

ಎಂಪಾಯರ ಆಫ ಇಂಡಿಯಾ ಲ್ಹಾಯಿಫ ಅಶ್ಯೂರೆನ್ಸ ಕಂಪನಿಯಲ್ಲಿ
ಜೀವ ವಿಮೆಯನ್ನು ಇಳಿಸಿರಿ.

ಚಾಲತಿಯಲ್ಲಿದ್ದ ವಿಮೆಯ ಹಣವು ಒಟ್ಟು ೧೦ ಕೋಟಿ ೮ ಲಕ್ಷಕ್ಕೆ ಮಿಕ್ಕಿದೆ.
ಕಂಪನಿಯ ಒಟ್ಟು ಆಸ್ತಿಯು ೩ ಕೋಟಿ ೫೮ ಲಕ್ಷಕ್ಕಿಂತ ಹೆಚ್ಚಾಗಿದೆ.
ಹಳ್ಳುದಾರರಿಗೆ ಕೊಟ್ಟ ರಕಮು ೨ ಕೋಟಿ ೮೪ ಲಕ್ಷಕ್ಕೆ ಮಿಕ್ಕಿದೆ.
ವಾರ್ಷಿಕ ಉತ್ಪನ್ನವು ೩೪ ಲಕ್ಷಕ್ಕೆ ಮೀರಿದೆ.
ಏಜಂಟರು ಬೇಕಾಗಿದ್ದಾರೆ ಅವರಿಗೆ ಬೇಕಾಗುವ ಸವಲತ್ತುಗಳು ಕೊಡಲ್ಪಡುವವು.
ಹೆಚ್ಚಿನ ಸಂಗತಿಗಳಿಗಾಗಿ ಕೆಳಗೆ ಕಾಣಿಸಿದವರಲ್ಲಿ ಬೇಕಾದವರ ಸಂಗಡ ಪತ್ರವ್ಯವಹಾರ ಮಾಡಬೇಕು:—

ಕೆಳಕ್ಕ ಬ್ರಾಂಚ ಆಫೀಸ ಉತ್ತನೂರು. | ಹೆಡ್ ಆಫೀಸ,ಮುಂಬೈ. | ಮೈಸೂರ ಬ್ರಾಂಚ ಆಫೀಸ ಬಸವನಗುಡಿ ಸ್ಟೇಟ ಬೆಂಗಳೂರ.

ಶವರಲೇಟ ಗಾಡಿಗಳ ಎಜನ್ಸಿಯು-

ನಾವು ಹೊಸದಾಗಿ ಶವರಲೇಟ ಗಾಡಿಗಳ ಎಜನ್ಸಿಯನ್ನು ಹಿಡಿದಿರುತ್ತೇವೆ. ಕೊಳ್ಳುವವರು ನಮ್ಮ ಕಡೆಯಿಂದಲೇ ತರಿಸಿಕೊಳ್ಳಬೇಕು. ಅಂದರೆ ಅಚಲ ಸೇವೆಯಾಗುವದು,



ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಜನರಿಗೆ ಉತ್ತಮ ಸರ್ವೀಸ
ಮೋಟಾರ ಮಾಲೀಕರ ಸೌಕರ್ಯಕ್ಕಾಗಿ ದೂರವಾಗಬೇಕೆಂದು
ಆರ್. ಜಿ. ಚವ್ಹಾಣ ಎಂಡ್ ಸನ್ಸ, ಬೆಳಗಾವ. ಇವರು ಮ್ಮ
ಜನರಲ ಮೋಟಾರ ಅ ಕ್ಸೆಸರಿ ಸ್ಟೋರ್ಸದ ಶಾಖೆಯನ್ನು
ತಾ॥ ೧೦ ಸೆಪ್ಟೆಂಬರ ೧೯೩೨ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಜಿ. ಎಂ. ಸಿ., ಹಿನ್ಸರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ನಮ್ಮಲ್ಲಿ ಶೇಕಂಡ ಹ್ಯಾಂಡ ಡಾಜ್ ಶೇವ್ರಲೋಲೇಟ ಮತ್ತು ಇಂಟರ ನ್ಯಾಸನಲ್ ಗಾಡಿಗಳು ಜಾಸ್ತಿಯಲ್ಲಿ ಇರುವವು. ಯೋಗ್ಯ ದರದಿಂದ ಮಾರಲಿಕ್ಕೆ ಸಿಗುತ್ತವೆ ಜಾಲಕ— ವಾಯ್. ಜೆ ಚವ್ಹಾಣ

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಿಸಿಂಗ ಮಾಡಿ ಕೊಡುವೆವು
ಬಾಗಲಕೋಟೆ—ಬೆಳಗಾವಿ ಬಾಗಲಕೋಟೆ ಇಳಕಲ್ಲ, ಸರ್ವೀಸ ಲಾಯಸ್ಸನ್ಸ ಧಾರವಾಡ

ಶುಲಭಕ್ರಯ! **ಡಾಕ್ಟರ ಜಿ ಬಿ. ಯವರ ಸುಗಂಧ ನಸ್ಯದಪುಡಿ.** ಶುಲಭಕ್ರಯ

ಪ್ರಸಿದ್ಧವಾದ ಈ ಸುಗಂಧ ನಸ್ಯಪುಡಿ ಕಂಡು ಹಿಡಿಯಲ್ಪಟ್ಟು, ಸಾವಿರಾರು ಜನರು ಇದನ್ನು ಉಪಯೋಗಿಸಿ ಸಾವಿರಾರು ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸರ್ದಿ ಗಾಯು ವ್ಯಾಧಿಗಳು ಯಾವವೆಂದರೆ— ಪಿನಸಿ ಜ್ವರ ತಲೆ ನೋವು ತಲೆಯಲ್ಲಿನ ಶೂಲ ಅರ್ಧಾಂಗವಾಯು ಪಾರ್ಶ್ವವಾಯು ಸನ್ನಿಪಾತ ಸನ್ನಿವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳ ಕರಿಹಾ ನಾಗುವಲ್ಲಿಗೆ ಕೆಲ್ಲ ವೀಲಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮನುಷ್ಯ ಸಾಧಾರಣ ನಸ್ಯದ ಸಂಗಡ ಸುಗಂಧ ಈ ನಸ್ಯದ ಪುಡಿಯಲ್ಲಿ ಒಂದು ಚಿಮಟಿಕೆಯಷ್ಟು ವಿಶ್ವಾಸಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹ ಕುಟುಂಬ ಪೋಷಣವಾಗಿ ಉಪಯೋಗಿಸುತ್ತಿರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡಿ ಒಂದಕ್ಕೆ ಕ್ರಯ ೪ ಆಣೆ ವ್ಹಿ. ಪಿ. ೪ ಆಣೆ, ಡಜನ್ ೧ ರೂ ಕ್ರಯ ರೂ ೩—೦—೦ ವ್ಹಿ ಪಿ ತಾಜಾ ೪ ಆಣೆ.

Registered Trade mark

ವಿಳಾಸ—ಗರಬಸವ ಆಂಡ್ ಕಂಪೆನಿ ಜನರಲ ಮರ್ಚೆಂಟ್ಸ ಪೋ. ಬಾಗಲಕೋಟ ಪಾರ್ಟಟೌನ ಮದರಾಸು.

☞ ದಯವಾಡಿ ನಮ್ಮ ಹೆಸರನ್ನು ಅಡ್ರೆಸ್ಸನ್ನು ಸರಿಯಾಗಿ ಕನ್ನಡದಲ್ಲಿ ಬರೆಯಿರಿ.

ಶ್ರೀಲಕ್ಷ್ಮೀಕರ ಕಾಲಜ್ಞಾನ

ದೇವಲೋಕದ ಚಿಂತಾಮಣಿಯು ಹೇಗೆ ಬೇಕು ಬೇಡವಾದ ಪದಾರ್ಥಗಳನ್ನು ಕೊಡುವದೋ ಹಾಗೆಯೆ ಮನುಷ್ಯನ ಇಷ್ಟಾರ್ಥವಾದ ಸಮಸ್ತ ಕಾರ್ಯಗಳು ಕಾಲಜ್ಞಾನವು ಅವರಿಗೆ ತಿಳಿಸುವ —

ಕ್ರಯವು ಇನ್ನಾರಿಗೂ ಇಲ್ಲದೆ

ಸರ್ವರಿಗೂ ಉಚಿತವಾಗಿ ತಿಳಿಸಲಾಗುವದು

ವೈದ್ಯವಿದ್ಯೆ

ಯುಕ್ತ ಅನುಭೋಗ್ಯ ವಿಚಾರದರ್ಶನ. ಅನೇಕ ರಹಸ್ಯಗಳಾವ ವಿಷಯಗಳನ್ನಿವೆ.

ವಿಜಯಂಟರ್ಸ—ಜಂಬುಲಿಂಗಪ್ಪಾ ಇಳಲಗಾವಿ.
ಸ್ಟೇಷನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಗಿರ್ಗಿ, ಜೇಸ್ತಾಬಜಾರ್, ಮದರಾಸು

ನೋಡಿದರೆ ಬಿಡದಿರುವ ಕಾದಂಬರಿಗಳು.

೧ ಸಾಹಾಕ್ಕೆ ಶುಲಚೇದಾಸ	೧—೪—೦
೨ ಜಲಂಧರ ನಾಟಕ	೦—೧೨—೦
೩ ಪಡಗಾವದ ವಿಜಯ	೧—೪ :
೪ ಅಂಬೆಕೆ	೧—೪—೦
೫ ಭಾಗ್ಯ ತಿಲಕ	೧—೦—೦
೬ ನರವೀರ ಕಾತೀದು	೧—೪—೦
೭ ಭಗವಾದಾಸ	೧—೦—೦
೮ ಸ್ವಾತಲೀಲೆ	೦—೧೪—೦
೯ ಶಂಕರಜೋಶಿ	೧—೪—೦
೧೦ ಭಯಂಕರ ಕೊಲೆ	೦—೧೪—೦೦
೧೧ ಇಂದುಮತಿ	೦—೧೨—೦
೧೨ ಸದ್ಗುಣಿ ಕಮಲಾ	೧—೦—೦

ಇತ್ಯಾದಿ ನಮ್ಮಲ್ಲಿ ಬರೆಯ ಪುಸ್ತಕಗಳು ತಮ್ಮ ಕೈಸೇರುವವು. ಕ್ಯಾಟಲಾಗಿಗೆ ಬರೆಯಿರಿ. ಪುಸ್ತಕಗಳಿಗೆ ಧಾರವಾಡದ ಕವಿಶಕ್ತಿ

ವಿಳಾಸ— ಪಿ ಪಿ ಕಾಳೆ
ಪೋ. ಆಕ್ಸಫೆಂಡವನ್ಸ, (ಪಿ. ಧಾರವಾಡ)

ಕನ್ನಡಿಗ.

ಕನ್ನಡಿಗ ಪುಸ್ತಕ ಮುದ್ರಣಾಲಯದಲ್ಲಿ

ಹನ್ನ ಕಾಗಸಿನ ಮೇ ಬಾಡಿ ಕಟ್ಟುವನಾನು
ಶಿಷ್ಟಾಚಿಸನವ ಮಾಡಿದಂಥ ಮಳ್ಳುಬಡೊಮ್ಮೆ
ಹನ್ನಾಡರು ಬನ್ನ ಮೇಣಬಸ್ತಿಯಂತೊಂಬು
ಚನ್ನಯಾಕಾಶದಲ್ಲಿ ।

ರೈತರ ಗೋಳನ್ನಿಷ್ಟು ಕೇಳಿರಿ

ವಿಜಾಪುರ ಜಿಲ್ಲೆಯು ಬರಗಾಲದ ತವರುಮನೆಗಳು. ಹೋದ ಹತ್ತಿಪ್ಪತ್ತು ವರ್ಷಗಳಲ್ಲಿ ಬರಗಾಲವು ಈ ಜಿಲ್ಲೆಯಲ್ಲಿ ಮನೆಮಾಡಿಕೊಂಡೇ ಇಂತಿದೆ. ಜಿಲ್ಲೆಯಲ್ಲಿ ಮೊದಲೇ ನಾಳಪ್ಪು ಸುಳಿಯಾಗುವದಿಲ್ಲ. ನಾಳಪ್ಪು ಮಳೆಯಾದರೂ, ನಡುವೆ ಏನಾದರೂ ಕಾಟ್ಟು ಬಂದು ಬೆಳೆಯೆಲ್ಲ ಕಟ್ಟು ಹೋಗುತ್ತದೆ. ಈ ವರ್ಷದ ಸ್ಥಿತಿಯನ್ನೇ ನೋಡಿರಿ. ಮಳೆಯು ಆಗಿತ್ತು. ಬೆಳೆಯು ನೋ ಜಾಸ್ತಿಯಾಗಿ ಬರುವ ಹಾಗಿತ್ತು. ಒಮ್ಮೆಲೆ ಗಾಳಿಯು ಬೀಸಿತು. ಬೆಳೆಗಳೆಲ್ಲ ಒಣಗಿಹೋದವು, ಹೊಟ್ಟೆ ಬಟ್ಟೆಗೆ ಸಾಕಾಗುವಷ್ಟು ಕಾಳುಕಡಿ ಒರುವದು ಕಟ್ಟಾಗಿ ಹೋಯಿತು.

ಹೋದ ಹತ್ತಿಪ್ಪತ್ತು ವರ್ಷಗಳಲ್ಲಿ ಬರಗಾಲವು ಕೆಲವು ವರ್ಷ ಸೌಮ್ಯವಾಗಿಯೂ ಕೆಲವು ವರ್ಷ ಭೀಕರವಾಗಿಯೂ ತನ್ನ ಅಳ್ಯಸ್ವರೂಪವನ್ನು ತೋರಿಸಿದ್ದರಿಂದ ರೈತರು ಹೇಗೋ ತೆರಿಗೆ ಮೊದಲಾದವುಗಳನ್ನು ತೆತ್ತಿ ತಮ್ಮ ಜವಾಬ್ದಾರಿ ಸಾಗಿಸಿಕೊಂಡರು. ಈ ವರ್ಷದ ಸ್ಥಿತಿಯು ಮಾತ್ರ ಹಾಗಿಲ್ಲ. ಹೊಲದಲ್ಲಿ ಬೆಳೆದಿದ್ದನ್ನು ಮಾರಿದರೂ ಸಹ ಹೊಟ್ಟೆಬಟ್ಟೆಗೆ ಸಾಕಾಗುವಷ್ಟು ರೊಕ್ಕವು ಬರುವಹಾಗಿಲ್ಲ. ಯಾಕೆಂದರೆ ಬೇಟಿಯಲ್ಲಿಯ ಧಾರಣೆಯು ತೀರ ಮಂದವಾಗಿದೆ. ಅದರಲ್ಲಿ ಸರಕಾರದವರು ತೆರಿಗೆಯನ್ನು ವಸೂಲುಮಾಡಿದರಂತೂ ತೀರಿ ಹೋಯಿತು. ಹೊಟ್ಟೆ ಒಟ್ಟೆಗಿಲ್ಲದೆ ಗೋಳಾಡುವ ಪ್ರಸಂಗವೇ ಇವರಿಗೆ ಬರುವದು

ಈ ಸಂಕಟದಿಂದ ರೈತರನ್ನು ಪಾರು ಮಾಡುವದು ಸರಕಾರದವರ ಬಿಡಲಾರದ ಕರ್ತವ್ಯವಾಗಿದೆ. ಇಂತಹ ದುರ್ಧರ ಪ್ರಸಂಗದಲ್ಲಿ ಅವರ ಕೈಹಿಡಿಯುವದು ಸರಕಾರದವರ ಧರ್ಮವಾಗಿದೆ. ಈ ವರ್ಷದ ತೆರಿಗೆಯನ್ನು ತಹಕೂಬಯಿಟ್ಟಾಗಲಿ ಇಲ್ಲವೆ ಸ್ವಲ್ಪ ಸೂಟು ಬಿಟ್ಟಾಗಲಿ ರೈತರನ್ನು ಉಳಿಸಿಕೊಳ್ಳುವದು ಅಧಿಕಾರಿಗಳ ಪವಿತ್ರ ಕರ್ತವ್ಯವಾಗಿದೆ ರಾಷ್ಟ್ರೀಯ ಪಕ್ಷದವರು ಪಾದಿಸಿ ಉದ್ಯೋಗದಲ್ಲಿ ಅಗಾಧ ಹೊಡಿಸಿಯೂ, ಮದ್ಯಪಾನ, ಜಹಾಪಾನ, ಧೂಮ್ರಪಾನ ಮೊದಲಾದ ದುರ್ವ್ಯಸನಗಳಿಂದ ಅವರನ್ನು ಬಿಡಿಸಿಯೂ, ಅವರ ಆಚರಣೆಯನ್ನು ಹೋಗಲಾಡಿಸಲೂ ಅಧಿಕಪ್ರಯತ್ನವನ್ನು ಅವರಿಷ್ಟೇ ಉಳಿಸಲೂ ಪ್ರಯತ್ನಿಸುತ್ತಿರುವರು. ಸರಕಾರದವರಾದರೂ ತಮ್ಮ ಕೈಯಲ್ಲಿದ್ದದ್ದನ್ನು ಮಾಡಿ ಅವರಿಗೆ ನೆರವಾದಲ್ಲಿ ಎಷ್ಟೋ ಒಳಿತಾಗಿ ಸಾಗುವದು. ಪಂಜಾಬ ಸರಕಾರದವರು ರೈತರ ಕರುಣಾಸ್ಥಿತಿಯನ್ನು ಕಂಡು ಗಿಂತೆ ತೆರಿಗೆಯನ್ನು ಸೂಟ ಬಿಡಬೇಕೆಂಬುದಾಗಿ ನಿರ್ಧರಿಸಿಕೊಂಡಿದ್ದಾರೆ ಮುಂಬಯಿ ಸರಕಾರದವರೂ ಇವರ ಕಷ್ಟಕ್ಕೆ ಮಿಡಬೇಕು.

ಇನ್ನು ರೈತರ ಕರ್ತವ್ಯ. ರೈತರು ತಮ್ಮ ತಮ್ಮಲ್ಲಿರುವ ಸ್ಥಿತಿಗತಿಗನ್ನು ಕಂಡಿತ ಅಧಿಕಾರಿಗಳಿಗೆ ಬಿಜ್ಞಾಪಿಸಿ, ತೆರಿಗೆಯನ್ನು ತಹಕೂಬ ಇಡಲಿಕ್ಕಾಗಲಿ ಇಲ್ಲವೆ ಸ್ವಲ್ಪ ಸೂಟ ಬಿಡಲಿಕ್ಕಾಗಲಿ ವಿನಂತಿ ಮಾಡಿಕೊಳ್ಳಬೇಕು. ಹೇಗೆ ಅರ್ಜಿಮಾಡಿಕೊಳ್ಳಬೇಕೆಂಬ ವಿಷಯವನ್ನು ಹೋದ ಸಲದ ಸಂಚಿಕೆಯಲ್ಲಿ ಕೊಟ್ಟಿದ್ದೇವೆ. ನಿನ್ನ ಶುಭಾಕಾಂಕ್ಷಿಗಳೂ ಹಿತೈಷಿಗಳೂ ಎಂದು ಹೊಗಳಿ ಕೊಚ್ಚಿಕೊಳ್ಳುತ್ತಿರುವ ರಾಜಕೀಯ ಪಕ್ಷಗಳ ಸಭಾಸದರಿಗೆ ಈ ಬಗ್ಗೆ ಪ್ರಯತ್ನ ಪಡಲು ಒತ್ತಾಯ ಪಡಿಸಬೇಕು. ಒಮ್ಮನಸಿನಿಂದ ಪ್ರಯತ್ನಿಸಿದಲ್ಲಿ ಯಾವುದಾದರೂ ಸಾಧ್ಯವಾಗುವದು.

ಡಾ. ಹರ್ಡೀಕರರನ್ನು ಹಿಂಸಿದರು

ಮುಂಬಯಿಯಿಂದ ಬಂದ ವಾರಂಟಿನಿಂದ ಹುಬ್ಬಳ್ಳಿಯ ಪೋಲೀಸ ಅಧಿಕಾರಿಗಳು ಕಾ| ೩೧ ನೇಯ ದಿವಸದಂದು ಡಾ. ಹರ್ಡೀಕರರನ್ನು ಸೆರೆಹಿಡಿದು ಅವರನ್ನು ಮೊನ್ನಿನ ದಿವಸ ಮುಂಬಯಿಗೆ ಕರೆದೊಯ್ದರು. ಅವರ ಮೇಲೆ ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೬ ನೆಯ ಕಲಮಿನನ್ವಯ ಆರೋಪವು ಹೊರಿಸಲ್ಪಟ್ಟಿರುವದು.

ಮುಂಬಯಿಯಲ್ಲಿ ಗೋಳೀಬಾರು

ಕಾ| ೪೧ನೆಯ ದಿವಸ ರಾತ್ರಿಯಲ್ಲಿ ಮುಂಬಯಿಯಲ್ಲಿ ಬೇರೆ ಬೇರೆ ಭಾಗಗಳಲ್ಲಿ "ಕಾಂಗ್ರೆಸ್ ದಿನ"ವು ಯಥಾಕಾಂಗವಾಗಿ ಆಚರಿಸಲ್ಪಟ್ಟಿತು. ಹೋದವರ್ಷ ಲಾಹೋರ ಕಾಂಗ್ರೆಸ್ಸಿದಲ್ಲಿ "ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಧ್ಯೇಯವಾಗಿರಬೇಕು" ಯೆಂಬುದಾಗಿ ತೀರ್ಮಾನವಾಗಿ ಪ್ರಾಪ್ತವಾದ ಪರಾವಿಗೆ ಬೆಂಬಲವನ್ನು ಕೊಡುವದರಲ್ಲಿ ಬಂದಿತ್ತು. ಸಾರ್ವತ್ರಿಕವಾಗಿ ಎಲ್ಲೆಲ್ಲಿ ಬೇರೆ ಬೇರೆ ಭಾಗಗಳಿಂದ ಜನರು ಮೆರವಣಿಗೆಗಳನ್ನು ಹೊರಡಿಸಿಕೊಂಡು, ಗಾಂಧಿ ರಾಜ್ಯವು ಪ್ರಾರಂಭವಾಯಿತು "ಎಂಬ ಕೂಗಿನ ಸ್ವರಮ್ಮು ತಮ್ಮ ತಮ್ಮ ಬೀದಿಗಳಲ್ಲಿ ಸಂಚರಿಸಿದರು. ಬಳಿಕ ಸಾರ್ವಜನಿಕ ಸಭೆ ಸೇರಿಸಿ ಕಾರ್ಯಕ್ರಮವನ್ನು ಪೂರ್ತಿಗೊಳಿಸಿದರು. ಪೋಲೀಸ ಅಧಿಕಾರಿಗಳು ಕೆಲವೆಲವು ಸ್ಥಳಗಳಲ್ಲಿ ಈ ಕಾರ್ಯಕ್ರಮಗಳಿಗೆ ಅಡ್ಡಿ ಮಾಡಿದರು. ಚೌಪಾತಿಯಲ್ಲಿ ಈ ಸಂಬಂಧವಾಗಿ ಜನರು ನೆರೆಯು ಹತ್ತಿದ ಕೂಡಲೆ ಪೋಲೀಸರು ಹಾಗು ಸೈನಿಕರು ಅವರನ್ನು ಡೊಣ್ಣೆಗಳಿಂದ ಹೊಡಿಸಿದರು. ಗಿರಗಾವ ಭಾಗದಲ್ಲಿಯೂ ಜನರಿಗೆ ಡೊಣ್ಣೆಯ ಏಟುಗಳು ಬಿದ್ದವು.

ಮಾಂಡವಿಭಾಗದ ಜನರು ರಾಷ್ಟ್ರಧ್ವಜ ವಂದನೆಯನ್ನು ಮುಗಿಸಿ ಮೆರವಣಿಗೆಯನ್ನು ತೆಗೆದುಕೊಂಡು ಹೊರಟರು. ಮೆರವಣಿಗೆಯು ಸ್ಯಾಮ್ಯುಯಲ್ ಸ್ಟ್ರೀಟಕ್ಕೆ ಮುಟ್ಟಿದಕೂಡಲೆ ಪೋಲೀಸರು ಅದ್ಧೆ ಲಡ್ಡಿಮಾಡಿದರು. ಜನರ ಮೇಲೆ ಹಲ್ಲೆಮಾಡಿ ರಾಷ್ಟ್ರಧ್ವಜಗಳನ್ನು ಕಿತ್ತಿ ಕೊಂಡರು. ಲಾಠಿಗಳಿಂದ ಜನರನ್ನು ಚದುರಿಸಿದರು. ಸುಮಾರು ೩೦ ಜನರು ಗಾಯ ಹೊಂದಿದರು.

ಕಾಲಬಾದೇವಿಯಲ್ಲಿಯೂ ಈ ಕಾರ್ಯಕ್ರಮವು ಆಚರಿಸಲ್ಪಟ್ಟಿತು. ಪೋಲೀಸರು ಹಾಗು ಸೈನಿಕರು ಅಲ್ಲಿಗೆ ಬಂದು ಲಾಠಿಗಳಿಂದ ಜನರನ್ನು ಚದುರಿಸಹತ್ತಿದರು. ಅವರು ಸ್ಥಳ ಬಿಟ್ಟು ಕದಲಲಿಲ್ಲ. ಬಳಿಕ ಪೋಲೀಸರು ಅವರ ಮೇಲೆ ಕಲ್ಲು ಒಗೆಯಹತ್ತಿದರು. ಅವರಾದರೂ ತಿರುಗಿ ಪೋಲೀಸರ ಮೇಲೆ ಕಲ್ಲು ಒಗೆದರು. ೨ ಗಂಟೆಯ ವರೆಗೆ ಹೀಗೆಯೆ ನಡೆಯಿತು. ಬಳಿಕ ಸಾರ್ಜಂಟನು ಜನರ ಮೇಲೆ ಸಿಟ್ಟಿಗೆದ್ದು ಗೋಳೀಬಾರು ಮಾಡಿದರು. ಸುಮಾರು ೫೫ ಜನರು ಗಾಯಹೊಂದಿದ್ದು, ಅವರೆಲ್ಲರೂ ಆಸ್ಪತ್ರೆಗೆ ಒಯ್ಯಲ್ಪಟ್ಟಿದ್ದಾರೆ.

ವಾಙ್ಮಯ ಪರಿಚಯ.

೧ ಚೈತನ್ಯ ಪಾಸ ಪತ್ರಿಕೆಯ ೩ ನೇ ಸಂಚಿಕೆಯು ನಮಗೆ ದೊರೆತಿದೆ. ಬಿಸಿನೆತ್ತರದ ತರುಣ ರಾಷ್ಟ್ರೀ ಕಸ್ತೂರಿ ಶಿವಶಂಕರರಾಯರು ಬಿ ಏ ಇವರ ಸಂಪಾದಕತ್ವದಲ್ಲಿ ಇಲಕಲ್ಲದಲ್ಲಿ ಹೊರ ಡುವದು. ವಾರ್ಷಿಕ ವರ್ಗಣಿ ಅ. ವೆ ಸೇರಿ ೨—೪—೦ ಮಾತ್ರ.

ಸಶಕ್ತಿತ ಜನರ ಲೇಖನಗಳಿಂದ ಕೂಡಿ, ಎಷ್ಟ ಬಗೆಯ ವಿಷಯಗಳನ್ನು ನಿಷ್ಪಕ್ಷಪಾತ ದಿಂದ ಚರ್ಚಿಸಿ ಜನತೆಯಲ್ಲಿ ಹೊಸ ಚೈತನ್ಯ ವನ್ನು ಹುಟ್ಟಿಸುವದೇ ಚೈತನ್ಯದ ಉದ್ದೇಶವಾ ಗಿದೆ. ಆದುದರಿಂದ ಎಲ್ಲ ಜನರು ಅವಶ್ಯವಾಗಿ ಈ ಮಾಸ ಪತ್ರಿಕೆಯನ್ನು ತರಿಸಿ, ಚೈತನ್ಯವು ಹೆ ಚ್ಚು ಉತ್ಸಾಹದಿಂದ ಚೇತರಿಸ ವಂತೆ ಮಾಡ ಬೇಕಾಗಿ ವಿನಂತಿ.

೨ ಪುಟ್ಟಯ್ಯನ ಕೃತಿಗಳು ೧ ನೇ ಭಾಗ ಕೃಷ್ಣ ದೇವರಾಯ ... ಬೆಂಗಳೂರಿನ ಎಂ ಜೆ ವಿ ಅವರು ಬೆಲೆ ೦—೧—

ಇದರಲ್ಲಿ ನಾಲ್ಕು ಐತಿಹಾಸಿಕ ಚಿಕ್ಕ ಪ್ರಬಂಧಗಳಿವೆ. ಕೆಲವು ಉದಾಹರಣೆಗಳು ನೆನಪಿಗಿಲ್ಲದಿರುವುದಾಗಿವೆ ಆದರೆ ಕೆಲವೆಡೆ ಗಟ್ಟಿ ಟೀಕೆಯು ಅತಿಶಯೋಕ್ತಿಯಾಗಿದೆ. ಒರಟಾಗಿರುವ ಬೆಟ್ಟದ ಇಳಿಜಾರಿನ ಶೈಲಿಯಲ್ಲಿ ಬರೆದಿದ್ದರೆ ಒಳ್ಳೆಯದು. ಸಂಧಿ ಸಮಾಸಗಳ ಕಡೆಗೆ ವಿಶೇಷ ಲಕ್ಷವನ್ನು ಕೊಟ್ಟಂತೆ ಕಾಣುವದಿಲ್ಲ. ಮುಂದಿನ ಸಲ ಆದಷ್ಟು ತಿದ್ದಿ ಬರೆಯ ಬೇಕಾಗಿ ವಿನಂತಿ. ಒಟ್ಟಿನ ಮೇಲೆ ಪುಸ್ತಕವು ಸಂಗ್ರಹಿಸಲು ಯೋಗ್ಯವಾಗಿದೆ

ಸ್ವೀಕಾರ

ತ್ಯಾಗವೀರ ಲಿಂಗರಾಜರ ಚರಿತ್ರೆ. ಲೇಖಕರು ಹರ್ಡೇಕರ ಮಂಜಪ್ಪನವರು, ಅಲಮಟ್ಟಿ ವೀರಶೈವ ವಿದ್ಯಾಲಯ. ಕ್ರಮ ೧೨ ಆಣೆ. ವಿದ್ಯಾರ್ಥಿ ಯ ಧಾವಶಾಕವಾಗಿ.

ಒಪ್ಪಿಗೆ ಹಾಗು ವಿಮರ್ಶೆ ಕ್ಯಾಲೆಂಡರುಗಳು.

ಶ್ರೀ ಕೃಷ್ಣ ಕೆಫೆಯನ್ನು ಪ್ರಸಿದ್ಧ ವ್ಯಾಪಾರಿಗಳು ಶ್ರೀ ಶಿರೋವಣಿ ಸಾರಂಗ ಯ ರಾಚಾರ್ಯರ ಕ್ಯಾಲೆಂಡರು ಕೈಸೇರಿದೆ. ಉಡುಪಿ ಶ್ರೀ ಕೃಷ್ಣನ ಸುಂದರ ಮೂರ್ತಿಯು ಚಿತ್ರವು ವರ್ಣಚಿತ್ರಿಕೆ, ನಮ್ಮಿನಲ್ಲಿ ದುಃಖನೆ ತೆಗೆದುಕೊಳ್ಳಲು ಅನುಕೂಲವಾಗುವದು

ಜಿಮ್ಖಾನದ ಆಕರ್ಷಕ ನಿಗ್ರಹ ಫಾರ್ಮಾ ಸಿಯು ಚಿಕ್ಕ ಡಾಯರಿಯು ಕೈಸೇರಿದೆ. ಸಂಕ್ಷಿಪ್ತವಾದ ಟಿಪ್ಪಣಿಗಳನ್ನು ಬರೆದುಕೊಳ್ಳಲು ಉಪಯುಕ್ತವಾಗಿದೆ. ನಾಲ್ಕಾಣೆಯು ಅಂಚೆ ತಿಕೀಟುಗಳನ್ನು ಕಳಹಿಡಲ್ಲಿ ದೊರೆಯುವದು.

೩ ಮೈಸೂರಿನ ಸುಪ್ರಸಿದ್ಧ ಹಾರ್ಮೋನಿಯಂ ವ್ಯಾಪಾರಿಗಳಾದ ಎಂ. ಎಸ್ ಸಿದ್ದಪ್ಪ ಅ್ಯಂಡ ಬ್ರದರ್ಸ ಇವರ ಜನವರಿಯ, ಕ್ಯಾಲೆಂ ಡರುಗಳು ಕೈಸೇರಿವೆ.

೧ ಈಶ್ವರ ಹಾಗೂ ವಿಷ್ಣುಲೀಲಾದರ ವಾದ ದೇವರ ೧೭ ಚಿತ್ರಗಳಿಂದ ಕೂಡಿ ಅನೇಕ ವಿಷಯಗಳನ್ನೆತ್ತಿಕೊಂಡ ದೊಡ್ಡ ಆಕಾರದ ಒಂದೇ ಹಾಳೆಯ ಕ್ಯಾಲೆಂಡರು. ಬೆಲೆ ೫೦ ಕ್ಕೆ ೦—೧೫—೦.

೨ ಅನೇಕ ಬಣ್ಣಗಳಲ್ಲಿ ರವಿವರ್ಮ ಪ್ರೆಸ್ಸಿ ನಲ್ಲಿ ಮುದ್ರಿತವಾದ, ಪಾರ್ವತಿ ಪರಮೇಶ್ವರ, ಗಣಪತಿ, ಅಂಬಿಕ ಮತ್ತು ಮೂರ್ಖಸಹಿತ ಶಿವಪಂಚಾಯತನ ಕ್ಯಾಲೆಂಡರು ಮನಮೋಹಕವಾಗಿದೆ. ಬೆಲೆ ೧೫ ಕ್ಕೆ ೦—೧೫—೦.

೩ ದೊಡ್ಡ ಆಕಾರದ ಅಭಿಂಚ ಕ್ಯಾಲೆಂ ಡರು ೩ ಬಣ್ಣಗಳಲ್ಲಿ ಅನೇಕ ಚಿತ್ರಗಳಿಂದ ಕೂಡಿ ಮನೋಹರವಾಗಿದೆ. ಬೆಲೆ ೧೫ ಕ್ಕೆ ೦—೧೫—೦

೪ ಪಾಕೆಟ್ ಕ್ಯಾಲೆಂಡರು. ಸರಕಾರದ ರಜೆ ದಿನಗಳು, ರಾಹು ಗುಳಿಕಾಲ ಗೌರಿ ಪಂಚಾಂಗ, ಕೃಷ್ಣಚಕ್ರ ಪ್ರಯಾಣಕ್ಕೆ ಶುಭ ಶಕುನಗಳು, ಪೊಸ್ಟಾಫೀಸ ವಿವರ, ಪ್ಯಾಕಿಂಗ ಅ್ಯಾಸ್ಪಿನ್ ಬೆರಿಸಿದ ವಿಷಯಗಳಿಂದ ತುಂಬಿದೆ ಎಲ್ಲಿಂದ ಸಂಗ್ರಹಿಸಲು ಯೋಗ್ಯವಿದೆ. ಬೆಲೆ ೫೦ ಕ್ಕೆ ೦—೧೪—೦

೫ ಇಂಡಿಪೆಂಡೆಂಟ್ ಪಾಕೆಟ್ ಕ್ಯಾಲೆಂಡರು ಸಂಕ್ಷಿಪ್ತವಾಗಿ ಟಿಪ್ಪಣಿಗಳನ್ನು ಬರೆದುಕೊಳ್ಳಲು ಅನುಕೂಲವಾಗಿದೆ. ಬೆಲೆ ೧೫ ಕ್ಕೆ ೦—೧೦—೦.

ಮೇಲಿನ ಎಲ್ಲ ಕ್ಯಾಲೆಂಡರುಗಳನ್ನು ತರಿಸಿ ಕೊಳ್ಳುವವರು ೦—೮—೦ ಆಣೆ ತಿಕೀಟು ಕಳಿ ಸಿದರೆ ದೊರೆಯುವವು

ಮಗುವಿಯೆಲ್ಲಿಯ ಲಜ್ಜೆಯನ್ನು ಹಿಡಿದವರು

ಸ್ವಯಂಪ್ರೇರಣದ ಪತ್ರಿಕೆಗಳನ್ನು ಹೊಂಚಿಕೊಂಡಿರುವ ಸಲುವಾಗಿ ಮುಂಬಯಿ ಯಲ್ಲಿ ಇತ್ತೀಚೆಗೆ ಒಂದು ದಿವಸ ಲಜ್ಜೆಯಂ ಸ್ಪೇನಕ್ಕೆ ಕೈದು ಮಾಡಲ್ಪಟ್ಟಿದ್ದಾರೆ. ಕ್ರಿ. ಅಾ. ಅವೆಂಡಮೆಂಟ ಕಾಯಿದೆಯ ೧೭ನೆಯ ಕಲಮಿ ನನ್ವಯ ಇವರ ವೇಲೆ ಆರೋಪವು ಹೊರಿಸ ಲ್ಪಡುವದಾಗಿ ತಿಳಿಯುತ್ತದೆ.

ಶ್ರೀಮತಿ ನೆಹರೂರವರನ್ನು ಹಿಡಿದವರು

ಪಂಡಿತ ಜವಾಹರಲಾಲರ ಪತ್ನಿಯು ರಾದ ಶ್ರೀಮತಿ ಕಮಲಾ ನೆಹರೂರವರು, ಈ ನಿರಾಕರಣೆಯ ಜಪಿವಳಿಯ ಸಂಬಂಧದಿಂದ ಕ್ರಿ ಅಾ ಅವೆಂಡಮೆಂಟ ಕಾಯಿದೆಯ ೧೭ನೆಯ ಕಲಮಿನನ್ವಯ ಅಲಜಾಬಾದದಲ್ಲಿ ತಾತ್ಕಾಲಿ ದಿವಸ ಸೆರೆಯಲ್ಲಿಟ್ಟಿದ್ದಾರೆ.

ಸೋಜಿಗದ ಸುದ್ದಿಗಳು

ಮೀನುವು ನಳವನ್ನು ಬುಡಮೇಲು ಮಾಡಿತು

ಕೆನಡಾದಲ್ಲಿ ಒಬ್ಬ ಮೀನಗಾರನಿಗೆ ಹುಗುಳಿ ನದಿಯು ಮುಖದಲ್ಲಿ ಒಂದು ಮೀನಿನ ಸಿಕ್ಕಿದೆ. ಅದು ೬ ಪೌಂಡು ೧೫ ಔನ್ಸು ಭಾರ ಇದ್ದು, ಅದರ ತೂಕಕ್ಕೆ ಸುಮಾರು ೫ ಮಣ ಇದೆ. ಅದು ಏಣಿಯು ಹಾಗು ಬಾಯಿ ಕ್ರಮ ವಾಗಿ ೧೮ ಇಂಚು ೩ ಇಂಚು ಅಗಲವಿದೆ. ಮೀನಗಾರನ ಒಲೆಯೊಳಗಿಂದ ಪಾರಾಗಿ ಹೋ ಗಲು, ಅದು ಪ್ರಯತ್ನ ಪೂರ್ವಕವಾಗಿ ನಾವನ್ನು ಬುಡಮೇಲು ಮಾಡಿತು. ಎರಡನೆಯ ಮೀನ ಗಾರರು ಒಂದು ಆವರಣವನ್ನು ಸಂಕಟದಿಂದ ಪಾರು ಮಾಡಿದರು ಈಗ ಒಬ್ಬ ಖಾನಾವಳಿಯವನು ಅದನ್ನು ಕೊಂಡುಕೊಂಡಿದ್ದಾನೆ.

ಮಕ್ಕಳನ್ನು ಹಡೆಯುವ ಜಿದ್ದು

ಕಾನಡಾ ದೇಶದ ಚಾರ್ಲಸ ವಿಲ್ಲರ್ ಎಂಬ ಬ್ಯಾರಿಸ್ಟರು ೧೯೩೬ ರಲ್ಲಿ ಮರಣ ಹೊಂದಿದರು. ಸಾಯುವಾಗ ಅವರು ಹತ್ತು ವರ್ಷಗಳಲ್ಲಿ ಹೆಚ್ಚು ಮಕ್ಕಳನ್ನು ಹಡೆಯುವ ತಾಯಿಗೆ ಒಂದು ಲಕ್ಷ ರೂಪಾಯಿ ಬಕ್ಷೀಸು ಕೊಡ ಬೇಕೆಂಬುದಾಗಿ ವ್ಯಾಪತ್ರಪತ್ರಿಕೆ ಬರೆದಿಟ್ಟರು. ಈ ಬಗ್ಗೆ ಆ ದೇಶದಲ್ಲಿ ಈಗ ಸ್ಪರ್ಧೆ ನಡೆದಿದೆ. ಸ್ಪರ್ಧೆ ಯಲ್ಲಿ ಸೇರಿರುವ ಮಿಸೆಸ್ ಒಗ್ಡೇಟೊ ಎಂಬ ವರು ತಮಗೆ ಒಂದು ವರ್ಷ ತುಂಬುವದರೊಳಗಾಗಿಯೆ ೨೦ ಮಕ್ಕಳನ್ನು ಹಡೆದಿರುವರು. ಮಿಸೆಸ್ ಬ್ರಾನ್ ಎಂಬುವವರು ೪೭ ನೆಯ ವರ್ಷದಲ್ಲಿ ೨೬ನೆಯ ಗಂಡುಮಗುವನ್ನು ಹೆತ್ತಿರುವರು

ರಾಷ್ಟ್ರಕ್ಕೆ ಜಯವಾಗಲಿ ವಂದೇಮಾತರಂ ರೈತರಿಗೆ ಜಯವಾಗಲಿ

ರೈತರೆಂದರೆ ರಾಷ್ಟ್ರ; ರಾಷ್ಟ್ರವೆಂದರೆ ರೈತರು

ರೈತರ ಹಿತವೇ ರಾಷ್ಟ್ರದ ಹಿತವು.

ರೈತರು ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕು

(೧) ಹಿಂದುಸ್ಥಾನದಲ್ಲಿ ೩೧ ಕೋಟಿ ಜನರಿರುವರು. ಅವರಲ್ಲಿ ೨೮ ಕೋಟಿ ಜನರು ಹಿಂದುಸ್ಥಾನದ ೭ ಲಕ್ಷ ಹಳ್ಳಿಗಳಲ್ಲಿರುವರು. ಆ ೭ ಲಕ್ಷ ಹಳ್ಳಿಗಳಲ್ಲಿರುವವರಲ್ಲಿ ನೂರಕ್ಕೆ ೭೨ ರಷ್ಟು ಜನರು ಒಕ್ಕಲತನ ಮಾಡಿ ಹೊಟ್ಟೆ ತುಂಬಿಕೊಳ್ಳುವರು. ಆದುದರಿಂದ ಹಿಂದುಸ್ಥಾನವೆ ರೈತರ ರಾಷ್ಟ್ರವು, ಹಿಂದುಸ್ಥಾನದ ರೈತರೆಂದರೇ ಹಿಂದೀ ರಾಷ್ಟ್ರವು, ಎಂಬುದು ಸ್ಪಷ್ಟವು.

(೨) ರೈತರ ಹಿತವನ್ನು ಸಾಧಿಸುವದು ಎಲ್ಲರ ಕರ್ತವ್ಯವು. ಮಹಾತ್ಮಾ ಗಾಂಧಿಯವರು ಈ ರೈತರಿಗೇ ದರಿದ್ರ ನಾರಾಯಣರೆಂದು ಹೆಸರಿಟ್ಟಿರುವರು. ಆ ದರಿದ್ರ ನಾರಾಯಣನ ಸೇವೆಗಾಗಿಯೇ, ಆ ರೈತನ ಹಿತಕ್ಕಾಗಿಯೇ ಅವರು ತಾದೀ ಚಳವಳಿಯನ್ನು ಹೂಡಿದರು. ಸ್ವದೇಶೀ ತತ್ವವನ್ನು ಪದೇಶಿಸಿದರು ಮದ್ಯದ ಬಹಿಷ್ಕಾರವನ್ನು ಸಾರಿದರು. ಉಪ್ಪಿನ ಕರದ ಸತ್ಯಾಗ್ರಹವನ್ನಾರಂಭಿಸಿದರು. ಭೂಕಂದಾಯವನ್ನು ಅರ್ಧ ಮಾಡಿರೆಂದು ಹೇಳಿದರು. ಸರಕಾರೀ ಖರ್ಚನ್ನು ಅರ್ಧಕ್ಕೆಳಿಸಿರೆಂದು ಬೇಡಿಕೊಂಡರು. ಆದರೆ ದರಿದ್ರ ನಾರಾಯಣನ, ಹಿಂದುಸ್ಥಾನದ ರೈತರ ಈ ಸೇವೆಗಾಗಿ ಅವರಿಗೆ ಮತ್ತು ಅವರ ಜೊತೆಗಾರರಾದ ೬೦೦೦ ಸ್ತ್ರೀಪುರುಷರಿಗೆ ಸರಕಾರದವರು ಸೆರೆಮನೆ ಕಾಣಿಸಿದರು.

(೩) ಈ ರೈತರ ಹಿತವನ್ನು ಯಾರು ಸಾಧಿಸುವದಿಲ್ಲವೋ ಅವರು ಈ ದೇಶದ ಶತ್ರುಗಳು. ಈ ರೈತರ ಹಿತವಾಗುವಂತೆ ಆಳದಿರುವದು ಇಲ್ಲಿ ಬಹು ದಿವಸ ಆಳಲಾರರು. ಈ ರೈತರ ಹಿತಮಾಡುವವರನ್ನು ದಂಡಿಸುವವರು ಇಲ್ಲಿ ಬಹು ದಿವಸ ಬಾಳಲಾರರು. ಮದ್ಯಪಾನಕ್ಕೆ ಸಹಾಯ ಮಾಡುವವರು, ಪರದೇಶೀ ಬಟ್ಟೆಗಳನ್ನುಪಯೋಗಿಸುವವರು, ಬ್ರಿಟಿಶರ ಸರಕಿಗೆ ಉತ್ತೇಜನ ಕೊಡುವವರು, ಭೂಕಂದಾಯವನ್ನು ಏರಿಸುವರು, ಆಳುವಾಗ ಮಿತಿಮೀರಿ ಖರ್ಚು ಮಾಡುವವರು ಉಪ್ಪಿನ ಮೇಲೆ ಕರ ಹೇರುವವರು ರೈತರ ಘಾತ ಮಾಡುತ್ತಿರುವರು.

(೪) ಸದ್ಯಕ್ಕೆ ಇಲ್ಲಿಯ ರೈತರ ಸ್ಥಿತಿ ಏನಿದೆ? ಜಗತ್ತಿನ ಎಲ್ಲ ರೈತರಿಗಿಂತ ಇಲ್ಲಿಯ ರೈತನು ಬಡವನು. ಅವನ ದಿನದ ಸರಾಸರಿ ಉತ್ಪನ್ನ ರೂ. ೦-೧-೭ ಮಾತ್ರ! ಇಂಗ್ಲಂಡದ ರೈತನ ದಿನದ ಸರಾಸರಿ ಉತ್ಪನ್ನ ೨-೦-೦ ಇರುವದು! ಇಲ್ಲಿಯ ರೈತನ ಸರಾಸರಿ ಆಯುಷ್ಯ ಪ್ರಮಾಣ ೨೩ ವರ್ಷ ಮಾತ್ರ. ಇಂಗ್ಲಂಡದ ರೈತನ ಸರಾಸರಿ ಆಯುಷ್ಯ ಪ್ರಮಾಣ ೪೬ ವರ್ಷ! ಮುಂಬಯಿ ಇಲಾಖೆಯಲ್ಲಿ ಒಬ್ಬ ರೈತನ ಕುಟುಂಬದ ಪಾಲಿಗೆ ವರ್ಷಕ್ಕೆ ೭೨ ರೂಪಾಯಿ ಸಾಲವು! ಬೆಳೆ ಬರಲಿ, ಬರದಿರಲಿ, ೩೦ ವರ್ಷಗಳ್ಕಿಮ್ಮೆ ಹೆಚ್ಚುತ್ತ ಬಂದ ಸೂದಿ ಕಂದಾಯ ಕೊಡುವದು ಅವನ ಹಣೇಬರಹಕ್ಕೆ ತಪ್ಪಿದ್ದಲ್ಲ.

(೫) ಕರ್ನಾಟಕದಲ್ಲಿ ಕಾರವಾರ ಜಿಲ್ಲೆಯಲ್ಲಿಯಂತೂ ಸರಕಾರದವರು ಅಡವೀ ಬೆಳೆಸುವ ಘೋರಣವನ್ನೇ ಸ್ವೀಕರಿಸಿದಂತೆ ತೋರುವದು ಬಿಗಿಯಾದ ಜಂಗಲ ಕಾನೂನು, ವನ್ಯ ಪಶುಗಳನ್ನು ಕೊಲ್ಲಲಿಕ್ಕೆ ಸಹ ಸಾಕಷ್ಟು ಬಂದೂಕು ಕೊಡದಿರೋಣ, ಜಂಗಲ ಬೆಳಿಸೋಣ, ಚೀಜ್ವರ ಇದರಿಂದ ಆ ಜಿಲ್ಲೆಯ ಜನ ಸಂಖ್ಯೆಯೇ ಕಡಿಮೆಯಾಗುತ್ತ ನಡೆದಿದೆ. ವಿಜಾಪೂರ ಜಿಲ್ಲೆ, ಧಾರವಾಡದ ಪೈಕಿ ರೋಣ ನವಲಗುಂದ ತಾಲೂಕುಗಳು, ಬೆಳಗಾಂವಿಯ ಪೈಕಿ ಅಥಣೀ ತಾಲೂಕು ಮುಂತಾದ ಸ್ಥಳಗಳಲ್ಲಿ ೪-೫ ವರ್ಷಗಳಲ್ಲಿ ಒಮ್ಮೆ ಬೆಳೆ ಬಂದರೆ ರೈತರ ಭಾಗ್ಯ- ಗೋಕಾಕ, ಕೋಡ, ಮುಧೋಳ ಮುಂತಾದ ಸ್ಥಳಗಳಲ್ಲಿ ನೀರು ಕೊಡದೆ ಸರಕಾರದವರು ನೀರಸಾರಿಗೆ ವಸೂಲ ಮಾಡುವರು, ಭೂಕಂದಾಯದ ಭಾರವಂತೂ ಸೈ. ದೇಶದಲ್ಲಿ ಹೆರಿದ ಬೇರೆ ಕೆರಗಳ ಭಾರವೂ ಕೊನೆಗೆ ಭೂಮಿಯಲ್ಲಿ ದುಡಿಯುವ ರೈತರ ಮೇಲೆಯೇ ಬೀಳುವದು. ಯಾಕೆಂದರೆ ಜಮೀನದಾರರಾಗಲಿ, ವ್ಯಾಪಾರಸ್ಥರಾಗಲಿ, ತಮ್ಮ ಮೇಲೆ ಬಿದ್ದ ಭಾರವನ್ನೆಲ್ಲ ರೈತರ ಮೇಲೆಯೇ ಹಾಕುವರು. ಸ್ವರಾಜ್ಯ ಸರಕಾರವು ಈ ಭಾರವನ್ನು ಕಡಿಮೆ ಮಾಡಲಿತ್ನಿಸುವದು. ಪರಕೀಯ ಸರಕಾರವು ಈ ಭಾರವನ್ನು ಹೆಚ್ಚಿಸಲೆನಿಸುವದು. ಮುಂಬಯಿಯ ಸರಕಾರದವರು ಮತ್ತ ಈ ಸಾರೆಗೆ ೫ ಕೋಟಿ ರೂ ಹೊಸ ಕರಗಳನ್ನು ಹೇರುವವರಿದ್ದಾರಂತೆ.

(೬) ಈ ರೀತಿ ಕರ್ನಾಟಕದಲ್ಲಿಯು ರೈತರ ಮೇಲಿನ ಭಾರವು ಮಿತಿಮೀರಿ ಬೆಳೆದು ಅಸಹ್ಯವಾಗಿದೆ. ಈ ಸಾರೆಯಂತೂ ಹತ್ತಿ, ಜೋಳ, ಶೇಂಗಾ, ಅಡಿಕೆ ಮುಂತಾದವುಗಳಿಗೆ ಧಾರಣೆಯೇ ಇಲ್ಲ. ಅಂದಬಳಿಕ ರೈತರು ತಮ್ಮ ಭಾರವನ್ನು ಹೇಗೆ ಸಹಿಸಬೇಕು? ಕೆರಗಳನ್ನು ಹೇಗೆ ಕೊಡಬೇಕು? ಆದರೆ ಕೇಳುವವರಾರು? ಅಧಿಕಾರಿಗಳು ಇತ್ತ ಕಡೆಗೆ ಸಂಪೂರ್ಣ ದುರ್ಲಕ್ಷ ಮಾಡುವರು. ಇಷ್ಟೇ ಅಲ್ಲ. ಬೆಳೆ ಬಾರದಿದ್ದರೂ ಬೆಳೆ ಬಂದಿದೆ ಎಂದು ಬರೆದು ರೈತರ ಕಡೆಯಿಂದ ಬೋರಿನಿಂದ ಹಪ್ತೆ ವಸೂಲ ಮಾಡುವರು ಬಾರಡೋಲಿ ಅಥವಾ ಬೋರಸದ ರೈತರಂತೆ ಇವರೂ ಗಟ್ಟಿಗರಾದರೆ ಅಧಿಕಾರಿಗಳು ವಸೂಲು ಮಾಡುವದು ತಿಳಿಯುತ್ತಿತ್ತು!

(೭) ಒಟ್ಟಿಗೆ ನೋಡಲಾಗಿ ರೈತರು ಶರೀರದಿಂದ ದುರ್ಬಲರಾಗಿರುವರು, ತೀರ ಒಡವರಾಗಿರುವರು, ಸಾಲಗಾರರಾಗಿರುವರು. ಶಿಕ್ಷಣವಿಲ್ಲದೆ ಅಜ್ಞಾನಿಗಳಾಗಿರುವರು. ರೈತರೇ! ಈ ನಮ್ಮ ಸ್ಥಿತಿಯನ್ನು ಯಾರು ಸುಧಾರಿಸುವರು? ಪಟ್ಟಣಿಗರು ಸುಧಾರಿಸುವರೋ? ಇಲ್ಲ. ಅವರು ತಮ್ಮ ಚೂಪಾ ಸಿಗರೇಟಿನ ನಾಟಕ, ಸಿನೇಮಾ ಮುಂತಾದ ಟ್ಹೈನಗಳಲ್ಲಿ ಪೇಲಿ ಳಿಯುವರು. ಕಲಿತವರು, ವಿದ್ವಾಂಸರು ನಿಮಗಾಗಿ ಹೆಣಗುವರೋ? ಛೇ. ಅವರಲ್ಲಿ ಬಹು ಜನರು ಸರಕಾರೀ ನೌಕರಿಯಲ್ಲಿ ಸಿಕ್ಕು ನಿಮ್ಮ ಮೇಲೆ ಅವಲು ಮಾಡುತ್ತಿರುವರು. ನಿಮ್ಮವರು ಕೆಲವರು ನಿಮಗೆ ಅನುಕೂಲ ಮಾಡಾಡುವರು, ಬರೆಯುವರು. ಇದಕ್ಕೆ ಹೆಚ್ಚು ಅವರು ಏನೂ ಮಾಡಲಾರರು. ಸಿರಿವಂತರಲ್ಲಿ, ದುಡ್ಡಿದ್ದವರಲ್ಲಿ, ಜಮೀನದಾರರಲ್ಲಿ ಹಲವರನ್ನು ಬಿಟ್ಟು ನಿಮ್ಮವರು ತಮ್ಮ ಸ್ವಾರ್ಥದಲ್ಲಿ ತಾವಿರುವರು. ಅಂದ ಮೇಲೆ ನಮ್ಮುದ್ಧಾರವನ್ನು ಯಾರು ಮಾಡಬೇಕು? ನೀವೇ!

(೮) ಈ ಭೂಮಿ ನಮ್ಮದು. ಇದರಲ್ಲಿ ನೀವು ದುಡಿಯುವಿರಿ. ನೀವು ಬಿತ್ತುವಿರಿ. ನೀವು ಬೆಳೆಯುವಿರಿ. ನೀವು ಬೆಳೆದುಕೊಟ್ಟದ್ದನ್ನು ಉಳಿದವರು ಉಣ್ಣುತ್ತೇವೆ. ಆದರೆ ಈಗ ಎಲ್ಲರೂ ಹಿಂದು ಬಿದ್ದಿದ್ದನ್ನು ನೀವು ಉಣ್ಣುತ್ತಿದ್ದೀರಿ. ಹೀಗೆ ತಿರ್ಕ ವ್ಯವಸ್ಥೆಯಿರುವುದು ಆಗಿದೆ. ಆದುದರಿಂದ ಬಡತನವೆಂದರೆ ನಮ್ಮ ದೈವದಿಂದ ಬಂದದ್ದು ಎಂದು ಸ್ವಸ್ಥ ಕೂಡಬೇಡಿರಿ! ಏಳಿರಿ, ಎಚ್ಚರಗೊಳ್ಳಿರಿ! ನಮ್ಮ ದೈವವು ನಮ್ಮ ಕೈಯಲ್ಲಿದೆ "ನಾವು ಮಾಡಿದು ಹುಟ್ಟಿಸಿದ್ದರಲ್ಲಿ ನಮ್ಮ ಹೊಟ್ಟೆಗೆ, ಬಟ್ಟೆಗೆ ಇರುವ ಮನೆಗೆ, ಮತ್ತು ಶಿಕ್ಷಣಕ್ಕೆ ಅವಶ್ಯವಿದ್ದಷ್ಟು ನಮಗೆ ದೊರೆಯಲೇ ಬೇಕು. ಎಂದು ಹಟ ಹಿಡಿಯಿರಿ ಅಳವಡದ್ದರಲ್ಲಿ ಸರಕಾರವು ಕಂದಾಯ ತಕ್ಕೊಳ್ಳಲಿ. ಈ ಹಬವನ್ನು ಸಾಧಿಸಿರಿ. ಇದಕ್ಕಾಗಿ ಸಂಘಗಳನ್ನು ಮಾಡಿಕೊಳ್ಳಿರಿ. ಹೊಸ ಹಾದಿಯನ್ನು ಶೋಧಿಸಿರಿ. ಬಾರಡೋಲಿ ರೈತರಂತೆ ಕಷ್ಟ ಸಹಿಸಲು ಸಿದ್ಧರಾಗಿರಿ.

(೯) ಭೂಕಂದಾಯ ಅರ್ಧವಾಗಬೇಕು, ರಾಜ್ಯ ಧಾರದ ಮೇಲೆ ಈಗಿನ ಅರ್ಧದಷ್ಟಾಗಬೇಕು, ಎಂದು

ಮಹಾತ್ಮಾ ಗಾಂಧಿಯವರಂತೆ ಹದ ಹಿಡಿಯುರಿ ಅಂದರೆ ಮಾತ್ರ ನಿಮ್ಮಮಂಲನ ಭಾರವು ಕಡಿಮೆಯಾಗುವದು. ಈ ಕಾರ್ಯದಲ್ಲಿ ನಿಮ್ಮಗುಂಗಳು ನೀವೆ, ನಿಮ್ಮ ಮಾರ್ಗದರ್ಶಕರು ನೀವೆ, ನಿಮ್ಮ ಉದ್ಧಾರಕರ್ತರು ನೀವೆ!

ರಂಗನಾಥ ರಾಮಚಂದ್ರ ದಿವಾಕರ
ಧಾರವಾಡ,
ವೀರನಗೌಡಾ ಸ್ಟಿ. ಪಾಟೀಲ
ಬೆಳಗಾವಿ,

ಕರ್ನಾಟಕ

ಕ್ರಿ. ಆ ಅವೆಂಡವೆಂಟ ಕಾಯ್ದೆಯು ೧೯೩೫ನೆಯ ಕಲಮಿನವ್ವಯ ವಿಚಾರಣೆಗೆ ಗರಿ ಮಾಡಲ್ಪಟ್ಟ, ಸುಪ್ರಸಿದ್ಧ ಕಾಂಗ್ರೆಸ್ ಕಾರ್ಮಿಕ ಕರ್ತರಾದ ಶ್ರೀ ಡಿ.ಕೋಟಂಕ ನಾಡಗೀರ, ಬಿ. ಎ ಎಲ್. ಎಲ್. ಬಿ ವಕೀಲರ. ಇವರ ಖಟ್ಲೆಯ ವಿಚಾರಣೆಯು ತಾ॥ ೩೦ ನೆಯ ದಿವಸ ಗದಗಿನ ಮ್ಯಾಜಿಸ್ಟ್ರೇಟರು ಮುಂದೆ ನಡೆದು, ಅವರಿಗೆ ೪ ತಿಂಗಳ ಕಠಿಣ ಕಾರಾಗೃಹವಾಸ ಹಾಗೂ ೨೦೦ ರು. ದಂಡ, ದಂಡ ಕೊಡದಿದ್ದರೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ತೀರ್ಪುಕೊಡಲ್ಪಟ್ಟಿತು. ಅವರನ್ನು 'ಎ' ವರ್ಗದಲ್ಲಿ ಇರಿಸಬೇಕಾಗಿ ಮ್ಯಾಜಿಸ್ಟ್ರೇಟರು ಉಲ್ಲೇಖಿಸಿದ್ದಾರೆ ವಕೀಲರಿಗೂ 'ಎ' ವರ್ಗವನ್ನು ಕೊಟ್ಟ ಮ್ಯಾಜಿಸ್ಟ್ರೇಟು ಸೇರು ತೀರಿಸಿಕೊಳ್ಳುತ್ತಿರುವರೋ ಏನೋ!

ಗಲ್ಲಿಯ "ಉಲ್ಲಾಳ ಅಂಡ ಸನ್ಸ್"ರವರು ಕೇವಲ ಬಹಿಷ್ಕೃತ ನಿರ್ಣಯಗಳ ಖಟ್ಟೆಗಳನ್ನೇ ಮಾರುತ್ತಿರುವದರಿಂದ ಅವರ ಅಂಗಡಿಯ ಮುಂದೆ ಪಿಕೆಟಿಂಗ ಜೋರಿನಿಂದ ನಡೆದಿದೆ ಈ ಮೂಲಕವಾಗಿ ಅಂಗಡಿಯಲ್ಲಿಯ ವ್ಯಾಪಾರವು ತೀರ ಕಟ್ಟಾಗಿ ಹೋಗಿದೆ. ಒಂದು ನ್ಯಾಯವಾದರೂ [illegible] ಯವರು ಜರ್ಜರಿತರಾಗಿದ್ದಾರೆ. ಹೀಗಿದ್ದರೂ ಖಟ್ಟೆಯು ವ್ಯಾಪಾರವನ್ನು ಸಂಪೂರ್ಣವಾಗಿ ನಿಲ್ಲಿಸದಿದ್ದಲ್ಲಿ, ಅವನ್ನು ಅಂಗಡಿಯಿಂದ ಬಿಡಿಸಬೇಕೆಂಬುದಾಗಿ ಯೋಜನೆ ನಡೆದಿದೆ ಅವರು. ಈಗ ಬಾಡಿಗೆಯು ಅಂಗಡಿಯಲ್ಲಿ [illegible] ತಿರುವರು.

ಇತ್ತೀಚೆಯ ಒಬ್ಬ ಪೋಲಿಸಧಿಕಾರಿಗಳು ಬೆಳಗಾವಿಯ "ಪ್ರಜಾಧ್ವನಿ"ಯೆಂಬ ಪತ್ರಿಕಾಸಂಪಾದಕತ್ರಯಕ್ಕೆ ವರ್ಗಣಿದಾರನ್ನು ಕೊಡಿ ವ ಕೆಲವ ಹಣ್ಣು ಒಳ್ಳೇ ಹುರುಪಿನಿಂದ ಸಾಗಿಸಿದ್ದಾರೆ. ಈಗಾಗಲೆ ೮೦ ಜನರು ಚಂದಾದಾರರಾಗಿರುವರಂತೆ! ಸರಕಾರಿ ಅಧಿಕಾರಿಗಳ ಈ ವೃಕ್ತಪತ್ರದ ಸಲುವಾಗಿ ಇಷ್ಟ ಸಾಹಸ ಮಾಡಬೇಕಾದರೆ, ಅದ ಪಂಕಾಸ ಪಕ್ಷದಿಂದ ಹೊರಡುವ ಪತ್ರಿಕೆಯಾ ಯೆದು ಈಗ ತರ್ಕ ಮಾಡಬೇಕಾಗುತ್ತದೆ. ಕೆಲವು ಅಧಿಕಾರಿಗಳು ಮಿಲಾಲಸೆಯಿಂದ ಒಪ್ಪಿಗೆಯನ್ನು ಕೊಟ್ಟಿದ್ದು, ಹಿಂದಿನಿಂದ ಸ್ಥಿ. ಪಿ. ಬಿಡುವವರಿದ್ದಾರೆಂದು ತಿಳಿಯುತ್ತದೆ

ಕ್ರಿ. ಆ ಅವೆಂಡವೆಂಟ ಕಾಯ್ದೆಯು ೧೯೩೫ನೆಯ ಕಲಮಿನವ್ವಯ ವಂಳಗಂದಲ್ಲಿ ಸೆರೆಹಿಡಿಯಲ್ಪಟ್ಟ ಕೆಳಗಿನ ಐದು ಜನ ಸತ್ಯಾಗ್ರಹಿಗಳ ಖಟ್ಲೆಯು ವಿಚಾರಣೆಯು, ತಾ॥ ೨೯ನೆ ದಿವಸ ಗದಗಿನ ೧ ನೆಯ ವರ್ಗದ ಮ್ಯಾಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ಕೆಳಗಿನಂತೆ ಶಿಕ್ಷೆಯು ವಿಧಿಸಲ್ಪಟ್ಟಿತು.

೧ ಗಣೇಶನಾಯಿಕ ತಮ್ಮಣ್ಣಾರ, ೩೦೦ ರು. ದಂಡ, ಇಲ್ಲವೆ ೧ ತಿಂಗಳ ಶಿಕ್ಷೆ. ೨ ಹಣ ವಂಕ ನೋಟೂರು, ೩ ತಿಂಗಳ ಕಠಿಣ ಶಿಕ್ಷೆ. ವಸ್ತು ೨೦೦ ರು ದಂಡ, ಇಲ್ಲವೆ ೩ ವಾರ ಶಿಕ್ಷೆ ೩ ಡಪಹ್ಮೂ ದಿಕ್ಷಿತ ತಾಪಸ, ೧೦೦ ರು. ದಂಡ, ಇಲ್ಲವೆ ೧ ತಿಂಗಳ ಕಠಿಣ ಶಿಕ್ಷೆ. ೪ ವಾ ಪುದೇವರಾವ ಕಲಕರ್ಣಿ, ೩ ತಿಂಗಳ ಕಠಿಣ ಶಿಕ್ಷೆ ಮತ್ತು ೨೦೦ ರು. ದಂಡ, ಇಲ್ಲವೆ ೩ ವಾರ ಶಿಕ್ಷೆ. ಜನಾಗಪ್ಪ ಭೋಯೆರ, ೧೦೦ ರು ದಂಡ, ಇಲ್ಲವೆ ೧ ತಿಂಗಳ ಕಠಿಣ ಶಿಕ್ಷೆ.

೨೩ನೆಯ ಆರೋಪಿಗಳು ಕಾಂಗ್ರೆಸ್ ಕಾರ್ಯವನ್ನು ಒಳ್ಳೇ ಉತ್ಸಾಹದಿಂದ ಜರುಗಿಸುತ್ತಿದ್ದರೆಂದು ಅವರಿಗೆ ಕೆಚ್ಚಿನ ಶಿಕ್ಷೆಯನ್ನು ವಿಧಿಸಿದ್ದೇನೆಂದು ಮ್ಯಾಜಿಸ್ಟ್ರೇಟರು ಹೇಳಿದರು ಆದಕ್ಕೆ ಆ ವೀರರು ಗಹಗಹಿಸಿ ನಕ್ಕರು. ದಂಡ ಕೊಡುತ್ತೀರೇನೆಂದ. ಮ್ಯಾಜಿಸ್ಟ್ರೇಟರು ಕೇಳಿದ ಸ್ಥಿ ದಂಡ ಕೊಡುವದಿಲ್ಲವೆಂದು ಸತ್ಯಾಗ್ರಹಿಗಳು ಸ್ಪಷ್ಟವಾಗಿ ಹೇಳಿದರು.

ಹೆಚ್ಚುವರಿ ಡಿ. ಪೊಲೀಸ ಅಧಿಕಾರಿಯವರ ಮೇಲೆ ಪೋಲೀಸ ಕಾಯ್ದೆಯ ಅನ್ವಯ [illegible] ನೋಟೀಸು ಹೊರಡಿಸಿ, ಎರಡು ತಿಂಗಳುಗಳವರೆಗೆ ಧಾರವಾಡ ಮಾಡಕೂಡದಾಗಿ ಅವರಿಗೆ ಅಪ್ಪಣೆ ವಿಧಿಸಿದ್ದಾರೆ ಧಾರವಾಡ ಜಿಲ್ಲೆಯೊಳಗಿನ ಅಧಿಕಾರಿಗಳು ಇದೊಂದು ಒಳ್ಳೇ ಅಸ್ತ್ರವನ್ನು ಹಿಡುಕಿ ತೆಗೆದಿರಾರೆ!

ಸಿದ್ದೇಶ ಚನ್ನ ಬಸವೆ ಶ್ವರರಿಂದ ಸಾರ್ವಜನಿಕ ಶಾಂತತೆಯು ಭಂಗವಾಗುತ್ತದೆಂದು ಧಾರವಾಡದ ಕೆಲವು ನಾಗರಿಕರು ಅರ್ಜಿ ಮಾಡಿದ ಮೇರೆಗೆ, ಅವರ ಮೇರೆ ಹು. ಡಿ. ಕಲೆಕ್ಟರು ೧೪೪ ನೆಯ ಕಲವಿನವ್ವಯ ನೋಟೀಸ್ ಹೊರಡಿಸಿ ಧಾರವಾಡದಲ್ಲಿ ಭಾಷಣ ಮಾಡಕೂಡದಾಗಿ ಅವರಿಗೆ ಅಪ್ಪಣೆ ವಿಧಿಸಿದ್ದಾರೆ.

ಹರಪನಹಳ್ಳಿಯಲ್ಲಿ

ಸತ್ಯಾಗ್ರಹಿಗೆ ಶಿಕ್ಷೆ.

(ಸ್ವಂತ ಸುದ್ದಿಗಾರರಿಂದ)

ಈ ಊರಿನ ಶ್ರೀ ಕಾಳಪ್ಪ ಬೆನ್ನೂರ ಇವರಿಗೆ ಕಾಯ್ದೆಭಂಗಕ್ಕೆ ಉತ್ತೇಜನ ಕೊಟ್ಟ ಆರೋಪದ ಒಗ್ಗೆ ೧೯೩ ನೆಯ ಕಲಮಿನವ್ವಯ ೧ ತಿಂಗಳ ಕಠಿಣ ಕಾರಾಗೃಹವಾಸ ಹಾಗೂ ೧೦೦ ರು ದಂಡ, ಇಲ್ಲವೆ ೧ ವಾರ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿತ. ಇವರಿದ ಪ್ರಥಮಾಪಶ್ರವನ್ನು ತೆಗೆದುಕೊಳ್ಳಲು ನ್ಯಾಯಾಧಿಪತಿಗಳೂ ವಕ್ತ ಕೆಲವು ಸದ್ಗೃಹಸ್ಥರು ಪ್ರಯತ್ನಿಸಿದರು ಆದರೆ ಅವರ ಪ್ರಯತ್ನವು ವ್ಯರ್ಥವಾಯಿತು. ವಿಚಾರಣೆಯ ಸಮಯದಲ್ಲಿ ಶ್ರೀ ಕಾಳಪ್ಪನವರು ನಗೆಮೊಗದಿಂದಲೂ ಚಿತ್ತಸ್ಥೈರ್ಯದಿಂದಲೂ ಇದ್ದು, ಒಳ್ಳಾರಿಯ ಜೇಲಿಗೆ ಶಾಂತಚಿತ್ತರಾಗಿ ತೆರಳಿದರು.

ಸಿರ್ಸಿಯಲ್ಲಿ

ಮೂವರಿಗೆ ಶಿಕ್ಷೆ.

ಕಾಯ್ದೆಗೆ ವಿರುದ್ಧವಾದ ಸಂಘದಲ್ಲಿ ಸೇರಿದ ಆರೋಪದಿಂದ ಸಿರ್ಸಿಯಲ್ಲಿ ಬಂಧನಕ್ಕೊಳಗಾದ ಮೂವರು ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗೂ ೨೫೦ ರು ದಂಡ, ಇಲ್ಲವೆ ೪ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ

ಪೋಲೀಸ ಪಟೇಲರು

ರಾಜೀನಾಮೆ ಕೊಟ್ಟರು

ಅವರು ಬೆಳಗಾವಿ ಜಿಲ್ಲೆಯಲ್ಲಿಯ ಹಿರೇಬಾಗೇವಾಡಿಯ ಪೋಲೀಸ ಪಟೇಲರಾದ ಶ್ರೀ ಬಿಷ ರಾಯಪ್ಪಗೌಡ ವೀರೇಗೌಡರವರು ತಮ್ಮ ಸರಕಾರಿ ಉದ್ಯೋಗಕ್ಕೆ ಕಂಣ ಹೊಡೆದರು.

ನಂದಗಡದಲ್ಲಿ

೭ ಜನರಿಗೆ ಕೈದು

ಜನಗಣತಿಗೆ ಬಹಿಷ್ಕಾರ ಹಾಕಲು ಜನರಿಗೆ ಬೋಧಿಸಿದ ಸಂಬಂಧವಾಗಿ ನಂದಗಡದಲ್ಲಿ ೭ ಜನ ಸ್ವಯಂಸೇವಕರು ಕೈದು ಮಾಡಲ್ಪಟ್ಟಿದ್ದಾರೆ.

ಮರುಳಾರಾಧ್ಯರಿಗೆ ೩ ತಿಂ. ಸಾದಾ ಶಿಕ್ಷೆ.

ದೇ ಭಂಗಕ್ಕೆ ಉತ್ತೇಜನ ಕೊಟ್ಟ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿ ಜೀಲದಲ್ಲಿ ತಮ್ಮ ಶಿಕ್ಷೆಯ ಅವಧಿ ನುಭವಿಸುತ್ತಿದ್ದ ವಿಜಾಪುರದ ಶ್ರೀ ಮಧ್ಯ ಶಾಸ್ತ್ರಿಗಳನ್ನು, ಅವರ ಮೇಲಿನ ದು ಖಟ್ಲೆಯ ವಿಚಾರಣೆಗಾಗಿ ಸುಮಾ ಗಳ ಹಿಂದೆ ಬದಾಮಿಗೆ ಕರೆದೊಯ್ದು ಅವರ ಖಟ್ಲೆಯ ವಿಚಾರಣೆಯು ಗು ದ್ದದ ಜೆಂಜ ಕೋರ್ಟ್‌ನಲ್ಲಿ ನಡೆದು ದಿನದ ಅವರಿಗೆ ೩ ತಿಂಗಳ ಸಾದಾ ವಿಧಿಸಲ್ಪಟ್ಟಿತು. ಈ ಒಂದು ತಿಂಗ ಧಿಯಲ್ಲಿ, ಅಧಿಕಾರಿಗಳು ಅವರೊಡನೆ ಷ ರೀತಿಯಿಂದ ವರ್ತಿಸಿ, ಅವರಿಗೆ ತಿ ಬಹು ತೊಂದರೆಯನ್ನು ಕೊಟ್ಟರೆಂ ು ಬರುತ್ತದೆ.

ಬದಾಮಿಯಲ್ಲಿ ಅವರನ್ನಿಟ್ಟ ಕೋಣೆ ಚ್ಛವಿನ್ನಿದ್ದಿಲ್ಲ. ಈ ಬಗ್ಗೆ ಅ ವರು ಗಳಿಗೆ ದೂರು ಹೇಳಿದರೂ, ಅಧಿಕಾರಿ ತ್ತ ಲಕ್ಷ್ಯ ಕೊಡಲಿಲ್ಲ.

ಬದಾಮಿಯ ಮ್ಯಾಜಿಸ್ಟ್ರೇಟರು ಅವರ ನ್ನು ಗುಳೇದಗುಡ್ಡದ ಬೆಂಚ ಕೋರ್ಟ ಗೆಯಿಸಿದರು. ಗುಳೇದಗುಡ್ಡದ ಬೆಂಚಿ ಅದನ್ನು ತಿರುಗಿ ಮ್ಯಾಜಿಸ್ಟ್ರೇಟರ ಕಡೆಗೆ ರು. ಮ್ಯಾಜಿಸ್ಟ್ರೇಟರು ಮತ್ತೆ ಅದನ್ನು ೋರ್ಟಿಗೆ ವರ್ಗಾಯಿಸಿದರು. ಹೀಗೆ ಬದಾಮಿಯಿಂದ ನಾಲ್ಕೈದು ಸಾರೆ ಗುಡ್ಡಕ್ಕೆ ಎಡತಾಕಿಸಿದರು.

ಅನ್ನಿಮಾಂಸ್ಯ, ಅಪಚನ ಮೊದಲಾ ಂದ ಬಳಲಿ, ಅವರು ಕೆಲವು ದಿವಸ ಗಳಿದ್ದರೂ ಅಧಿಕಾರಿಗಳು ಅವರಿಗೆ ಔಷಧೋಪಚಾರ ಮಾಡಲಿಲ್ಲ. ಸ್ಥಳಿ ರು ಸಿವಿಲ್ ಸರ್ಜನರ ಕಡೆಗೆ ಅವ ರಿದುಕೊಂಡು ಹೋಗಬೇಕೆಂದು ಅಭಿ ಪಟ್ಟಾಗ್ಯೂ ಅಧಿಕಾರಿಗಳು ಅತ್ತ ಲಕ್ಷ

ಕೆಲವು ಅಧಿಕಾರಿಗಳು ಅವರಿಗೆ ಭೆಟ್ಟಿಯಾಗಿ ಕ್ಷಮೆ ಬೇಡಿಕೊಳ್ಳಲು ಉದ್ಯುಕ್ತರಾಗಿದ್ದರೂ ಕೊಟ್ಟವರಲ್ಲದೆ, ಗಿತ ಸದ್ಗೃಹಸ್ಥರಿಂದಲೂ ಈ ಸಂಬಂ ಕರಿಗೆ ಹೇಳಿಸಿದರು.

(೫) ಬದಾಮಿಯಲ್ಲಿಯ ಅವರ ಮಿತ್ರರೊ ಬ್ಬರು ಅವರಿಗೆ "ನವಾಕಾಳ" ಹಾಗು ಭಾಗ ವತಗಳನ್ನು ಓದಲಿಕ್ಕೆ ಕೊಟ್ಟಿದ್ದರು. ಅಧಿಕಾ ರಿಗಳು ಈ ಬಗ್ಗೆ ಆ ಮಿತ್ರರನ್ನು ಕೆದರಿಸಿದರು. ಅವರು ಅವುಗಳನ್ನು ತಿರುಗಿ ತೆಗೆದುಕೊಂಡು ಹೋದರು ಭಾಗವತ ಮೊದಲಾದ ಧಾರ್ಮಿಕ ಪುಸ್ತಕಗಳನ್ನಾದರೂ ಮಿತ್ರರಿಂದ ತೆಗೆದುಕೊ ಳ್ಳಲು ಅಪ್ಪಣೆ ಕೊಡಲು, ಶ್ರೀ. ಮರುಳಾರಾಧ್ಯ ರು ಅಧಿಕಾರಿಗಳಿಗೆ ಬೇಡಿಕೊಂಡರು. ಅಧಿಕಾ ರಿಗಳು ಅತ್ತಕಡೆಗೆ ಲಕ್ಷ್ಯಕೊಡಲಿಲ್ಲ.

[ಶ್ರೀ ಮರುಳಾರಾಧ್ಯರು ನಿನ್ನೆಯ ದಿವಸ ವಿಜಾಪುರಕ್ಕೆ ಕರೆದೊಯ್ಯಲ್ಪಟ್ಟರು ನಮ್ಮ ಪ್ರತಿನಿಧಿಗೆ, ಈ ಊರ-ಸ್ಟೇಶನದಲ್ಲಿ ಅವರನ್ನು ಕಂಡುಕೊಂಡು ಅವರೊಡನೆ ಮಾತುಕತೆಯಾಡಿ ದನು. ಆಗ ಮೇಲಿನ ಸಂಗತಿಗಳು ತಿಳಿದು ಬಂದವು]

ವಿಜಾಪುರದಲ್ಲಿ ಶ್ರೀ ಹೊದಲೂರರಿಗೆ ಶಿಕ್ಷೆ.

ಕ್ರಿ. ಶ. ಅನೆಂಡಮೆಂಟ ಕಾಯದೆಯ ೧೬ ನೆಯ ಕಲಮಿ ನನ್ವಯ ಬಾಧನಕ್ಕೊಳಗಾದ ವಿಜಾಪುರದ ಉತ್ಸಾಹಿ ತರುಣರಾದ ಶ್ರೀಯುತ ಪಿನಾಥ ಹೊದಲೂರವರಿಗೆ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೧೦೦ ರೂ. ದಂಡ, ಇಲ್ಲವೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯಾಗಿದೆ.

ಕರ್ನಾಟಕ ವ್ಯಾಪಾರಿಸಂಘದ ಕಾರ್ಯಕಲಾಪ

ಜಾನೇವಾರಿ ತಿಂಗಳಿದಿಂದ ವ್ಹಿ. ಪಿ ಆರ್ಟಿ ಕಲನ್ನು ನೂರೇ ದಿನಗಳವರೆಗೆ ಪೋಸ್ಟುಗಳಲ್ಲಿ ಇಟ್ಟುಕೊಳ್ಳಬಹುದೆಂಬುದಾಗಿ ಮಾಡಿದ ಹೊಸ ನಿಯಮವನ್ನು ರದ್ದುಪಡಿಸಬೇಕಾಗಿ ಪೋಸ್ಟ ಹಾಗು ಟಲಿಗ್ರಾಫ ಖಾತೆಯ ಡಾಯರೆಕ್ಟರ ಜನರಲರಿಗೆ ತಾವು ಕಳಿಸಿದ ವಿನಂತಿಪರ ಪ್ರತಿ ಟನಾ ಪತ್ರವನ್ನು ಇಲ್ಲಿಯ ಕರ್ನಾಟಕ ವ್ಯಾಪಾರಿ ಸಂಘದವರು ಕರ್ನಾಟಕದಲ್ಲಿಯ ಬೇರೆ ಬೇರೆ ಸ್ಥಳಗಳಿಗೆ ಕಳಿಸಿಕೊಟ್ಟಿದ್ದಲ್ಲದೆ, ಅವುಗಳ ಮೇಲೆ ತಮ್ಮಲ್ಲಿಯ ಪ್ರಮುಖ ಜನರ ಸಹಿ ತೆಗೆದುಕೊಂಡು ಅವುಗಳನ್ನು ಡಾಯರೆಕ್ಟರರ ಕಡೆಗೆ ಕಳಿಸಿಕೊಡಬೇಕಾಗಿ ಅವರಿಗೆ ವಿನ್ನವಿಸಿ ಕೊಂಡಿದ್ದಾರೆ.

ಬಾಗಲಕೋಟ ಹಾಗು ವಿಜಾಪುರ ಸ್ಟೇಶನ್ನುಗಳ ಪ್ಲ್ಯಾಟಫಾರ್ಮುಗಳ ಮೇಲೆ ಜಕ್ಕಡವನ್ನು ಹಾಕಬೇಕೆಂಬುದಾಗಿ ಇಲ್ಲಿನ ಕರ್ನಾಟಕ ವ್ಯಾಪಾರಿ ಸಂಘದವರು ರೇಲ್ವೆ ಅಧಿಕಾರಿಗಳಿಗೆ ಕೇಳಿಕೊಂಡಿದ್ದಕ್ಕೆ, ಆ ಬಗ್ಗೆ ವಿಚಾರ ನಡಿಸಿದ್ದೇವೆಂಬುದಾಗಿ ಜನರಲ್ ಟ್ರಾಫಿಕ್ ಮ್ಯಾನೇಜರರು ಅವರಿಗೆ ಉತ್ತರ ಕೊಟ್ಟಿದ್ದಾರೆ.

ಗಂಗಾಧರರಾಯರ ವತನದ ಮೇಲೆ ಕಡೆಗಣ್ಣು

ದೇ ಭ. ದೇಶಪಾಂಡೆ ಗಂಗಾಧರರಾಯರು ಜೆಳಗಾವಿಯಲ್ಲಿ ಜಪ್ತಿದಿರುವಾಗ, ಅಲ್ಲಿಯ ಕಲೆಕ್ಟರರು ಇನಾಮು ಭೂವಿಗಳನ್ನು ಜಪ್ತಿ ಮಾಡಬಾರದೆಂಬುದರ ಒಳ್ಳೆ ಕಾರಣ ತೋರಿಸಲು ಅವರ ಮೇಲೆ ನೋಟೀಸು ಹೊರ ಡಿಸಿ ಅದನ್ನು ಅವರ ಮನೆಗೆ ಅಂಟಿಸಿದ್ದರು. ಗಂಗಾಧರರಾಯರಿಗೆ ಈ ಸುದ್ದಿಯು ತಿಳಿದ ಕೂಡಲೆ ಅವರು ಕಲೆಕ್ಟರಿಗೆ ಪತ್ರ ಬರೆದು ತಮ್ಮ ಅಂಬೋಣವನ್ನು ತಿಳಿಸಿಕೊಳ್ಳಬೇಕಾಗಿ ತಿಳಿಸಿದ್ದರು. ಕಲೆಕ್ಟರರು ಕಳೆದ ಸೋಮವಾರ ಈ ಬಗ್ಗೆ ವಿಚಾರಣೆನಡಿಸಿದ್ದು, ಭೂಮಿಗಳನ್ನು ಜಪ್ತು ಮಾಡಲು ಬರುವಂತಿಲ್ಲವೆಂದು ಕಾರಣ ಗಳನ್ನು ಗಂಗಾಧರರಾಯರು ಬಾಹವುಲಳ ವಾಗಿ ಕಲೆಕ್ಟರರಿಗೆ ತಿಳಿಸಿದರು. ಶ್ರೀ ಬೆಳವಿಯ ವರು ಗಂಗಾಧರರಾಯರ ಪರವಾಗಿ ಕೆಲಸ ನಡಿಸಿದರು.

ಶ್ರೀ ಗಂಗಾಧರರಾಯರು ೧೯೨೧ ನೆಯ ಇಸ್ವಿಯಲ್ಲಿ ರಾಜಕೀಯ ಹಾಗು ಧರ್ಮಾರ್ಥ ಕಾರ್ಯಗಳ ಸಂಬಂಧವಾಗಿ ಸಂಡಿ ಗಾಂಧಿ ಸೇವಾಸಂಘದ ಸಲುವಾಗಿಯಾಗಿ ದೇಣಿ ಬೇರೆ ಎರಡು ಟ್ರಸ್ಟುಗಳನ್ನು ಮಾಡಿ, ಶ್ರೀ ಕೇಳ ಕರ, ಪೋತದಾರ, ವಲ್ಲಭಭಾಯಿ, ರಾಜಗೋ ಪಾಲಾಚಾರ್ಯ ಹಾಗು ತಮ್ಮನ್ನು ಅವುಗಳ ಟ್ರಸ್ಟಿಗಳನ್ನಾಗಿ ನಿಯಮಿಸಿ, ಭೂಮಿಗಳನ್ನು ಟ ಸ್ಟಿ ಜನರ ವಶಕ್ಕೆ ಒಪ್ಪಿಸಿರುವದರಿಂದ ಎಲ್ಲ ಟ್ರಸ್ಟಿ ಜನರಿಗೂ ನೋಟೀಸು ಮಾಡಬೇಕಾಗು ತ್ತದೆಂದು ಶ್ರೀ ಬೆಳವಿಯವರು ಹೇಳಿದರು. ಈ ಬಗ್ಗೆ ಸರಕಾರಿ ವಕೀಲರ "ಅಗ್ರ್ಯಮೆಂಟ ಇನ್ನೂ ಆಗತಕ್ಕದ್ದಿದೆ. ಅದನ್ನು ಕೇಳಿಕೊಂಡ ಬಳಿಕ, ಕಲೆಕ್ಟರರು ಆ ಬಗ್ಗೆ ತಮ್ಮ ಅಭಿಪ್ರಾಯ ಬರೆದು, ಕಾಗದಪತ್ರಗಳನ್ನು ತಮ್ಮ ನಿರ್ಣಯಕ್ಕಾಗಿ ಸರಕಾರದ ಕಡೆಗೆ ಕಳಿಸಕ್ಕಿವರಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿಯ ಹಿರೇ ಬಾಗೇ ವಾಡಿಯ ಸಿಂದಿ ಗುತ್ತೇದಾರನ ಸೇವಕನೊ ಬ್ಬನು ಕುದುರೆಯ ಮೇಲೆ ಸಿಂದಿ ಹೇರಿಕೊಂಡು ಬರುತ್ತಿರುವಾಗ, ಹಾವಿಯಲ್ಲಿ ಯಾರೋ ಕೆಲವರು ಅವನ ಮೂಗು-ಹುಬ್ಬು ಕಿವಿ ಕೊಯ್ದು ರುವರೆಂದು ತಿಳಿದುಬಂದಿತ್ತು. ಕಳಿಸಿದ್ದಾರೆ.

ಮಿ. ಹಡಸನ್ನರ ಸೋಗು ಹೊರಬಿತ್ತು.

ಮುಂಬಯಿ ಸರಕಾರದ ಕಂದಾಯ ಖಾತೆಯ ಮಂತ್ರಿಗಳಾದ ಮಿ. ಹಡಸನ್ನರು ಕೆಲವು ದಿನಗಳ ಹಿಂದೆ, ಗುಜರಾತ ಪ್ರಾಂತದ ಬಾಡೋಲಿ, ಬೋರಸಾದ ಮೊದಲಾದ ತಾಲೂಕುಗಳಲ್ಲಿ ಸಂಚರಿಸಿ, ಅಲ್ಲಿಯ ಪರಿಸ್ಥಿತಿಯನ್ನು ನಿರೀಕ್ಷಿಸಿದರಷ್ಟೆ. ಆ ಸಮಯದಲ್ಲಿ ಬಾಡೋಲಿಯ ಮಾಮಲೇದಾರರೊಡನೆ ಅವರು ನಡಿಸಿದ ಸಂಭಾಷಣೆಯನ್ನು ಓದಿ ನೋಡಿದಲ್ಲಿ, ಅವರ ಆಗಮನದ ಉದ್ದೇಶವು ಪ್ರತಿಯೊಬ್ಬರಿಗೂ ತಾನಾಗಿಯೆ ತಿಳಿದುಬರುವದು. ಅವರ ನಡುವೆ ಕೆಳಗಿನಂತೆ ಸಂಭಾಷಣೆ ನಡೆಯಿತು:—

ಹಡಸನ್ನರು— ಜನರು ಸರಕಾರಕ್ಕೆ ತೆರಿಗೆಯನ್ನು ಕೊಡಲು ನಿರಾಕರಿಸುತ್ತಿರುವ ಬಂದು ನಿಮಗೆ ಗೊತ್ತಿದ್ದರೂ ಸಹ, ಹೊಲದೊಳಗಿನ ಬೆಳೆಯನ್ನು ತೆಗೆದುಕೊಳ್ಳಲು ನೀವು ಅವರಿಗೇಕೆ ಅಡ್ಡಿ ಮಾಡುವದಿಲ್ಲ?

ಮಾಮಲೇದಾರರು— ನಮಗೆ ಶಕ್ತಿಯಿದ್ದಷ್ಟು ನಾವು ಅಡ್ಡಿ ಮಾಡುತ್ತಿದ್ದೇವೆ. ಎಲ್ಲರಿಗೂ ಅಡ್ಡಿಮಾಡುವದು ನಮಗೆ ಸಾಧ್ಯವಿಲ್ಲ.

ಹಡಸನ್ನರು— ಕೆಲವೇಕ ಪೋಲೀಸರು ನಿಮ್ಮ ಸಹಾಯಕ್ಕಿರಲಾರರು.

ಮಾಮಲೇದಾರರು— ಅಹುದು. ಅವರು ನಮ್ಮ ಮಾತು ಕೇಳುವದಿಲ್ಲ ಜಪ್ತಿ ಮಾಡಿದ ಭತ್ತವನ್ನೇ ಅವರು ಹಗಲೆಲ್ಲ ಕಾಯುತ್ತಿರುವರು. ಕೆಲವರು ಜಪ್ತಿಯ ಕಾರ್ಯವನ್ನು ಸಾಗಿಸುತ್ತಿರುವರು.

ಹಡಸನ್ನರು— ಇನ್ನು ಸ್ವಲ್ಪ ದಿವಸಗಳಲ್ಲಿಯೇ ಜೋಳ ಮತ್ತು ಹತ್ತಿಯ ಬೆಳೆಬರುವದು. ರೈತರು ಅದನ್ನು ತೆಗೆದುಕೊಂಡು ಹೋಗದಂತೆ ನಾವು ಪ್ರಯತ್ನಿಸತಕ್ಕದ್ದು.

ಮಾಮಲೇದಾರರು— ಹಾಗೆಮಾಡುವದು ಯಶಸ್ವಿಯಿಲ್ಲವೆಂದು ನನಗೆ ತೋರುತ್ತದೆ.

ಹಡಸನ್ನರು— ಹೆಚ್ಚಿಗೆ ಜನರನ್ನವರಿಸಿ ಮಿಸಿಕೊಳ್ಳಿರಿ. ಹೇಗಾದರೂ ಮಾಡಿಸಾನ್ನಿನು ಅಡ್ಡಿ ಮಾಡಲಿಕ್ಕೇ ಬೇಕು.

ಮಾಮಲೇದಾರರು— ಒಂದು ಪಟ್ಟಣವಲ್ಲ! ಒಂದಾಹಳ್ಳಿಯಲ್ಲ! ಎಷ್ಟೋ ಪಟ್ಟಣಗಳಿಗೆ ಎಷ್ಟೋ ಹಳ್ಳಿಗಳಿವೆ ಜನರನ್ನು ಎಷ್ಟೆಂತ ಯಮಿಸಿಕೊಳ್ಳಬೇಕು?

ಹಡಸನ್ನರು— ಇನ್ನೂರು ಜನರು ಸಾಕಾಗುವರೊ?

ಮಾಮಲೇದಾರರು— ಸಾಕಾಗುವದಿಲ್ಲ.

ಹಡಸನ್ನರು— ೫೦೦ ಜನರೆ?

ಮಾಮಲೇದಾರರು— ೫೦೦ ಜನರಾದರೂ ಏನು ಮಾಡಬಲ್ಲರು?

ಹಡಸನ್ನರು— ಸಾವಿರ, ಎರಡುಸಾವಿರ, ಮೂರುಸಾವಿರ, ಎಷ್ಟಾದರೂ ಜನರು ಬೇಕು ಹೇಳಿರಿ

ಮಾಮಲೇದಾರರು— ಸೈನಿಕರ ಕಾರ್ಯಕುಶಲತೆಯು ಸಂಬಂಧವಾಗಿ ನನಗೇನೂ ಗೊತ್ತಿಲ್ಲ. ಸಾಧಾರಣವಾಗಿ ೭೦೦ ಜನರು ಸಾಕಾಗುವರೆಂದು ಎನಿಸುತ್ತದೆ.

ಮಿ. ಹಡಸನ್ನರು ಟಿಪ್ಪಣಿ ಮಾಡಿಕೊಂಡು ಹೊರಟುಹೋದರು. ತಾಲೂಕಿನ ಸುತ್ತಲೂ ಸೈನಿಕರನ್ನು ಇಡುವ ಹಾಗು ತಾಲೂಕಿನಲ್ಲಿ ಹತ್ತು ಸ್ಥಳಗಳಲ್ಲಿ ಪೋಲೀಸ ಶಿಬಿರಗಳನು ತೆರೆಯುವ ಕುರಿತು ಅವರು ಒಂದು ಯೋಜನೆಯನ್ನು ಸಿದ್ಧಪಡಿಸಿದ್ದು, ಅದು ಬೇಗನೆ ಬಳಕೆಯಲ್ಲಿ ಬರಬೇಕಾಗಿದೆ

ಸರದಾರ ವಲ್ಲಭಭಾಯಿಯವರ ವಿಚಾರಣೆ

ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ೧೬ನೆಯ ಕಲಮಿನ ನಿಸ್ಸಹಾಯ ಬಂಧನಕ್ಕೊಳಗಾದ ಸರದಾರ ವಲ್ಲಭಭಾಯಿಯವರು ತಾ॥ ೫೬ನೆಯ ದಿವಸ ಮತ್ತೆ ಮಿ. ಆರ್. ಪಿನ್. ಮೆಹತಾರವರ ಕೋರ್ಟಿನಲ್ಲಿ ವಿಚಾರಣೆಗೆ ನಿಲ್ಲಿಸಲ್ಪಟ್ಟರು. ಚೀಫಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಇವರ ವೇಲೆ ಆರೋಪವಿಡಲ್ಪಟ್ಟಿದ್ದು, ಕೋರ್ಟ್ ಇಂದು ಕೂಡಿರುವದಿಲ್ಲ ಮತ್ತು ಪಬ್ಲಿಕ್ ಪ್ರೊಸೀಕ್ಯೂಟರರು ಬಂದಿರುವದಿಲ್ಲ. ಕಾರಣ ವಿಚಾರಣೆಯನ್ನು ೬ನೆಯ ತಾರೀಖಿಗೆ ಮುಂದರಿಸ ಬೇಕಾಗಿ ಪೋಲೀಸ ಪ್ರೊಸೀಕ್ಯೂಟರರು ಮ್ಯಾಜಿಸ್ಟ್ರೇಟರಿಗೆ ಕೇಳಿಕೊಂಡರು. ಈ ಬಗ್ಗೆ ಏನಾದರೂ ತಕರಾರು ಇದ್ದಲ್ಲಿ ತಿಳಿಸಲು ಮ್ಯಾಜಿಸ್ಟ್ರೇಟರು ವಲ್ಲಭಭಾಯಿಯವರಿಗೆ ತಿಳಿಸಿದರು. ಪುರಾವೆಗಳಿದ್ದರೆ ೧೫ ನಿಮಿಟುಗಳಲ್ಲಿ ಮುಗಿಯುವ ಹಟ್ಟಿಯು ವಲಂದಕ್ಕೆ ಹಾಕಲ್ಪಡಹತ್ತಿ ಈಗ ಸುಮಾರು ೧೫ ತಿಂಗಳಾಗುತ್ತ ಬಂತು ಎಂಬುದಾಗಿ ವಲ್ಲಭಭಾಯಿಯವರು ತಿಳಿಸಿದರು. ಹಟ್ಟಿಯ ೬ನೆಯ ತಾರೀಖಿಗೆ ಮುಂದರಿಸಲ್ಪಟ್ಟಿತು.

ಮುಂಬಯಿಯಲ್ಲಿ ಯುದ್ಧ ಮಂಡಳದವರಿಗೆ ಶಿಕ್ಷೆ.

ತಾ॥ ೨೮ ನೆಯ ದಿವಸ ಮುಂಜಾನೆಯಲ್ಲಿ ಅಜದ್ ವೈದಾನದಲ್ಲಿ ರಾಷ್ಟ್ರಧ್ವಜ ವಂದನೆಯ ಸಮಾರಂಭವು ಜರುಗಬೇಕಿದ್ದಿತ್ತು. ಪೋಲೀಸ ಕಮೀಶನರರು ಒಂದು ಆಪ್ತಕಿ ಹೊಡಿಸಿ ಸಮಾರಂಭಕ್ಕೆ ಪ್ರತಿಬಂಧವನ್ನುಂಟುಮಾಡಿದ್ದರಿಂದ, ಅಂದು ವೈದಾನದಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಪೋಲೀಸರೂ ಸಾರ್ಜಂಟರೂ ಸಜ್ಜಾಗಿ ನಿಂತುಕೊಂಡಿದ್ದರು. ಪೋಲೀಸ ಕಮೀಶನರರು ವೇಲ್ವಿಚಾರಣೆಯನ್ನು ಮಾಡುತ್ತ ಅತ್ತಿತ್ತ ತಿರುಗಾಡುತ್ತಿದ್ದರು. ೬ ಗಂಟೆಗೆ ಜನರು ಕಂಡ ಕಂಡವರಾಗಿ ಅಲ್ಲಿಗೆ ಬಂದು ಸೇರಿದರು. ೮ ಗಂಟೆಗೆ ಯುದ್ಧ ಮಂಡಳದ ಅಧ್ಯಕ್ಷರಾದ ಶ್ರೀಮತಿ ಸ್ನೇಹಲತಾ ದೇವಿಯವರು ಉಳಿದ ಅಧಿಕಾರಿಗಳೊಂದಿಗೆ ಅಲ್ಲಿಗೆ ಬಂದರು. ಮತ್ತು ಕೂಡಲೇ ಸಮಾರಂಭವನ್ನು ಪ್ರಾರಂಭಿಸಿದರು. ಅಷ್ಟರಲ್ಲಿ ಒರ್ವ ಸಾರ್ಜಂಟನು ಅವರ ಬಳಿಗೆ ಹೋಗಿ ಅಲ್ಲಿಂದ ಹೊರಟು ಹೋಗಲು ಕೇಳಿಕೊಂಡನು. ಅವರು ಸ್ಥಳಬಿಟ್ಟು ಕದಲುವದಿಲ್ಲವಾಗಿ ಉತ್ತರ ಕೊಟ್ಟರು. ಸಾರ್ಜಂಟನು ಅವರೆಲ್ಲರನ್ನು ಸೆರೆ ಹಿಡಿದು, ಲಾರಿಯಲ್ಲಿ ಕರೆದೊಯ್ದನು. ಕೆಲವು ಜನರು ಪೋಲೀಸರಮೇಲೆ ಕಲ್ಲು ಒಗೆಯಹತ್ತಿದರು. ಪೋಲೀಸರು ಮತ್ತೆ ದೊಣ್ಣೆಗಳಿಂದ ಜನರಿಗೆ ಒಳತಾಗಿ ಪೆಟ್ಟುಕೊಟ್ಟು ಕಲ್ಲು ಒಗೆದ ಅಪರಾಧಕ್ಕಾಗಿ ೧೩ ಜನರನ್ನು ಕೈದ ಮಾಡಿದರು. ಒಟ್ಟು ೩೬೦ ಜನರು ಗಾಯಹೊಂದಿದರು

ಕ್ರಿ. ಲಾ. ಅಮೆಂಡಮೆಂಟ ಕಾಯಿದೆಯ ೧೬ನೆಯ ಕಲಮಿನನ್ವಯ ಬಂಧನಕ್ಕೊಳಗಾದ ಮುಂಬಯಿಯ ೧೪ನೆಯ ಸತ್ಯಾಗ್ರಹ ಯುದ್ಧ ಮಂಡಳದ ಅಧಿಕಾರಿಗಳಿಗೆ ಕೆಳಗಿನಂತೆ ಶಿಕ್ಷೆಯಾಗಿದೆ. ೧ ಶ್ರೀಮತಿ ಸ್ನೇಹಲತಾ ಹಜರತ್. ಹಾಗು ಶ್ರೀಮತಿ ವೀರಬಾಲಾ. ೬ ತಿಂ. ಶಿಕ್ಷೆ, ಶ್ರೀ ಜೋಕ್ಸಿ, ಕೇವಲರಾವ. ಜೋಶಿ ಹಾಗೂ ಹ.ಸೇವಕಭಾಯಿ ಜವ್ಹೇರಿಯವರಿಗೆ ಪ್ರತ್ಯೇಕವಾಗಿ ೯ ತಿಂಗಳ ಕಠಿಣ ಶಿಕ್ಷೆ. ಶ್ರೀ ಜೆ ಸಿ. ವೈತ್ಯ ಹಾಗು ಶ್ರೀ ಕಾಂತಿಲಾಲ ಪರೀಖ ರವರು ಯುದ್ಧ ಮಂಡಳದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಆಯಲ್ಪಟ್ಟಿದ್ದಾರೆ.

ಬ್ರಿಟಿಶರಾಳಿಕೆಯು ಕೊನೆಗಾಣಬೇಕು

ಅನೇರಿಳದಿಂದ ಡಾಕ್ಟರ್ ವಿಲ್ ಡ್ಯೂರಾಂಟ್ ಎಂಬಾತನು ಭರತಖಂಡಕ್ಕೆ ಬಂದು ಇಲ್ಲಿನ್ನರೆ ಸ್ಥಿತಿಗಳನ್ನು ಕಂಡು, ಹಿಂತಿರುಗಿ ತನ್ನ ದೇಶಕ್ಕೆ ಹೋಗಿ, ತನ್ನ ಅನುಭವವನ್ನು ಕುರಿತು ಕೆಲವು ಲೇಖನಗಳನ್ನು ಬರೆಯುತ್ತಿರುವನು. ಇಂತಹ ಲೇಖನವೊಂದರಲ್ಲಿ ಅವರು ಕೆಳಗಿನಂತೆ ಬರೆದಿದ್ದಾರೆ-

ಹಿಂದುಸ್ಥಾನಕ್ಕೆ ನಾನು ಹೋಗುವದಕ್ಕೆ ಮೊದಲು ಬ್ರಿಟಿಶರ ಶಕ್ತಿ, ಸಾಮರ್ಥ್ಯ ಕಂಡು ಬೆರಗಾದೆ. ಸಾಮ್ರಾಜ್ಯ ಧುರಂಧರರೆಂದೂ, ಜಗತ್ತಿನ ಶಾಂತಿಸ್ಥಾಪನೆಯಲ್ಲವರು ನಿಪುಣರೆಂದೂ ಭಾವಿಸಿದೆ. ಸಮುದ್ರಪ್ರಯಾಣಕ್ಕವರು ಕಲ್ಪಿಸಿದ ಸುರಕ್ಷಿತ ಮಾರ್ಗಗಳಿಗಾಗಿ ಪ್ರತಿಯೊಬ್ಬನೂ ಅವರನ್ನು ಕೀರ್ತಿಸಬೇಕೆಂದು ನಂಬಿದೆ.

ಆದರೆ ಹಿಂದುಸ್ಥಾನಕ್ಕೆ ಹೋದೆ ಹಿಂದುರುಗಿದೆ ಅಲ್ಲಿನ ದಾರಿದ್ರ್ಯ ನೋಡಿದೆ. ಜನರ ನರಕ ಜೀವನ ಕಂಡೆ. ಇದಕ್ಕಿಂತ ಪರರಾಳ್ವಿಕೆಯು ಖಂಡನೆಗೆ ಉದಾಹರಣೆ ಬೇಕಿಲ್ಲವೆಂದು ಸ್ಪಷ್ಟವಾಯಿತು. ಭಾರತದ ಬಡತನವೇ ಸಾಕು ಬಿಟಿಷ್ ಪ್ರಭುತ್ವವು ಕೊನೆಗಾಣಬೇಕು ಎಂಬ ವಾದಕ್ಕೆ ಬಿಟ್ರಿಷ್ ಒಡೆತನವು ಭರತಖಂಡಕ್ಕೆ ಸರ್ವನಾಶಕರವಾಗಿದೆ. ವ ಹಾವಾಸವೀಕರಿಸ್ಥಿತಿ.

ಮೊದಲು ಮುಸಲ್ಮಾನರೂ ಒಡೆತನ ಮಾಡಿದರು. ನಿಜ ಆದರೆ ಹಾಗೆ ದಾಳಿಯಿಟ್ಟು ಬಂದವರು ಇಲ್ಲೇ ಮನೆ ಮಾಡಿದರು. ಅವರ ವಂಶೀಯರು ಭಾರತೀಯರಾದರು. ಭಾರತವು ಅವರ ತಾಯ್ನಾಡಾಯಿತು. ಅವರು ಹಾಕಿದ ಕಂದಾಯ, ತೆಗೆದ ತೆರಿಗೆ ಸ್ವೀಕರಿಸಿದ ಕಪ್ಪ ಎಲ್ಲ ಭರತಖಂಡದಲ್ಲೇ ವಿನಿಯೋಗವಾಯಿತು. ಆ ನಾಡಿನ ಶಿಲ್ಪಿಗಾರಿಕೆ, ಕಲೆ, ಸಾಹಿತ್ಯ ಮುಂತಾದವುಗಳ ಅಭಿವೃದ್ಧಿಗೇ ಉಪಯೋಗಿಸಲ್ಪಟ್ಟವು. ಬ್ರಿಟಿಷರೂ ಹಾಗೆಯೇ ಮಾಡಿದ್ದರೆ ಭಾರತ ಏನೆಂದು ಹೊನ್ನಿನ ಹೊಳೆ ಹರಿಯುತ್ತಿತ್ತು. ಭರತಖಂಡದಲ್ಲಿ ಹೊನ್ನಿನ ಹೊಗೆಸೂಡುತ್ತಿತ್ತು. ಆದರೆ ಇಂದಿನ ಸ್ಥಿತಿಗೆ ತಂದ ಮೊದಲಿಲ್ಲ. ಸಹಿಸಲು ಸಾಧ್ಯವಾದೆ ವರ್ಷವರ್ಷವೂ ಜಗತ್ತಿನ ವಿಖ್ಯಾತ ಜನಾಂಗವೊಂದು ನಾಶವಾಗುತ್ತಿದೆ. ವಿನಯನಿಧಿ ಳಿನಿಸಿದ ಜನರು ಹಾಳಾಗುತ್ತಿದ್ದಾರೆ.

ಇಂಗ್ಲೆಂಡು ಇಂಡಿಯಾ ದೇಶವನ್ನು ಅಡಿಶಿತ ಸ್ವಾತಂತ್ರ್ಯಕ್ಕೆ ಸಿದ್ಧಗೊಳಿಸುತ್ತಿಲ್ಲ. ಭಾರತವನ್ನು ಹೀರುತ್ತಿದೆ... ಈ ಘೋರದೃಶ್ಯವನ್ನು ಕಂಡೂ ಕಂಡೂ ಬಾಯಿ ಬಿಡದಿರುವವನು ನಪುಂಸಕನೇ ಸರಿ. ಇದನ್ನೆಲ್ಲ ಕಂಡು ತೆಪ್ಪಿಗರುವದಾದರೆ ಆಂಗ್ಲೇಯನಾಗಲಿ. ಅಮೆರಿಕನಾಗಲಿ ಆನನು ಆ ದೇಶದವನೆಂದು ಹೇಳಿಕೊಳ್ಳಲು ಕೂಡ ಅರ್ಹನಲ್ಲ. (ವಿ ಕ.)

ಮಹಾತ್ಮರ ಗುಣಾನುವಾದ

ಮೈಸೂರಿನ ಮಹಾರಾಜ ಕಾಲೇಜಿನ ತತ್ವಶಾಸ್ತ್ರದ ಅಧ್ಯಾಪಕರಾದ ಪ್ರೊ ಎ. ಆರ್. ವಾಡಿಯಾರವರು, ಡಾಕಾದಲ್ಲಿ ಸೇರಿದ ತತ್ವಶಾಸ್ತ್ರ ಸಮ್ಮೇಲನದ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ, ಮಹಾತ್ಮರ ಜೀವನ ಚರಿತ್ರೆಯೊಳಗಿನ ಕೆಲವೊಂದು ಉದಾತ್ತ ತತ್ವಗಳನ್ನು ಈರೀತಿ ಕೆಳಗಿನಂತೆ ಹೇಳಿದರು.

ಮಹಾತ್ಮರು ತಮ್ಮ ಪ್ರತಿಯೊಂದು ಅಳಿಪಾಪ್ರಯತ್ನವನ್ನೂ ನಂಬಿಕೆಯನ್ನು ಬುದ್ಧಿಯು ಒರೆಗಲ್ಲಿಗೆ ಕಚ್ಚಿ ಸ್ವೀಕರಿಸಿರುವರೇ ಹೊರತು ಮೂಢ ನಂಬಿಕೆಯಿಂದಲ್ಲ ಧರ್ಮವೆಂದರೆ ಸತ್ಯ ಮತ್ತು ಅಹಿಂಸೆಯ ಪ್ರತಿಷ್ಠಾಪನೆ ಮತ್ತೆ ಆಚರಣೆ ಎಂಬುದೇ ಅವರ ಸಿದ್ಧಾಂತ. ಪೂರ್ವದಲ್ಲಿ ಧರ್ಮದ ಪ್ರಚಾರದಲ್ಲಿ ಬಿದ್ದವರು ರಾಜಕೀಯ ಪ್ರಪಂಚದಿಂದ ಹೊರಗಿರುತ್ತಿದ್ದರು. ರಾಜಕೀಯ ಪ್ರಪಂಚದಲ್ಲಿದ್ದವರು ಧರ್ಮದ ಗೊಂದಲದಲ್ಲಿ ಬೀಳುತ್ತಿರಲಿಲ್ಲ ಆದರೆ ಮಹಾತ್ಮಾಗಾಂಧಿಯವರು ಧರ್ಮ ಮತ್ತು ರಾಜಕೀಯ ಪ್ರಪಂಚಗಳನ್ನು ಸಮನ್ವಯ ಮಾಡಿ, ನಿಜವಾಗಿ ಸತ್ಯಧರ್ಮದಲ್ಲಿರುವವನು. ರಾಜಕೀಯ ಪ್ರಪಂಚದಿಂದ ಹೊರಗಿರುವದಕ್ಕಾಗಿಯೇ ವಿಶ್ವ ವೆಂಬುದನ್ನು ತೋರಿಸಿಕೊಟ್ಟವರು ಮಹಾತ್ಮರು ಕೇವಲ ವಿಚಾರಕರಲ್ಲ ಕೇವಲ ಪ್ರಚಾರಕರಲ್ಲ. ನುಡಿದಂತೆ ನಡೆಯುವವರು. ನಿಸ್ಸೀಮ ಕರ್ಮಯೋಗಿಗಳು. ಅವರು ನಂಬಿರುವ ಪ್ರತಿಯೊಂದು ಧರ್ಮತತ್ವವೂ ಅವರ ಅನುಷ್ಠಾನದಲ್ಲಿರುವದು ಮಹಾತ್ಮರ ಅಭಿಪ್ರಾಯಗಳೂ ಟಾಲಸ್ಟಾಯರ ಅಭಿಪ್ರಾಯಗಳೂ ಒಂದಕ್ಕೊಂದು ಹೊಂದಿಕೊಂಡಿದ್ದರೂ, ಮಹಾತ್ಮರು ಟಾಲಸ್ಟಾಯರಿಗಿಂತ ಶ್ರೇಷ್ಠರು. ಟಾಲಸ್ಟಾಯರು ಕೇವಲ ಮನಃಪ್ರಪಂಚದಲ್ಲಿ ತಮ್ಮ ತತ್ವಗಳ ಕಟ್ಟಡವನ್ನು ರಚಿಸಿದರು ಆದರೆ ಮಹಾತ್ಮಾಗಾಂಧಿಯವರು ಕಾರ್ಯಪ್ರಪಂಚದಲ್ಲಿ ಈ ತತ್ವಗಳನ್ನೆಲ್ಲ ಅನುಷ್ಠಾನದಲ್ಲಿ ತಂದರು. ಸರಕಾರವೆಂಬ ಯಂತ್ರದ ವಿಷಯದಲ್ಲಿ ಟಾಲಸ್ಟಾಯರಂತೆಯೆ ಮಹಾತ್ಮರು ಗೌರವವನ್ನು ತೋರಿಸುವದಿಲ್ಲ. ನನಗೆ ಯಾವ ಸರಕಾರವನ್ನು ಕಂಡರೂ ಇಷ್ಟವಿಲ್ಲ ನನಗೆ ಯಾವ ಸರಕಾರವೂ ಬೇಡ ಎಂದು ಮಹಾತ್ಮರು ಅನ್ನುವರು. ಯಾವ ಸರಕಾರವು ಅತ್ಯಂತ ಕಡಿಮೆಯಾಗಿ ಆಳುವದೋ ಅಂದರೆ ಅತ್ಯಂತ ಕಡಿಮೆಯಾಗಿ ವ್ಯಕ್ತಿಯನ್ನು ನಿರ್ಬಂಧಿಸುವದೋ ಇದೇ ಒಳ್ಳೆಯ ಸರಕಾರವೆಂದು ಮಹಾತ್ಮಾಗಾಂಧಿಯವರು ಹೇಳುವರು.

(ಕಾ. ನಾ)

ಅಹಮ್ಮದಾಬಾದದಲ್ಲಿ ಬಾಂಬಿನ ಅತ್ಯಾಚಾರ

ಅಹಮ್ಮದಾಬಾದದಲ್ಲಿ ರಕನಪೋಲ ಬೀದಿಯಲ್ಲಿರುವ ಒಬ್ಬ ಸಿಂಪಿಯ ಮನೆಗೆ ತಾ|| ೨೨ ನೆಯ ದಿವಸ ಸಂಜೆಗೆ ಒಬ್ಬ ಅತಿಥಿಯು ಬಂದಿದ್ದನು. ಅವರಿಬ್ಬರೂ ನಡುಮನೆಯಲ್ಲಿ ಮಾತಾಡುತ್ತ ಕುಳಿತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಸಿಂಪಿಯು ಮಲಗುವಕೋಣೆಗಾಗಿ ಎದ್ದು ಹೋದನು. ಅವನು ಎದ್ದು ಹೋದ ಕೂಡಲೆ ನಡುಮನೆಯಲ್ಲಿ ಒಮ್ಮಿಂದೊಮ್ಮೆ ಬಾಂಬಿನ ಸ್ಫೋಟವಾಯಿತು. ಅತಿಥಿಯ ಮೂರು ಬೊಟ್ಟುಗಳು ಸಿಡಿದು ಹೋದದ್ದಲ್ಲದೆ, ಅವನ ಕಣ್ಣುಗಳಿಗಾದರೂ ಭಯಂಕರ ಗಾಯ ಶಗಲಿಯುತ್ತದೆ ಸಿಂಪಿಗೂ ಸ್ವಲ್ಪ ಅಪಾಯವಾಗಿದೆ. ಕಿಡಿಕಿ ಹಾಗು ಬಾಗಿಲುಗಳು ಸಂಪೂರ್ಣವಾಗಿ ಮುರಿದು ಬಿದ್ದಿವೆ.

ಪೋಲೀಸ ಅಧಿಕಾರಿಗಳು ಈಗ ಆ ಮನೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ಕಾಯುತ್ತಿದ್ದಾರೆ. ಈ ಬಗ್ಗೆ ಶೋಧವೂ ನಡೆದಿದೆ.

ಅಹಮ್ಮದಾಬಾದದಲ್ಲಿ ಸೊನ್ನೆ ಮೊನ್ನೆ ಸಂಭವಿಸಿದ ಬಾಂಬಿನ ಅತ್ಯಾಚಾರದ ಸಂಬಂಧವಾಗಿ, ಪೋಲೀಸ ಅಧಿಕಾರಿಗಳು ಒಳಟಿಂಗ ಮಂಡಳದ ಕಚೇರಿ ಹಾಗು ಎಷ್ಟೋ ವ ನೆಗಳನ್ನು ಝಡತಿ ಮಾಡಿ ನಾಲ್ಕು ಜನರನ್ನು ಸೆರೆ ಹಿಡಿದುಕೊಂಡು ಹೋದರು ಬಾಂಬಿನಿಂದ ಗಾಯ ಹೊಂದಿದವನೂ ಸೆರೆ ಹಿಡಿಯಲ್ಪಟ್ಟಿದ್ದಾರೆ. ಝಡತಿಯಲ್ಲಿ ಪೋಲೀಸರಿಗೆ ಬಾಂಬಿನ ಉಪಕರಣಗಳಾದರೂ ಸಿಕ್ಕಿವೆ.

ಫೌಜದಾರರ ಮೇಲೆ ಫಿರ್ಯಾದಿ

ಹಾದಿಯಲ್ಲಿ ಹಾಡುಹಗಲೆ ಹೋಗುತ್ತಿರುವಾಗ, ರಾಜಕೀಯ ಜಳವಳಿಯ ಸಂಬಂಧವಾಗಿ ಅಲ್ಲದ ಸಲ್ಲದ ಪ್ರಶ್ನೆಗಳನ್ನು ಕೇಳಿ, ತಮ್ಮನ್ನು ಅವಮಾನಗೊಳಿಸಿದ ಸಂಬಂಧವಾಗಿ ಪಾಲುಪಾನೂರದ ಹಿರ್ವ ವಕೀಲರು ಅಲ್ಲಿಯ ಫೌಜದಾರರ ಮೇಲೆ ಫಿರ್ಯಾದು ಮಾಡಿದ್ದಾರೆ.

ಶ್ರೀ ವಿಠ್ಠಲಭಾಯಿಯವರ ಪ್ರಕೃತಿ.

ಕೋಯಿಮುತ್ತೂರ್ ಜೇಲಿನಲ್ಲಿ ಶ್ರೀ ವಿಠ್ಠಲಭಾಯಿಯವರಿಗೆ 'ಎ' ವರ್ಗದ ಎಲ್ಲ ಅನುಕೂಲತೆಗಳನ್ನೂ, ಓರ್ವ ಗುಜರಾಥಿ ಅಡಿಗೆಯವನನ್ನು ಮತ್ತು ಒಬ್ಬ ಸೇವಕನನ್ನು ಒದಗಿಸಿ ಕೊಟ್ಟಿದೆಯೆಂದೂ, ಅವರ ಪ್ರಕೃತಿಯು ಚಿಂತಾಜನಕವಾಗಿರುವದಿಲ್ಲವೆಂದೂ ಹಿಂದುಸ್ಥಾನ ಸರಕಾರದವರು ಒಂದು ಪತ್ರಿಕೆಯನ್ನು ಪ್ರಕಟಪಡಿಸಿದ್ದಾರೆ.

ಮುಂಬಯಿಯ ಡಾಕ್ಟರರಾದ ಪಿ ಟಿ ಪಟೇಲ ಹಾಗು ಆರ್. ಪ್ಹಿ. ಪಟೇಲರವರು ತಾ॥ ೨೬ನೆಯ ದಿವಸ ಶ್ರೀ ವಿಠ್ಠಲಭಾಯಿಯವರನ್ನು ಪರೀಕ್ಷಿಸಿ ತಮ್ಮಿಗನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ:-

ಜೇಲ ಸೂಪರಿಂಟೆಂಡೆಂಟರ ಎದುರಿಗೆ ತಾ॥ ೨೬ನೆಯ ದಿವಸ ಶ್ರೀ ವಿಠ್ಠಲಭಾಯಿಯವರ ದೇಹಸ್ಥಿತಿಯನ್ನು ಚನ್ನಾಗಿ ಪರೀಕ್ಷಿಸಿದೆವು. ಅವರು ಒಳಗೇ ಅಶಕ್ತರಾಗಿದ್ದು, ಮೂಲಬದ್ಧತ, ಜೀರ್ಣ ಹಾಗು ಮೂಲವ್ಯಾಧಿಗಳಿಂದ ಒಳಗೊಂಡಿರುವರು. ಅವರ ತೂಕವು ಬಹಳೇ ಕಡಿಮೆಯಾಗಿದೆ. ಅವರಿಗೆ ಆಗಾಗ್ಗೆ ಒವಳಿ ಬರುತ್ತಿದೆ. ಈ ಮೂಲಕವಾಗಿ ಅವರ ಸ್ಥಿತಿಯು ಚಿಂತಾಜನಕವಾಗಿದ್ದು, ಈ ಬಗ್ಗೆ ಒಳ್ಳೆಯ ಉಪಚಾರ ಮಾಡುವದು ಅತ್ಯವಶ್ಯಕವಿದೆ. ಅವರ ಹಲ್ಲುಗಳು ಬಹಳೇ ಸಡಿಲವಾಗಿದ್ದರಿಂದ, ಅವರಿಗೆ ಆಹಾರವನ್ನು ಚನ್ನಾಗಿ ಮೆಲ್ಲಲಿಕ್ಕೆ ಒಂದಿಲ್ಲ ಒಂದರಿಂದ ತೊಂದರೆಯುಂಟಾಗಿ ಯೋಗ್ಯವಾಗಿ ಪಚನವಾಗದಿಲ್ಲ. "ಕ್ಷ" ಕಿರಣದ ಉಪಚಾರ ಹಾಗು ಶಸ್ತ್ರ ಕ್ರಿಯೆಗಳನ್ನು ಸಾಗಿಸಲು ಇಲ್ಲಿ ಯೋಗ್ಯವಾದ ವ್ಯವಸ್ಥೆಯಾಗುವದು ಶಕ್ಯವಿಲ್ಲ ಅವರನ್ನು ಯಾರೋಡ ಇಲ್ಲದೆ ಹಿಂದುಸ್ಥಾನದಲ್ಲಿ ಬೇರೆ ಕಡೆಗೆ ಕಳಿಸಿ ಅಧಿಕಾರಿಗಳು ಬೇಗನೆ ಅವರಿಗೆ ಔಷಧೋಪಚಾರ ಮಾಡಿಸಬೇಕು.

ಭಯಂಕರ ಭೂಕಂಪ

೩೫ ಜನರಿಗೆ ಮರಣ! ೭೦ ಜನರಿಗೆ ಗಾಯ.

ಅರ್ಜೆಂಟಾಯನಾದ ಬಳಿಯಲ್ಲಿ ಭಯಂಕರ ಭೂಕಂಪವಾದದ್ದರಿಂದ ಪೇಮಾ ಎಂಬ ಪಟ್ಟಣವು ಸಮೂಲವಾಗಿ ನಾಶವಾಗಿದೆ. ೩೫ ಜನರು ಮರಣ ಹೊಂದಿದ್ದು ೭೦ ಜನರಿಗೆ ಗಾಯ ಸೇರಾಗಿವೆ.

ಶ್ರೀ ಸಾವರಕರರಿಗೆ ಮತ್ತೆ ಪ್ರತಿಬಂಧ

೫ ವರ್ಷಗಳ ವರೆಗೆ ರತ್ನಾಗಿರಿ ಜಿಲ್ಲೆಯನ್ನು ಬಿಟ್ಟು ಹೋಗಕೂಡದು ಹಾಗು ಯಾವದೇ ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳಕೂಡದು ಎಂಬ ಪ್ರತಿಬಂಧಗಳನ್ನು ಹಾಕಿ ಮುಂಬಯಿ ಸರಕಾರದವರು ೧೯೨೪ ರಲ್ಲಿ ಶ್ರೀ ವಿನಾಯಕದಾಮೋದರ ಸಾವರಕರರನ್ನು ಯರೋಡಾ ಜೇಲಿನಿಂದ ಬಿಡುಗಡೆ ಮಾಡಿದ್ದರು. ಶ್ರೀ ಸಾವರಕರರು ಜೇಲಿನಿಂದ ಬಿಡುಗಡೆ ಹೊಂದಿ ಒಂದು ರತ್ನಾಗಿರಿಯ ಪ್ಲಿ ಇರುತ್ತಿದ್ದರು. ಈಗ ಆ ಅವಧಿಯು ಮುಗಿದಿದ್ದರಿಂದ ಮುಂಬಯಿ ಸರಕಾರದವರು ಅದನ್ನು ಮತ್ತೆ ೨ ವರ್ಷಗಳ ವರೆಗೆ ಹೆಚ್ಚಿಗೆ ಬೆಳಿಸಿದ್ದಾರೆ. ಅವರ ಮೇಲಿನ ಪ್ರತಿಬಂಧವನ್ನು ಈಗ ತೆಗೆದು ಹಾಕಿದಲ್ಲಿ, ಸಾರ್ವಜನಿಕ ಶಾಂತತೆಗೆ ಭಂಗ ಒರುವದೆಂಬುದಾಗಿ ಸರಕಾರದವರು ಕಾರಣ ತೋರಿಸಿದ್ದಾರೆ.

ಮಧ್ಯಪ್ರಾಂತದಲ್ಲಿ

೫೦ ಲಕ್ಷ ರು. ಲೂಟಿ

ಮಧ್ಯಪ್ರಾಂತದ ಬಿಲಾಸಪುರ ಜಿಲ್ಲೆಯಲ್ಲಿಯ ಹಳ್ಳಿಗಳಲ್ಲಿ ವಾಸಿಸುವ ಕೆಲವು ಜನರು ಅಲ್ಲಿಯ ಸಾವಕಾರ ಮೇಲೆ ಹಲ್ಲೆ ಮಾಡಿ, ಅವರ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿ ಅವರ ಮನೆ ಅಗೆ ಬೆಂಕಿ ಹಚ್ಚಿ ಹತಿದ್ದಾರೆ. ಹಳ್ಳಿಯಲ್ಲಿ ವಾಸಿಸುವ ಸ್ತ್ರೀ ಪುರುಷರನ್ನು ಬಹ್ಯಾಲೆ ಮಾಡಿ, ಹೊಡೆದು ಬಡದು ಹಳ್ಳಿಯಿಂದ ಅವರನ್ನು ಹೊರಗೆ ಅಟ್ಟಿಸೊಡಗಿದ್ದಾರೆ. ಈ ಮೂಲಕವಾಗಿ ಅಲ್ಲಿಯ ಜನರೆಲ್ಲರೂ ಗಾಬರಿಗೊಂಡಿದ್ದಾರೆ. ಯಾವ ಕಾಲಕ್ಕು ಏನು ಆಗುತ್ತದೆಯೆಂಬುದು ಹೇಳಲು ಬರದಂತಾಗಿದೆ. ಲೂಟಿಗಾರರು ಈ ತರಹ ಒಟ್ಟಿಗೆ ೪೦ ಹಳ್ಳಿಗಳಿಗೆ ಸುತ್ತಿ ಹೋಗಿ, ೫೦ ಲಕ್ಷ ರೂಪಾಯಿ ಲೂಟಿಮಾಡಿಕೊಂಡು ಹೋಗಿರುವರಾಗಿ ತಿಳಿಯುತ್ತದೆ.

ಬಹಿಷ್ಕಾರದ ಪರಿಣಾಮ.

ಹೋದ ವರ್ಷದ ನವೆಂಬರ ತಿಂಗಳದಲ್ಲಿ ಬಿಗಿಲಕ್ಷ ರು. ಕಿಮ್ಮತ್ತಿನ ಚಿನ್ನದ ಚಿಪ್ಪಿಯು ಪರದೇಶದಿಂದ ಇಲ್ಲಿಗೆ ಬಂದಿದ್ದು, ಈ ವರ್ಷದ ನವೆಂಬರ ತಿಂಗಳವರೆಗೆ ಅದು ಕೇವಲ ೧೭ ಲಕ್ಷ ರೂಪಾಯಿಕ್ಕೆ ಇಳಿದಿದೆ. ಬಹಿಷ್ಕಾರದ ಪರಿಣಾಮ.

ಜಂಜೀರಾ ಸಂಸ್ಥಾನದಲ್ಲಿ

ಗಾಂಧಿ ಟೊಪ್ಪಿಗೆಗಳ ಜಪ್ತಿ

ಜಂಜೀರಾ ಸಂಸ್ಥಾನದಲ್ಲಿಯ ಶ್ರೀ ವರ್ಧನದ ಓರ್ವ ವ್ಯಾಪಾರಸ್ಥರು ಹೊರಗಿನಿಂದ ಗಾಂಧಿ ಟೊಪ್ಪಿಗೆಗಳನ್ನು ತರಿಸಿಕೊಂಡಿದ್ದರು. ಅಧಿಕಾರಿಗಳು ಇದನ್ನು ತಿಳಿದುಕೊಂಡು, ಅವರ ಅಂಗಡಿಗೆ ಹೋಗಿ ಅವುಗಳನ್ನೆಲ್ಲ ಜಪ್ತು ಮಾಡಿದರು. ಸಂಸ್ಥಾನದ ದಿವಾಣರು ಒಂದು ಅಪ್ಪಣೆ ಹೊರಡಿಸಿ ಗಾಂಧಿ ಟೊಪ್ಪಿಗೆಗೆ ಪ್ರತಿಬಂಧ ಮಾಡಿದ್ದೇ ಜಪ್ತಿಗೆ ಕಾರಣವಾಗಿದೆ.

ಸೊಲ್ಲಾಪುರದ

ಆರೋಪಿಗಳಿಗೆ ಜೀವದಾನ

ಸೊಲ್ಲಾಪುರದಲ್ಲಾದ ದಂಗೆಯ ನಿಮಿತ್ತವಾಗಿ ಗಲ್ಲಿನ ಶಿಕ್ಷೆಗೆ ಪಾತ್ರರಾದ ಶ್ರೀ ಧನಶೆಟ್ಟಿಯಿಂದೆ ಮೊದಲಾದ ನಾಲ್ಕು ಜನರಿಗೆ ಜಯ ತೋರಿಸಿ ಅವರ ಗಲ್ಲಿನ ಶಿಕ್ಷೆಯನ್ನು ಕಡಿಮೆ ಮಾಡಬೇಕಾಗಿ ಬೆಳಗಾವಿಯ ವಕೀಲ ಸಂಘದವರು ವೈಸ್ರಾಯರಿಗೆ ತಾರಿನಿಂದ ವಿನಂತಿ ಮಾಡಿಕೊಂಡಿದ್ದರು.

ಜ್ವಾಲಾಮುಖಿಯಿಂದ

೧೫೦೦ ಜನರಿಗೆ ಮರಣ

ಪೆರಾಪಿಯಲ್ಲಿ ಒಮ್ಮಿಂದೊಮ್ಮೆ ಜ್ವಾಲಾಮುಖಿಯು ಎದ್ದಿದ್ದರಿಂದ ೧೫೦೦ ಜನರ ಮರಣ ಹೊಂದಿರುವರಾಗಿ ತಿಳಿಯುತ್ತದೆ. ಜ್ವಾಲಾಮುಖಿಯು ಇನ್ನೂ ಉಪದ್ರವವನ್ನು ಬಡುತ್ತಿರುತ್ತದೆ. ಅಲ್ಲಿ ಇರುವವರೆಲ್ಲರೂ ಆ ಸ್ಥಳವನ್ನ ಬಿಟ್ಟು ಹೊರಗಿದ್ದಾರೆ.

ಸರಕಾರಕ್ಕೆ

ಹಣವು ಕಡಿಮೆ ಬಿತ್ತು

ಕಾಂಗ್ರೆಸದ ಅಧಿಕಾರಿಗಳು ಸಾಗಿಸಿದ ಮದ್ಯಪಾನ ಪ್ರತಿಬಂಧ ಹಾಗು ಬಹಿಷ್ಕಾರ ಚಳವಳಿಯು ಮೂಲಕವಾಗಿ ಹಿಂದುಸ್ಥಾನ ಸರಕಾರಕ್ಕೆ ಸುಮಾರು ೧೫ ಕೋಟಿ ರುಪಾಯಿಗಳ ಹಾನಿಯಾಗಿದ್ದು, ಈ ತೊಂತೆಯನ್ನು ಹೇಗೆ ಬಾಯಿಗೂಡಿಸಬೇಕೆಂಬುದಿಗಾಗಿ ಅವರು ವಿಚಾರ ಮಾಡತ್ತಿದ್ದಾರೆ. ಇಷ್ಟು ದಿನಗಳ ವರೆಗೆ ೨೦೦೦ರು. ಅಥವಾ ಅದಕ್ಕಿಂತಲೂ ಹೆಚ್ಚು ಉಪ್ಪನ್ನವಿದ್ದವರ ಮೇಲೆ ಇನಕಮ ಟ್ಯಾಕ್ಸ "ಆದಾಯ" ಹೇರಲ್ಪಡುತ್ತಿತ್ತು. ಅದನ್ನು ಈಗ ೧೫೦೦ಕ್ಕೆ ಇಳಿಸಿ ತೊರತೆಹುಸ್ಸೆನ್ನ ಬಾಯಿಗೂಡಿಸುವವನಿದ್ದಕಾಗಿ ತಿಳಿಯುತ್ತದೆ.

ಹಿಂದುಸ್ಥಾನ.

ಪಂಜಾಬ ವಿಶ್ವವಿದ್ಯಾಲಯದ ಫಟಕೋ ತ್ಸವಮಾಂಧದ ಕಾಲಕ್ಕೆ ಗವರ್ನರರ ಮೇಲೆ ಂಡುಹಾರಿದ್ದರ ಸಂಬಂಧವಾಗಿ ಏನಾದರೂ ಗದ ಪತ್ರಗಳು ದೊರೆಯುವವೇನೆಂಬುದನ್ನು ಡುಹಿಡಿಯಲು, ಲಾಹೋರಿನ ಪೋಲೀಸ ಧಿಕಾರಿಗಳು ತಾ| ೨೯ ನೆಯ ದಿವಸ, ಅಲ್ಲಿಯ ೀ ವೀರೇಂದ್ರ, ಕೇಶವಸಿಂಗ, ಮುಹಮ್ಮದಅಲ್ಲಿ ಶವಾಲ ಮೊದಲಾದ ೨೨ ಜನರ ಮನೆಗ ನ್ನು ಝಡತಿ ಮಾಡಿ ಕೆಲವು ಕಾಗದ ಪತ್ರಗ ನ್ನು ತೆಗೆದುಕೊಂಡರು. ಶ್ರೀ ಭಗತಸಿಂಗರ ಂಡೆಯವರಾದ ಕೇಶವಸಿಂಗರ ಮನೆಗೆ ಕೇಲಿ ಕೆ ಅವನ್ನು ತಮ್ಮ ವಶಪಡಿಸಿಕೊಂಡರು ವಶಪಡಿಸುತ್ತಲು ಪೋಲೀಸರ ಕಾವಲಿಟ್ಟಿರುವರು ಶಾವರ ಪ್ರಾಂತದ ಮರ್ದನ ಎಂಬ ಹಳ್ಳಿ ಲ್ಲಿ ಚವನಲಾಲ, ಯದುದಾಲ ಮತ್ತು ೀವದತ್ತ ಎಂಬ ಮೂವರು ತರುಣರು ಕೈದು ಮಾಡಲ್ಪಟ್ಟಿದ್ದಾರೆ.

ಪೆಶಾವರ ಪ್ರಾಂತದ ರಜ್ಜರ ಎಂಬ ಳ್ಳಿಯಲ್ಲಿ ಒಬ್ಬಿಂದೊಮ್ಮೆ ಬಾಂಬು ಹಾರಿ ಬ್ಬನಿಗೆ ಭಯಂಕರ ಗಾಯವಾಗಿದೆ. ಈ ಬಗ್ಗೆ ಚ್ಚಿನ ಸಂಗತಿಗಳು ತಿಳಿದು ಬಂದಿಲ್ಲ

ದಿಲ್ಲಿಯ ಸೆಂಟ್ರಲ್ ಸ್ಟೇಶನದಲ್ಲಿಯ ಎರ ಯ ವರ್ಗದ "ವೇಟಿಂಗ ರೂಮು" ದಲ್ಲಿ ಾರದೋ ಏನೋ ಒಂದು ಲಗೇಜು ಕಾಗೆಯೆ ನ್ನು ಕೊಂಡಿತ್ತು. ಅದರಲ್ಲಿ ಹಾಸಿಗೆ ಹೊದಿಕೆ ಗಳು ಸ್ವೆಟರ ಇದ್ದವು. ವೇಟಿಂಗ ರೂಮಿನ ವಲುಗಾರನು ಅಲ್ಲಿಗೆ ಬಂದು ಅದನ್ನು ತೀ, ಇಬ್ಬರು ಕೂಲಿಕಾರರನ್ನು ಕರೆದು ಂಡು ಬಂದನು. ಅದನ್ನು ಎತ್ತಿದ ಕೂಡಲೆ, ಟರದೊಳಗಿಂದ ಒಂದು ಸಿಗರೇಟ ಕೇಸು ಗೆ ಬಿದ್ದಿತು. ಕೂತೂಹಲಿ ಆವರದೊಳಗಿಂದ ಬ್ಬಿಂದೊಮ್ಮೆ ಬಾಂಬು ಹಾರಿತು. ಕಾವಲು ರನಿಗೂ ಮತ್ತು ಕೂಲಿಕಾರನಿಗೂ ಗಾಯ ಾದವು. ಕಾವಲುಗಾರನ ಎಡಕೈ ತೋಳು ಗೆ ಬಹಳೇ ಅಪಾಯವಾಗಿದ್ದು, ಅವನು ಳಿಯುವ ಹಾಗಿಲ್ಲ

ಆಲಹಾಬಾದ ಜಿಲ್ಲೆಯ ಕರ್ಮಾ ಎಂಬ ಳ್ಳಿಯಲ್ಲಿ ಕಾಂಗ್ರೆಸ್ ಅಧಿಕಾರಿಗಳು ಒಂದು ರ್ವಜನಿಕ ಸಭೆ ಸೇರಿಸಿದ್ದರು. ಅದು ಮುಗಿ ುವ ಸುಮಾರಿಗೆ ಕೆಲವು ಜನ ಪೋಲೀಸರು ಟ್ಟಿಗೆ ಬಂದು ಕ್ರಿ. ಅ. ಅಮೆಂಡಮೆಂಟ ಾಯದೆಯ ಅನ್ವಯ ಒಬ್ಬನನ್ನು ಸೆರೆಹಿಡಿ ದರು. ಆಲ್ಲಿ ನೆರೆದವರು ಅವನನ್ನು ಬಿಡುಗಡೆ ಮಾಡಬೇಕೆಂದು ಪೋಲೀಸರ ವೇಲೆ ಹಲ್ಲೆ ಮಾಡಿದರು. ಮೂರು ಜನ ಪೋಲೀಸರಿಗೆ ಗಾಯವಾಯಿತು. ಸ್ವಲ್ಪ ಹೊತ್ತಿನ ಮೇಲೆ ಹೆಚ್ಚಿಗೆ ಕೆಲವು ಜನ ಪೋಲೀಸರು ಅಲ್ಲಿಗೆ ಬಂದು, ಜನರನ್ನು ಚದರಿಸಿ, ೨೭ ಜನರನ್ನು ಹಿಡಿದುಕೊಂಡು ಹೋದರು.

ಪುಣೆಯಲ್ಲಿಯು ಒಟ್ಟಿಯು ವ್ಯಾಪಾರಿಗಳ ದೇಶಿ ಬಟ್ಟೆಗೆ ಬಹಿಷ್ಕಾರ ಹಾಕಲು ಇನ್ನೂ ಸಿದ್ಧರಾಗದ್ದನ್ನು ಕಂಡು ಅಲ್ಲಿನ ದೇಶದಾಸ ರಾನಡೆಯವರು ಬುಧವಾರ ಬಾಗಿಲಲ್ಲಿ ಅನ ಶ್ಯಾಗ ಸತ್ಯಾಗ್ರಹವನ್ನು ಹೂಡಿದ್ದರಷ್ಟೆ. ಅವರ ಈ ಸತ್ಯಾಗ್ರಹವು ಅಲ್ಲಿಯ ವ್ಯಾಪಾರಸ್ಥರ ಮೇಲೆ ಒಳಿತಾಗಿ ಪರಿಣಮಿಸಿದ್ದರಿಂದ ಹಾಗ ಜನ ವರ್ತಕರು ಪರದೇಶಿ ಬಟ್ಟೆ ತರಿಸುವದಿಲ್ಲವಾಗಿ ಪ್ರತಿಜ್ಞಾ ಪತ್ರಿಕೆಯ ವೇಲೆ ಬರೆದು ಕೊಟ್ಟರು. ನಂತರದಲ್ಲಿ ಶ್ರೀ ರಾನಡೆಯವರು ಉಪವಾಸ ವನ್ನು ಮುರಿದು ಪಾರಣೆ ಮಾಡಿದರು. ಶ್ರೀ ರಾನಡೆಯವರ ಒಟ್ಟಿಗೆ ೬ ದಿನಗಳ ವರೆಗೆ ಉಪವಾಸದಿಂದ ಇದ್ದರು. ಈ ಅವಧಿಯಲ್ಲಿ ಅವರ ತೂಕವು ೧೪ ಪೌಂಡು ಕಡಿಮೆಯಾಗಿದೆ.

ವಿದೇಶ.

ತರ್ಕಸ್ಥಾನದ ಹೊಗಿನ ಖಲೀಫರಾಗಿರುವ ತೆಕಾಲ ಪಾಶಾರವರ ಪ್ರಭುತ್ವದ ವಿರುದ್ಧವಾಗಿ ಬಂಡಾಯೆದ್ದಿರುವ ಸ್ಮರ್ನಾ, ಸ್ತಂಬೂಲ ಮೊದಲಾದ ಎಷ್ಟೋ ಸ್ಥಳಗಳಲ್ಲಿ ಕೂಡಿ ಒಟ್ಟಿಗೆ ೧೫೦೦ ಜನರು ಕೈದು ಮಾಡಲ್ಪಟ್ಟಿದ್ದಾರೆ. ಅವರಲ್ಲಿ ಶೇಖರು, ಇಮಾಮರು ಹಾಗು ಸ್ತ್ರೀಯರಾದರೂ ಎಷ್ಟೋ ಜನರಿರುವರು.

ಸ್ಮರ್ನಾ ನಗರದ ಸ್ಮರ್ನಾ ಪ್ರಾಂತದಲ್ಲಿ ದಂಗೆಯು ಪ್ರಾರಂಭವಾಗಿ ಪ್ರಭುತ್ವದ ವಿರುದ್ಧ ಬಂಡಾಯ ಬಂಡಾಯಗಾರ ನನ್ನು ತ್ತಿಹಿಡಿಯಲು ಗ್ರೀಕರ ಸೈನಿಕರ ವಿಚಾರಣೆಯು, ದಂಗೆಕೋರರಿಗೆ ಶಿಕ್ಷೆಗಳಲ್ಲಿ ಕಡಿಯುವದಿದೆ ಕೆಲವರಿಗೆ ಮರಣ ಶಿಕ್ಷೆಯು ವಿಧಿಸಲ್ಪಡುವದಾಗಿ ತೋರುತ್ತದೆ.

ಬಂಡೀ ಗಾಲಿಯ ಪರಿಷತ್ತು

ಬಂಡೀಗಾಲಿಯ ಪರಿಷತ್ತಿನ ಕಾರ್ಯವು ತಾ|| ೩೦ ನೆಯ ದಿವಸ ಮತ್ತೆ ಪ್ರಾರಂಭವಾಯಿತು. ಪಾಯುಷ್ಯ ಸಂಹರ್ತ್ತ ಪ್ರಾಂತದ ಉಪ ಮುಖ್ಯಪ್ರಧಾನರು ಮಿ. ಹೊಡರಕನ್ನರ ಅಧ್ಯಕ್ಷತೆಯಲ್ಲಿ ಕರೆತು, ಆ ಪ್ರಾಂತದಲ್ಲಿಯ ಕಾಯದೆ ಹಾಗು ಸುವ್ಯವಸ್ಥೆಗಳ ವಿಷಯವಾಗಿ ವಿಚಾರ ಮಾಡಿದರು. ಬ್ರಿಟಿಶ ಹಿಂದುಸ್ಥಾನದೊಳಗಿನ ಇತರ ಪ್ರಾಂತಗಳಂತೆ ಈ ಪ್ರಾಂತದಲ್ಲಿಯೂ ಶಾಂತಿಯು ಸಂಪೂರ್ಣವಾಗಿದ್ದರೂ ಸರಿಸುಮಾರಾದ ಹೊಸ ಕಾನೂನುಗಳು ಜಾರಿಗೆ ಬರಬೇಕೆಂಬ ದಾಗಿ ಜನರು ಇಚ್ಛಿಸುವರಾಗಿ ಕೆಲವರು ಪ್ರತಿ ಪಾದಿಸಿದರು. ತಾ|| ೩೧ ನೆಯ ದಿವಸ ಸರ್ ಡೆನಿಸ್ ಬ್ರೇಯವರು ಭಾಷಣ ಮಾಡಬೇಕಾಗಿದ್ದ ೨. ಮೃತ ಧಿಕಾರ ಉದಮಂಡಿಯ ಸಭೆಯಾದರೂ ಅಂದೇ ನೇರಬೇಕಾಗಿತ್ತು.

ಬಂಡೀಗಾಲಿಯ ಪರಿಷತ್ತಿನ ಬ್ರಿಟಿಶ ಪ್ರತಿನಿಧಿಗಳು ತಾ|| ೩೦ ನೆಯ ದಿವಸ ಒತ್ತಟ್ಟಿಗೆ ಕಲೆತು ಹಿಂದುಸ್ಥಾನಕ್ಕೆ ಪೂರ್ಣಸ್ವರಾಜ್ಯವನ್ನು ಕೊಡಬೇಕೋ ಹೇಗೆಂಬುದರ ಬಗ್ಗೆ ವಿಚಾರ ಮಾಡಿದರು. ವಿಚಾರಾರ್ಹವಷ್ಟೆ ಆಯಿತೇ ಹೊರತು ನಿರ್ಣಯವಾಗಲಿಲ್ಲ.

ಭಾರತೀಯರೊಡನೆ ಸಹಕರಿಸಿರಿ

ಹಿಂದುಸ್ಥಾನದ ಪ್ರಶ್ನೆಯು ಸುಲಭೀಕರವಾಗಿ ಬಿಡಿಸಲ್ಪಟ್ಟಿರೆನೆ ಬ್ರಿಟಿಶ ಸಾಮ್ರಾಜ್ಯವು ಉಳ್ಳ ರ್ಪೆಯನ್ನು ಹೊಂದುವದು ಹಾಗು ಜಗತ್ತಿನಲ್ಲಿ ಶಾಂತತೆಯು ನೆಲೆಗೊಳ್ಳುವದು. ಅವರೊಡನೆ ಒಡಂಬಡಿಕೆ ಮಾಡಿಕೊಂಡರೇನೆ ಬ್ರಿಟಿಶರ ಪ್ರತಿ ಷ್ಠೆಯು ಬೆಳೆಯುವದು. ಭಾರತೀಯ ರೊಡನೆ ಸಹಕರಿಸುತ್ತಹೋದಲ್ಲಿ, ಸಾವಿರಾರು ಜನರಿಗೆ ಕೂಲಿನುಂಬಳಿ ದೊರೆಯುವದಲ್ಲದೆ, ಎಷ್ಟೋ ನಿರುದ್ಯೋಗ ಹಾಗು ಕಾರಖಾನೆಗಳಿಗಾದರೂ ನಿರಾತಂಕ ಗಳು ಸಿಗುವವು" ಎಂಬುದಾಗಿ ಕಮಾಂಡರ ಕೆನವರ್ದಿಯವರು "ಡೇಲಿ ಹೆರಾಲ್ಡ" ದಲ್ಲಿ ಒಂದು ಲೇಖ ಬರೆದಿದ್ದಾರೆ.

ಹಿಂದುಸ್ಥಾನಕ್ಕೆ ಬೆಂಕಿಹತ್ತಿದೆ

ಪ್ರಾತಿನಿಧ್ಯವು ವಿಷಯವಾಗಿ ಹಿಂದೂ ಮುಸಲ್ಮಾನರಲ್ಲಿ ಈಗ ಉಳ್ಳವಿಸಿದ ಅಂತಃಕಲಹದ ಮೂಲಕಾರಣವಾಗಿಯಾಗಲಿ ಇಲ್ಲವೆ ಬ್ರಿಟಿಶರು ತಮಗೆ ಸಾಧಿಸಿದಂತೆ ನಡೆಯುವರೆಂಬ ಕಾರಣ ತೊರಿಸಿಯಾಗಲಿ, ಬಂಡೀ ಗಾಲಿಯ ಪರಿಷತ್ತಿನ ಪ್ರತಿನಿಧಿಗಳು ತಮ್ಮ ದೇಶಕ್ಕೆ ಹಿಂತಿರುಗಿದರೆ ಬಹಳೇ ಘೋರತರವಾಗಬಹುದೆಂದೂ, ಹಿಂದುಸ್ಥಾನಕ್ಕೆ ಬೆಂಕಿ ಹತ್ತಿರುವಂತಹ ಸಮಯದಲ್ಲಿ ಕ್ಷುಲ್ಲಕ ಕಾರಣಗಳ ಬಗ್ಗೆ ಬಡಿದಾಡುವುದು ಕೂಡ ವಸು ಸಮಂಜಸವಾಗಿಲ್ಲವಾದ್ದರಿಂದ ಹೇಗಾದರೂ ಮಾಡಿ ಪರಿಷತ್ತನ್ನು ಯಶಸ್ವಿ ಮಾಡಬೇಕೆಂದೂ ಡೇಲಿ ಹೆರಾಲ್ಡ ಪತ್ರಿಕೆಯು ಬುದ್ಧಿ ಹೇಳಿದೆ.

ಸ್ವದೇಶಿ ಹಾಗು ಬಹಿಷ್ಕಾರ.

ಉತ್ತರಕನ್ನಡ ಜಿಲ್ಲೆಯ ಸ್ವದೇಶಿಬಿದ್ಯೋಗಿಗಳ ಹಾಗು ಖಾದಿ ಪ್ರದರ್ಶನದ ಉದ್ಘಾಟನೆ ಸಮಾರಂಭವು ತಾ|೩೦ ನೆಯ ದಿವಸ ಕಾರವಾರದಲ್ಲಿ ಕರ್ಮವೀರ ದಿವಾಕರ ರಂಗರಾಯರ ಹಸ್ತದಿಂದ ನೆರವೇರಿಲ್ಪಟ್ಟಿತು. ಆ ಸಮಾರಂಭದಲ್ಲಿ "ಸ್ವದೇಶಿ ವಿಷಯವನ್ನು ಕುರಿತು ಶ್ರೀ ದಿವಾಕರರು ಕನ್ನಡಿಗರಂತೆ ಭಾಷಣ ಮಾಡಿದರು.

ಕಲವರು ಮಂತ್ರಿ, ಅವರಿಗೆ ಬಹಿಷ್ಕಾರ ಸೇರುವದಿಲ್ಲ; ಸ್ವದೇಶಿ ಶಬ್ದದ ಮೇಲೇ ಅವರಿಗೆ ಹೆಚ್ಚಿನ ಪ್ರೀತಿ. ಹೀಗಿರಲಿಕ್ಕೆ ಬಹಿಷ್ಕಾರ ಬೇಕು. ಅದರೊಳಗೆ ಪಿಕಟಿಂಗಿದ. ಪದೇಶಿ ಅರಿವೆ ಸೆಳೆ ತೊಳ್ಳವದಿದೆ. ಕಾರಣ ಉತ್ಸಾಹಿಗಳು, ಸ್ವದೇಶಿಯಲ್ಲದ್ದೇನಿದೆ? ಬಹಿಷ್ಕಾರವನ್ನೇ ಪುರಸ್ಕರಿಸಬೇಕು; ಹೀಗೆ ಅವರ ಪ್ರತಿಪಾದನ. ಆದರ ಇವರಿಂದೂ ದೃಷ್ಟಿಗಳು ಸಮೀಕ್ಷಿಸುವೆ. ಸ್ವದೇಶಿ-ಬಹಿಷ್ಕಾರಗಳು ಬೇರೆ ಬೇರೆಯಿಂದಿಸಿ; ಅವು ಒಳಗೆ ವಿರೋಧಭಾವವಿಲ್ಲ; ಅವು ಎಡಗೈ — ಬಲಗೈಯಂತಿವೆ. ಜೋಡಿತ್ತಿನಂತವೆ. ಜೋಡಿತ್ತಿನಂಬ ಚಕ್ಕಡಿಯು ಹೊಡಿಂತೆ ಸ್ವದೇಶಿಯು, ಸ್ವದೇಶಿ ಬಹಿಷ್ಕಾರಗಳಿಂದ ಪ್ರಗತಿ ಹೊಂದಿತ್ತದ. ಬಹಿಷ್ಕಾರ ಬೇಡೆನ್ನುವವರಿದ್ದೂ ಅಕ್ಷಮ್ಯ. ಬಹಿಷ್ಕಾರದಲ್ಲಿ ದ್ವೇಷವಿದ. ಹಿಂಸೆಯಿದ. ಎಂಬುದಾಗಿ ಅವರ ಭಾವನೆ. ಬ್ರಿಟಿಶ ಸರಕಾರಗಳನ್ನು ಬಹಿಷ್ಕರಿಸುವದರಿಂದ ಬ್ರಿಟಿಶರನ್ನು ನಾವು ದ್ವೇಷಿಸುತ್ತೇವೆಂಬುದಾಗಿ ಸ್ವದೇಶಿ ಶಬ್ದವಾದಿಗಳ ಅಭ್ಯಾಸ. ಆದರೆ ಈ ಅಭ್ಯಾಸವು ನಿರರ್ಥಕವಿದೆ. ಶ್ರೀ ಕಾಲೇಲಕರರು ಮಹಾತ್ಮರೊಡನೆ ಉಳಿದು, ಆ ಮೇಲೆ ಬಿಡುಗಡೆಯಾಗಿದ್ದಾರೆ. ಅವರು ತಮಗೂ ಮಹಾತ್ಮರಿಗೂ ನಡೆದ ವಿಚಾರವನ್ನೊಂದು ಹೇಳಿದ್ದಾರೆ. "ಬ್ರಿಟಿಶ ಸರಕಾರಿಗೆ ಬಹಿಷ್ಕಾರ ಹಾಕಿದರೆ, ನನ್ನ ವಿರೋಧವಿಲ್ಲ. ಆದರೆ ಹಾಗೆ ಮಾಡಲು ನಾನು ಮಾತ್ರ ಹೇಳಲಾರೆ." "ಹಾಗಾದರೆ ನಿಮ್ಮ ಮತದಲ್ಲಿ ಬದಲಾವಣೆಯಾಯಿತೇನು?" ಎಂದು ಶ್ರೀ ಕಾಲೇಲಕರರು ಕೇಳಲು, ಮಹಾತ್ಮರು ನುಡಿದದ್ದೇ ನಂದರೆ— "ಈ ವಿಷಯವನ್ನು ನಾನು ಸಂಪೂರ್ಣ ವಿಚಾರ ಮಾಡಿ ಹೇಳಿದ್ದೇನೆ. ಮಿ|| ದಜಿ ನೋಲ್ಡರೆನೊಲ್ಡ್ಸರವರು ನನ್ನ ಗೆಳೆಯರು. ಬ್ರಿಟಿಶ ದೇಶಕ್ಕೂ, ಹಿಂದುಸ್ಥಾನ ದೇಶಕ್ಕೂ ಒಂದು ಪ್ರಕಾರದ ಯುದ್ಧ ನಡಿದಿದೆ ನಮ್ಮ ಮೇಲೆ ನಿಮ್ಮ ರಾಷ್ಟ್ರದವರು ದಬ್ಬಾಳಿಕೆ ಮಾಡುವಷ್ಟನಕ, ನಾವು ನಿಮ್ಮ ಸರಕಾ ಕೊಳ್ಳುವದಿಲ್ಲ, ಹೀಗೆ ಹೇಳದರೆ ನನಗೂ ನಿಮಗೂ ಇರುವ ಸ್ನೇಹ ಕೆಡುವಂದಾಗಿ ಮಹಾತ್ಮರು ಮಿ|| ದಜಿ ನೋಲ್ಡ ರೇನೋಲ್ಡ್ಸರವರಿಗೆ ಹೇಳಿದರಂತಿ ಶ್ರೀ ಕಾಲೇಲಕರರು ಹೇಳುತ್ತಾರೆ ಬಹಿಷ್ಕಾರವು ದ್ವೇಷಮೂಲಕವೆಂದು ಹೇಳುವವರು ಇದನ್ನು ಪರಾಂಬರಿಸಕ್ಕದ್ದು. ದಬ್ಬಾಳಿಕೆಗೆ ಆಂಜಿ ಬಹಿಷ್ಕಾರ ಮುಂದಾದ ಕೂಡಲೆ ಕೊಳ್ಳಲಿಕ್ಕೆ ನವರಿಗೆ ಸಾಧ್ಯವಿಲ್ಲ. ದಬ್ಬಾಳಿಕೆಯು. ಹವೆಯಂತೆ ಸರ್ವವ್ಯಾಪಿಯಾಗಿದೆ. ಶಾಸ್ತ್ರಲು ಬಟ್ಟೆ, ಅಡಿಗೆಯನ್ನೆ ಸಹ ಸೋದಿದೆ. ಕಾರಣ ಅದಕ್ಕೆ ಹೆದರಿ ಅದರೊಳಗಿಂದ ವಾರಾಗಲು ಹವಣಿಸುವದು ದಡ್ಡತನ ದಬ್ಬಾಳಿಕೆಯ ಎಲ್ಲಂದವನ್ನೇ ನಾವು ಬಿಚ್ಚಬಡಬೇಕು, ನಮ್ಮ ಕರ್ತವ್ಯವನ್ನಷ್ಟು ನಾವು ಮಾಡುತ್ತ ಹೋಗಬೇಕು. ಸರ್ವಾಧಿಪತಿಗಳಿಗೆ ಆರ್ಡಿನನ್ಸು ಹೊರಡಿಸಲು ಅಧಿಕಾರವಿಲ್ಲವಾಗಿ ಕೂನ್‌ಸ್ಟಿಟ್ಯೂಶನಲ್ ರಾಜಪ್ರಭುತ್ವದಿಂದ ರಾಯಾದೆಯಂಡಿಸುವ ಚರ್ಚೆಸುತ್ತಿದ್ದಾರೆ ಆ ಪುಸ್ತಕಗಳನ್ನು ರಾಜ್ಯಾಧಿಕಾರಿಗಳು ಕಟ್ಟಿಟ್ಟ ಸಂಗತಿ ಇವರಿಗೆ ಗೊತ್ತೇ ಇಲ್ಲ. ದಬ್ಬಾಳಿಕೆಯ ಇತಿಹಾಸವೇ ಹೀಗೆ ನಡೆದಿದ. ಪುನಃ ವರ್ತಮಾನಪತ್ರಗಳ ಮೇಲಿನ ಶಾಸನ ಬಂತು. ಕಾರಣ ದ್ವೇಷ-ಹಿಂಸಾಭಾವ ಹಿಡಿಯಿದೆ, ಬಾದಿಸುವುದು ಪೋಷಕವಾದ ಸ್ವದೇಶಿ — ಬಹಿಷ್ಕಾರಗಳನ್ನು ಎಡೆಬಿಡದೆ ನಾವು ನಡಿಸಕ್ಕದ್ದು.

ಸ್ವದೇಶಿಗೂ, ರಾಜಕೀಯ ಆಂದೋಲನಕ್ಕೂ ನಿಕಟ ಸಂಬಂಧವಿದೆ. ರಾಜಕೀಯ ಆಂದೋಲನ ನಡದಾಗ ಸ್ವದೇಶಿಗೆ ಬಹಳ ಉತ್ತೇಜನ ದೊರೆತಿದೆ. ಈ ಚಳವಳಿಯು ಮುಂಬೆ ೧೯೦೭ ನೇ ಇಸ್ವಿಯಲ್ಲಿ ಪುಣೆಯೊಳಗ ಉಂಟಾಯತು. ಲೋಕಮಾನ್ಯ ಟಿಳಕರು ಇದರ ಪ್ರಚಾರ ಮಾಡಿದರು, ೧೯೦೫ ನೇ ಇಸ್ವಿಯಲ್ಲಿ ವಂಗಭೂಗದ ಚಳವಳಿ. ಶ್ರೀ| ಸುರೇಂದ್ರನಾಥ ಬಾನರ್ಜಿ ಬಿಪಿನಚಂದ್ರಪಾಲ, ಲೋಕಮಾನ್ಯ ಟಿಳಕರವರು ಸ್ವದೇಶಿಯ ಪುರಸ್ಕಾರ ಮಾಡಿದರು. ೧೯೨೧ ನೇ ಇಸ್ವಿಯಲ್ಲಿ ಅಸಹಕಾರ ಚಳವಳಿ. ಆಗ ಪುನಃ ಈ ಚಳವಳಿಗೆ ಉತ್ಸಾಹ ಬಂತು. ಈಗಿನ ರಾಜಕೀಯ ಚಳವಳಿಯಲ್ಲಿಯೂ ಸ್ವದೇಶಿಗೆ ಬಹಳ ಉತ್ತೇಜನ ದೊರೆತಿದೆ. ದೇಶದ ಆರ್ಥಿಕ ಸಂಪತ್ತು ಬೆಳಸುವದೇ ಸ್ವದೇಶಿಯ ಮುಖ್ಯ ಸಾಧ್ಯ. ಸ್ವದೇಶಿ ಪ್ರವರ್ತನದಿಂದ ಈ ಸಾಧ್ಯತೆಯ ಬೆಂಬಲ ದೊರಕುತ್ತದೆ. ಸ್ವದೇಶಿಯಂದ ಬ್ರಿಟಿಶರ ದೊಳಗಿನ ವರ್ತಕರೂ, ಕಾರಖಾನೆಯವರೂ ಚಳವಳಿ ಮಾಡಹತ್ತಿದ್ದಾರೆ. ಇದರ ಮೇಲಿಂದ ಸ್ವದೇಶಿಯ ವಿಶ್ವವು ನಮಗೆ ತಿಳಿಯಬಹುದು. ಸ್ವದೇಶಿಯು ಸ್ವಾಸಂಪಾದನೆಯಾದಾಗ್ಯೂ ಮುಂದರಿಯಲೇಬೇಕು. ಸ್ವಜ್ಯಸ್ಥಾಪ್ತಿಗಷ್ಟೇ ಸ್ವದೇಶಿಯು ಸಂಬಂಧಿಸಿದ್ದೆಂ ತಿಳಿಯಕೂಡದು. ಅದಕ್ಕೆ ಕಾಯಂ ರೂಪ ಕೊಡಬೇಕು. ದೇಶದೊಳಗೆ ಅವಶ್ಯವುಳ್ಳ ಸರಕೆಲ ದೇಶದಲ್ಲಿ ತಯಾರಿಸಿಕೊಳ್ಳಬೇಕು. ರಾಜಕೀಯ ಆಂದೋ ದಲ್ಲಿ ಹೆಚ್ಚು—ಕಡಿಮೆಯಾದಾಗ್ಯೂ ಸ್ವದೇಶಿಯ ಪ್ರಯು ಎಡಬಿಡದೆ ನಡೆಯುವದೆಂದು ನಾನು ಹೇಳು ಅಂಕಿಗಳಿಂದ ನಮಗೆ ತಿಳಿಯಬಹುದು. ೧೯೨೭ ನೇ ಸ್ವಿಯಲ್ಲಿ ೩೦೦ ಕೋಟಿ ಗಜ ಪರದೇಶಿ ಅರಿವೆ ಆಮದಾಗಿತ್ತು. ಇವರೊಳಗೆ ಮುಕ್ಕಾಲು ಪಾಲು ಬ್ರಿದೇಶದಿಂದ ಆಮದಾಗಿತ್ತು. ಆ ವರ್ಷ ಹಿಂದುಸ್ಥಾದೊಳಗಿನ ಗಿರಣಿಗಳಲ್ಲಿ, ಬರೀ ೩೫ ಕೋಟಿ ಗ ಅರಿವೆ; ೭೮ ಲಕ್ಷ ಗಜ ಅರಿವೆ ಕೈಮಗ್ಗದ ಮೂ ತಯಾರಾಯಿತ್ತು. ಹೀಗೆ ಸ್ವದೇಶಿಯು ಒಂದೇ ಸ ಬೆಳೆಯುತ್ತ ನಡೆದಿದೆ. ಜಪಾನದಲ್ಲಿ ಚೂರು ಅರಿವೆ ರಲಿಲ್ಲ; ೧೯೨೮ ನೇ ಇಸ್ವಿಯಲ್ಲಿ ಇಲ್ಲಿಂದ ಆ ಗಂದುಗಳನ್ನು ಒಯ್ದು ೩೦ — ೩೫ ವರ್ಷಗಳ ೪—೬ ಕೋಟಿ ರೂಪಾಯಿ ಬೆಲೆಯ ಅರಿವೆಗಳ ಅವರು ಹಿಂದುಸ್ಥಾನಕ್ಕೆ ಕಳುಹುತ್ತಾರೆ. ಇಷ್ಟು ಒಳಗೆ ಪ್ರಗತಿಯಾಯತು ಮೇಲ್ಕಂಡಷ್ಟು ಸ್ವಯಾಗಬೇಕಾದರೆ, ನಮಗೆ ಅನೇಕ ಅಡಚಣಿಗಳಿದವು. ಅವುಗಳನ್ನು ಸವಿಸ್ತರ ವಿವರಿಸಲು ನನಗೆ ಸಯವಿಲ್ಲ. ಆದಾಗ್ಯೂ, ಅವುಗಳ ನಾಮನಿರ್ದೇಶವನ್ನಷ್ಟೆ ಮಾಡುತ್ತೇನೆ. ಕೆರಕೂತ್ತಿಸುವ ಅಧಿಕಾರವು ನಮ ಕೈಯ್ಯಲ್ಲಿಲ್ಲ. ನಮಗೆ ಆಳುವವರು ಬೇರೆ, ನಮ್ಮ ಆರಸರಿಗೆ ಅಬ್ಬರು ಹೆಂಡಂದಿರುವ್ರು ಇಂಗ್ಲೆಂಡ ದೇಶ ಚಿಕ್ಕ ಹೆಂಡತಿ; ಹಿಂದುಸ್ಥಾನ ದೇಶವು ದೊಡ್ಡ ಹೆಂಡ ಆದರಿಂದ ನಮ್ಮ ಉದ್ದಿಮೆಗಳಿಗೆ ಸಂರಕ್ಷಣೆ ದೊ ಯುವದಿಲ್ಲ. ವಾಹನ ಸೌಲಭ್ಯವಿಲ್ಲ. ಇಂಗ್ಲೆಂಡ ಸರಕಿಗೆ ಅನುಕೂಲತೆ ಹೆಚ್ಚು; ನಮ್ಮ ಸರಕಿಗೆ ಅ ಕೂಲತೆ ಕಡಿಮೆ. ಮೊದಲು ರೂಪಾಯಿಗೆ ೧೬ ಪೆ ದರವಿತ್ತು; ಈಗ ಸರಕಾರನವರು ಅದನ್ನು ೧೮ ಪೆ ಏರಿಸಿದ್ದಾರೆ. ಇದರಿಂದ ಪರದೇಶಿ ಸರಕಿಗೆ ಸುಂ ೧೫|| ಯಂತೆ ಸರಕಾರವು ಸೂಟ ಕೊಟ್ಟಂತಾಗಿದೆ. ಕೈಗಾರಿಕೆಗಳಿಗೆ ಪೋಷಕವಾಗುವಂತ ಶಿಕ್ಷಣ ದೊರೆಯುವದಿಲ್ಲ. ಇಂಗ್ಲೆಂಡ, ಅಮೇರಿಕಾ, ಜರ್ಮ

ಸೇವಕಗಳಲ್ಲಿ ವ್ಯಾಪಾರ ಉದ್ದಿಮೆ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಸಾವಿರಾರು. ಅಮೇರಿಕೆಯೊಳಗೆ ೆಂ ಸಾವಿರ ವಿದ್ಯಾರ್ಥಿಗಳಲ್ಲಿ ೩೦ ಸಾವಿರ ವಿದ್ಯಾರ್ಥಿಗಳು ಉದ್ದಿಮೆ ಕಲಿಯುತ್ತಾರೆ. ಜರ್ಮನಿಯೊಳಗೆ ೬೦ ಸಾವಿರ ವಿದ್ಯಾರ್ಥಿಗಳಲ್ಲಿ ೧೦ ಸಾವಿರ ವಿದ್ಯಾರ್ಥಿಗಳು ಕಲಿಯುತ್ತಾರೆ. ಹಿಂದುಸ್ಥಾನದೊಳಗೆ ೯೧ ಸಾವಿರ ವಿದ್ಯಾರ್ಥಿಗಳಲ್ಲಿದ್ದಾರೆ; ಅವರಲ್ಲಿ ಬರೇ ೩॥ ಸಾವಿರ ವಿದ್ಯಾರ್ಥಿಗಳು ಡಿಗ್ರೀಗಳಿಗೆ ತಿಳ್ಪಿಜ ಹೊಂದ ತ್ತಾರೆ ಕಾರಣ ಜನರೊಳಗೆ ಸ್ವದೇಶಿ ಭಾವನೆಯನ್ನು ಹುಟ್ಟಿಸಿ, ಸ್ವದೇಶಿ ಒಡವೆಗಳನ್ನು ಅಭಿಮಾನದಿಂದ ನಾವು ಅವರಿಗೆ ಕೊಳ್ಳ ಹೇಳಬೇಕು; ಪ್ರೀತಿಯಿಂದ ಕೊಳ್ಳಹೇಳಬೇಕು. ಇದೆಲ್ಲ ಆಗಿನ ಪರಿಸ್ಥಿತಿಯಲ್ಲಿ ಸುಲಭಸಾಧ್ಯ ಮಾತಲ್ಲ. ಗುಡ್ಡ ಏರಿದಂತೆ ನಾವು ಏರಿ ಹೋಗಬೇಕು ತ್ಯಾಗ-ಧೈರ್ಯ-ದೃಢನಿಶ್ಚಯದಿ ಸದ್ದು ಆಸೆಗಳನ್ನು ಹಿಡಿದ ನಾವು ಸ್ವದೇಶಿಯನ್ನು ಪುರಸ್ಕರಿಸಬೇಕು. ಮೂಲ ಮಂತ್ರವೆ ಪರದೇಶಿ ಬಹಿಷ್ಕಾರದ್ದು. ಕಳ ಹೊಡೆದು ಮನೆ ಹಾಳು ಕ್ತಾರೆ. ಅದರಂತೆ. ಪರದೇಶಿ ಬಟ್ಟೆಪಡನ್ನು ನಾವು ಮು ಚೆ ಬಹಿಷ್ಕರಿಸಿ ಅವರ ಸ್ಥಾನವನ್ನು ಸ್ವದೇಶಿಗೆ ಕೊಡಬೇಕು. ಮಹಾತ್ಮರು ಬಟ್ಟೆಯ ಬಹಿಷ್ಕಾರವನ್ನು ಸಂಪೂರ್ಣವಾಗಿ ಸಾಧಿಸಲು ಅಪ್ಪಣೆ ಮಾಡಿದ್ದಾರೆ ಬಟ್ಟೆಯಿಂದ ಬಹಳ ದುಡ್ಡು ಪರದೇಶಗಳಿಗೆ ಹೋಗುತ್ತದೆ. ಪರದೇಶಿ ಬಟ್ಟೆಯ ಪುರಸ್ಕಾರದಿಂದ ೨—೩ ಕೋಟಿ ಜನರು ಕೆಲಸಿಲ್ಲದವರಾದರು. ಬಹಿಷ್ಕಾರದಿಂದ ಬಹಳ ಪ್ರಗತಿಯಾಗಿದೆ. ೧೯೨೪ ನೇ ಇಸ್ವಿಯ ಅಗಸ್ಟ ತಿಂಗಳಲ್ಲಿ ೨೪೧೯೨ ಗಂಠುಗಳು ಹಿಂ ಪಾಸವಲ್ಲಿ ಬಂದಿದ್ದವು; ಕಳೆದ ಅಗಸ್ಟ ತಿಂಗಳಲ್ಲಿ ೩೦೦೦ ಗಂಟುಗಳು ಬಂದವು. ೧೯೨೪ ನೇ ಸಪ್ಟಂಬರದಲ್ಲಿ ೨೦೫೦೦ ಗಂಟುಗಳು; ೧೯೩೦ ನೇ ಸಪ್ಟಂಬರದಲ್ಲಿ ೫೮೦೦ ಗಂಟುಗಳು. ೧೯೨೪ ನೇ ಅಕ್ಟೋಬರ ತಿಂಗಳಲ್ಲಿ ೩೦೬೨ ಗಂಟುಗಳು ಬಂದಿದ್ದವು; ಅದೇ ಕಳೆದ ಅಕ್ಟೋಬರ ತಿಂಗಳಿನಲ್ಲಿ ೬೭೯೨ ಗಂಟುಗಳು ಬಂದಿವೆ. ದೀಪಾವಳಿಯ ಹಂಗಾಮಿನಲ್ಲಿ ಬಂದ ಜವಳಿಯ ಲೆಬ್ಬವಿದು. ಇದರ ಮೇಲಿಂದ ಬಹಿಷ್ಕಾರಕ್ಕೆ ಬಂದ ಯಶಸ್ಸನ್ನು ತಿಳಿಯಬಹುದು ಎಂತಿದೆ

ಇನೊಂದು ವಿಷಯವನ್ನು ನಾನು ಒತ್ತಿಹೇಳಬೇಕಾಗಿದೆ. ಸ್ವದೇಶಿಯೆಂದರೆ, ಗಿರಣಿ ಅರಿವೆಯೆಂದು ಜನರು ತಿಳಿಕೊಂಡು ಖಾದಿಯ ಕಡೆ ಅಲಕ್ಷ ಮಾಡುತ್ತಾರೆ, ಇದು ತರವಲ್ಲ. ಖಾದಿ ಸಿಗದಾಗ ಗಿರಣಿ ಅರಿವೆ ಉಪಯೋಗಿಸಬಹುದು; ಆದರೆ, ಆ ಪ್ರಸಂಗ ಈಗಿಲ್ಲ. ಕಳೆದ ಎಪ್ರಿಲ್-ಮೇ ತಿಂಗಳಲ್ಲಿ ಖಾದಿಯ ಪ್ರಸಾರವು ಶಿಖರಕ್ಕೆ ತಲ್ಪಿತು. ಅಖಿಲ ಭಾರತೀಯ ಚರ್ಕಾ ಸಂಘದ ಖಾದಿ ಅಂಗಡಿಗಳಲ್ಲಿ ತುಪ್ಪುಳು ಖಾದಿ ಶಿಲ್ಕಿರಲಿಲ್ಲ. ಕೆಲವೆಡೆ ೪—೧೦ ದಿನಗಳ ತನಕ ಅಂಗಡಿಗಳನ್ನು ಮುಚ್ಚಡಬೇಕಾಯಿತು ಈಗ ಖಾದಿ ಹುಟ್ಟುವಲ್ಲಿ ಹೆಚ್ಚಾಗಿದೆ. ಗಿರಾಕಿ ಕಡಿಮೆಯಾಗಿದೆ. ಗಿರಣಿಗಳು ನಮ್ಮವು ಎಂಬ ಮಾತು ನನಗೊಪ್ಪಿಗೆ; ಆದಾಗ್ಯೂ ನಾವು ಖಾದಿಯನ್ನೇ ಕೊಂಡುಕೊಳ್ಳಬೇಕೆಂದ್ದು. ಖಾದಿಯಿಂದ ಹಳ್ಳಿಗಳಲ್ಲಿ ಸಂಘಟನೆಗೆ ಅನುಕೂಲವಾಗುತ್ತದೆ. ಕಾರಣ ಖಾದಿಯ ಶ್ರೇಷ್ಠ ಸ್ಥಾನವನ್ನು ನಾವು ಎಳ್ಳಷ್ಟೂ ಕಡಿಮೆ ಮಾಡಕೂಡದು. ಖಾದಿ ಹುಟ್ಟಿಯಾದಾಗ್ಯೂ, ನಾವದನು ಕೊಂಡುಕೊಳ್ಳಬೇಕು, ಉರುಟಾದಾಗ್ಯೂ, ನಾವದನ್ನು ತೊಡ್ಡುಕೊಳ್ಳಬೇಕು. ಖಾದಿಯನ್ನು ಕೊಂಡು-ತೊಳ್ಳಲಾರದವರು ಮಾತ್ರ ಗಿರಣಿ ಅರಿವೆ ಉಪಯೋಗಿಸಬಹುದು. ಅಖಿಲ ಭಾರತೀಯ ಚರ್ಕಾ ಸಂಘದ ಕಾರ್ಯದರ್ಶಿಗಳಾದ ಶ್ರೀ| ಶಂಕರಲಾಲ ಬ್ಯಾಂಕರರವರೂ ಈ ಮಾತನ್ನು ಪ್ರಾಮುಖ್ಯವಾಗಿ ತೋಡಿದ್ದಾರೆ. ಖಾದಿಗೆ ನಾವೆಯಾವಾಗಲೂ ಮೊದಲನೇ ಸ್ಥಾನವನ್ನೇ ಕೊಡಬೇಕು; ಅಗ್ರಪೂಜೆಯ ಮಾನ ಅದಕ್ಕೇ ಸಲ್ಲಬೇಕು.

ಶಕ್ಕರೆಯನ್ನು ಒಂದು ವರ್ಷದ ವರೆಗೆ ಸಂಪೂರ್ಣವಾಗಿ ಬಿಡಬೇಕು ವರ್ಷಕ್ಕೆ ೪೫ ಶಕ್ಕರೆ ಹೀಗೆ ಬೇರೆ ಶಕ್ಕರೆಗಳು ದೊರೆಯುತ್ತವೆ. ಅವರೆ ಸಂದೇಹಕ್ಕೆ ಕಾರಣವಾಗುವದರಿಂದ ಶಕ್ಕರೆಯನ್ನು ಬಿಟ್ಟು ಬಿಡುವದೇ ಲೇಸು. ಇದರಿಂದ ಜೀವನವು ಸುಲಭವಾಗುವದು. ಜಿಲೇಬಿ, ಬಾಸುಂದಿ ಮೊದಲಾದ ಪದಾರ್ಥಗಳನ್ನು ತ್ಯಜಿಸಿ, ನಮ್ಮ ವಿಲಾಸಕ್ಕೆ ಕೆಲ ಮಟ್ಟಿಗೆ ತಡೆಬಿದ್ದಂತಾಗುವದು. ಈ ಸಮಯ ಗುರು ಶಿಷ್ಯರ ಕತೆಯೊಂದು ನೆನಪಾಗುತ್ತದೆ. ನನಗೆ ಪ್ರಾಣವಾಯುವು ಸಾಧ್ಯವಿಲ್ಲ; ಹಡೆಯೋಗ ಮಾಡಲಾರೆ; ಆದರೆ ಮೋಕ್ಷ ಬೇಕು! ಎಂಬುದಾಗಿ ಶಿಷ್ಯನೊಬ್ಬನು ಗುರುವಿಗಳ ಕಡೆ ಹೇಳಿದನು. ನದಿಗೆ ಹೋಗಿ ಸ್ನಾನ ಮಾಡಿ ಬಾ, ಎಂದು ಗುರುಗಳು ಶಿಷ್ಯನಿಗೆ ಆಜ್ಞೆ ಮಾಡಿದರು ಜಳಕ ಮಾಡಿ ಬಂದ ಬಳಿಕ, ಕಿವಿಯಲ್ಲಿ 'ಉಸುರಿಬಿಡು' ಎಂಬದಾಗಿ ಮಂತ್ರೋಪದೇಶ ಮಾಡಿದರು. ಉಸ್ಸು ಬಿಟ್ಟಿದ್ದರಿಂದ, ಉಸ್ಸು ಬೀಳುವ ರಾಜಸ-ತಾಮಸ ಪದಾರ್ಥಗಳನ್ನೆಲ್ಲ ಆತನು ತ್ಯಜಿಸಿ ಸಾತ್ವಿಕ ಆಹಾರವನ್ನು ಸೇವಿಸಬೇಕಾಯಿತು. ಇದರಿಂದ ಆತನ ಜೀವನ ಸಾತ್ವಿಕವಾಗಿ ಆತನು ಮೋಕ್ಷವೊಂದಿದನು ಹಾಗೆಯೇ ನಾವು ಬಿಲ್ಲದ ವ್ಯಸನವನ್ನು ತ್ಯಜಿಸಿಂದು ನಿರಾಳ ಸಾತ್ವಿಗ್ರಗಳನ್ನು ತ್ಯಜಿಸಬೇಕು ನಮಗೆ ಕೆಲವು ಅಂತಿಗ ಳನ್ನು ಕೊಳ್ಳಬೇಕಂತೆ ಸರಕಾರದಿಂದ ೧ ಕೋಟಿ ೨೨ ಲಕ್ಷ; ಅಬಕಾರಿಯಿಂದ ೨೧ ಲಕ್ಷ; ೪ ಟಿನಿಂದ ೧೩ ಲಕ್ಷ; ಕೈ ಬಳೆಗಳಿಂದ ೮೦ ಲಕ್ಷ; ಹೀಗೆ ಹಣ ಪರದೇಶಕ್ಕೆ ಹೋಗುತ್ತದೆ. ಇವು ಜರ್ಮನಿ, ಇಟಾಲಿ, ಝಾಕೋಸ್ಲಾವಿಯಾ ದೇಶಗಳಿಂದ ಬರುತ್ತವೆ ಬಳೆ ನಮ್ಮ ಹೆಂಗಸರ ಸೌಭಾಗ್ಯ- ಅವು ಪರದೇಶಗಳಿಂದ ಬರಗೊಡುವದು ಇಷ್ಟವಲ್ಲ. ಸ್ತ್ರೀಯರು ನಿರ್ಧಾರ ಮಾಡಬೇಕು. ವರದೇಶಿ ಬಳೆಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಲು ನಮ್ಮ ಕೆನಾಟಕದಲ್ಲಿ ಅನುಕೂಲವಿದೆ. ಕರ್ನಾಟಕದಲ್ಲಿಯೇ ಬಳೆಗಳ ಕಾರಖಾನೆಗಳಿವೆ. ಈಗಿನ ಬಳೆಗಳು ಅಷ್ಟು ನುಣುಪಿರಲಿಕ್ಕಿಲ್ಲ ಆಕಾರದಲ್ಲಿ ಸ್ವಲ್ಪ ಹೆಚ್ಚು—ಕಡಿಮೆಯಿರಬಹುದು, ಆದಾಗ್ಯೂ ಸ್ತ್ರೀಯರು ಅವನ್ನು ೪—೬ ವರ್ಷ ಉಪಯೋಗಿಸಿದರೆ, ಅವುಗಳಲ್ಲಿ ಕಕ್ಕ ಸುಧಾರಣೆಯಾಗಿತ್ತು ಮ. ಮೊದಮೊದಲು, ಖಾದಿಗೆ ಕೂಡೆಯರಿನೆಯೆಂದು ನಮ್ಮ ಕಡೆ ಸ್ತ್ರೀಯರೇ ಜೋಯಿಸುತ್ತಿದರು. ಈಗ ಅವರೊಳಗೆ ಬಹಳ ಸುಧಾರಣೆಯಾಗಿಲ್ಲವೇ? ಅಡಿಕೆ ಇಲ್ಲಿ ಬಹಳ ಬೆಳೆಯುತ್ತದೆ, ಆದಾಗ್ಯೂ ಮಲಯಾ, ಸ್ಟ್ರೇಟ್ಸಸೆಟ್ಲಮೆಂಟ್ಸ್ ಕೆಡೆಯಿಂದ ೨॥ ಕೋಟಿ ರೂಪಾಯಿಗಳ ಅಡಿಕೆ ಅವ್ಯಾಹತವಾಗುತ್ತದೆ ಪರದೇಶಗಳ ಕೆಡೆಯಿಂದ ಆಮದಾಗುವ ಅಡಿಕೆ ಹೆಚ್ಚು; ನಮ್ಮ ಕಡಿ ಹುಟ್ಟುವದು ಕಡಿತು. ವರ್ಷಕ್ಕೆ ೧ ಕೋಟಿ ೭೫ ಲಕ್ಷ ರೂಪಾಯಿಗಳ ಸಿಗರೇಟು ಬರುತ್ತದೆ. ಬೇಗಾವಿ, ಧಾರವಾಡ, ವಿಜಾಪುರ ಈ ಮೂರು ಜಿಲ್ಲೆಗಳಲ್ಲಿ ೧೫ ಗಳಿಗೆ ೨೫ ಸಾವಿರ ರೂಪಾಯಿಗೆಳ ಸಿಗರೇಟು ಬೇಗು. ಇವಲ್ಲದೆ ದೇಶೀ ಸಿಗರೇಟುಗಳಿವೆ: ಬೀಡಿಗಳಿವೆ ಇದರ ಮೇಲಿಂದೆ ಹೊಗೆಸೊಪ್ಪಿನ ವ್ಯಾಪಾರವೆ ಕಲ್ಪನೆಯಾಗುವದು. ವಿಲಿಯಿಂದ ವರ್ಷಕ್ಕೆ ೫ ಕೋಟಿ ರೂಪಾಯಿಗಳು ಕೆನಡಾ ಮುಂತಾದ ದೇಶಗಳಿಗೆ ರಪ್ತಾಗುತ್ತವೆ ಕಾರಣ ಅಂಗಡಿಕಾರರೂ, ಗಿರಾಕಿಗಳೂ ಸಹಕಾರ ಮಾಡಬೇಕು. ಗಿರಾಕಿಗಳು ಮೊಟ್ಟಮೊದಲು ಸ್ವದೇಶಿ ಒಡವೆಗಳನ್ನೇ ಕೇಳಬೇಕು. ಅವು ಸಿಗದಿದ್ದರೆ ಬ್ರಿಟಿಶರ ಪದೇಶಿ ಒಡವೆಗಳನ್ನು ಕೇಳಬೇಕು. ಸ್ವದೇಶಿ ಮಂಡಳದ ಪ್ರಯತ್ನದಿಂದ ಕೆನಾಟಕದಲ್ಲಿ ೨೫ ಸಂಸ್ಥೆಗಳಾಗಿವೆ. ಈ ಸಂಸ್ಥೆದವರು ವರ್ತಕರಿಗೆ ಸ್ವದೇಶಿ ಪುರಸ್ಕಾರ ಮಾಡುವಂತೆ ಮನಪೊಲಿಸುತ್ತಾರೆ. ಇಲಕಲ್ಲಿನಲ್ಲಿ, ೧೮-೪೦ ಸಾವಿರ ಮುಗ್ಗಗಳವೆ. ನೇಕಾರರು ಸ್ವದೇಶಿ ನೂಲನ್ನೇ ಉಪಯೋಗಿಸುತ್ತೇವಾಗಿ ಪ್ರತಿಜ್ಞಾಪತ್ರ ಬರಕೊಟ್ಟಿದ್ದಾರೆ. ಇದೇ ಪ್ರಕಾರ ಸ್ವದೇಶಿ ಮಂಡಳದ ಶಾಖೆಗಳನ್ನು ನೀವು ಸಹ ಸ್ಥಾಪಿಸಿಕೊಂಡು ಅನಶ್ಯವುಳ್ಳ ವಳವಳಿ ನಿಶಿಸಬೇಕು. ದೇಶತುಂಬ ಸ್ವದೇಶಿ ಒಡವೆಗಳ ಪ್ರಸಾರ ಮಾಡಿ, ಪರದೇಶಿ ಒಡವೆಗಳನ್ನು ದೇಶದಿಂದ ಹೊರಸೂಸಲು ಪರಮಾತ್ಮನು ನಮ್ಮ ಗೆಲ್ಲರಿಗೆ ಅವಶ್ಯವುಳ್ಳ ಬುದ್ಧಿಯನ್ನೂ, ನಿಷ್ಠೆಯನೂ ದೃಢನಿಶ್ಚಯವನ್ನೂ ದಯಪಾಲಿಸಲಿ.

ಕಾ. ವೈ.

ತಾ। ೨೮ ನೆಯ ದಿವಸ ಕುಮಟೆಯಲ್ಲಿ ತ್ರಿರಂಗುಲ್ಲಟ್ಟಿರುವ ಸ್ವದೇಶಿ ಬೊದ್ಯೋಗಿಕ ಹಾಗು ಖಾದಿಯ ಪ್ರದರ್ಶನದಕ್ಕೆ ಮುಂಬಯಿ ಗವರ್ನರ ಅವರ ಪತ್ನಿಯವರಾದ ಲೇಡಿ ಲಾಯ್ಡ ಈ ಎರಡು ವಿಚಿತ್ರ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ.

ದಿ. ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ.

ದಿ ನೇ ಇಸ್ವಿಯ ಇಂಡಿಯನ್ ಕಂಪನೀಜ ಆಕ್ಟ ಪ್ರಕಾರ ರಜಿಸ್ಟರ್‌ಮಾಡಲ್ಪಟ್ಟಿದೆ.

ಬ್ಯಾಂಕಿನ ಠೇವಿನ ದರವು ಕೆಳಗೆ ಕೊಡಿಸಿದ ಪ್ರಕಾರ ಇರುತ್ತದೆ.

ಚಾಲತೀ ಠೇವಿಗೆ	ನೂರಕ್ಕೆ	ವರ್ಷಕ್ಕೆ	೨॥ ರೂ.
ಸೇವ್ಹಿಂಗ್ಸ ಬ್ಯಾಂಕ	"	"	೪ ರೂ.
ಮುದ್ದತೀ ಠೇವಿಗೆ	"	"	೬॥ ರೂ.

ಮದಲ್ಲದೆ ೩-೬ ಮತ್ತು ೯ ತಿಂಗಳ ಠೇವು ಇಡುವದಾದಲ್ಲಿ ಸವಲತ್ತು ಎಂಬಂದು ದರವನ್ನು ಗೊತ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಅಂದರೆ ಜೆಲ್ಲೆ, ಭಂಗಾರ ಕಾಗುಡಿ ಸರಕಾರೀ ಕಾಗದ ಮತ್ತು ವಿಮೆಯ ಪಾಲಿಸಿಗಳ ಮೇಲೆ ಸಹಾ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸವಲತ್ತು! ವರ್ತಕರು ತಮ್ಮ ಮಾಲನ್ನು ವ್ಹಿ. ಪಿ. ದ್ವಾರಾ ಕಳಿಸುವಬದಲಾಗಿ ನಮ್ಮ ಬ್ಯಾಂಕಿನ ಮುಖಾಂತರ ಕಳಿಸಿಕೊಂಡರೆ ನೂರಕ್ಕೆ ೧೨ ಆಣೆಯಂತೆ ಉಳಿಸಿ ಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಿಸಿಕೊಳ್ಳಬೇಕು.

V R Torvi
Managing Director

ಕಿರ್ಲೋಸ್ಕರ ನೇಗಿಲಗಳು.



ಇವುಗಳ ವೈಶಿಷ್ಟ್ಯವು.

೧ ತಿಯಿಗುವ ಕುಳವನ್ನುಳಿದ್ದು.
೨ ಬೆಲೆಯಲ್ಲಿ ವಿದೇಶೀ ಕಂಟೆಗಿಂತ ಅಗ್ಗ
೩ ಲಕ್ಷಾವಧಿಜನರು ಹೂಡಿ ಅನುಭವಹೊಂದಿದು ಇರುವ ಕಾರಣ ಈ ನೇಗಿಲುಗಳಿಗೆ ಈ ಹಂಗಾಮಿನಲ್ಲಿ ಕಂಪಿಲ್ಲದೆ ಮಾಗಣಿಯುಂಟು. ಪದ್ಯಕ್ಕೆ ಹಂಗಾಮವು ಪ್ರಾರಂಭವಾಗಿರುವದು. ಇವತ್ತೇ ಆರ್ಡರಕೊಟ್ಟು ತರಿಸಿಕೊಂಡಲ್ಲಿ ಲಾಭವುಂಟು.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ. ಜಿ. ಸಾತಾರಾ

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ ವನಸ್ಪತಿಗಳ ಅದ್ಭುತ ಮಹಿಮೆ.

* ಬಾಲಾರ್ಕಮಧು. *



ಇದನ್ನು ಮಕ್ಕಳು ಆನಂದದಿಂದು ಸೇವಿಸುತ್ತಾರೆ. ಇದು ಮಧುರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಉಣಿಸುವ ಹಾಲೂ ಅನ್ನವೂ ಮೈಗೆಹತ್ತಿ ಶರೀರದಲ್ಲಿ ಪೌಷ್ಟಿಕ ರಸಗಳುಂಟಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಮಕ್ಕಳಿಗೆ ಬಹು ಶಕ್ತಿಯೂ ದೇಹಧಾರ್ಢ್ಯವೂ ಹೆಚ್ಚುವುದು. ಕೇವಲ ವೈದ್ಯ ಹೊಗಳಿಕೆಯೆಂದು ಶಾಸ್ತ್ರೀಯವಾದದ ಒಂದೇಒಂದು ಶೀಸೆ ತರಿಸಿಕೊಂಡಲ್ಲಿ ಇದರ ಅಪಾರ ಗುಣವು ತಾನಾಗಿ ತಿಳಿಯುವದು.

ಬೆಲೆ ಶೀಸೆ ೧ ಕ್ಕೆ ೦—೧೫—೦ ವಿ. ಖ. ೦—೯—೦.

M. V. Prasadika Oushadhalaya, SHIMOGA.
Mysore State.

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರತ ನಗರದ ಶ್ರೀಮ್ಮಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ. ಶಾದಂಬರಿ)	೨—೮—೦
೩	ನೀಳ್ಕತೆಗಳು ಭಾಗ ೧.	೧—೪—೦
೪	ಪತಿವೀಕರಣ ನಾಟಕ.	೦—೧೫-೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೧೫-೦
೭	ಲಕ್ಷ್ಮೀಬಾಯಿ ಝಾಂಸಿ ಚರಿತ್ರೆ.	೨—೦—೦
೮	ಶೈವ ಸುಧಾರ್ಣವ (ಸಚಿತ್ರ)	೩—೮—೦

ಕೆಟಲಾಗಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ನವ ಕಂಪನಿಗಳೂ ಈ ವರೆಗೂ ಕೊಡದಷ್ಟು ಲಾಭವನ್ನು ಈ ೩ ವರ್ಷಗಳವರಿಗೆ ಒಂದೇಸವನೆ ಹಂಚಿದೆ!

ಜನರಲ್

ಅಶ್ಯೂರನ್ಸ ಸೊಸಾಯಿಟಿ ಲಿ. ಅಜಮೀರ.

ಈ ಸೊಸಾಯಿಟಿಯ ಆಸ್ತಿಯು ೫ ಲಕ್ಷ ರೂ. ಗಳಿಗಿಂತಲೂ ಮಿಕ್ಕಿದೆ

ಲಾಭ.

ವಿಮೆದಾರರಿಗೆ ಕೊಟ್ಟ ಹಣವು ೧೩ ಲಕ್ಷರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೨ ನೇ ವರ್ಷದಲ್ಲಿ ಹಿಂದಿನ ವಿಮೆ ಕುದುರಿಸುವುದು ಕೊಟ್ಟ ಅತ್ಯಂತ ಹಬ್ಬ

ಲಾಭದ ಹಣಕ್ಕಿಂತಲೂ ಕಡಿಮೆ ಇಷ್ಟದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೩೫ ನೇ ಮಾರ್ಚ ತಿಂ.	೧೯೩೫ ನೇ ಸೆಪ್ಟೆಂಬರ ತಿಂ.	೧೯೩೬ ನೇ ಡಿಸೆಂಬರ ತಿಂ.
ಇದೇ ಆಯುಷ್ಯದ (ತಕ್ಷಣವಾಗಿ ವಿಮೆಯಾಗತಕ್ಕದ್ದು)	ಇದೇ ಆಯುಷ್ಯದ (ತಡವಾಗಿ ವಿಮೆಯಾಗತಕ್ಕದ್ದು)	ಇದೇ ಆಯುಷ್ಯದ (ತಡವಾಗಿ ವಿಮೆಯಾಗತಕ್ಕದ್ದು)
ವರ್ಷವೊಂದಕ್ಕೆ ೧೨ ½ ರೂ.	ವರ್ಷವೊಂದಕ್ಕೆ ೨೧ ½ ರೂ.	ವರ್ಷವೊಂದಕ್ಕೆ ೨೨॥ ಂ/ಂ ರೂ.

ವರ್ಷ.	ವಾರ್ಷಿಕ ಉತ್ಪನ್ನ.	ಜೊತೆ ವ್ಯವಹಾರ.
೧೯೩೬	೬,೪೮,೪೭೦	೧೯,೨೫,೫೦೦
೧೯೩೭	೭,೧೧,೫೩೪	೩೮,೦೧,೫೦೦
೧೯೩೮	೯,೫೫,೫೦೧	೬೦,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರ ಅತ್ಯಂತ ಮೋಹಕವಾದ ಗಳಿಕೆ ಇವುಗಳ ಪೂರ್ಣ ಲಾಭವನ್ನು ಹೊಂದಿರಿ.

ಬಾಗಲಕೋಟೆಯ ಏಜಂಟರುಃ— ವಿ. ಜೆ. ಪರ್ವತಕರ ಮತ್ತು ಮಕ್ಕಳು

ಧಾರವಾಡ ಏಜಂಟರುಃ— ಎಸ್. ಆರ್. ಸರದೇಸಾಯಿ, ಮುಂಬೈ ನಂ ೩.

THE UNITED KARNATAK INSURANCE COMPANY LTD. DHARWAR.

ಸುಸಂಧಿ ಶ್ವಪಿಮಾಡಿರಿ ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಒಪ್ಪಂದ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು.

೧ ದೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಜೇರಮನೆ

೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಆ್ಯಂಡ ಎಸ್ ಗದಗ

೩ ಶ್ರೀನಿವಾಸರಾವ ಶೇಷಗಿರಿರಾವ ಮುತಾಲಿಕದೇಸಾಯಿ ಬಿ ಎ ಅಣ್ಣಿಗೇರಿ

೪ ಮಿ. ರಾಮಚಂದ್ರ ರಂಗೋ ಸಾನಕಾರ ವತನದಾರ ಹಳೇಹುಬ್ಬಳ್ಳಿ

೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ

೬ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡದಹುಬ್ಬಳ್ಳಿ ವಕೀಲ ಬೈಲಹೊಂಗಲ

೭ ವಾಸುದೇವರಾವ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

೮ ರಾಮರಾವ ವೆ ಧಂಡಿವಾಡ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ

೯ ಅಬ್ದುಲ್‌ಕರೀಮ ಅಮಿನಸಾಹೇಬ ಹಣಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊಸ ಇನ್‌ಶ್ಯೂರನ್ಸ ಕಂಪನಿಯಿಂದರೆ ಇದೇ ಮೊದಲನೇದು. ಈ ಕಂಪನಿಯು ಡಾಯರೆಕ್ಟರರೂ ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪನಿಗಳಿಗೆ ವಿಮೆ ಇಳಿಸುವಾಗಲಿ ವಿಮೆ ಇಳಿಸಿದಾಗಲಿ ಸಹಾಯವಾಗದೆ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಕಾಸ್ತಿ ಹೆಸರು ಪಡೆಸುವೇಕೆಂಬ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯು ಶೇರುಗಳು ಮಾರಾಟಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಪ್ರಾರಂಭವಾಗಿರುವದು. ಶೇರುಗಳನ್ನು ಮಾರುವದಕ್ಕೂ ಮತ್ತೂ ವಿಮೆಯ ಕೆಲಸವನ್ನು ಕಂದುಕೊಡುವದಕ್ಕೂ ಎಲ್ಲ ದೊಡ್ಡ ದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಎಜನ್ಸಿ ಶರತ್ತುಗಳು ಸುಲಭ ಪಗಾರಕ್ಕಿಂತಲೂ ಎತ್ತಲು, ಮತ್ತು ಕಮಿಶನ ದಂಗಾ ಆಧಿಕರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L Huilgolkar
ಸೆಕ್ರೆಟರಿ
ಯು. ಕ. ಇ. ಕಂ ಲಿ. ಧಾರವಾಡ.

ಬಾಲಗೃಹ ಚೂರ್ಣ
ಬಾ. ಕಿ, ೧—೪—೦

ಡಾ. ಬೈಲೂರ

ಥಂಡಿ ಉರಿಯ ಗುಳಿಗೆಗಳು
ಬಾ. ಕಿ. ೦—೮—೦

ಇವರ ಔಷಧಗಳು

ಕಾಫ್‌ಸಾಯಿರಪ್ ಕಿ— ನೆಗಡಿ, ಗೊಬ್ಬಗ, ಪೈಲಿ, ಕಫದಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ ಹಾದುವಿಕೆ (ಡಬಾ), ಕೋಡಗರ್ಮ್ಯ, ಇವುಗಳಮೇಲೆ ಹೊರ್ತಾಗಿ ಸಣ್ಣ ಹುಡುಗರ ಅಥವಾ ಹೆಂಗಸ್ಸು ಮನುಷ್ಯರ ನಿಮೋನಿಯಾ ಬೇನೆಯಮೇಲೆ ನಮ್ಮ ಕಾಫ್‌ಸಾಯಿರಪ್ ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿಸಿರುತ್ತೇವೆ. ಈ ಕಾಫ್‌ಸಾಯಿರಪ್‌ನನ್ನು ಸಣ್ಣಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಅತಂಕವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿದುವದು. ಕಿ. ಸಣ್ಣ ಬಾ. ೦—೮—೦ ದೊಡ್ಡ ಬಾ. ೦—೧೬—೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳ ಬಹುದು.
೩ ರೂ. ಕಂತ ಹೆಚ್ಚಿಗೆ ಔಷಧಗಳನ್ನು ತಕ್ಕೊಳ್ಳುವವರಿಗೆ ೧೫ ಟಕ್ಕೆ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.
ಪತ್ರ:— ಡಾ॥ ಹರೀ ಮಹಾದೇವ ಬೈಲೂರ. ಧ್ವ. ಬೆಳಗಾವ.

ವಿಲಿಶವಿಪೆಟ್ ಎಜನ್ಸಿ.

ನಾವು ಶವರಲೇಟ ಮೋಟರ ಕಂಪನಿಯ ಬೆಳಗಾಂವ ಮೊಟರ ವರ್ಕ್ಸ ಟ್ರಾನ್ಸ ಪೋರ್ಟ ಕಂಪನಿಯ ಹಾಗೂ ವಿಲಿಶ ವಿಪೆಟ ಕಂಪನಿಯ ಸಬ್ ಎಜಂಟರಿರುತ್ತೇವೆ ಈ ಗಾಡಿಗಳನ್ನು ತರಿಸಿಕೊಳ್ಳುವವರು ನಮ್ಮ ಕಡಿಯಿಂದಲೆ ತರಿಸಿಕೊಳ್ಳಬೇಕು. ಬಹಳ ಸೋವಿಯಾಗುವದು. ಬಾಗಲಕೋಟೆಯಲ್ಲಿಯು ಸುತ್ತುಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟರ ಮಾಲಕರು ಗೈಡಸೋವಿ ದೊರವಾಗಬೇಕೆಂದು ಒಂದು ಜನರಲ್ ಮೋಟರಸ್ಟೊರ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲಕೋಟೆಯಿಂದಾ ವಿಜಾಪುರ ಇಲಕಲ್ಲ ನರಗುಂದ ಮುಂತಾದ ಸ್ಥಳಗಳಿಗೆ ಹೋಗುವದು.

ಪ್ರವಾಸಿಕರ ಗೈಡಸೋವಿದೊರಾಬೇಕೆಂದು. ತಾ. ೨೯-೩-೩೦ ನೇ ದಿವ್ಸ (ಚೈತ್ರ ಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ)

ಇಲಕಲ್ಲದಿಂದಾ ೯॥ಘಂಟೆಗೆ ಹೊರಟು ಹುಪ್ಪಗುಂದ, ಅಮಿನಗಡ, ಕಮತಗಿ, ಗುಳೇದಗುಡ್ಡ, ಬದಾಮಿ, ಶ್ರೀ ಬನಶಂಕರಿದೇವಸ್ಥಾನ, ಹೊಳಬಸುಡ್ಡ ಕೆರಿ, ಜಾಲಿಹಾಳ, ಹೀರೆಹಾಳ, ಕೊಣಬಾಳ, ರೋಣ, ಅಬ್ಬಿಗೇರಿ, ನರೇಗಲ್ಲ, ಕೊಟುಮಚಗಿ, ನಾರಾಣಾಪುರ, ಮೂರ್ಗವಾಗಿ ಗದಿಗ್ಗೆ ದಿನಾಲು ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದೆವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ ಹೊರಟು ಸಂಜೆ ೫ ಘಂಟೆಗೆ ಇಲಕಲ್ಲಿಗೆ ಬಂದು ಮುಟ್ಟುತ್ತದೆ. ತರಾಸಿದ ವೇಳೆಗಿಂತಾ ೧೫ ಮಿನಿಟ ಮುಂಚಿತವಾಗಿ ಪ್ಯಾಸಿಂಜರರು ಸ್ಟ್ಯಾಂಡಿನ ವೇಳೆ ಹಾಜರ ಇರಬೇಕು ಹೆಚ್ಚು ಡ್ರಾಯವರನಕಡಿಯಿಂದಾ ಮೋಟರಿನಲ್ಲಿ ಸ್ಥಳವಿದ್ದಬಗ್ಗೆ ಖಾತ್ರಿಮಾಡಿಕೊಂಡು ಟಿಕೀಟು ತೆಗೆದು ಕೊಳ್ಳತಕ್ಕದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರಿಪೆರಿ ವರ್ಕಶಾಪ್ ಇರುತ್ತದೆ ಮತ್ತು ಹೊಸದಾಗಿ ಎಲ್ಲ ತಮುನೇಯ ಗಾಡಿಗಳಿಗೆ ಬಾಡಿಗಳನ್ನು ತಯಾರಿಸಿ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವಿಸ—
ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ವಿಲಿಶವಿಪೆಟ್ ಸಬ್ ಎಜಂಟ್ಸ ಅಂಡ ಬಾಡಿಬಿಲ್ಡರ್ಸ ಬಾಗಲಕೋಟೆ

THE POONA SCHOOL OF COMMERCE

Reopens on 16 th June. Students coached for London Chamber of Commerce and other commercial examinations in banking. Accountancy Shorthand Type-writing etc. Apply for prospectus to:—

Secretary, Budkawar Chowk: Poona-city.

ಈ ಪತ್ರಿಕೆಯು ಬಂಬಾಯಿ ಪ್ರೆಸಿಡೆನ್ಸಿಯಲ್ಲಿ ಅತೀ ಇತಿಹಾಸ ಬಾಗಲಕೋಟೆ ವಿದ್ಯಾರ್ಥಿಗಳ ಮುಖ್ಯ ಮಂತ್ರಿಸಲ್ಪಟ್ಟು ಪ್ರತಿಯಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕನ್ನಡ ಪ್ರಭೆ

ಪ್ರತಿ ರವಿವಾರ ಪ್ರಕಟಿಸಲ್ಪಡುವದು.

ಸದಸ್ಯ ರಾಷ್ಟ್ರಗಳ ಸಂಘ | ಸಮಾನತಾ ಸ್ವಾತಂತ್ರ್ಯ || — ಸಾಮ್ಯ

ಸಂಪಾದಕರು— ವೆಂಕಟೇಶ ಶೇಷಗಿರಿಪುತ್ರ ಹಾರ್ಡೀಕರ

ಸಮಗ್ರ ೬ | ಬಾಗಲಕೋಟ ರವಿವಾರ ದಿನಾಂಕ ೨೬ ಫೆಬ್ರವರಿ ೧೯೩೮ | ೪೦
Kannada Date 11-1-11

ದಿ. ಬಾಗಲಕೋಟ ಕೊ-ಆಪರೇಟಿವ ಬ್ಯಾಂಕ ಲಿ. ಬಾಗಲಕೋಟ.

ಬ್ಯಾಂಕಿನ ವ್ಯವಹಾರ ಮುಂದುವರಿಸಿಕೊಂಡು ಹೋಗುವದರ ಭವಿಷ್ಯತ.

ಸ್ವಲ್ಪ ದಿವಸಗಳ ಹಿಂದಿಯ ಅವಧಿಗಾಗಿ ಅಂದಾಜಿಯಿಡುವ ಸಲುವಾಗಿ ಕೇವಲ ಇಟ್ಟು ನೋಟು ಒಡ್ಡಿಯನ್ನು ಕೂಡಿಯೇ ಕಳದುಕೊಳ್ಳಬೇಡಿ ರಿ. ಪ್ರತಿವರ್ಷವು ನಮ್ಮ ಬ್ಯಾಂಕಿನ್ನು ಸರಕಾರಿ ಆಡಿಟರರು ತಪಾಸಣೆ ಮಾಡುತ್ತಾರೆ ಠೇವಿದಾರರಿಗೆ ೧೦೦ ಕ್ಕೆ ೪ ಟಕ್ಕೆ ದಂತೆ ಡೆವಿಡೆಂಡ ಹಂಚಲ್ಪಟ್ಟಿದೆ. ಇದಕ್ಕೆ ಇನ್‌ಕಮ್‌ಟ್ಯಾಕ್ಸ ಬೀಳುವದಿಲ್ಲ.

ಠೇವುಗಳ ಬಡ್ಡಿದರವು ಕೆಳಗಿನಂತಿರುತ್ತದೆ.

ಚಾಲತೀ ಠೇವು.	ಒಂದು ವರ್ಷಕ್ಕೆ	೩॥ ರಂತೆ
ಸೇವ್ವಿಂಗ್ಸ ಬ್ಯಾಂಕ ಠೇವು	,,	೪ ರಂತೆ
ವರ್ಷದ ಮುದ್ದತ ಠೇವು	,,	೬ ರಂತೆ.

ಹೆಚ್ಚಿನ ವಾಯ್ದದ ಠೇವಿನ ಮೇಲಿನ ಬಡ್ಡಿಯದರದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಸಮಜ್ಞೆಮಾ ವಿಚಾರ ಮಾಡಬೇಕು.
ಹೊಸ ಸೇವ್ವಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೊಡುತ್ತೇವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

ಬಾಗಲಕೋಟ.
ತಾ॥ ೨೨-೨-೧೯೩೮

Sd/ D. R. Huddar
ಸೆಕ್ರೇಟರಿ

Sd/ M. S. Mangalwedhekar
ಚೇರಮನ್

ಕಿರ್ಲೋಸ್ಕರ ನೇಗಿಲಗಳು



ಇವುಗಳ ವೈಶಿಷ್ಟ್ಯವು.

೧ ತಿರುಗುವ ಕುಳವಿಲ್ಲದ್ದು.
೨ ಬೆಲೆಯಲ್ಲಿ ವಿದೇಶೀ ರೆಂಟಿಗಿಂತ ಅಗ್ಗ.
೩ ಲಕ್ಷಾವಧಿಜನರು ಹೊಡಿ ಅನುಭವಹೊಂದಿರು ಇರುವ ಕಾರಣ ಈ ನೇಗಿಲುಗಳಿಗೆ ಈ ಹಂಗಾಮಿನಲ್ಲಿ ರತಿಪಿಲ್ಲದೆ ಮಾಗಣಿಯುಂಟು. ಸದ್ಯಕ್ಕೆ ಹಂಗ್ಗಾಮವು ಪ್ರಾರಂಭವಾಗಿರುವದು ಇವತ್ತೇ ಆರ್ಡರ್‌ಕೊಟ್ಟು ತರಿಸಿಕೊಂಡಲ್ಲಿ ಲಾಭವು ಟು

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ. ಬೆ ಸಾತಾರಾ ಜಿ

ದಿ. ಅಶೋಕ ಬಾಂಕ ಲಿಮಿಟೆಡ್ ಬಾಗಲಕೋಟೆ.

ರಾಷ್ಟ್ರೀಯ ಇಂಡಿಯನ್ ಕಂಪನೀಜ ಆಕ್ಟ್ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಬ್ಯಾಂಕಿನ ಠೇವಿನ ದರವು ಕೆಳಗೆ ತೋರಿಸಿದ ಪ್ರಕಾರ ಇರುತ್ತದೆ

ಚಾಲತೀ ಠೇವಿಗೆ	ವರ್ಷಕ್ಕೆ	ವರ್ಷಕ್ಕೆ	೩॥ ರೂ
ಸೇವ್ವಿಂಗ್ಸ ಬ್ಯಾಂಕ	”	”	೪ ರೂ
ಮುದ್ದತೀ ಠೇವಿಗೆ	”	”	೬॥ ರೂ

ಇದಲ್ಲದೆ ೩-೬ ಮತ್ತು ೯ ತಿಂಗಳ ಠೇವು ಇಡುವದಾದಲ್ಲಿ ಸಮಜ್ಞೆಯಬಂದು ದರವನ್ನು ಗೊತ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಅಂದರೆ ಬೆಳ್ಳಿ. ಛಂಗಾರ ಕಾಳುಕಡಿ ಸರಕಾರೀ ಕಾಗದ ಮತ್ತು ವಿವೆಯ ಪಾಲಿಸಿಗಳಮೇಲೆ ಸಹಾ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸಲಹ್ಯ! ವರ್ತಕರು ತಮ್ಮ ಮಾಲನ್ನು ಪೋ. ದ್ವಾರಾ ಕಳಿಸುವಬದಲಾಗಿ ನಮ್ಮ ಬ್ಯಾಂಕಿನ ಮುಖಾಂತರ ಏರಿಸಿಕೊಂಡರೆ ನೂರಕ್ಕೆ ೧೫ ಆಣೆಯಂತೆ ಉಳಿಸಿಕೊಳ್ಳಬಹುದು

ಹೆಚ್ಚಿನ ವಿವರ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಿಸಲ್ಪಡುವದು.

V R Torvi
Managing Director

ಶವರಲೇಟ ಗಾಡಿಗಳ ಎಜನ್ಸಿಯ-

ನಾವು ಹೊಸದಾಗಿ ಶವರಲೇಟ ಗಾಡಿಗಳ ಎಜನ್ಸಿಯನ್ನು ಹಿಡಿದಿರುತ್ತೇವೆ. ಕೊಳ್ಳುವವರು ನಮ್ಮ ಕಡೆಯಿಂದಲೇ ಕರಿಸಿಕೊಳ್ಳಬೇಕು. ಅಂಚೆ ಖರ್ಚ ಸೋದಿಯಾಗುವದು,



ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತುಲಿನ ಜನರಿಗಾಗಿ ವ ಸರ್ವೀಸ
ಮೋಟಾರ ಮಾಲಕರ ಗೈರಸೋಯ ಮಾಡಬೇಕೆಂದು
ಆರ್. ಜಿ. ಚವ್ಹಾಣ ಎಂಡ ಸನ, ಬೆಳಗಾವ. ಇವರು ಮ್ಮ
ಜನರಲ ಮೋಟಾರ ಅ ಕ್ಸೆಸರಿ ಸ್ಟೋರ್ಸದ ಶಾಖೆಯನ್ನು
ತಾ॥ ೧೦ ಸೆಪ್ಟೆಂಬರ ೧೯೩೨ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ತಾಜ್, ಫೋರ್ಡ, ಜಿ. ಎಂ. ಸಿ, ಇನ್ನ ಇತರರೆಂಡ ಮುಂತಾದವೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟೂಬ್ಸ, ಗ್ರೀಸ, ಮೊಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಚೀಪಾಗಿದ್ದರಿಂದ ಸಿಗುವವು. ನಮ್ಮಲ್ಲಿ ಶೇಕಂಡ ಹ್ಯಾಂಡ ಡಾಜ್ ಶೇವ್ರಲೆಟ್ ವ ಮತ್ತು ಇಂಟರ ನ್ಯಾಶನಲ್ ಗಾಡಿಗಳು ಚಾಲತಿಯಲ್ಲಿ ಇರುವವು. ಮೋಗ್ಯ ದರದಿಂದ ಮಾರಲಿಕ್ಕೆ ಶಿಗತ್ತವೆ ಚಾಲಕರು— ವಾಯ್. ಜಿ ಚವ್ಹಾಣ ಎಂಡ ಸನ್ಸ
ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಹಲ್ಕನಾಯಿಝಿಂಗ ಮಾಡಿ ಕೊಡುವೆವು
ಬಾಗಲಕೋಟೆ—ವಿಳಗಾವಿ ಬಾಗಲಕೋಟೆ ಇಳಕಲ್ಲ, ಸರ್ವೀಸ ಸ್ಟೇಶನ್ಸ

ಶುಲಭಕ್ರಯ! **ಡಾಕ್ಟರ ಜೀ ಬೀ. ಯವರ ಸುಗಂಧ ನಶ್ಯದಪುಡಿ.** ಶುಲಭಕ್ರಯ!!

ಪ್ರಸಿದ್ಧವಾದ ಈ ಸುಗಂಧ ನಶ್ಯಪುಡಿ ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಕಗಳಾಗಿ, ಯೋಗ್ಯಕಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ- ಪಿನಸಿ ಒಂಟಿ ತಲೆ ನೋವು ತಲೆಯಲ್ಲಿನ ಶೀತಗಳು ಕಣ್ಣುಗಳಲ್ಲಿ ಉಂಟಾಗಶಕ್ಕ ಸವ.ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಇಂತಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುವಾಡುತ್ತದೆ. ಮೂರು ಬೊಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಮುಟಿಕೆಯಷ್ಟು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ ವ್ಹಿ. ಪಿ. ೪ ಆಣೆ. ಡಜನ್ ೧ ರೂ ಕ್ರಯ ರೂ ೩—೮—೦ ವ್ಹಿ.ಪಿ. ಚಾರ್ಜು ೪ ಆಣೆ.

Registered Trade mark

ವಿಳಾಸ—ಗುರುಬಸವ ಆಂಡ್ ಕಂಪೆನಿ,ಲಿಮಿಟೆಡ್ ಪೋ ಬಾ ೫೧೦ ಪಾರ್ಕಟೌನ ಮದರಾಸು.

ದಯವಾಡಿ ನಮ್ಮ ಹೆಸರನ್ನು ಅಡ್ರೆಸ್ಸನ್ನು ಸರಿಯಾಗಿ ಕಳಿಯುವಂತೆ ಬರೆಯಿರಿ.

ಭೂಲೋಕದ ಕಾಮಧೇನು

ದೇವಲೋಕದ ಕಾಮಧೇನು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನು ಕೊಡುವ —

ಕ್ರಯವು ಇನಾಂ!!! ಅಂ. ಡಾಸಲು ಇಲ್ಲದೆ

ಸರ್ವಸ್ವ ಉಚಿತವಾಗಿ ಕೊಡಲ್ಪಡುವ ಸದ್ಯ

ವೈದ್ಯೋದ್ಯ

ಯಾವ ಅರೋಗ್ಯ ವರ್ಧಕ ಮಾರ್ಗದರ್ಶನ, ಅನೇಕ ರಹಸ್ಯಮಯ ವಿಷಯಗಳನ್ನೆ.

ವಿಜಂಟರುಃ—ದಂಬುಲಿಂಗಪ್ಪ ಜಾಲವಾದಿ
ಸ್ಪೇಶಸರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇರವಡಿ.
ಗಿರಿಮಲ್ಲಿಕಾರ್ಜುನಾಚಾರ್, ಮದರಾಸು

ನೋಡಿದರೆ ಬಿಡದಿರುವ ಕಾದಂಬರಿಗಳು.

೧ ಸಾಹಸಾತ್ಮ ತುಲಸೀದಾಸ	೧-೪-೦
೨ ಜಲಂಧರ ನಾಟಕ	೦-೧೦-೦
೩ ವಡಗಾಣದ ವಿಜಯ	೧-೪-೦
೪ ಅಂಬಿಕೆ	೧-೪-೦
೫ ಸೌಭಾಗ್ಯ ತಿಲಕ	೧-೦—೦
೬ ನಂದೀಧರ ಕಾತೇವು	೧-೪—೦
೭ ಭಗವದ್ದಾಸ	೧—೦—೦
೮ ಸ್ವಪ್ನಲೀಲೆ	೧-೧೨-೦
೯ ಕಂಕಣಜೋಡ	೧—೪-೦
೧೦ ಭಯಂಕರ ಕೊಲೆ	೦-೧೨-೦
೧೧ ಇಂದುಮುಖಿ	೧-೧೦-೦
೧೨ ಪದ್ಮಿಣಿ ಕಮಲಾ	೧-೦-೦

ಇನ್ನೂ ನೂರಾರು ಬಗೆಯ ಪುಸ್ತಕಗಳು ಮೈಕ್ಷಿಸಿಗುವವು. ಕ್ಯಾಟಲಾಗಿಗೆ ಬರೆಯಿರಿ. ಪುಸ್ತಕಗಳಿಗೆ ಧಾರಾಳವಾದ ಕಮೀಶನ್

ವಿಳಾಸಃ— ಶ್ರೀ ಸ ಕಾಳೆ
ಪೋ. ಆನಂದವನ, (ಜಿ. ಧಾರವಾಡ)

ಕ ನ್ನ ಡಿ ಗ.

ಕನ್ನಡಿಗ ಪುಸ್ಯ ಬಹುಳ ೮ ಶಕೆ ೧೮೫೩
ಕಸ್ಯ ಪುಣ್ಯವಸ ಮೇಣಮಾಡಿ ಕಟ್ಟುವೆನಾನು
ಕನ್ನ ದೆಸೆನವ ಮಾಡಿದಂಥ ಮುಳ್ಳಳದೊಮ್ಮೆ
ಚಿಕ್ಕಾದರು ಚನ್ನ ಮೇಣಬಸ್ತಿಯೊಂದು
ಚಿನ್ಮಯಾಕಾಶದಲ್ಲಿ ।

ಲೇಬನ ಸ್ವತಂತ್ರಕ್ಕೆ ತಡೆಹಾಕುವ

ಕರಾಳ ಶಾಸನವಾದ ಪ್ರೆಸ್ ಆರ್ಡಿನನ್ಸ

ಜೀವಿಸಿರುವಷ್ಟು ಕಾಲ ನಾವು ಅಧ್ಯಯನಶೋಧಾರ್ಥವಾಗಿ

ಅಗ್ರಲೇಖ ಬರಯುವದೇ ಇಲ್ಲ.

ವಿಜಾಪುರ ಜೇಲಿನಲ್ಲಿ

ಕಕ್ಕೇರಿ ಆಚಾರ್ಯರ ಪ್ರಾಯೋಪವೇಶನವು.

೪೫ ದಿನಗಳಾದವು.

(ಬರೆದು ಬಂದದ್ದು.)

ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಅನ್ಯಾಯವಾಗಿ ಶಿಕ್ಷೆ ಅನುಭವಿಸುತ್ತಿರುವ ಹುನಗುಂದದ ವೇದಮೂರ್ತಿ ಕಟ್ಟಿ ಶಮಣಾಚಾರ್ಯರು, ಅಶುದ್ಧ ಅನ್ನವನ್ನು ತಾವು ತಿನ್ನಲಿಕ್ಕಿಲ್ಲೆಂದು ಅನಶನ ವ್ರತವನ್ನು ಸ್ವೀಕರಿಸಿ ಈಗ ೪೫ ದಿನಗಳಿಂದಲೂ ಅನ್ನ ನೀರು ಇಲ್ಲದೆ ಪ್ರಾಯೋಪವೇಶನ ಬಿದ್ದಿರುವರು. ಅದರೂ ಜೇಲ ಅಧಿಕಾರಿಗಳ ಲಕ್ಷ್ಯವು ಅತ್ತ ಕಡೆಗೆ ಹೋಗದಾಗಿದೆ ಕುಡಿಯಲಿಕ್ಕೆ ಸಹ ಶುದ್ಧವಾದ ನೀರನ್ನು ಕೊಡದೆ, ಕೇವಲ ಸೇರು ಸೇರೂಕಾಲು ಹಾಲಿನಮೇಲೆ ಅವರಿಗೆ ಜೀವಧಾರಣ ಮಾಡಲಿಕ್ಕೆ ಹಚ್ಚಿರುವರು. ಮನುಷ್ಯನು ಜೀವಿಸಬೇಕಾದರೆ ಗಾಳಿಯುಷ್ಟೇ ಅವಶ್ಯವಾದ ನೀರಿನ ಬಿಂದು ಸಹ ಬಾಯಿಯಲ್ಲಿ ಬೀಳದೆ ಇಪ್ಪದೇಲೆ, ಶ್ರೀ. ಕಟ್ಟಿಯವರ ದೇಹವು ಅವಸ್ಥೆಯು ಏನಾಗಿರುವದೆಂಬದನ್ನು ಬೇರೆ ಬರೆಯಬೇಕೇ? ಶರೀರವು ಅತ್ಯಂತ ಕೃಶವಾಗಿದೆ. ಕಣ್ಣು ಒಳಸೆದಿವೆ. ತೂಕವು ಇಳಿಯುತ್ತ ಸಡೆದಿದೆ. ಈ ಬಹಳ ದಿನಗಳ ವರೆಗೆ ನೀರು ಇಲ್ಲದ್ದಕ್ಕಾಗಿ ಅವರ ಗಂಟಲಿನಲ್ಲಿ ಇತ್ತಿತ್ತಲಾಗಿ ಏನೋ ವಿಕಾರವಾಗಿ ಅವರ ಬಳಲಿಕೆಯು ಈಗಂತೂ ಹೆಚ್ಚಾಗಿದೆಂಬ ಸುದ್ದಿ ಬಂದಿದೆ ಇಷ್ಟಾದ ಮೇಲಾದರೂ ಅಧಿಕಾರಿಗಳ ಎದೆ ಕರಗಬಾರದೆ! ಕಾಯಿದೆ ಕಾಯಿದೆಯೆಂದು ನೀರಿಲ್ಲದೆ ಒಬ್ಬರ ಜೀವ ಹೊಡೆಯುವದೆಂದರೆ ಕಟುಕನ ಕಟುಕತನಕ್ಕಿಂತಲೂ ಎಷ್ಟಕ್ಕಿದ ಕಟುಕತನವೇ ಸರಿ. ತುಡುಗು, ಕಳವು, ಹೊಡೆದಾಟ, ಬಡೆದಾಟದವರ ಸದೋದಿತ ಸಹವಾಸದ ವಾತಾವರಣ ಜೇಲ ಅಧಿಕಾರಿಗಳ ಮನಸ್ಸು ಕಲ್ಲಾಗಿ ಹೋಗುವ ಸಂಭವವಿದೆ. ಅದರೆ ಖೈದಿಗಳ ಸುಖದುಃಖಗಳನ್ನು ವಿಚಾರಿಸಲು ಅರಿಸಲ್ಪಟ್ಟ ದಯಾಶೀಲರಾದ ಜೇಲ ವ್ಹಿಜಿಟರರಾದರೂ, ಪ್ರಾಣಾಂತ್ಯದ ವರೆಗೆ ಪರಿಣಮಿಸಿದ ಅನ್ಯಾಯವಾದ ಈ ನಿರ್ದಯವನ್ನರ ನಿಷೇಧಿಸಿಯಾಗಲಿ, ವಿರೋಧಿಸಿಯಾಗಲಿ ಅಥವಾ ವರಿಷ್ಠ ಅಧಿಕಾರಿಗಳಿಗೆ ಈ ಅನಾಹುತದ ಬಗ್ಗೆ ಯಥಾವತ್ತಾದ ವರದಿಯನ್ನು ಬರೆದು ಕೊಂಡಾಗಲಿ— ಹೇಗಾದರೂ ಏನಾದರೂ ಮಾಡಿ ನೀರಿಲ್ಲದೆ ಅಶೋರಾತ್ರಿ ತೊಳಲಾಡುತ್ತಿರುವ ತಮ್ಮಂಥಹದೇ ಒಂದು ಜೀವವನ್ನು ರಕ್ಷಿಸಿಕೊಳ್ಳಬಾರದೇ! ಇದು ಕೇವಲ ಭೂತದಯಾದಿ ಪ್ರಶ್ನೆಯಲ್ಲವೇ?

ಶ್ರೀ. ಕಟ್ಟಿಯವರ ಜೀವನವೇನು ಸಾಮಾನ್ಯ ಕೋಟಿಯದೆ? ಅವರ ಜೀವನವು ಉಪೇಕ್ಷಣಾರ್ಹವೆಂದು ತಿಳಿಯಲಿಕ್ಕಾದೀತೇ? ಕಟ್ಟಿ ಇವರ ಜೀವನವು ಉಚ್ಚ ಕೋಟಿಯದು. ಅವರ ಮನಸ್ಸು ಸುಸಂಸ್ಕೃತವಾದದ್ದು; ಕಾವ್ಯನ್ಯಾಯ ವೇದಾಂತ ಮೊದಲಾದ ಅನೇಕ ಶಾಸ್ತ್ರ ಪಂಪನ್ನರು. ಅವರು ಸಂಗೀತ ಚಿತ್ರಕಲೆ ಮೊದಲಾದ ಕಲೆಗಳಲ್ಲಿ ಒಳ್ಳೇ ನಿಷ್ಣಾತರು. ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಪದವಿಯ ವರೆಗೆ ಆಂಗ್ಲವಿದ್ಯಾವಿಭೂಷಿತರು. ಜನ್ಮತಃ ಸ್ವಾರ್ಥತ್ಯಾಗಿಗಳು ಆಂತೆಯೆ ಅವರು ಹಿಂದಿನ ಅಪಾರ ಜಹವಳಿಯ ಪ್ರಾರಂಭದಲ್ಲಿಯೆ ತಮ್ಮ ಆಂಗ್ಲವಿದ್ಯಾಭ್ಯಾಸಕ್ಕೆ ಶರಣು ಹೊಡೆದ, ಇಂದಿನಿಂದಲೂ ದೀನೋದ್ಧಾರ ವ್ರತವನ್ನು ಕೈಕೊಂಡಿರುವರು. ವಿರಕ್ತಿ, ಸತ್ಯ, ಅಹಿಂಸೆ ಇವೇ ಅವರ ಸಾಧನಕ್ರಮವು. ಲೋಕಸಂಗ್ರಹವೇ ಅವರ ಜೀವನ ಗುರಿಯು. ತೋಪಿನ ಬಾಯಿಗೆ ಕಟ್ಟಿದರೂ ತಮ್ಮ ಧರ್ಮಪಥದಿಂದ ಒಂದು ಎಳ್ಳ ಕಾಳಷ್ಟು ಸಹ ವಿಚಲಿತರಾಡದಂಥ ಧೀರ ಸ್ವಭಾವಿಗಳು. ಇಂಥವರು ಹಳ್ಳಿಯೊಳಗಿನ ಬಡ ಬಗ್ಗರಿಗೆ ನೂಲುವ ನೇಯುವ ಕೆಲಸ ಹಚ್ಚಿ, ಅವರ ಮಧ್ಯಾನ್ಹದ ಚಿಂತೆಯನ್ನು ನೀಗಿಸುವ ಪ್ರಯತ್ನದಲ್ಲಿ, ತಮ್ಮ ಹಸಿವು ನೀರಡಿಕೆಗಳ ಪರಿವೆಯಿಲ್ಲದೆ, ಹಳ್ಳಿ ಹಳ್ಳಿ ತಿರುಗುತ್ತಿರುವಾಗ, ಅವರನ್ನು ಎತ್ತಿತಂದು ಕಾರಾಗೃಹದಲ್ಲಟ್ಟುವ ನೀರೂ ನೀರು ಎಂದು ಹಲಬಿಸಿ ಕೊರಗಿಸುತ್ತಿರುವದು ಯಾವ ಕಾಯದೆ! ಅದೆಂಥ ನ್ಯಾಯ!! ಜೇಲ ವ್ಹಿಜೇಟರರಲ್ಲಿ ನ್ಯಾಯ ದಯಾವಾಸು, ಅಂತಃಕರುಣ, ಭೂತದಯೆ ಇವ್ಯಾವವೂ ಇಲ್ಲವೇನಬಹುದೆ! ತಮ್ಮ ಮೇಲ್ವಿಚಾರಣೆಗೊಳಗಾದ ಈ ಜೀವವು ಪಡುತ್ತಿರುವ ಕಳವಳದ ಪಾತಳವು ತಮಗೂ ತಗಲೀತೆಂಬ ಭೀತಿಯು ಇವರಿಗಿರಬಾರದೆ? ಕಲೆಕ್ಟರ, ಡಿಸ್ಟ್ರಿಕ್ಟಜಡ್ಜ, ಸಿವ್ಹಿಲ್‌ಸರ್ಜನ್

ಇವರೇ ಮೊದಲಾದ ಜವಾಬದಾರಿಯ ಲೌಕಿಕ ಕಾರಭಾರಗಳು ಈ ವಿಷಯದಲ್ಲಿ ಏನೂ ಮಾಡದೆ ಸುಮ್ಮನೆ ಕುಳಿತಿರುವರೇಕೆ? ಅವರಿಗೆ ಇದೆಲ್ಲ ಪ್ರಕರಣವು ಗೊತ್ತಾಗಲಿಲ್ಲೆನ್ನಲು? ಈ ಬಗ್ಗೆ ಸದರಾಜಪೂ ಕೂಡ ಏನನ್ನೂ ಕರ್ತವ್ಯವನ್ನು ಮಾಡಿಲ್ಲವೆಂದು ಹೇಳಲು ಮನಸಾಪೆನಿಸುತ್ತದೆ. ಇನ್ನಾದರೂ ಇವರೆಲ್ಲರೂ ಎಚ್ಚರಗಾಗುವರೋ ಅಥವಾ ಇವರೆಲ್ಲರೂ ಪರಮಕರುಣಾ ಹೃದಯದ ದಯಾಶೂನ್ಯತೆಗೆ ಶ್ರೀ ಕಟ್ಟಿಮನಿಯವರಂಥ ಧೀರಾತ್ಮನನ್ನು ಆಹುತಿಕೊಳ್ಳುವರೋ?!

ಧಾರವಾಡದಲ್ಲಿ
ಸಭೆ ಹಾಗು ಹರತಾಳ
(ಸ್ವಂತ ಸುದ್ದಿಗಾರರಿಂದ)

ಈ ನೇ ತಾರೀಖಿನ ದಿವಸ (ಗಾಂಧಿ ದಿನ) ಬೆಳಗಿನಲ್ಲಿ ಕೆಂಗೇರಿ ಹಾಗು ಗಂಡಸರ ನಗರ ಸಂಕೀರ್ತನೆಗಳು ಹೊರಟಿದ್ದವು ಮತ್ತು ವಿಜಯವಂದನೆಯು ಆಯಿತು. ಶ್ರೀ ವಿ. ವಿ. ಚಿಟ್ಟಿಲವರು ಗಾಂಧಿಯವರ ವಿಷಯವಾಗಿ ಕೆಲವು ಮಾತುಗಳನ್ನಾಡಿದರು.

ಸಾಯಂಕಾಲ ಕಡಪಾ ಬೈಲಿನಲ್ಲಿ ನಾಗರಿಕರ ಸಭೆಯಾಯಿತು. ಶ್ರೀ ಗುತ್ತಲ ವಕೀಲರು ಅಧ್ಯಕ್ಷರಾಗಿದ್ದರು. ಶ್ರೀ ದಿವಾಕರರು ಮಹಾತ್ಮರ ಗುಣಗಳ ವಿಷಯವಾಗಿ ಬಹು ಪರಿಣಾಮಕರವಾದ ಭಾಷಣಮಾಡಿದರು.

ಮೌಲಾನಾ ಮಹಮ್ಮದ ಅಲ್ಲಿಯವರು ಬಂಡವಾಳದಲ್ಲಿ ನಿಧನ ಹೊಂದಿದುದಕ್ಕಾಗಿ ತಮಗಾದ ದುಃಖವನ್ನು ವ್ಯಕ್ತಮಾಡುವದಕ್ಕೆ ಜನತೆಯ ಕಾಲಿನ ಧಾರವಾಡ ನಾಗರಿಕರು ಪರಿಪೂರ್ಣ ಹರತಾಳವನ್ನು ಪಾಲಿಸಿದ್ದರು. ಮುಸಲ್ಮಾನರು ಪ್ರತ್ಯೇಕವಾಗಿ ಬೆಳಿಗ್ಗೆ ಹಾಗು ಸಂಜೆಗೆ ಶೋಕಸೂಚಕವಾಗಿ ಮೆರವಣಿಗೆಯನ್ನು ತೆಗೆದಿದ್ದರು. ಶ್ರೀ ಕಠಾರಿ ವಕೀಲರು ಅಧ್ಯಕ್ಷತೆಯಲ್ಲಿ ವಿಶಾಲವಾದ ವೈದಾನದಲ್ಲಿ ಕೇವಲ ಮುಸಲ್ಮಾನರ ಸಭೆಯಾಯಿತು.

ಧಾರವಾಡ ನಾಗರೀಕರ ವತಿಯಿಂದ ಸಾಯಂಕಾಲ ಬಳ್ಳಿಕಟ್ಟಿಯ ಮೈದಾನಿಯಲ್ಲಿ ಕಡಪಾ ಬೈಲಿನಲ್ಲಿ ಶ್ರೀ ಜೋಶಿ ವಿನಾಯಕರಾಯರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಶ್ರೀಗುತ್ತಲ, ಜೋಶಿ, ವಕ್ಕುಂದ ದಿವಾಕರರ ಭಾಷಣಗಳಾದವು. ದುಃಖ ಪ್ರದರ್ಶನವು ಮುಗಿದಮೇಲೆ ಸಭೆಯು ವಿಸರ್ಜನೆಯಾಯಿತು.

ಮುನಸಿಪಾಲಿಟಿಯು ಎಲ್ಲ ಶಾಲೆಗಳು ಮುಚ್ಚಲ್ಪಟ್ಟಿದ್ದವು ಕಾಲೇಜಿಗೂ ಇರ್ಧ ದಿವಸ ಬಿಡುವು ಇತ್ತು.

ಸದರಿ ಶ್ರೀ ವಲ್ಲಭಭಾಯಿಯವರಿಗೆ ತಿಪ್ಪೆಯಾದ ಬಗ್ಗೆ ಅವನನ್ನು ಆಭಿನಂದಿಸಲು ಲೇ ತಾರೀಖಿನ ಸಾಯಂಕಾಲ ಕಡಪಾ ಬೈಲಿನಲ್ಲಿ ಸಾರ್ವಜನಿಕ ಸಭೆಯು ಶ್ರೀ ಹುಕ್ಕೇರಿ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು.

ಭಗಿನಿಯರೇ,

ಸಂಕ್ರಾಂತಿ ಹಬ್ಬಕ್ಕಾಗಿ ಸ್ವದೇಶಿ ಸಕ್ಕರೆಯ ಎಳ್ಳನ್ನೇ ಸಿದ್ಧಪಡಿಸಿರಿ. ಮಹಾತ್ಮಾ ಗಾಂಧಿ ಹಾಗು ಅವರ ೭೦,೦೦೦ ಅನುಯಾಯಿಗಳು ಏತಕ್ಕಾಗಿ ಸೆರೆಮನೆಗಳಲ್ಲಿ ಕಷ್ಟನಷ್ಟಗಳನ್ನು ಸಹಿಸುತ್ತಿರುವರೆಂಬುದನ್ನು ಸ್ಮರಿಸಿರಿ. ಪರದೇಶಿ ಸಕ್ಕರೆಗೆ ಬಹಿಷ್ಕಾರ ಹಾಕಿರಿ. ಲಕ್ಷಾನುಗಟ್ಟಲೆ ಗೋರಗಳ ದಫೆಗಾನ್ನು ನಿಲ್ಲಿಸಿರಿ ೩೦ ಕೋಟಿ ರೂಪಾಯಿಗಳನ್ನು ಹಿಂದುಸ್ಥಾನದಲ್ಲಿಯೇ ಉಳಿಸಿಕೊಳ್ಳಲು ನೆರವಾಗಿರಿ

ಇಹವೃತ್ತ

ಇಲ್ಲಿಯ ವಕೀಲರಾದ ಶ್ರೀ ಛಬ್ಬಿ ಶ್ರೀನಿವಾಸರಾಯರು. ತಮ್ಮನ್ನು ಅವಮಾನಗೊಳಿಸಿದಬಗ್ಗೆ ಸಬ್ ಇನಸ್ಪೆಕ್ಟರರಮೇಲೆ ಮಾನಹಾನಿಯ ದಾವೆ ಮಾಡಿರುವರೆಂದು ಕೇಳ್ವರಿದ್ದೇವೆ. ನಮ್ಮ ಪ್ರತಿನಿಧಿಯು ಅವರನ್ನು ಕಂಡುಕೊಂಡು ಈ ಬಗ್ಗೆ ವಿಚಾರಿಸಲಾಗಿ ನೋಟೀಸು ಕೊಟ್ಟಮೇಲೆ ಡಿಸ್ಟ್ರಿಕ್ಟ ಪೋಲೀಸ ಕಾಯ್ದೆಯ ಪ್ರಕಾರ ಒಂದು ತಿಂಗಳವರೆಗೆ ಅವರ ಉತ್ತರದಬಗ್ಗೆ ಹಾದಿ ನೋಡಬೇಕಾಗಿತ್ತೆಯಾದ್ದರಿಂದ ಅಲ್ಲಿಯವರೆಗೆ ಹಾದಿನೋಡಿ, ಆಮೇಲೆ ಮಾನಹಾನಿಯ ದಾವೆ ತರಬಹುದಾಗಿದ್ದೇವಾಗಿ ಅವರು ತಿಳಿಸಿದರು.

ಲಕ್ಷೋವಿನ ಒಕಸಂಚಿನ ಖಟ್ಲೆಯಲ್ಲಿ ರಿಪೋರ್ಟಿಗಿರುವ ಶ್ರೀ ಸುಖದೇವರು ಇನ್ನು ಸಿಕ್ಕಿಲ್ಲವೆಂಬುದಾಗಿ ಸರಕಾರಿ ವರ್ತಮಾನ ಪ್ರಸಿದ್ಧವಾಗಿದೆ.

ಬಹಿಷ್ಕಾರದ ಪರಿಣಾಮ

ಗತ ೧೯೨೦ ನೆಯ ಎಪ್ರಿಲದಿಂದ ನವೆಂಬರಕ್ಕೆ ಮುಗಿಯುವ ಆವಧಿಯಲ್ಲಿ ಈ ವರ್ಷ ೧೯೨೧ ಕೋಟಿ ರುಪಾಯಿಗಳ ಸರಕುಗಳು ಪರದೇಶಗಳಿಂದ ಇಲ್ಲಿಗೆ ಒಂದಿದ್ದವು, ಹೋದ ವರ್ಷದಲ್ಲಿ ಇಷ್ಟೇ ಅವಧಿಯಲ್ಲಿ ೧೬೨ ಕೋಟಿ ರುಪಾಯಿಗಳ ಸರಕುಗಳು ಬಂದಿದ್ದವು. ಹೋದ ವರ್ಷದಲ್ಲಿ ಇಷ್ಟೇ ಅವಧಿಯಲ್ಲಿ ೨೨೪ ಕೋಟಿ ರುಪಾಯಿಯ ಸರಕುಗಳು ಇಲ್ಲಿಂದ ಪರದೇಶಗಳಿಗೆ ಹೋಗಿದ್ದು, ಈ ವರ್ಷ ಕೇವಲ ೧೬೧ ಕೋಟಿ ರುಪಾಯಿಯ ಸರಕುಗಳು ಪರದೇಶಗಳಿಗೆ ಕಳಿಸಲ್ಪಟ್ಟಿವೆ ಆಮದಾತ ಮತ್ತು ನಿರ್ಗತ ವ್ಯಾಪಾರವು ಬರಬರುತ್ತ ಹೇಗೆ ಕಡಿಮೆಯಾಗುತ್ತ ಬಂದಿದೆಯೆಂಬುವನ್ನು ಕೆಳಗಿನ ಅಂಕಿ ಕೆಂಪ ಕಂಡುಕೊಳ್ಳಬಹುದು.

ಆಮದಾತ ವ್ಯಾಪಾರ

	೧೯೧೯—	೧೯೨೦
ಲಕ್ಷಗಳಲ್ಲಿ		
ಎಪ್ರಿಲ್	೨೪೪೪	೧೪೨೬
ಮೇ	೨೧೫೩	೧೭೬೧
ಜೂನ	೧೬೫೨	೧೫೮೬
ಜುಲೈ	೧೯೦೭	೧೫೬೬
ಆಗಸ್ಟ	೨೦೫೪	೧೬೭೪
ಸಪ್ಟೆಂಬರ	೧೯೨೩	೧೧೧೮
ಆಕ್ಟೋಬರ	೧೯೨೪	೧೩೭೮
ನವೆಂಬರ	೨೨೫೦	೧೯೯೧
ನಿರ್ಗತ ವ್ಯಾಪಾರ		
ಎಪ್ರಿಲ್	೨೮೧೧	೨೪೫೨
ಮೇ	೨೬೬೨	೨೧೮೪
ಜೂನ	೨೬೭೧	೨೦೭೧
ಜುಲೈ	೨೫೫೬	೨೦೯೬
ಆಗಸ್ಟ	೨೬೩೨	೧೭೬೪
ಸಪ್ಟೆಂಬರ	೨೬೦೫	೧೯೪೦
ಅಕ್ಟೋಬರ	೨೬೭೬	೧೮೧೫
ನವೆಂಬರ	೨೬೫೪	೧೮೨೩

ಹೋದ ವರ್ಷದ ನವೆಂಬರ ತಿಂಗಳದಲ್ಲಿ ಪರದೇಶದಿಂದ ಬಂದ ಸರಕುಗಳ ಕಿಂತಲೂ ಸರಕುಗಳು ಈ ವರ್ಷ ನವೆಂಬರ ತಿಂಗಳದಲ್ಲಿ ಇಲ್ಲಿಗೆ ಒಂದಿದ್ದನ್ನು ನೋಡಿದಲ್ಲಿ, ಬಹಿಷ್ಕಾರ ಜಳವಳಿಯಿಂದ ಪರದೇಶದವರ ವ್ಯಾಪಾರವು ಹೇಗೆ ಮುಣುಗಹತ್ತಿದೆಯೆಂಬುದು ಪ್ರತಿಯೊಬ್ಬರಿಗೂ ತಿಳಿದು ಬಿಡದೆ ಇರಲಾರದು.

ಹಿಂದುಸ್ಥಾನದ ಮೇಲೆ ವಜ್ರಾಘಾತ.

ಮೌಲಾನಾ ಮಹಮ್ಮದ ಅಲ್ಲಿಯವರು ಮರಣಹೊಂದಿದರು

ಬಂಡಿ ಗಾಲಿಯ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಮೌಲಾನಾ ಮಹಮ್ಮದ ಅಲ್ಲಿಯವರು ತಾ॥ ೪ನೆಯ ದಿವಸ ಮುಂಜಾನೆ ೯-೩೦ ಗಂಟೆಗೆ ಲಂಡನ್ನದಲ್ಲಿ ಹೃದಯ ವಿಕಾರದಿಂದ ಮರಣ ಹೊಂದಿದರೆಂದು ತಿಳಿದು ವಿಷಾದವಾಗುತ್ತದೆ ಅವರು ಮೂನ್ನಾ ದಿವಸ ಮಧ್ಯಾಹ್ನದ ವರೆಗೂ ಹಿಂದೂ ಮುಸಲ್ಮಾನರ ವೈಭೇದಗಳನ್ನು ಹೇಗೆ ಹೋಗಲಾಡಿಸಬೇಕೆಂಬದರ ವಿಷಯವಾಗಿ ವಿಚಾರ ಮಾಡಿದರು. ಆದರೆ ೫ ಗಂಟೆಗೆ ಒಮ್ಮಿಂದೊಮ್ಮೆ ಹೃದಯ ವಿಕಾರವಾಗಿ ಅವರಿಗೆ ಧ್ಯಜ್ಞೆತಪ್ಪಿ ಮುಂದೆ ನಾಲ್ಕು ತಾಸುಗಳಲ್ಲಿ ಅವರು ಮರಣ ಹೊಂದಿದರು.

(ಶಂತಿಯ ವಾರ್ತೆ)

ಬಂಡೀಗಾಲಿಯ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಪ್ರಸಿದ್ಧ ಮುಖಂಡರಾದ ಮೌಲಾನಾ ಮಹಮ್ಮದ ಅಲ್ಲಿಯವರು ಉದರದ ಪೂರ್ವಕವಾಗಿ ಕೆಲವು ದಿನಗಳವರೆಗೆ ಹಾಗೆ ಹಿಡಿದಿದ್ದು ಅವರು ಈಗ ಅಲ್ಲಾಹೋ ಅಕ್ಬರ್ ಹೊಂದಿದರೆಂದು ತಿಳಿದುಬಂದಿರುವ ವರ್ತೆಯಿಂದಿದೆ. ಈ ಪೂರ್ವಕವಾಗಿ ಇಂದು ಮುಂಬಯಿಯಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು ಉದ್ಯೋಗ ವ್ಯವಹಾರಗಳೆಲ್ಲವೂ ನಿಷ್ಕರ್ಷಲ್ಪಟ್ಟಿದ್ದವು

ಕಲಕತ್ತೆಯಲ್ಲಿ ಹರತಾಳ

(ಶಂತಿಯ ವಾರ್ತೆ)

ಮಹಮ್ಮದ ಅಲ್ಲಿಯವರ ಮರಣದ ದುಃಖದಾಯಕ ವಾರ್ತೆಯನ್ನು ಕೇಳಿ ಕಲಕತ್ತೆಯಲ್ಲಿಯೂ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಮಹಮ್ಮದ ಅಲ್ಲಿಯವರ ಸಂಕ್ಷಿಪ್ತ ಜೀವನ ಚರಿತ್ರೆ:

ಮಹಮ್ಮದ ಅಲ್ಲಿಯವರು ೧೮೭೫ ರಲ್ಲಿ ಜನ್ಮವಿತ್ತರು. ಅವರು ಚಿಕ್ಕವರಿರುವಾಗಲೆ ಅವರ ತಂದೆಯವರು ತೀರಿಕೊಂಡರು. ತಾಯಿಯವರು ಅಗರ್ಭ ಶ್ರೀಮಂತರಾಗಿದ್ದರು. ಆದ್ದರಿಂದ ಅವರಿಬ್ಬರನ್ನು ಪೋಷಿಸುವ ಎಲ್ಲ ಭಾರವು ಅವರ ತಾಯಿಯವರಿಗೆ ಬಿದ್ದಿತ್ತು. ಅವರು ಮಕ್ಕಳನ್ನು ಅಲ್ಲೀಗಡಕ್ಕೆ ಕಳುಹಿಸಿ ಅವರ ವಿದ್ಯಾಭ್ಯಾಸ ಮಾಡಿಸಿದರು.

ಮಹಮ್ಮದ ಅಲ್ಲಿಯವರು ಅಲ್ಲೀಗಡದಲ್ಲಿ ತಮ್ಮ ಶಿಕ್ಷಣವನ್ನು ಮುಗಿಸಿಕೊಂಡು, ೧೮೯೫ ರಲ್ಲಿ ಇಂಗ್ಲಂಡಕ್ಕೆ ತೆರಳಿ, ಆಕ್ಸಫರ್ಡ ವಿಶ್ವವಿದ್ಯಾನಿಲಯದ ಲಿಂಕನ್ ಕಾಲೇಜಿನಲ್ಲಿ ೪ ವರ್ಷಗಳ ಅಭ್ಯಾಸ ಮಾಡಿದರು. ಅವರು ಸಾಹಿತ್ಯ ಮತ್ತು ಇತರ ವಿಷಯಗಳಲ್ಲಿ ಮನಸ್ಸು ಹಾಕಿದಂತೆ ಇಂಡಿಯನ್ ಸಿವಿಲ್ ಸರ್ವಿಸ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದು ಅವರಿಗೆ ಕಷ್ಟವಾಗಲಿಲ್ಲ.

ಅವರು ೧೯೦೪ ರಲ್ಲಿ ಇಂಗ್ಲಂಡದಿಂದ ತಿರುಗಿ ಹಿಂದುಸ್ಥಾನಕ್ಕೆ ಬಂದ ರಾಮಪುರ ಸಂಸ್ಥಾನದಲ್ಲಿ ಉದ್ಯೋಗ ವಹಿಸಿ, ಕೆಲವು ವರ್ಷಗಳವರೆಗೆ ಅಲ್ಲಿ ಬಡೋದಾ ಸಿವಿಲ್ ಸರ್ವಿಸದಲ್ಲಿ ಸೇರಿದರು ಕೆಲವು ವರ್ಷಗಳ ನಂತರದಲ್ಲಿ ತಮ್ಮ ಉದ್ಯೋಗಕ್ಕೆ ಶರಣು ಹೊಡೆದು, "ಕಾಮ್ರೇಡ್" ಪತ್ರಿಕೆಯನ್ನು ಹೊರಡಿಸುವ ಉದ್ದೇಶದಿಂದ ಕಲಕತ್ತೆಗೆ ತೆರಳಿದರು. ೧೯೧೧ ರಲ್ಲಿ ಕೆಲವು ಜನರೊಂದಿಗೆ ಕೂಡಿಕೊಂಡು ಮುಸ್ಲಿಮ್ ಲೀಗ ಸಂಸ್ಥೆಯನ್ನು ಸ್ಥಾಪಿಸಿದರು. ಜನಸಾಮಾನ್ಯರಲ್ಲಿ ಜಾಗೃತಿಯನ್ನುಂಟು ಮಾಡಬೇಕಾದರೆ ಒಂದು ಉರ್ದೂ ಪತ್ರಿಕೆಯು ಅವಶ್ಯವಾಗಿದೆಯೆಂಬುದನ್ನು ತಿಳಿದುಕೊಂಡು "ಹಮದರ್ದ" ಪತ್ರಿಕೆಯನ್ನು ಹೊರಡಿಸಿದರು. ಬಾಲ್ಕನ್ ಯುದ್ಧದ ಸಮಯದಲ್ಲಿ ಅವರು ಡಾ. ಅನಸಾರಿಯವರೊಂದಿಗೆ ಕೂಡಿಕೊಂಡು ರೆಡ್ ಕ್ರಿಸೆಂಟ್ ಮಿಶನ್ ಸ್ಥಾಪನೆಯನ್ನು ಸ್ಥಾಪಿಸಿ ಬಹಳೇ ಸಹಾಯ ಮಾಡಿದರು. ಈ ಮೂಲಕವಾಗಿ ೧೯೧೩ ರಲ್ಲಿ ಅವರಿಗೆ ಹದ್ದುಬಾರು ಆಯಿತು.

ಅರಸರ ಜಾಹೀರವಾಮೆಯನ್ನು ಅನುಸರಿಸಿ ೧೯೧೯ ನೆಯ ಡಿಸೆಂಬರ ತಿಂಗಳಲ್ಲಿ ಅವರು ಬಾಗಡೆ ಹೊಂದಿ ಅಮೃತಸರ ಕಾಂಗ್ರೆಸ್ಸಿಗೆ ಬಂದರು. ಅಲ್ಲೇ ಬಂಧುಗಳು ಕಾಂಗ್ರೆಸ್ಸಿಗೆ ಬಂದು ಕೂಡಿಕೊಂಡಿದ್ದನ್ನು ಕಂಡು ಮುಸಲ್ಮಾನರು ರಾಷ್ಟ್ರೀಯ ಪಕ್ಷದಲ್ಲಿ ಬಂದು ಸೇರಹತ್ತಿದರು. ಆದ್ದರಿಂದ ರಾಷ್ಟ್ರಪಕ್ಷಕ್ಕೆ ಆಗ ಒಳ್ಳೇ ಬಲ ಬಂತು. ೧೯೨೦ ರಲ್ಲಿ ಅವರು ಅಖಿಲ ಭಾರತ ಖಿಲಾಫತ್ ಶಿಷ್ಟ ಮಂಡಳವನ್ನು ಇಂಗ್ಲಂಡಕ್ಕೆ ತಗೆದುಕೊಂಡು ಹೋಗಿ ಇಂಗ್ಲಂಡ ಫ್ರಾನ್ಸ, ಮತ್ತು ಇಟಲಿ ಈ ದೇಶಗಳಲ್ಲಿ ಅ ಬಗ್ಗೆ ಚಳವಳಿ ಸಾಗಿಸಿದರು. ಅಲ್ಲಿ ಅವರ ಕಾರ್ಯಕ್ಕೆ ಯಶ ದೊರೆಯಲಿಲ್ಲ. ಅವರು ಮರಳಿ ಹಿಂದುಸ್ಥಾನಕ್ಕೆ ಬಂದು ಕಾಂಗ್ರೆಸ್ಸಿನಲ್ಲಿ ಸೇರಿಕೊಂಡು ಅಸಹಕಾರ ಚಳವಳಿಯೊಂದಿಗೆ ಖಿಲಾಫತ್ ಚಳವಳಿಯನ್ನು ತೋರಿ

ತಿಂದ ಸಾಗಿಸಿದರು. ಅಸಹಕಾರಯುಗದಲ್ಲಿ ರಾಜದ್ರೋಹಕ್ಕಾಗಿ ಅವರಿಗೆ ಕೆರಾಚಿಯಲ್ಲಿ ಎರಡು ವರ್ಷ ಶಿಕ್ಷೆ ವಿಧಿಸಲ್ಪಟ್ಟಿತು. ೧೯೩೩ ರಲ್ಲಿ ಅವರು ಜೈಲಿನಿಂದ ಬಿಡುಗಡೆ ಹೊಂದಿ ಬಂದರು. ಆಗ ಕಾಂಗ್ರೆಸ್ ಪಕ್ಷದಲ್ಲಿ —ಸಹಕಾರಿಗಳ ಪಕ್ಷ ಹಾಗು ಸ್ವರಾಜ್ಯವಾದಿಗಳ ಪಕ್ಷ ಹೀಗೆ ಎರಡು ಬಣಗಳಾಗಿದ್ದವು. ೧೯೩೪ ರಲ್ಲಿ ಕೋಲೋವಾಡಿನಲ್ಲಿ ಕೂಡಿದ ರಾಷ್ಟ್ರಪತಿಯ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿ ಕಾಂಗ್ರೆಸ್ ಕಾರ್ಯಕ್ರಮವನ್ನು ಮುಂದಕ್ಕೆ ಸಾಗಿಸಿದರು. ೧೯೩೫ ರಲ್ಲಿ ದಿಲ್ಲಿಯಲ್ಲಿ ಸೇರಿದ ಸರ್ವ ಪಂಗಡಗಳ ಏಕತ್ವಕ್ಕೆ ಬರಲು ಅಧ್ಯಕ್ಷರಾದರು. ಆಲ್ಲಿ ಮಹಾತ್ಮಾಗಾಂಧಿ ಹಾಗು ಅವರಲ್ಲಿ ಮತಭೇದ ಉಂಟಾಯಿತು. ಆ ನಿಮಿತ್ತ ಅವರು ಜಾತೀಯಾಕ್ಷೇಪದ ಕಡೆಗೆ ಕಮ್ಮಿ ಲಕ್ಷವನ್ನು ಹೊರಳಿಸಿ ಹಳ್ಳಿಗಳ ಸಂಬಂಧವಾಗಿ ರಾಷ್ಟ್ರೀಯ ಮುಖಂಡರೊಡನೆ ವಿರೋಧ ಭಾವವನ್ನು ತಳೆದರು. ೧೯೩೬ ರಲ್ಲಿ ಬಂಡಿಗಾಲಿಯ ಪರಿಷತ್ತಿನ ಪ್ರತಿನಿಧಿಗಳಾಗಿ ಆಯ್ಕೆಯಾಗಿ ಅವರು ಲಂಡನಕ್ಕೆ ಹೋದರು. ಅಲ್ಲಿ ಪರಿಷತ್ತಿನಲ್ಲಿ ಭಾಷಣ ಮಾಡುವಾಗ ಅವರು "ಸ್ವರಾಜ್ಯ ದೊರಕಿಸಿಕೊಂಡೇ ಹಿಂದುಸ್ಥಾನಕ್ಕೆ ಮರಳಿ ಹೋಗುವೆನು. ಇಲ್ಲವಿದ್ದರೆ ಇಲ್ಲಿಯೇ ಪ್ರಾಣ ಕಳೆವೆನು ಎಂಬುದಾಗಿ ನುಡಿದಿದ್ದರು. ಆಲ್ಲಿ ಅವರು ಉಬ್ಬಸದ ಮೂಲಕ ವಾಗಿ ೧೦ ದಿನಗಳ ವರೆಗೆ ಹಾಸಿಗೆ ಹಿಡಿದು ೧೯೩೭ ಕಾರ್ಯಾವಿನ ದಿವಸ ಮರಣ ಹೊಂದಿದರು.

ಲಂಡನದಲ್ಲಿ ಮರಣ ಹೊಂದಿದ ಶ್ರೀ ಲಾಲಾ ಪ ಹರ್ಮದ ಅಲ್ಲಿಯವರ ದೇಹವನ್ನು ಹಿಂದುಸ್ಥಾನಕ್ಕೆ ತರುವದಕ್ಕಾಗಿ ಶಗಲ ವ ಎಲ್ಲ ಖರ್ಚುವೆಚ್ಚನ್ನು ಸರಕಾರದವರು ಕೊಡುವವರಿದ್ದಾರಾಗಿ ತಿಳಿದು ಬರುತ್ತದೆ

ಹಿಂದೂ ಮುಸಲ್ಮಾನರಲ್ಲಿಯ ಮತಭೇದ

ಹಿಂದೂ ಮುಸಲ್ಮಾನ ರಲ್ಲಿಯ ಮತಭೇದವನ್ನು ದೂರ ಮಾಡಿ, ಹಿಂದುಸ್ಥಾನಕ್ಕೆ ಸ್ವತಂತ್ರ ಸರಕಾರವನ್ನು ಕೊಡಲು ಬ್ರಿಟಿಷರನ್ನು ನಿರಾಕರಿಸಿದ್ದಲ್ಲಿ, ಬಂಡೀಗಾಲಿಯು ಪರಿಷತ್ತು ಅಯಶಸ್ವಿಯಾಗದೆ ಹೋಗಲಿಕ್ಕಿಲ್ಲವೆಂದಾಗಿ, "ನಮ್ಮ ಸ್ಟೇಟ್ಸಮನ್" ಪತ್ರಿಕೆಯು ಪರಿಷತ್ತಿನ ಪಕ್ಷಪಾತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಿದೆ

ಲ್ಯಾಂಕೆಶಾಯರದಲ್ಲಿ

ಕೂಲಿಕಾರರ ಸಂಪ್ರ.

ಲ್ಯಾಂಕೆಶಾಯರದಲ್ಲಿ ಅಲ್ಲಿಯ ನಿರುದ್ಯೋಗಿಗಳಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರು ತಮ್ಮ ಕಷ್ಟವನ್ನು ಹೊರಪಡಿಸಿದ್ದಲ್ಲಿ ಮುಷ್ಕರ ಮಾಡುವೆವು ಎಂದು ಹೇಳಿದ್ದಾರೆ.

ಹಿಂಡಲಗಿ ಜೇಲಿನಲ್ಲಿ ಮಹಾಲೆಯವರ ಕರಿಣಸ್ಥಿತಿ

(ತಂತೆಯ ವಾರ್ತೆ. ಬೆಳಗಾವ ತಾ| ೮)

ಸ್ವಲ್ಪ ದಿನಗಳ ಹಿಂದೆ ಕಾರವಾರ ಜೇಲಿನಿಂದ ಹಿಂಡಲಗಿ ಜೇಲಿಗೆ ತರಲ್ಪಟ್ಟಿರುವ ರಾಜಕೀಯ ಕೈದಿಗಳಲ್ಲಿ ಅಂಕೋಲೆಯ ಶ್ರೀ ಅನಂತ ಮಹಾಲೆಯವರು ತಾ|೦ ನೆಯ ದಿನಾಂಕದಿಂದ ಅನ್ನತ್ಯಾಗ ವೃತ ಕೈಕೊಂಡಿರುವರಾಗಿ ತಿಳಿದು ಬಂತ್ತಿದೆ. ಜೇಲಿನ ಅಧಿಕಾರಿಗಳು ಒಂದು ದಿವಸ ವಿನಾಕಾರಣವಾಗಿ ಅವರ ಪ್ರತಿಪಕ್ಷದ ಖೈದಿಗಳಿಗೆ ಅಡ್ಡಿಮಾಡಿ, ಅವರಿ ಜೊಂದಿಗೆ ಕೂಟ್ಟುಗಳಿಂದು, ತಿಮ್ಮಪ್ಪರ್ಧನೆಯ ನ್ಯಾಯವಾದ ಸಂಗತಿಯನ್ನು ಪ್ರಸ್ತಾಪಿಸುವ ದಕ್ಕೋಸ್ಕರ ಅವರು ಅಂದಿನಿಂದಲೇ ಅನ್ನತ್ಯಾಗ ಪ್ರಾರಂಭಿಸಿದರು. ಸ್ವಲ್ಪದಿನಗಳಹಿಂದೆ ಹಿಂಡಲಗಿ ಜೆಲಿಗೆ ಭೇಟ್ಟಿಕೊಟ್ಟ ಸೆರೆಮನೆಯ ಇನ ಸ್ಪೆಕ್ಟರ ಜನರಲ್ಲರವರಾದರೂ ಈ ಅನ್ಯಾಯವನ್ನು ಹೋಗಲಾಡಿಸುವವರ ಕಡೆಗೆ ಲಕ್ಷ್ಯ ಕೊಡಲಿಲ್ಲ. ಈ ಬಗ್ಗೆ ಮಿತ್ರರನ್ನು ವಿಚಾರ ಮಾಡಲು ಅಪ್ಪಣೆಕೊಡಿಸಿ ಎಂದು ಶ್ರೀ ಮಹಾಲೆಯವರು ಅಧಿಕಾರಿಗಳಿಗೆ ಬೇಡಿಕೊಂಡರೂ ಸಹ ಅಧಿಕಾರಿಗಳು ವಿಶ್ರಾಂತಿಯನ್ನು ವಿಚಾರಿಸಲು ಅವರಿಗೆ ಅಪ್ಪಣೆ ಕೊಡಲಿಲ್ಲ. ಶ್ರೀ ಮಹಾಲೆಯವರ ದೇಹಸ್ಥಿತಿಯು ಚಿಂತಾಜನಕವಾಗಿದೆಯಾಗಿ ತಿಳಿದು ಬರುತ್ತದೆ.

ಬೆಳಗಾವಿಯ ಮ್ಯಾಜಿಸ್ಟ್ರೇಟರು

ವಕೀಲರ ವಿನಂತಿಯನ್ನು ನಿರಾಕರಿಸಿದರು

ಬೆಳಗಾವಿಯ ಹಿರಿಯ ವಕೀಲರು ಶ್ರೀಯುತ ಡಿ. ಎಸ್. ಕೌಜಲಗಿಯವರ ಮುಖಂಡತ್ವದಲ್ಲಿ ಸಿವಿಲ್ ಜಡ್ಜ್ ಮ್ಯಾಜಿಸ್ಟ್ರೇಟರಾದ ಮಿ. ಪೊಂಟೆರವರನ್ನು ಕಂಡು ಕೊಂಡು, ಪ್ರಧಾನಕೋರ್ಟಿನ ವಿಷಯವಾಗಿ ಹೊರಡಿಸಿದ ಕಟ್ಟಪ್ಪಣೆಯನ್ನು ತೆಗೆದುಕೊಳ್ಳಲು ಅವರಿಗೆ ವಿನಂತಿ ಮಾಡಿಕೊಂಡರು. ವೇಲಿನ ಕೋರ್ಟಿನಿಂದ ಅದು ತೆಗೆದು ಬಿಗಿಯಲ್ಪಡದ ಹೊರತು ತಾವು ಅದನ್ನು ತೆಗೆದುಕೊಳ್ಳುವದಿಲ್ಲವಾಗಿ ಮ್ಯಾಜಿಸ್ಟ್ರೇಟರವರಲ್ಲಿ ತಿಳಿಸಿದರು. ಆದರೆ ಅವರಿಲ್ಲಾ ವಿನಂತಿಯನ್ನು ನಿರಾಕರಿಸಿದರು. ಈ ಅಪ್ಪಣೆಯನ್ನು ತೆಗೆದು ಕೊಳ್ಳಲು ಒಟ್ಟಿಗೆ ೧೫೦ ಜನರು ಹೋದಾಗ ತನ್ನ ಕೊಟ್ಟುಕಳಿಸಿದ್ದಾರೆ.

ಶ್ರೀ ಭಿಸೆಯವರನ್ನು ಸೆರೆ ಹಿಡಿದರು.

ಧಾರವಾಡದಲ್ಲಿಯ ಮರಾಠಾ ಸಮಾಜದ ಮುಂದಾಳುಗಳೂ ಹಾಗು ಅಲ್ಲಿಯ ಮ್ಯುನಸಿಪಾಲಿಟಿಯ ಸಭಾಸದರೂ ಆಗಿರುವ ಶ್ರೀ ನರಸಿಂಗರಾವ ಭಿಸೆಯವರು ಬಂಕಾಪುರದಲ್ಲಿ ರಾಜದ್ರೋಹಾತ್ಮಕವಾದ ಭಾಷಣವನ್ನು ಮಾಡಿದ ಸಂಬಂಧವಾಗಿ ತಾ|೫ನೆಯ ದಿವಸ ಧಾರವಾಡದಲ್ಲಿ ಸೆರೆಹಿಡಿಯಲ್ಪಟ್ಟು ಬಂಕಾಪುರಕ್ಕೆ ಕರೆದೊಯ್ಯಲ್ಪಟ್ಟರು

ಗದಗದಲ್ಲಿ

ಗಾಂಧಿ ದಿನ

(ಸ್ವಂತ ಸುದ್ದಿಗಾರನಿಂದ)

ಇಲ್ಲಿ ತಾ|೫ ನೆಯ ದಿವಸ ಮಹಾತ್ಮರ ಬಂಧನ ದಿನವನ್ನು ಆಚರಿಸುವದರಲ್ಲಿ ಬಂತಿತು. ಸಂಜೆಯ ೫ ಗಂಟೆಗೆ ಮೆಳವಣಿಗೆಯು ಹೊರಡಿಸಲ್ಪಟ್ಟಿತ್ತು. ಮೆರವಣಿಗೆಯು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೭ ಗಂಟೆಗೆ ಗಾಂಧಿ ಚೌಕಿಗೆ ತಲುಪಿತು. ಅಲ್ಲಿ ಸಾರ್ವಜನಿಕ ಸಭೆಯಾಗಿ, ಶ್ರೀ ಕೃಷ್ಣಾಚಾರ್ಯ ಪೂಜಾರಯವರ ಒಳ್ಳೇ ಸ್ಫೂರ್ತಿದಾಯಕ ಭಾಷಣವಾಯಿತು.

ಇಷ್ಟರಲ್ಲಿ ಬೇರೆ ಬೇರೆ ವರ್ತಕರು ಅಂದರೆ ನೂಲು ಮತ್ತು ರೇಶಿಮೆಯವರು, ಜವಳಿ ವರ್ತಕರು, ಸಿಗರೇಟಿನವರು ಈ ಪ್ರಕಾರ ಯಾವ ಕ್ಷೇತ್ರವೂ ಇನ್ನು ಮುಂದೆ ಪರದೇಶಿ ಸರಕನ್ನು ಮಾರಾಟಮಾಡುವದಿಲ್ಲವೆಂದು ಪ್ರತಿಜ್ಞಾಪತ್ರದ ಮೇಲೆ ಬರೆದು ಕೊಟ್ಟಿದ್ದಾರೆ. ಇವರೆಲ್ಲರೂ ಪ್ರಜ್ಞೆಯುಂತೆ ನಡೆದುಕೊಳ್ಳುವರೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಕೆಲವು ಸ್ವಯಂಸೇವಕರು ನಿಯಮಿಸಲ್ಪಟ್ಟಿದ್ದು, ಅವರಾದರೂ ತನ್ನ ಕಾರ್ಯವನ್ನು ಒಳ್ಳೇದಪ್ಪ ತೆಯಿಂದ ಸಾಗಿಸಿದ್ದಾರೆ.

ಇಲ್ಲಿಯ ಮ್ಯಾಜಿಸ್ಟ್ರೇಟರು, ಶ್ರೀ ಶಾಹ ನೀರ ವಕೀಲರಿಗೆ ೪ ತಿಂಗಳ ತನಕ ಶಿಕ್ಷೆ ಹಾಗು ೨೦೦ ರೂ. ದಂಡ ನಿಧಿಸಿ ಅವರನ್ನು "ಕ" ವರ್ಗದಲ್ಲಿ ಇರಿಸಲು ಬರೆಸುಕೊಂಡಿದ್ದರ ವಿರೋಧಾರ್ಥವಾಗಿ, ಗದಗ ದೆಶಿಗೇರಿಯ ಸಾವಿರಾರು ನಿವಾಸಿಗಳು ಶ್ರೀ ಮ್ಯಾಜಿಸ್ಟ್ರೇಟರ ಕಡೆಗೆ ಹೊಂಡ ಅರ್ಜಿ ಕಳಿಸಿ ಅವರನ್ನು "ಬಿ" ವರ್ಗದಲ್ಲಿ ಇರಿಸಲು ಅಪ್ಪಣೆ ಕೊಡುವಂತೆ ಅವರಿಗೆ ಕೇಳಿಕೊಂಡಿದ್ದಾರೆ.

ಮಹಾತ್ಮರ ತೂಕವು ಹೆಚ್ಚಾಯಿತು

ತಾವು ಈಗ ಪೃಥ್ವಿಯಿಂದ ನೆಟ್ಟಗಿದು ತಮ್ಮ ತೂಕವು ೧೫ ಪೌಂಡು ಹೆಚ್ಚಾಗಿರುವದೆಂದೂ, ಪ್ರತಿ ದಿನದಲ್ಲಿ ೮೦ ನಿಮಿಷಗಳಿಂದು ಎರಡು ತಾಸುಗಳ ವರೆಗೆ ತಿರುಗಲಿಯ ಮೇಲೆ ನೂಲು ತೆಗೆಯುತ್ತಿದ್ದರೂ ಕವಿಗೆ ಹೆಚ್ಚಾಗಿ ಆಯಾಸವಾಗದಿರುವದೂ ಮಹಾತ್ಮರ ಸಂಬಂಧದವರು ಶ್ರೀಮತಿ ಹಿಚಿಮೋಬೇಸರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಮಹಾತ್ಮರನ್ನು ಬಿಡುಗಡೆ ಮಾಡಿರಿ

ತಪ್ಪು ಕಲ್ಪನೆಯಿಂದ ತಾವೇ ಕಾಯಿದೆಗೆ ಕೈಯಿ ಹಾಕಿ ಜನರ ಸಹಾಯಕ್ಕಾಗಿ ಬಂದು ಬಂದು ಹಿಂಗಿ ಈಗಾಗಲೆ ಅವರು ಜೈಲಿನಲ್ಲಿರುವದನ್ನು ಕೊಡಬೇಕೆಂದು ಬಾಯಿ ಪಾಟಿ ಕ್ಷರ ಛಲಂಬು ಬ್ರಿಟಿಷರಿಗೆ ಸ್ಪಷ್ಟವಾಗಿ ಕೊತ್ತಾಗಿದೆ ಬಂಡಿಗಾಲಿಯ ಪರಿಷತ್ತಿನಲ್ಲಿ ಇವಕ್ಕೆ ಮಾನ್ಯತೆ ದೊರೆತಲ್ಲಿ, ಅವರು ಬ್ರಿಟಿಶರಿಗೆ ಸಹಕಾರಿಗಳಾಗಿ ನಿಂತುಕೊಂಡ, ಜೊಸರಾಜ್ಯದಾಡಳಿತೆಯು ಸುವ್ಯವಸ್ಥಿತವಾಗಿ ಸಾಗುವಂತೆ ಮಾಡಲು ಅವರು ಕಾರಣಜನರ ವನವೊಲಿಸುವರು. ಹೀಗಾಗದಿದ್ದರೆ ಮಾತ್ರ ಅವರು ಬ್ರಿಟಿಶರಿಗೆ ಪ್ರಬಲ ವಿರೋಧಿಗಳಾಗಿ ನಿಲ್ಲುವರು. ಮಧ್ಯವರ್ತಿ ಸರಕಾರವು ಅಧಿಕಾರಿಗಳ ವಿಷಯದಲ್ಲಿ ನಿರಪೇಕ್ಷಿತನಲ್ಲಿ ನಿರ್ಣಯವಾದ ಕೂಡಲೆ, ಮಹಾತ್ಮರನ್ನು ಬಿಡುಗಡೆ ಮಾಡಿ ವೈಸ್‌ರಾಯರೊಡನೆ ಮಾತುಕತೆಯಾಡಲು ಅವರನ್ನು ಆಮಂತ್ರಿಸಿದಲ್ಲಿ, ಕೂಡಲೆ ಸಂಪೂರ್ಣವಾದ ಶಾಂತತೆಯು ನೆಲೆಗೊಳ್ಳುವದು. ಎಂಬುದಾಗಿ ವಿ- ಹೊರೇಸ ಅಲೆಕ್ಸಾಂಡರರವರು "ಸ್ಪೆಕ್ಟೇಟರ" ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ.

ದಿಲ್ಲಿಯಲ್ಲಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ದಿಲ್ಲಿಯ ಪೋಲೀಸ ಅಧಿಕಾರಿಗಳು ತಾ ೩೦ ರಂದು ಅಲ್ಲಿಯ ಕಾಂಗ್ರೆಸ್ ಕಚೇರಿಗೆ ಮುತ್ತಿಗೆಯನ್ನು ಹಾಕಿ ಒಂದು ತಾಸಿನವರೆಗೆ ಅದನ್ನು ಸ್ವಾಧೀನ ಮಾಡಿದರು. ಆಕ್ಷೇಪಾರ್ಹವಾದ ಕಾಗದ ಪತ್ರಗಳೇನೂ ದೊರೆಯಲಿಲ್ಲ. ನಂತರ ಅವರು ೩೪ ಜನ ಸ್ವಯಂಸೇವಕರನ್ನು ಸೆರೆ ಹಿಡಿದುಕೊಂಡು ಹೋದರು.

ವಲ್ಲಭಭಾಯಿಯವರಿಗೆ ೬ ತಿಂಗಳ ಸಾದಾ ಶಿಕ್ಷೆ

(ತಂತಿಯ ವಾರ್ತೆ)

ಮುಂಬಯಿಯಲ್ಲಿ ಭಾಷಣ ಮಾಡಿದ ಸಂಬಂಧವಾಗಿ ಕ್ರಿ ಲಾ ಅಮೆಂಡಮೆಂಟ ಕಾಯಿದೆಯ ೧೭ ನೆ ೬ (೧) (ಅ) ಈ ಕಲಮು ಗಳನ್ವಯ ಅಪರಮ್ಯಾಜಾಬಾದದಲ್ಲಿ ಸೆರೆಹಿಡಿಯು ಲ್ಪಟ್ಟ ಕಾರ್ಪೊರೇಷನ್ ಪ್ರಮುಖಾಧಿಕಾರಿಗಳಾದ ಖಾದಂ ವಲ್ಲಭಭಾಯಿ ಪಟೇಲರಿಗೆ ೬ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಲ್ಪಟ್ಟಿದೆ

ಮುಂಬಯಿಯಲ್ಲಿ

ಲಕ್ಷ್ಮೀದಾಸರ

ಹೃದಯಾಘಾತದಿಂದ ಮರಣ

ಮುಂಬಯಿ ಸ್ಟಾಕ್ ಎಕ್ಸ್‌ಚೇಂಜಿನ ದಿವಸ ಸಂಭವಿಸಿದ ಗೋಳೀಬಾರಿನ ಸಮಯದಲ್ಲಿ ಗುಂಡಿನೇಟಿಗೆ ಬಲಿತ್ತಾಗಿ ಗಾಯಗೊಂಡಿದ್ದ ಶ್ರೀ. ಲಕ್ಷ್ಮೀದಾಸ ಎಂಬ ಪಂಚಾಬಿ ಕೈಗಾರಿಕೆ ತಾ. ೧೯ನೆಯ ದಿವಸ ಆಸ್ಪತ್ರೆಯಲ್ಲಿ ಕಾಲ ಮಾಡಿದರು. ಈ ಮೂಲಕವಾಗಿ ಮುಂಬಯಿಯಲ್ಲಿ ಒಂದು ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು

ಕಾಂಗ್ರೆಸ್ ಸಂಸ್ಥೆಗಳು

ಕಾಯಿದೆಗೆ ವಿರುದ್ಧವಾದವು

(ತಂತಿಯ ವಾರ್ತೆ)

ಸಿಂಧಪ್ರಾಂತದಲ್ಲಿಯು ಕಾಂಗ್ರೆಸ್ ಸಂಸ್ಥೆಗಳು ಕಾಯಿದೆಗೆ ವಿರುದ್ಧವಾದ ಸಂಘಗಳಾಗಿವೆಯೆಂದು ಮುಂಬಯಿ ಸರಕಾರದವರಿಂದ ಸಾರುವದಲ್ಲಿ ಬಂದಿದೆ.

ವರ್ಣಾಶ್ರಮ ಪರಿಷತ್ತಿನ ಗೊತ್ತುಗಳು

ನಥದ್ವಾರದಲ್ಲಿ ಶ್ರೀ ಟಿಣಾಯತ್ ಮಹಾರಾಜರ ಅಧ್ಯಕ್ಷತೆಯಲ್ಲಿ ಜರಗಿದ ವರ್ಣಾಶ್ರಮ ಸ್ವರಾಜ್ಯ ಸಂಘದ ಪರಿಷತ್ತಿನಲ್ಲಿ ಸೊಲ್ಲಾಪುರದ ಅರೆಕೇಪಳಿಗೆ ಜೇಪದಾನ ಕೆಡದೇಕಾಗಿ ವಿದ್ಯಾರ್ಥಿ ಸಮಾಜಗಳಿಗೆ ವಿನಂತಿ ಮಾಡಿಕೊಳ್ಳುವದು, ವರ್ಣಾಶ್ರಮ ಧರ್ಮದ ಬಗ್ಗೆ ಜನರಲ್ಲಿಲ್ಲ ಜಾಗೃತಿ ಹುಟ್ಟಿಸುವದು, ಧಾರ್ಮಿಕ ಹಾಗು ಸಾಮಾಜಿಕ ವಿಷಯಗಳಲ್ಲಿ ಕಾನೂನಿನ ಸಭೆಗಳು ಕೈ ಹಾಕದಿರುವಂತೆ ಭಾರತೀಯ ಶಾಸನ ಸಭೆಯಲ್ಲಿರುವ ಯೋಗ್ಯ ಏರ್ಪಾಡು ಮಾಡುವ ಬಗ್ಗೆ ಇತ್ಯಾದಿ ಗೊತ್ತುಗಳನ್ನು ಕುರಿತು ಗೊತ್ತುಗಳು ತೀರ್ಮಾನಿಸಲ್ಪಟ್ಟವು. ಅಸ್ಪೃಶ್ಯರು ಹಿಂದುಗಳಿದ್ದಲ್ಲ ನಿಜವಿದ್ದರೂ, ಅವರು ನಾಲ್ಕು ವರ್ಣಗಳಲ್ಲಿ ಸೇರದಿರುವದರಿಂದ ಪರಿಷತ್ತಿನವರು ಅಭಿಪ್ರಾಯಪಟ್ಟರು.

ಹೆತ್ತು ಜನ ಮಕ್ಕಳಿದ್ದರೇ

ಅವರನ್ನಾದರೂ ಅರ್ಪಿಸಿತ್ತಿದ್ದೆ

ಮುಂಬಯಿ ಬಂ ಮಾಡಿದ ಭಾಷಣದ ಸರ್ವಾಧಿಕಾರಿಗಳಿಂದ ಶ್ರೀ ಪ್ರ ಚೆ ಪೇಟ ಜಿಯವರನ್ನು ಅಧಿಕಾರಿಗಳು ಸೆರೆ ಹಿಡಿದು ಕೊಂಡು ಹೋದ ಕೂಡಲೆ, ಅವರ ತಾಯಿಯ ತೆಲಗನಂತೆ ಗಂಡಿ, ಕೊಟ್ಟ ನ.

ಆ ಪೆ ಗಾಂಧಿಯವರ ಮಗನು ಹೀಗೆ ಸೆರೆಯಾಗಿ ಹೋಗುತ್ತಿರುವದು ನನಗೆ ಅಭಿಮಾನಾಸ್ಪದವಾಗಿದೆ. ಇವನು ಲಂಡನ್ನಿನ ಪೆಟ್ಟಿಗೆಗಳಿಗೂ ಒಳಗಾಗಿದ್ದನೆಂಬುದನ್ನು ಕೇಳಿ ಹಿಡಿಸಲಾರದಷ್ಟು ಜನಸಂದಣಿಯಲ್ಲಿರುವ ಅಧಿಕಾರಿಯು ಅವನ ಮೇಲೆ ಗುಂಡಿನ ವರ್ಷೆಗರೆದಿದ್ದರೆ ಇದಕ್ಕಿಂತ ಹೆಚ್ಚು ಸಂತೋಷವಾಗುತ್ತಿತ್ತು. ನನಗೆ ಅವನೆಷ್ಟೇ ಮಗ- ಹೆತ್ತು ಜನ ಮಕ್ಕಳಿದ್ದರಾದರೆ ಅವರನ್ನಾದರೂ ದೇಶಸೇವೆಗೆ ಅರ್ಪಿಸಿ ಬಿಡುತ್ತಿದ್ದೆ. ಈ ಯೋಗವು ದೊರೆಯದ್ದಕ್ಕಾಗಿ ನಾನೀಗ ವಿಷಾದ ಪಡಬೇಕಾಗಿದೆ!

ಲಖನೌದಲ್ಲಿ ಮುಖಂಡರಿಗೆ ಕೈದು

ಲಖನೌ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಖ. ಬ ಗುಪ್ತರು ಅಲ್ಲಿಯ ಸ್ವಯಂಸೇವಕ ಶಕ್ತಾನರಾದ ಜಗದಂಬಾ ಪ್ರಸಾದರ ಪರಿಂದಿಗೆ ತಾ॥ ೧೯ನೆಯ ದಿವಸ ಸೆರೆ ಹಿಡಿಯಲ್ಪಟ್ಟಿದ್ದಾರೆ. ಪಿಕೆಟಿಂಗದ ಮೂಲಕವಾಗಿ ೧೫ ಜನ ಸ್ವಯಂಸೇವಕರು ಬಂಧನಕ್ಕೊಳಗಾಗಿದ್ದಾರೆ. ಕೃಷ್ಣಕಾಮಾರ ಶ್ರೀವಸ್ತವರು ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

ಬಿಹಾರದಲ್ಲಿ

ಒತ್ತಾಯದ ಕರ

(ತಂತಿಯ ವಾರ್ತೆ)

ಬಿಹಾರ ಸರಕಾರದವರು ತಮ್ಮ ಪ್ರಾಂತದಲ್ಲಿ ಕಷ್ಟಗೆ ಪೋಲೀಸರನ್ನು ಟ್ಟು, ಅವರ ವೆಚ್ಚವನ್ನು ಅಲ್ಲಿಯ ನಿವಾಸಿಗಳ ಮೇಲೆ ಹೇರಿದ್ದಾರೆ. ಮಸಲತ್ತಾನನ್ನು ಮಾತ್ರ ಈ ತರದಿಂದ ಮುಕ್ತ ಮಾಡಿದ್ದಾರೆ. ಅವರು ಜಳವಳಯಲ್ಲಿ ಭಾಗ ತೆಗೆದುಕೊಳ್ಳದಿರುವದೇ ಇದಕ್ಕೆ ಕಾರಣವಾಗಿದೆ.

ಲಾಹೋರ ಅತ್ಯಾಚಾರದ ವಿಚಾರಣೆ

ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದ ಕಮಿಟಿಯ ದಳ್ಳಿ ಗವರ್ನರರ ಮೇಲೆ ಗುಂಡು ಹಾರಿಸಿದ ಸಂಬಂಧವಾಗಿ ಸೆರೆಹಿಡಿಯಲ್ಪಟ್ಟ ಮೀರ ಹರಿಕಿಶನ ಇವರ ಖಟ್ಲೆಯು ವಿಚಾರಣೆಗೆ ಬಂತು॥ ೩ನೆಯ ದಿವಸ ಲಾಹೋರದಲ್ಲಿ ಮಿ ಲ್ಯಾಯಿ ಸರದರ ಮುಂದೆ ಪ್ರಾರಂಭವಾಯಿತು. ಇವರ ಮೇಲೆ ಇ ಪಿ ಕೋಡಿನ ೩೦೭ ಹಾಗು ೩೦೨ ಈ ಕಲಮುಗಳಲ್ಲಿಯು ಖಟ್ಲೆಯು ಹಾಕಲ್ಪಟ್ಟಿದೆ. ಪಂಜಾಬ ವಿಶ್ವವಿದ್ಯಾಲಯದ ರಜಿಸ್ಟ್ರಾರರಾಗಿರುವ ಶ್ರೀ ಪಿ. ಎನ್. ದಸ್ತೂರ ಇವರು ತಮ್ಮ ಸಾಕ್ಷಿಯಲ್ಲಿ:—

ಕಾ॥ ೩ನೆಯ ದಿವಸ ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ಸಮಾರಂಭವು ಜರುಗಿತು. ಗವ್ಹರ್ನರರು ಆ ಸಮಾಜದ ಅಧ್ಯಕ್ಷರಾಗಿದ್ದರು. ಸಮಾರಂಭಕ್ಕೆ ಒಟ್ಟಿಗೆ ೧೫೦೦ ಜನರು ಒಂದಿದ್ದರು. ಪೋಲೀಸರು ಛತ್ರದ ಎಲ್ಲಾ ಬೀದಿಗಳಲ್ಲಿ ಕೂಡಿಸಲ್ಪಟ್ಟಿದ್ದರು. ಡಿಪ್ಟಿ ಪೋಲೀಸ ಅಧಿಕಾರಿಗಳು ಹಾಗು ಗುಪ್ತ ಪೋಲೀಸರು ವ್ಯವಸ್ಥೆಯನ್ನು ನೋಡುತ್ತಿದ್ದರು. ೧೦ ಗಂಟೆಗೆ ಸಮಾರಂಭವು ಮುಗಿಯಿತು.

ಬಳಿಕ ಎಲ್ಲ ಜನರೂ ಸಾಲಾಗಿ ವೆರವಣಿಗೆಯಿಂದ ಹೊಂಬಿದೆವು. ಚ್ಯಾನ್ಸಲರರಾದ ಗವ್ಹರ್ನರರು, ವೈಸ ಚ್ಯಾನ್ಸಲರರು ಹಾಗು ನಾನು ಒಬ್ಬರಹಿಂದೊಬ್ಬರು ಇದ್ದೆವು. ಗವ್ಹರ್ನರರ ಎಡಕಡೆ ಕ್ಯಾಂಪಬಲರು ಕೆಲ ಹಿಂದೆ ಇದ್ದರು. ಮಷ್ಯವ್ಯಾದ ಹೊಗೆ ಕಾಲಿಟ್ಟು ಕೂಡಲೆ ಒಳಗಿನಿಂದ ಭಯಂಕರ ಸದ್ದುವು ನನಗೆ ಕೇಳಬಂತು. ಗವ್ಹರ್ನರರು ನನ್ನಗಿಂತ ಒಂದು ಮೆಟ್ಟಿಲು ಹಿಂದೆ ಇದ್ದರು. ವಸ್ತ್ರಪರಿಧಾನ ಕೋಣೆಗೆ ಹೋಗಲು ನಾವು ಅತ್ತ ಹೊರಳುವಷ್ಟರಲ್ಲಿ ಮತ್ತೆ ಎರಡು ಸಲ ಸದ್ದುವು ಕೇಳಬಂತು. ನಾನು ತಿರುಗಿ ನೋಡಿದೆ. ಆರೋಪಿಯು ಪಾಂತಾಗಿ ಹೋಲ್ಯಾಯಿಸ್ತಿದ್ದದ್ದು ಕಂಡ ಬಂತು. ಆಗ ಅವನ ಬೆನ್ನಿಗೆ ಒಂದು ಪಿಸ್ತೂಲಿನಿಂದ ನಾಲ್ಕೈದು ಜನ ಪೋಲೀಸರು ಅವನನ್ನು ಹಿಡಿದುಕೊಂಡು ನಿಂತಿದ್ದರು. ಚ್ಯಾನ್ಸಲರ ಮತ್ತು ವೈಸ ಚ್ಯಾನ್ಸಲರರಿಗೆ ವಸ್ತ್ರಪರಿಧಾನ ಕೋಣೆಗೆ ಹೋಗಲು ಹೇಳಿಕೊಂಡು ಆರೋಪಿಯ ಬಳಿಗೆ ಹೋದೆ. ಅಷ್ಟ ಸ್ವಲ್ಪ ಹೊತ್ತು ಇದ್ದು ನಂತರದಲ್ಲಿ ವಸ್ತ್ರಪರಿಧಾನ ಕೋಣೆಗೆ ನಾನೂ ಹೋದೆ. ಗವ್ಹರ್ನರರಿಗೆ ಗಾಯವಾಗಿದೆಯೇ ಬುದು ಆಗ ನನಗೆ ತಿಳಿದು ಬಂದಿತು. ಕರ್ನಲ್ ಹಾರ್ಪರನೆಲ್ಸನರನ್ನು ಕರೆದುಕೊಂಡು ಬಂದೆ. ಅವರು ಗವ್ಹರ್ನರರ ಗಾಯಕಟ್ಟುವರು ಎಡಕಿಗೆ ಹಾಗು ಎಡತೋಳು ಇವುಗಳಿಗೆ ಗಾಯವಾಗಿದೆಯೆಂದು ಗವ್ಹರ್ನರರು ಹೇಳುತ್ತಿದ್ದದ್ದನ್ನು ಕೇಳಿದೆ" ಎಂಬುದಾಗಿ ಹೇಳಿದರು

ಒಳಕ ನೌಲೀಸ ಅಧಿಕಾರಿಗಳಾದ ರಾಯಬಹದ್ದೂರ ದಿವಾನಚಂದ, ರಾವಸಾಹೇಬ ಜವಾಹರಲಾಲ ಹಾಗು ಕರ್ನಲ್ ಹಾರ್ಪರನೆಲ್ಸನ, ಕರ್ನಲ್ ಬಚಾವೆಂಬಲಾದವರು ಸಾಕ್ಷಿಗಳಾಗಿದ್ದರು

ಶ್ರೀ ಹರಿಕಿಶನ ಎಂಬವನನ್ನು ಕೊಟ್ಟು ಸ್ವರಂಬಿಸಲೆ ನಾಡಿ ಬಿಲ್ಲಿಲ್ಲ. ಸಾಕ್ಷಿದಾರರನ್ನು ಪರಾಲು ಮಾಡಲಿಲ್ಲ. ಮೇರು ವಾರ ದಿವಸ ಅವರು ಪ್ರಕ್ಷ ವಾಬ್ಯಾಲವನ್ನು ಕೋರ್ಟಿಗೆ ಸಾದರ ಪಡಿಸಬೇಕಿದ್ದಾರೆ.

ಸಂಯುಕ್ತ ಪ್ರತಿದಾರ ಸಂಘಗಳಿಗೆ ಮುನಲ್ಮಾನರ ಬೆಂಬಲ

ಪ್ರಸಾಪತಿ ರಾಜ್ಯಕಾರಭಾರದಲ್ಲಿ ಭಿನ್ನ ಭಿನ್ನ ಮತದಾರ ಸಂಘಗಳೇರ್ಪಡಲು ಅವಕಾಶವಿಲ್ಲ. ಇದು ತಮ್ಮ ಜಾತೀಯಾಭ್ಯರ್ಥಿಗೆ ವಿಘಾತಕವಾಗಿದೆಯೆಂದು ಎಷ್ಟೋ ಜನ ಮುಸಲ್ಮಾನರು ಅಭಿಪ್ರಾಯ ಪಡುತ್ತಾರೆ. ಈ ಮಷ್ಟಾದ್ಯತಿಯು ಸಫಲವಾಗಲಿಕ್ಕೆ ಒಳದು ಬೇಕೆಂಬ ಬೇಕು. ಸಂಯುಕ್ತ ಮತದಾರ ಸಂಘಗಳನ್ನು ಒಳಕೊಳ್ಳದ ಯಾವ ಆಜಳಿತವೂ, ಭಂಗವಿಲ್ಲದೆ ನಡೆಸಲಿಕ್ಕೆ ಒಪ್ಪಿಕವಾಗುವದಿಲ್ಲ." ಎಂಬುದಾಗಿ ಮುಸಲ್ಮಾನರ ಪ್ರಸಿದ್ಧ ಮುಂದಾಳಿಗಳಾದ ಸರ್ ಷಫ್ಫೀ ಇಮಾಮ, ಸರ ಇಮಾಮ ಚಾಧರಿ, ಖಲೀಲುಜ್ಜಮಾನ್, ಮೊದಲಾದವರು ಸರ್ ತೇಜ ಬಹದ್ದೂರ ಸಪ್ರು ಹಾಗು ಕೆಲವು ಪ್ರತಿನಿಧಿಗಳಿಗೆ ನೆಲೀಕರೊಂದು ತಂತಿಯನ್ನು ಕೊಟ್ಟು ಕಳಿಸಿದ್ದಾರೆ.

ಸತ್ಕಾರಕ್ಕೆ

ರಾಯಬಹದ್ದೂರ ಪದವಿ ಸಿಕ್ಕಿತು.

ಸಿಂಧ ಪ್ರಾಂತದಲ್ಲಿ ಡಿಸ್ಟ್ರಿಕ್ಟ ಪಬ್ಲಿಕ್ ಪ್ರೊಸಿಕ್ಯೂಟರರಾಗಿದ್ದ ಕೊಂತು, ಸೋದ ಅಸ್ಸ್ಯ ತಿಂಗಳದಲ್ಲಿ ಮರಣಹೊಂದಿದ ಓರ್ವ ಗೃಹಸ್ಥರಿಗೆ ಹೊಸ ವರ್ಷದ ಪದವಿದಾನದಲ್ಲಿ ರಾಯಬಹದ್ದೂರ ಪದವಿಯು ಕೊಡಲ್ಪಟ್ಟಿದೆಯಾಗಿ ತಿಳಿದು ಬರುತ್ತದೆ.

ಸಾನುಭೂತಿ

ನನ್ನ ಆಸ್ತಿಯನ್ನು ಕಾಂಗ್ರೆಸ್ಸಿಗೆ ಕೊಡಿರಿ

ಕ್ಷಲ್ಪ ದಿವಸಗಳ ಹಿಂದೆ ಕಾರವಾರ ಸೆಶನು ನೆಯಿಂದ ಕೆಲವು ರಾಜಕೀಯ ಕೈದಿಗಳನ್ನು ವಿಸಾಪುರಕ್ಕೆ ಕಳಿಸಿದ್ದಲ್ಲಿ, ಅವರಲ್ಲಿ ಒಬ್ಬರಾದ ಶ್ರೀ ವೆಂಕಟಪ್ಪ ಹೆಗಡೆಯವರು ಅಲ್ಲಿ ದೇಹಾಲಸ್ಯದಿಂದ ನರಳುತ್ತಿದ್ದು, ಅವರು ನಾನು ಸಕ್ಷರಿನ ಆಸ್ತಿಯನ್ನೆಲ್ಲ ಕಾಂಗ್ರೆಸ್ಸಿಗೆ ಕೊಟ್ಟುಬಿಡಿರಿ ಎಂಬುದಾಗಿ ತಮ್ಮ ಅಣ್ಣಂದಿರಿಗೆ ಪತ್ರ ಬರೆದಿದ್ದಾರೆ.

ಅಲಹಾಬಾದದಲ್ಲಿ

೫೫ ಜನರಿಗೆ ಶಿಕ್ಷೆ.

ಪಿಕೆಟಿಂಗ, ಸಭೆ ಮೊದಲಾದವುಗಳನ್ನು ಜರುಗಿಸಿದ್ದು, ಪರನಿರಾಕರಣೆ ಚಳವಳಿಯನ್ನು ಸಾಸಿಯೂ ಕಾಯಿದೆಗೆ ವಿರುದ್ಧವಾಗಿ ನರ್ತಿಸಿದ ಸಂಬಂಧವಾಗಿ ಅಲಹಾಬಾದದಲ್ಲಿ ೫೫ ಜನರಿಗೆ ಪ್ರಕ್ಷೇಪವಾಗಿ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ದಬ್ಬಾಳಿಕೆಯನ್ನು

ಇನ್ನು ಸಾಕು ಮಾಡಿರಿ

ವರಿಷ್ಠ ಕಾಯಿದೆ ಮಂಡಳದ ಸಭಾಸದರಾದ ಶ್ರೀ ಬಿ ಆರ್. ಪುರಿಯವರು ಈ ಸಲದ ಅಧಿವೇಶನದಲ್ಲಿ ಮುಂದಿನದೆಂದು ಸೂಚನೆಯನ್ನು ಸಭೆಯು ಮುಂದೆ ಮಂಡಿಸಿರುತ್ತಾರೆ

"ಸರ್ಕಾರದವರು ಈಗ ಕೈಕೊಂಡಿರುವ ದಬ್ಬಾಳಿಕೆಯ ವೃತ್ತಿಯನ್ನು ಈ ಸಭೆಯು ನಿಷೇಧಿಸುತ್ತದೆ. ಮತ್ತು ಸರಕಾರ ಹಾಗು ಪ್ರಜೆಗಳನ್ನು ಸಂಕಟದಲ್ಲಿ ನೂಕುವಂತಹ ದಬ್ಬಾಳಿಕೆಯ ವೃತ್ತಿಯನ್ನು ಒಮ್ಮೆಲೆ ನಿಲ್ಲಿಸಿ, ಶಾಂತವಾದ ಉಪಾಯಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ಗವ್ಹರ್ನರ ಜನರ್ ಚ್ಯಾನ್ಸಲರವರಿಗೆ ಕೇಳಿಕೊಳ್ಳುತ್ತದೆ.

ಕ್ರಿ ಲಾ ಅಪಂಡವೆಲ್ ಕಾಯಿದೆಯ ೧೬ನೆಯ ಕಲಮಿನನ್ವಯ ಶಿಕ್ಷೆಗೆ ಗುರಿಯಾದ ವಿಜಾಪುರ ಜಿಲ್ಲೆಯೊಳಗಿನ ರಾವಸಕ್ತೂ ರಾಷ್ಟ್ರ ಸೇವಕರ ಖಟ್ಲೆಯ ಕಾಗದ ಪತ್ರಗಳು, ಪುನರವಲೋಕನಕ್ಕಾಗಿ ಮುಂಬಯಿ ಹೈಕೋರ್ಟಿಗೆ ಈಗಾಗಲೆ ಕಳಿಸಲ್ಪಟ್ಟಿದ್ದು, ಇನ್ನು ೧೫ ದಿನಗಳ ವೇಳೆ ಅಪೀಲ ವಿಷಯ ವಾಗಿ ಅಲ್ಲಿ ವಿಚಾರಣೆಯಾಗಬಹುದೆಂದಾಗಿ ತಿಳಿದು ಬಂದಿದೆ.

ಆಯರ್ವಿನ್ ಸಾಹೇಬರು ಗೋಳಿಟ್ಟರು

ಹಿಂದುಸ್ಥಾನದ ಈಗಿನ ವ್ಯವಹಾರಸಂತಾಯ ವಾಗಿರುವ ಲಾರ್ಡ ಆಯರ್ವಿನ ಸಾಹೇಬರು ಕೆಳಗಿನಾಕಯದ ಒಂದು ತಂತಿಯನ್ನು ಲಂಡನ್ನಿಗೆ ಕಳಿಸಿರುವರಾಗಿ ತಿಳಿದು ಬರ ಹ್ಯದೆ.

ಎಷ್ಟೇ ಆರ್ಡಿನನ್ಸುಗಳನ್ನು ಹೊಡಿಸಿ ನೋಡಿದೆ ಆದರೂ ಸತ್ಯಗ್ರಹ ಚಳವಳಿಯು ನಿಲ್ಲುವಹಾಗೆ ಪೋಲೀಸರು ಲಂಡಿಗೆ ಕಳವಳಾವಧಿ ಜನರು ತಲೆ ಒಡೆದು ನೋಡಿದರು. ಅದರಿಂದ ಕಾರ್ಯವೆಧಂವು ಆಗ್ಗಲೊಲ್ಲದಾಗಿದೆ. ತೀಕ್ಷ್ಣತರವಾದ ದಬ್ಬಾಳಿಕೆಯನ್ನು ಅವಲಂಬಿಸಿದರೂ ಜನರು ಮಣಿಯುವವರಾಗಿಲ್ಲ ಹಿಂದುಸ್ಥಾನಕ್ಕೆ ಕೊಡತಕ್ಕಂಥ ಹಕ್ಕುಗಳನ್ನು ಕೊಬ್ಬುವಿರಿ. ಇಲ್ಲವಾದರೆ ಹಿಂದುಸ್ಥಾನದ ಮುಂದೆ ದಂಡಿನ ಕಾಯಿದೆಯನ್ನು ಪ್ರಾರಂಭಿಸಬೇಕಾಗಿ ಬರುವುದು ನೋಡಿಕೊಳ್ಳಿರಿ!

ಸ.ಕಾರದವರು ನಾಚಿಕೆ ಪಡಬೇಕು.

ಮಧ್ಯವರ್ತಿ ಸರಕಾರದ ಜನಾಬದಾರಿಯು ವಿಶೇಷವಾಗಿ ಸಂಬಂಧಕ್ತ ಲಂಜ್ಯಘಟನೆಯ ಉಪಸಂಹಾರದಲ್ಲಿ ಭಾಷಣ ಮಾಡುವಾಗ, ಸರ್ ತೇಜಬಹದ್ದೂರ ಸಪ್ರೂರವರು ಸರಕಾರದವರು ಈಗ ಕೈಕೊಂಡಿರುವ ದಬ್ಬಾಳಿಕೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕೆಳಗಿನಂತೆ ವ್ಯಕ್ತಪಡಿಸಿದರ,

ಖಂಡಿತ—ಲಂಡನ ದಷ್ಟು ಜನರನ್ನು ಜೇಲಿನಲ್ಲಿ ಕೊಳೆಯಿಡವದು ಯಾವ ಸರಕಾರಕ್ಕೂ ಭೂಷಣಾಸ್ಪದವಾಗಿರುವದಿಲ್ಲ. ಅವರ ತಮ್ಮ ಪದ್ಧತಿಗಳಲ್ಲಿ ಹಪ್ಪ ಹಾದಿಯನ್ನು ಹಿಡಿದಿರಬಹುದಾಗಿದ್ದರೂ, ವಿಶ್ವಾಸವನ್ನು ಕಳೆದು ಕೊಂಡಿರುವದರಿಂದಲೇ ಅವರು ಹೀಗೆ ಕಷ್ಟನಷ್ಟಗಳನ್ನು ಸಹಿಸುತ್ತಿರುವರು. ಬೆದರಿಕೆ ಹಾಕಲು ನಾನೇನೆಂ ಹೀಗೆ ಮಾತಾಡುತ್ತಿರುವದಿಲ್ಲ ನಿಜವಾಗಿಯೂ ಹಿಂದೂ ತರುಣರು ತಮ್ಮ ವಿಚಾರಗಳನ್ನು ಸಂಕುಚಿತವಾದ ವಿಷಯಗಳ ಕಡೆಗೆ ಹೊರಳಿಸ ಹತ್ತಿದ್ದಾರೆ. ದಂಡಿನ ಕಾಯಿದೆಯಿಂದಾಗಲಿ ಇಲ್ಲವೆ ಆರ್ಡಿನನ್ಸುಗಳಿಂದಾಗಲಿ ಸರಕಾರದವರು ತಮ್ಮ ರಾಜ್ಯಕಾರಭಾರವನ್ನು ಸಾಗಿಸುತ್ತಿರುವದು ನಿಜವಾಗಿಯೂ ಲಾಂಛನಾಸ್ಪದವಾದ ವಿಷಯವಾಗಿದೆ.

ಈಗೇನೂ ಕಾಲವು ಅಷ್ಟು ಕಳೆದು ಹೋಗಿಲ್ಲ. ಕಳೆದು ಹೋದ ವಿಶ್ವಾಸವನ್ನು ಸಂಪಾದಿಸಿ ಕೊಳ್ಳಲು ಬ್ರಿಟಿಶರು ಪ್ರಯತ್ನ ಮಾಡಬೇಕು. ಈಗ ಈಜಿಗೆ ಯೋಗ್ಯವಾದ ಉಪಾಯಗಳನ್ನು ಕೈಕೊಳ್ಳದಿದ್ದಲ್ಲಿ, ಹಿಂದುಸ್ಥಾನ ಮತ್ತು ಬ್ರಿಟಿಶರ ವಿಷಯವಾಗಿ ಯಾರಿಗೂ ಸ್ವಲ್ಪಾದರೂ ಸಮಾಧಾನವೆನಿಸುವದಿಲ್ಲ. ಅವಿಶ್ವಾಸವನ್ನು ಹೋಗಲಾಡಿಸಲು ವಿಶ್ವಾಸವೇ ದಿವ್ಯವಾದ ವಿಷಧಿಯಾದೆಯೆಂದು ಬ್ರಿಟಿಶರು ಒಳ್ಳೆದಿಟ್ಟುಕೊಳ್ಳಬೇಕು.

ಬಹಿಷ್ಕಾರವೇ ರಣಗಜರ್ನೆಯಾಗಬೇಕು

ಯಾವಕ್ಕೂ ಪರದೇಶಿ ಸರಕುಗಳನ್ನು ವಿಶೇಷತಃ ಬ್ರಿಟಿಶ್ ಸರಕುಗಳನ್ನು ಬಹಿಷ್ಕರಿಸಲು ಪ್ರತಿಯೊಬ್ಬ ಭಾರತೀಯರು ಈಗ ನಿರ್ಧಾರವತಾಳಬೇಕು. ಬಹಿಷ್ಕಾರವೇ ಈ ಪರ್ವ ಪ್ರತಿಯೊಬ್ಬನ ರಣಗರ್ಜನೆಯಾಗಿರಬೇಕು. ಕೂಲಿತಾರ ಪಟ್ಟದ ಪ್ರಜೆಗಳು ಬಹಿಷ್ಕಾರಕ್ಕೇನೆ ವಿಶೇಷವಾಗಿ ಪಣತೊಡುವರ. ಟೋರಿ ಹಾಗು ಲಿಬರಲ್ ಪಕ್ಷದವರಾದರೂ ಬಹಿಷ್ಕಾರಕ್ಕೇನೆ ಹಣ್ಣಾಗುವರು. ರಾಜಕೀಯ ಬೇನೆಗಳನ್ನು ನಿವಾರಿಸಿಕೊಳ್ಳಲು ಬಹಿಷ್ಕಾರದ ಹೊರತು ಬೇರೊಂದು ದಿವ್ಯ ಔಷಧವು ಯಾವದೂ ಇಲ್ಲ ಬಹಿಷ್ಕಾರದ ಜೊತೆಗೆ ವಿಧಾಯಕ ಕಾರ್ಯಗಳಾದ ಸ್ವದೇಶಿ ಹಾಗು ಖದ್ದರದ ಪ್ರಚಾರವನ್ನಾದರೂ ಪ್ರತಿಯೊಬ್ಬರೂ ಕೈಕೊಳ್ಳಬೇಕು. ಈ ಎರಡೂ ಕಾರ್ಯಕ್ರಮಗಳನ್ನು ವಿಶದವಾಗಿ ಸಾಗಿಸಿದರೇನೆ ಯಶಸ್ಸುಗಳುವದು.

ಬ್ರಿಟಿಶ್ ಪ್ರತಿನಿಧಿಗಳಲ್ಲಿಯು ಮತಭೇದ

ಬಂಡಿಗಾಲಿಯು ಪರಿಷತ್ತಿನಲ್ಲಿ ಹಿಂದೂ ಮುಸಲ್ಮಾನರ ಪ್ರಶ್ನೆಯ ಸಂಬಂಧವಾಗಿ ಬ್ರಿಟಿಶ್ ಪ್ರತಿನಿಧಿಗಳಲ್ಲಿ ಮತಭೇದ ಉಂಟಾದ್ದನ್ನು ಟೀಕಿಸಿ ಇಲ್ಲಿಯ "ನೇಶನ್" ಪತ್ರಿಕೆಯು ಬ್ರಿಟಿಶ್ ಪ್ರತಿನಿಧಿಗಳಿಗೆ ಕೆಳಗಿನಂತೆ ಬುದ್ಧಿ ಹೇಳಿದೆ

ಹಿಂದು ಮುಸಲ್ಮಾನರ ಪ್ರಶ್ನೆಯು ಇಷ್ಟೇನೂ ಮಹತ್ವದ್ದಿದ್ದವಿಲ್ಲ ಮಧ್ಯವರ್ತಿ ಸರಕಾರದ ವಿಷಯವು ಬಹು ಮಹತ್ವದ್ದಿತ್ತು. ಕೆಲವು ವಿಷಯಗಳ ಸಂಬಂಧವಾಗಿ ಪರಿಷತ್ತಿನಲ್ಲಿ ಈಗಾಗಲೇ ನಿರ್ಣಯಗಳಾಗಿವೆ. ಬ್ರಿಟಿಶ್ ಪ್ರತಿನಿಧಿಗಳಲ್ಲಿ ಮತಭೇದವು ಉಂಟಾದ ಕಾರಣವನ್ನು ಮುಂದೆ ಮಾಡಿ ಉಳಿದ ವಿಷಯಗಳನ್ನು ನಿರ್ಣಯಿಸದೆ ಹಾಗೆಯೇ ಬಿಟ್ಟುಗೊಟ್ಟರೆ, ಅದು ಘಾತಕವಾಗದೆ ಉಳಿಯದು.

ಬಂಡಿಗಾಲಿಯು ಪರಿಷತ್ತಿನ ಕಾರ್ಯಕಲಾಪ

ಅಲ್ಪಸಂಖ್ಯಾಕ ಉದಮಂಡಲದವರು ತಾ|೩೧ ನೆಯ ದಿನಗಳಲ್ಲಿ ವಿ.ಮ್ಯಾಕಡೋನಾಲ್ಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿಕೊಂಡು ಭವ್ಯ ಕಾರ್ಯವನ್ನು ಮುಂದೆ ಸಾಗಿಸಿದರು. ಇಂಡಿಯನ್ ಕ್ರಿಶ್ಚಿಯನ್, ಪಾರ್ಸಿ, ಆ್ಯಂಗ್ಲೊ ಇಂಡಿಯನ್ ಮತ್ತು ಯುರೋಪಿಯನ್ ಮೊದಲಾದ ಅಲ್ಪಸಂಖ್ಯಾಕ ವರ್ಗಗಳ ಹಿತಸಂರಕ್ಷಣೆ ಸಂಬಂಧವಾಗಿ ಬೇರೆ ಬೇರೆ ಸಭಾಸದರು ತಮ್ಮ ಸಲಹೆಗಳನ್ನು ವ್ಯಕ್ತಪಡಿಸಿದರು. ಸರ್ ಮಹಮ್ಮದ ಶಫಿ, ರಾಜಾನರೇಂದ್ರನಾಥ, ಡಾ ಅಂಬೇಡಕರ ಮೊದಲಾದವರು ಈ ಸಂಬಂಧವಾಗಿ ಭಾಷಣ ಮಾಡಿದರು.

ಸಂಯುಕ್ತ ರಾಜ್ಯಘಟನೆಯ ಉದಮಂಡಲದವರೂ ತಾ|೩೧ ನೆಯ ದಿವಸ ಲಾರ್ಡ ಸ್ಯಾಂಕಿಯವರ ಅಧ್ಯಕ್ಷತೆಯಲ್ಲಿ ಕೂಡಿ, ಕೆಲವು ವರ್ಗಗಳ ಪ್ರತಿನಿಧಿಗಳಿಗೆ ಶಾಸನ ಸಭೆಗಳಲ್ಲಿ ಪ್ರತ್ಯೇಕವಾಗಿ ಜಾಗಗಳನ್ನು ಕಾಯ್ದಿಡುವ ಸಂಬಂಧವಾಗಿಯೂ ಸಂಯುಕ್ತ ಶಾಸನ ಸಭೆಗೆ ಪ್ರತಿನಿಧಿಗಳನ್ನು ಆರಿಸುವ ಪದ್ಧತಿಯ ವಿಷಯವಾಗಿಯೂ ವಿಚಾರ ಮಾಡಿದರು. ಪರಸ್ಪರ ಕಾಯದೆ ವಂಚನೆ ಇವುಗಳ ಸಭಾಸದರು, ಪ್ರಾಂತಿಕ ಮಂತ್ರಿಗಳ ಸಭಾಸದರಿಂದಲೂ, ಪ್ರಾಂತಿಕ ಮಂಡಳಗಳ ಸಭಾಸದರಿಂದಲೂ, ಆರಿಸಲ್ಪಡಬೇಕೆಂದು ಕೆಲವರು ಅಭಿಪ್ರಾಯ ಕಟ್ಟರು. ಎರಡೂ ವಂಚನೆಗಳಿಗೆ ಮತದಾರರೇ ಸಭಾಸದರನ್ನು ಆರಿಸಿ ಕಳಿಸಬೇಕೆಂದು ಇನ್ನುಳಿದವರ ಅಭಿಪ್ರಾಯವಾಯಿತು. ಯಾವದೂ ನಿರ್ಣಯವಾಗದೆ ಸಭೆಯು ಮುಂದುವರಿಲ್ಪಟ್ಟಿತು.

ಪ್ರಾಂತಿಕ ರಾಜ್ಯಭಾರ ಉದಮಂಡಲದವರು ತಾ|೩೧ ನೆಯ ದಿವಸ ಜಾಫರುಲ್ಲಾ ಖಾನ್, ಚಿಕ್ಕಾರಿ, ಜೋಶಿ, ಆಂಬೇಡಕರ್, ವ್ಯಾಟಿಸ್ಸ, ರಾಜಾನರೇಂದ್ರನಾಥ ಮತ್ತು ಸೆಟಲವಾಡ ಈ ಜನರುಳ್ಳಂಥ ಮಂಡಳವನ್ನು ನಿಯಮಿಸಿ, ವರ್ಗೀಕರಣವಾದಿ ಉಳಿದಿರುವ ವಿಷಯಗಳನ್ನು ಪರಿಷ್ಕರಿಸಲು ಸಂಯುಕ್ತ ಘಟನೆಯು ಉದಮಂಡಲದವರೊಹನೆ ಸಹಾಯಿಸಲು ಅವರಿಗೆ ತಿಳಿಸಿಕೊಂಡರು.

ಬುಲಡಾಣಾ ಜಿಲ್ಲೆಯ
ರೈತರ ನಿರ್ಧಾರ

ಬುಲಡಾಣಾ ಜಿಲ್ಲೆಯ ರೈತರ ಪರಿಷತ್ತು ತಾ॥ ೩೧ ಹಾಗು ೧ ಈ ದಿನಗಳಲ್ಲಿ ನಂದುರಾ ಎಂಬಲ್ಲಿ ಶ್ರೀ ಜಮನಾದಾಸ ಮೇಹತಾಂಜಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಸುಮಾರು ೧೫೦೦ ಜನ ರೈತರು ಬೇರೆ ಬೇರೆ ಭಾಗಗಳಿಂದ ಪರಿಷತ್ತಿಗೆ ಬಂದಿದ್ದರು. ಈ ವರ್ಷ ಬೆಳೆಯೂ ಬಹುಪಾಲಿಲ್ಲವಾದ್ದರಿಂದ ಸರಕಾರದವರು ಭೂಶಿಸ್ತಾಯವನ್ನು ಹೆಚ್ಚಿಬಿಡಬೇಕಾಗಿಯೂ, ಜನವರಿ ತಿಂಗಳು ಕಂತಿಯನ್ನೂ ಕಾಗಾಗಿ ಸೂಟ ಬಡಲಿಸ್ಸವೆಂದೂ ಭೂಶಿಸ್ತಾಯವು ಅಷ್ಟಾಗಿ ಹೆಚ್ಚದಂತೆ ವ್ಯವಸ್ಥೆ ಮಾಡಲು ೧೨ ಜನರದೊಂದು ಪಿಂಡವನ್ನು ನಿಯಮಿಸಬೇಕಾಗಿಯೂ ಗೊತ್ತುಗಳು ಅಲ್ಲಿ ಸ್ವೀಕೃತವಾದವು. ಈಗಿನ ಭೂಶಿಸ್ತಾಯವನ್ನು ಅರ್ಧಕ್ಕಿಳಿಸಿ ಕಡಿಮೆ ಮಾಡಬೇಕೆಂಬ ಸರಕಾರದ ಬೇಡಿಕೆಯಿಲ್ಲವ ಒಬ್ಬಯೂ ಒಪ್ಪದೆ ಹೆಂಪ್ಪ ಪಸಾಯಿತು.

ಹಿಂದೂ ಮುಸಲ್ಮಾನರ ಪ್ರಶ್ನೆಯನ್ನು
ಹಿಂದುಸ್ಥಾನದಲ್ಲಿಯೇ ಬಿಡಿಸಬೇಕು

ಹಿಂದೂ ಮುಸಲ್ಮಾನರ ಪ್ರಶ್ನೆಯು ತಮಗೆ ಯಾವ ರೀತಿಯಿಂದಲೂ ಸಂಬಂಧಿಸಿಲ್ಲ ವಾದ್ದರಿಂದ ಅದನ್ನು ಇಂಗ್ಲೆಂಡಿನಲ್ಲಿ ಬಗೆ ಹರಿಸುವುದು ಶಕ್ಯವಿಲ್ಲವೆಂದೂ, ಸಂಬಂಧಪಟ್ಟ ಹಿಂದುಸ್ಥಾನದವರೇ ಪರಸ್ಪರರ ಧೋರಣೆ ಈ ಬಗ್ಗೆ ವಿಚಾರ ಮಾಡಿ ಒಪ್ಪವುದು ಮಹತ್ವದ್ದಾಗಿದೆಯೆಂದೂ, ಕಂಬುಸಯದ ಒಕ್ಕೂಟಪ್ರಿಯವಾದ ಅಧಿಕಾರವನ್ನು ಹಿಂದುಸ್ಥಾನಕ್ಕೆ ಕೊಟ್ಟಷ್ಟಿ, ಜವಾಬುದಾರ ರಾಜ್ಯಪದ್ಧತಿಯ ಬಂದು ಹಜ್ಜಿಯನ್ನು ಮುಂದಿಟ್ಟಾಗಿಯವೆಂದೂ "ನ್ಯೂಜಕ್ರಾನಿಕಲ್" ಪತ್ರಿಕೆಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಹಿಂದುಸ್ಥಾನದ ಗವರ್ನರರು ಹಾಗು ಯುರೋಪಿಯನ್ ಪ್ರತಿನಿಧಿಗಳು ಇವರು ಹೊಸ ತಾಗಿ ಇಂಗ್ಲೆಂಡಿನಲ್ಲಿ ಉಳಿದಿರುವಾಗಲೇ ಹಿಂದೀ ಜನರಿಗೆ ಜವಾಬುದಾರಿಯನ್ನು ಒಪ್ಪಿಸುವ ಪೆಷಯಕ್ಕೆ ವಿರೋಧಗಳಿಂದವಿಸಿಲ್ಲವೆಂದು ಲಂಡನ್ ಟೈಮ್ಸ್ ಪತ್ರಿಕೆಯು ತನ್ನ ಮುಂದು ಧ್ವನಿಸಿ ಮಾಡಿದೆ.

ಮಿ. ಜರ್ಚಹಿಲ್ಲರನ್ನು ಅಭಿನಂದಿಸಿದರು

ಡಿಸೆಂಬರ ೧೧ ನೆಯ ತಾರೀಖಿನ ದಿವಸ ಹಿಂದುಸ್ಥಾನದ ಸಂಬಂಧವಾಗಿ ಸ್ಫೂರ್ತಿದಾಯಕವಾದಭಾಷಣ ಮಾಡಿ, ಇಂಗ್ಲೆಂಡ ಹಾಗು ಹಿಂದುಸ್ಥಾನಕ್ಕೆ ಉಪಕಾರ ಮಾಡಿದ ಸಂಬಂಧವಾಗಿ, ಲಂಡನ್ನಿನಲ್ಲಿಯ ಇಂಡಿಯನ್ ಎಂಪಾಯರ್ ಸೊಸಾಯಿಟಿಯ ಕಾರ್ಯಕಾರಿ ಮಂಡಳದವರು, ಮಿ. ಚರ್ಚಹಿಲ್ಲರಿಗೆ ತಮ್ಮ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಈ ಭಾಷಣದ ಸಂಬಂಧವಾಗಿ ಮಿ.. ಮ್ಯಾಕಡೋನಾಲ್ಡರು, ಬಿಕಾನೇರ ಮಹಾರಾಜರು, ನೊಬಲಾದವರು ಮಿ. ಚರ್ಚಹಿಲ್ಲರನ್ನು ಬೈದು ಬೈದು ವಜ್ಜಿದ್ದರಿಂದ ಅವರಿಗೆ ಸಾಲುವೇರಾಗಿ ಹೋಗಿತ್ತು! ಅಭಿನಂದಿಸುವವರು ಒಬ್ಬರಾದರೂ ದೊರೆ ತರು! ಸರಿ! ಅವನ ಇನ್ನಾ ಬೇವ ಹಿಡಿಯ ಬಹದು!

ಬ್ರಾ ರೀಡಿಂಗರು
ಸಫಲ್ಯ ಬೆಂಬಲಕೊಟ್ಟರು

ಸಂಧ್ಯಾ ಸರಕಾರದ ಜವಾಬುದಾರಿಯ ವಿಷಯವಾಗಿ ಸಂಯುಕ್ತ ಘಟನೆಯ ಉಪ ಮಂಡಳದಲ್ಲಿ ಸರ್ ತೇಜಬಹದ್ದೂರ ಸಪ್ರೂ ಎಂದು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ, ಲಾರ್ಡ ರೀಡಿಂಗರವರು ಲಿಬರಲ್ ಪಂಗಡದ ಸರವತಿ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ.

ಪೇಶಾವರ ಪ್ರಾಂತದಲ್ಲಿ
ಬಾಂಬು ಹಾರಿತು

ಪೇಶಾವರ ಪ್ರಾಂತದ ಚಾರಸಾದದ ಅಮೀರುಲ್ಲಾ ಎಂಬ ಕಾರಣನು ಹೋದ ಶುಕ್ರವಾರ ದಿವಸ ಒಂದು ಬಾಂಬನ್ನು ತೆಗೆದುಕೊಂಡು ಎಲ್ಲಿಗೋ ಹೊಗಿದ್ದನು. ಹಾಗಿರುವಲ್ಲಿ ಒಂದು ಒವ್ವಿಂದೊಪ್ಪತ್ತು ಹೊರಿ ಅವನನ್ನು ಗಾಯ ಪಡಿಸಿತು. ಶೀಘ್ರ ಹೊತ್ತಿನ ವೇಳೆ ಅವನು ಮರಣ ಹೊಂದಿದನು.

ಬಂಗಾಲದಲ್ಲಿ
ಬಾಂಬುಗಳು ಸಿಕ್ಕವು

ಬಂಗಾಲ ಇಲಾಖೆಯಲ್ಲಿಯ ನಂದಿಯಾಡ ಪ್ರದೇಶ ಅಧಿಕಾರಿಗಳು, ಅನಂತರಂಜನ ಗಂಗೂಲಿಯ ಮನೆಯಲ್ಲಾದ ೯ ಜನರನ್ನು ದರೋಡೆಯ ಅರೋಪದಮೇಲೆ ಸೆರೆ ಹಿಡಿದಿದ್ದು, ಅವರಲ್ಲಿಂದ ಬಾಂಬುಗಳು, ಸುತ್ತಿಗೆ, ಪಂಜು, ಜಾಂಜಿನ ಮುಖವರಣ ಹೆದಿಲಾದವುಗಳು ಪೋಲೀಸರಿಗೆ ಸಿಕ್ಕವು

ಜೀಲ್ಲಾಲ್ಲಿ ತಮಗೆ ಕೇಗು ತರದ ಆಜಾಂವು ಮಾಡಲ್ಪಡುತ್ತಿರುವದೆಂ ಎಂದೋಷ್ಠವಾಗಿ, ತಿಲಕಯುಗ ಜೀಲ್ಲಾಗಳಲ್ಲಿ ರಾಜಕೀಯ ಕೈದಿಗಳು ತಮ್ಮಿರು ದಿವಸಗಳಿಂದ ಅನ್ನತ್ಯಾಗ ಮಾಡಿಕೊಂಡಿದ್ದಾರೆ.

ತಾಲಗಡೆಯಲ್ಲಿ ಕಾಯದೆಭಂಗ
೬೦೦ ಜನರು ಕಟ್ಟಿಗೆ ಒಯ್ದರು

ಕಾರವಾರ ಜಿಲ್ಲೆಯ ತಾಲಗಡೆ ಹಳ್ಳಿಯ ಕೆಲವು ಹೆಂಗಸರು ಕೂಡಿ ವಾದಲ್ಲಿ ಸಮೀಪದ ಗುಡ್ಡಕ್ಕೆ ಕಟ್ಟಿಗೆ ತರಲು ಹೋಗಿದ್ದರು. ಆಗ ಅಡವಿ ಅಧಿಕಾರಿಗಳು ಅವರಿಗೆ ಅಡ್ಡಿಮಾಡಿ ಅವರನ್ನು ಅಲ್ಲಿಯೇ ತಡೆದಿಟ್ಟುಕೊಂಡರು. ಅಲ್ಲಿ ಇದ್ದ ಸ್ವಯಂಸೇವಕರಿಗೆ ಈ ಸುದ್ದಿಯನ್ನು ತಿಳಿಸಿ ಬಂದಿತು. ಅವರು ೧೫ ಬ್ಯೂಗಲ್ "ಊದಿ ಜನರಿಗೆ ಸಂಜ್ಞೆ ಮಾಡಿದರು. ಕೂಡಲೇ ೬೦೦ ಜನರು ಅರಣ್ಯಕ್ಕೆ ಒಂದು ಗಿಡ ಗಳನ್ನು ಕಡಿಯಲಾರಂಭಿಸಿದರು. ಆಡವಿ ಕಾವಲುಗಾರರು ಮತ್ತು ಪೋಲೀಸರು ಬೆದರಿ ಹೂಟ ಹೋದರು. ಜನರು ಕಟ್ಟಿಗೆಗಳನ್ನು ತೆಗೆದುಕೊಂಡು ತಿರುಗಿ ಊರೊಳಗೆ ಬಂದರು.

ಗೌಡರು ರಾಜೀನಾಮೆ ಕೊಟ್ಟರು

ಕಾವಟಾ ತಾಲೂಕದಲ್ಲಿಯೂ ಕಾಡ ರಕೆನ ಬೈಲದ ಗೌಡರಾದ ಇಬ್ರಾಹಿಮ ಮಹಮ್ಮದ ಸಾಹೇಬರು ತಮ್ಮ ಗೌಡ ಕಿಗೆ ಶರಣುಹೊಡೆದಿದ್ದಾರೆ. ಮೊದಲಿನ ಗೌಡನು ರಾಜೀನಾಮೆ ಕೊಟ್ಟ ಮೂಲಕ ವಾಗಿ ತೆರವು ಬಿದ್ದ ಸ್ಥಳಕ್ಕೆ ಇವರು ಗೌಡರಾಗಿ ನಿಯಮಿಸಲ್ಪಟ್ಟಿದ್ದರು ಜನರು ಇವರ ಕೀಲೆ ಸಾವಜನಿಕ ಬಹಿಷ್ಕಾರ ಹಾಕಿದ್ದರು. ಬಹಿಷ್ಕಾರದ ಪರಿಣಾಮ ಒಳಿತಾಗಿ ಪರಿಣಮಿಸಿ ಇವರಾದರೂ ರಾಜೀನಾಮೆ ಕೊಟ್ಟರು.

ಮಿ. ಬೆನ್ನ ಸಾಹೇಬರು
ಹಿಂದುಸ್ಥಾನಕ್ಕೆ ಬರುವರಂತೆ!

ಬಂಡೀ ಗಾಲಿಯು ಪರ್ವತದಲ್ಲಿ ಒಪ್ಪಂದ ಉಂಟಾದಲ್ಲಿ, ಅಲ್ಲಿ [illegible] ವಾದ ರಾಜ್ಯಪದ್ಧತಿಯ ಕಚ್ಚಾ ವರದಿಗೆ ಕೆಲವು ಜನ ಕಾಂಗ್ರೆಸ್ ಮುಂದಾಳು ಗಳ ಬೆಂಬಲ ದೊರಕಿಸಲು ಪ್ರಯತ್ನ ಮಾಡುವದಕ್ಕಾಗಿ, ಭಾರತಮಂತ್ರಿ ಮಿ. ಪೆಜವುಡ್ ಬೆನ್ನರು ಒಂದು ಬ್ರಿಟಿಶ ಶಿಷ್ಟ ಮಂಡಳವನ್ನು ತೆಗೆದುಕೊಂಡು ಹಿಂದು ಸ್ಥಾನಕ್ಕೆ ಬರುವರೆಂದಾರಾಗಿ ತಿಳಿಯು ತ್ತದೆ.

ಬ್ರಿಟಿಶರ ವ್ಯಾಪಾರ ಸಾಗಬೇಕಾದರೆ

ವಸಾಹತ ಸ್ವರಾಜ್ಯ ಕೊಡಲೇಬೇಕು.

ಓರ್ವ ಹಿಂದೀ ವ್ಯಾಪಾರಸ್ಥರು ಇಂಡಿಯನ್ ಜೇರಿ ಬೀಳದ ೧೯೧೯ ನೇ ಕಾರ್ತಿಕದ ಸಂಚಿಕೆಯಲ್ಲಿ ಬರೆದ ಸಾರದ ಮುಟ್ಟಂಶವು.

ಬ್ರಿಟಿಶ ವಸ್ತುಗಳ ಕೊಂಡ್ಯಾರವು ಅಕ್ಕಂತ ಜೋರಿ ಬಂದ ಸಾಗಿದ್ದು ಅದರ ಪರಿಣಾಮವು ಇಂಗ್ಲಂಡಿನಿಂದ ಬರುವ ಮಾಲುಗಳ ಮೇಲೆ ಚೆನ್ನಾಗಿ ಆಗಿದೆ. ಮಹಾಯುದ್ಧವಾದ ಮೊದಲ ೫ ವರ್ಷಗಳಲ್ಲಿ ಬ್ರಿಟನ್‌ದಿಂದ ಹಿಂದುಸ್ಥಾನಕ್ಕೆ ೧೧೧ ಕೋಟಿ ಪೌಂಡುಗಳ ಮಾಲು ಬಂದಿತ್ತು. ಬ್ರಿಟಿಶ ಸಾಮ್ರಾಜ್ಯದ ಉಳಿದ ದೇಶಗಳಿಂದ ೧೪೦ ಲಕ್ಷ ಪೌಂಡುಗಳ ಮಾಲು ಬಂದಿತ್ತು. ಇದರೆ ಉಳಿದ ಎಲ್ಲ ದೇಶಗಳಿಂದ ಕೊಡಿ ೬೭೦ ಲಕ್ಷ ಪೌಂಡುಗಳ ಮಾಲು ಬಂದಿತು. ೧೯೧೫-೧೯ ಶಲ್ಲಿ ಬರಿ ೬೫೦ ಲಕ್ಷ ಪೌಂಡುಗಳ ಮಾಲು ಬ್ರಿಟಿಶ ಸಾಮ್ರಾಜ್ಯದಿಂದ ೨೬೦ ಲಕ್ಷ ಪೌಂಡುಗಳ ಮಾಲು ಬ್ರಿಟನ್‌ದಿಂದ ೨೫೦ ಲಕ್ಷ ಪೌಂಡುಗಳ ಮಾಲು ಉಳಿದ ದೇಶಗಳಿಂದ ಹಿಂದುಸ್ಥಾನಕ್ಕೆ ಬಂದಿತು. ಆದರೆ ಮಹಾಯುದ್ಧದ ಪೂರ್ವದ ೫ ವರ್ಷಗಳಲ್ಲಿ ಉಳಿದ ದೇಶಗಳಿಂದ ಬರತಕ್ಕ ಮಾಲಿನ ಎರಡು ಪಟ್ಟು ಮಾಲು ಕೇವಲ ಬ್ರಿಟಿಶ ದೇಶದಿಂದ ಬರುತ್ತಿದ್ದಿತು. ೧೯೧೫-೧೯ ರಲ್ಲಿ ಉಳಿದ ದೇಶಗಳಿಂದ ಬಂದ ಮಾಲಿನಷ್ಟೇ ಏಸಾಲು ಬ್ರಿಟನ್‌ದಿಂದ ಬಂದಿತು.

ಅರಳೆಯ ಸರಳುಗಳು

ಹಿಂದುಸ್ಥಾನಕ್ಕೆ ಬ್ರಿಟನ್‌ದಿಂದ ೧೯೧೫-೧೯ ರಲ್ಲಿ ಬಂದ ಸರಳುಗಳ ಅಂಕಿ ಸಿಕ್ಕಿರದಿದ್ದರೂ ಸಹ ಆ ಕಾಲದ ಪರಿಸ್ಥಿತಿಯ ಮೇಲಿಂದ ನೋಡಿದರೆ ಅರಳೆಯ ಸರಳುಗಳ ವ್ಯಾಪಾರವು ಬಹಳ ಕಡಿಮೆಯಾಗುವದೆಂದು ತೋರುತ್ತದೆ. ಬ್ರಿಟನ್‌ದಿಂದ ಹಿಂದುಸ್ಥಾನಕ್ಕೆ ಬರತಕ್ಕ ಮುಖ್ಯ ಸರಳುಗಳೆಂದರೆ ಅರಳೆಯ ಸರಳುಗಳಾದ್ದರಿಂದ ಈ ವ್ಯಾಪಾರವು ಕಂತರೆ ಬ್ರಿಟನ್‌ನ ವ್ಯಾಪಾರವು ಬಹಳ ಕಡಿಮೆಯಾಗುವದು.

ಹಿಂದುಸ್ಥಾನಕ್ಕೆ ಬಂದ ಬ್ರಿಟಿಶ ಅರಳೆಯ ಸರಳು

ಜಾನೇವಾರಿ	೫೫	ಲಕ್ಷ	ಪೌಂಡುಗಳು
ಫೆಬ್ರುವರಿ	೫೦	,,	,,
ಮಾರ್ಚ	೪೪	,,	,,
ಎಪ್ರೀಲ	೪೦	,,	,,
ಮೇ	೨೫	,,	,,
ಜೂನ	೧೫	,,	,,
ಜುಲೈ	೧೨	ಲಕ್ಷ	೫೦ ಸಾವಿರ

ಆಗಸ್ಟ ಸ್ಯೆಂಬರಗಳಲ್ಲಿ ೧ ಕೋಟಿ ಪೌಂಡುಗಳ ಮಾಲು ಮಾತ್ರ ಬಂದಿತು. ಇವುಗಳಲ್ಲಿ ಸಿಲೋನಕ್ಕೆ ಹೋದ ಸರಳುಗಳು ಕೂಡಾ ಸವಾವೇಶಾಗಿದ್ದರಿಂದ ಬ್ರಿಟನ್‌ದ ಅಧ ಶ್ಯಂತ ಹೆಚ್ಚು ವ್ಯಾಪಾರು ಕೆಡಿಸಿ ಯಾಗಿದೆಂದು ಹೇಳಬಹುದು.

ಯಂತ್ರದ ಸಾಮಾನುಗಳು

ಹಿಂದುಸ್ಥಾನಕ್ಕೆ ಅಂಟಿಯ ಸರಕು ಗಳ ಕಡಿಮೆಯಾಯ ಹೋಗಿ ಬರುವ ಸರಕೆಂದರೆ ಯಂತ್ರದ ಸಾಮಾನುಗಳು ಜಾನೇವಾರಿಯಲ್ಲಿ ೧೩ ಲಕ್ಷ ೫೦ ಸಾವಿರ ಪೌಂಡುಗಳ ಯಂತ್ರಗಳು ಬಂದಿದ್ದರೆ ಜೂನ ತಿಂಗಳಿಷ್ಟಾಗಿ ಆ ಅಂಕಿಯು ೯ ಲಕ್ಷ ೪೦ ಸಾವಿರಕ್ಕಿಳಿಯಿತು. ಕಬ್ಬಿಣ ಮತ್ತು ಉಕ್ಕುಗಳಾದರೂ ಹಿಂದುಸ್ಥಾನಕ್ಕೆ ಹೆಚ್ಚು ಪ್ರಮಾಣದಿಂದ ಬರಬೇಕ್ಕ ಸರಕುಗಳು. ಜಾನೇವಾರಿಯಲ್ಲಿ ೧೨ ಲಕ್ಷ ಪೌಂಡುಗಳ ಕಬ್ಬಿಣ ಉಕ್ಕು ಬಂದಿದ್ದರೆ ಜೂನ ತಿಂಗಳಲ್ಲಿ ೩॥ ಲಕ್ಷದ ಸರಕು ಬಂದಿತು. ಆಗಸ್ಟ ತಿಂಗಳಲ್ಲಿ ಅದ್ದು ೬೧೫೦೦೦ ಕ್ಕೆ ಬಂದಿಳಿಯಿತು.

ಹಿಂದುಸ್ಥಾನಕ್ಕೆ ಬ್ರಿಟನ್‌ದಿಂದಲೇ ಹೆಚ್ಚಾಗಿ ಮಾಲು ಬರುತ್ತಿದ್ದರೂ ಹಿಂದುಸ್ಥಾನದ ಮಾಲು ಬ್ರಿಟನ್‌ಗೆ ಹೆಚ್ಚಾಗಿ ಕೊಳ್ಳುವದಿಲ್ಲ. ಅಮೇರಿಕಾ ಜಪಾನ ಮತ್ತು ಜರ್ಮನಿ ದೇಶಗಳು ಹಿಂದುಸ್ಥಾನದ ಮಾಲು ಹೆಚ್ಚಾಗಿ ಕೊಳ್ಳುತ್ತವೆ. ಈ ದೇಶಗಳಿಂದ ಕೊಳ್ಳುವ ಮಾಲಿನ್ನೇ ಹಿಂದುಸ್ಥಾನವು ಬ್ರಿಟನ್‌ದಿಂದ ಕೊಳ್ಳುತ್ತದೆ. ಆದರೆ ಬ್ರಿಟನ್ ಮಾತ್ರ ಉಳಿದ ದೇಶಗಳು ಕೊಳ್ಳುವ ಹಿಂದುಸ್ಥಾನದ ಮಾಲು ಮಾತ್ರ ಹಿಂದುಸ್ಥಾನದಿಂದ ಕೊಳ್ಳುವದು.

ಬ್ರಹ್ಮಾಂಡ ದ ಕಾರಣವು

ಸಾಧಾರಣವಾಗಿ ಸರಕುಗಳ ವಾರಣೆಯೇ ಇರದಿದ್ದರೂ ಹಿಂದೀಯರು ಬ್ರಿಟನ್ ವಸ್ತುಗಳಿಗೆ ಕಾ ತೆದ ಬಹಿಷ್ಕಾರದ ಪರಿಣಾಮದಿಂದಲೇ ಸರಕುಗಳ ವ್ಯಾಪಾರವು ಕಡಿಮೆಯಾಗಿದ್ದೆಂದು ಹೇಳಲು ಅಭ್ಯಂತರವಿಲ್ಲ. ಬ್ರಿಟಿಶ ವಸ್ತುಗಳನ್ನು ಕೊಳ್ಳಬಾರದೆಂಬ ಆಂದೋಲನವು ಸಿಕ್ಕಿದೆ. ಆದ್ದರಿಂದ ಹಾಡುಹಗಲೇ ಜೇಬು ಕರು ಬ್ರಿಟಿಶರ ವಾಸ್ತವದ ಕೊಂಬತಪ್ಪು ಹಿಂದಿನ ಜಮಾಖರ್ಚುಗಳನ್ನು ನೋಡಿದರೆ ಹಿಂದುಸ್ಥಾನದ ಜೊತೆ ವ್ಯಾಪಾರ ಸಂಬಂಧದಲ್ಲಿ ಬ್ರಿಟನ್ ಸ್ಥಿರವಾಗಿಯೇ ಇರುವದು. ಒಟ್ಟು ಕ್ಷೀಣಿಸುವಾಗಿ ಬ್ರಿಟಿಶರ ವ್ಯಾಪಾರವು ಮತ್ತೆ ಬೆಳೆಯುವದು ಬಹಳ ಕಠಿಣ.

ಹಿಂದುಸ್ಥಾನದ ಬೇಡಿಕೆ

ಹಿಂದುಸ್ಥಾನಕ್ಕೆ ಬೇಕಾದದ್ದು ವಸಾಹತ ಸ್ವರಾಜ್ಯ ಅದು ಸಿಕ್ಕುವ ವರೆಗೆ ಒಂದಿಲ್ಲೊಂದು ರೀತಿಯಿಂದ ಚಳವಳಿ ನಡೆಯುವದೇ. ಹಿಂದುಸ್ಥಾನದ ಹಿತ ಸಂರಕ್ಷಣೆಯ ಕೆಲಸವನ್ನು ಕೊಡಿದೆಂದು ಬ್ರಿಟಿಶರು ಯಾವಾಗಲೂ ಹೇಳುವದುಂಟು. ಹಾಗಿದರೆ ತನ್ನ ಸಂರಕ್ಷಣೆ ಮಾಡಿಕೊಳ್ಳುವ ಹಿಂದುಸ್ಥಾನಕ್ಕೆ ಬರಬೇಕೆಂಬುದೇ ಬ್ರಿಟಿಶರ ಉದ್ದೇಶವಾಗಿರಬೇಕಲ್ಲವೇ ! ಯಾಕೆಂದರೆ ಕೊನೆಯ ವರೆಗೆ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರಕ್ಕೆ ಅಧೀನವಾಗಿರಲಾರದು. ಎಂಥೇ ಜನತೆಯು ತಮ್ಮ ಜನರ ಕ್ಕಿಂತ ಬ್ರಿಟಿಶರ ಆಳಿಕೆಯೇ ಹೆಚ್ಚು ಹಿತಕರವೆಂದು ಹೇಳುವರೆಂಬುದು ಹುಚ್ಚತನ. ಹಿಂದು ಮುಸಲ್ಮಾನರಲ್ಲಿ ಕೆಲವರು ಕೆಲಸ ಮಾಡಿದರೆ ಹಿಂದು ಮುಸಲ್ಮಾನರೆಲ್ಲರು ಯಾವಾಗಲು ಬಡಿದಾಡುವರೆಂಬುದೂ ಅತಿಶಯೋಕ್ತಿಯಾದುದು. ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟರೆ ಅದರಿಂದ ಕೆಲವು ವಿಶಿಷ್ಟ ಜನರ ಕೈಯಲ್ಲಿ ರಾಜ್ಯ ಕಾರಭಾರ ಹೋಗಿ ಸಾರ್ವಜನಿಕರಿಗೆಲ್ಲ ಅಪಕಾರವಾಗುವದೆಂಬುದೂ ಹುಚ್ಚತನ. ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಕ್ಕರೆ ಬ್ರಿಟಿಶರ ಹಿತ ಸಂಬಂಧವು ನಷ್ಟವಾಗುವದೆಂದು ಹೇಳುವದೂ ಮೂರ್ಖತನ. ಆದುದರಿಂದ ಬ್ರಿಟಿಶರು ಜಾಣತನದಿಂದಲೇ ಹಿಂದುಸ್ಥಾನದ ಪ್ರಾಬಲ್ಯರು ಶಾವೆಂಬ್ರಿ ಹೋಗಿಕೊಳ್ಳಬೇಕಾದರೆ ತಮ್ಮ ಸ್ವಂತದ ಸ್ವಾರ್ಥ ಕೆ ಳೆದಿಗೆ ಹೆಚ್ಚು ಲಕ್ಷ ಕೊಡದೆ ಹಿಂದೀಯರ ಅಪೇಕ್ಷೆಯ ಕಡೆಗೆ ಹೆಚ್ಚು ಗಮನ ಕೊಡಬೇಕು.

ಗಾಂಧಿಯವರೇ ಹಿಂದುಸ್ಥಾನದ ಮುಖಂಡರು.

ಹಿಂದುಸ್ಥಾನದ ಸದ್ಯದ ಮುಖಂಡರೆಂದರೆ ಗಾಂಧಿಯವರೇ. ಇವರೆಂಬೊ ಹುಂದು ಮೇಜಿನ ಪರಿಷತ್ತಿಗೆ ಹೋಗಿಲ್ಲ. ಹುಂದು ಮೇಜಿಗೆ ಹೋದವರಿಗೆ ಹಿಂದುಸ್ಥಾನದಲ್ಲಿ ಹುಲುಬುಲ್ಲು. ಹಿಂದುಸ್ಥಾನಕ್ಕೆ ಪೂರ್ಣ ಸ್ವರಾಜ್ಯ ಕೊಡಲ್ಪಡುವದೆಂಬ ಅಧಿಕಾರಿವ್ಯಾಂಕ ಬೇಲು ಹಾಕಿದ್ದು ಕೆರೆಯಲ್ಪಡುವದೆಂದೂ ವ್ಯಾಯಸರಾಯರು ಹೋದ ನವಂಬರದಲ್ಲಿ ಹೇಳಿದರು. ಆದರೆ ಕೆಲವು ಇಂಗ್ಲಿಷ ಜನಪ್ರತಿನಿಧಿಗಳಿಗೆ ಅಪಾಯ ಹುಟ್ಟಿಸಿದ್ದು ವಸಾಹತ ಸ್ವರಾಜ್ಯವನ್ನು ಕೊಡಬೇಕೆಂದು ಗಾಂಧಿಯವರು ವ್ಯಾಯಸರಾಯರಿಗೆ ಕೇಳಿದಾಗ ಅವರು ಅದಕ್ಕೆ ಒಪ್ಪಲಿಲ್ಲ. ಆಯಿತೆ ಧಂಗ ಪ್ರಾರಂಭ ಮಾಡಿದ

ಮೊದಲೂ ಮಹಾತ್ಮಾಜಿಯವರು ವ್ಹಾಯಸರಾಯರಿಗೆ ಬರೆದರು. ಅದಕ್ಕೆ ಗಾಂಧಿಯವರಿಗೆ ಕಟುವಾದ ಉತ್ತರ ದೊರೆಯಿತು. ಆದುದರಿಂದ ಸತ್ಯಾಗ್ರಹ ಸಮರವು ಪ್ರಾರಂಭವಾಯಿತು. ಸರಕಾರವು ಎಷ್ಟೊಂದು ದಬ್ಬಾಳಿಕೆ ನಡೆಸಿದರೂ ಜನತೆಯಲ್ಲಿ ಉತ್ಸಾಹವು ಹೆಚ್ಚುತ್ತಲಿದೆ. ಬ್ರಿಟಿಶ ಸರಕಾರಿಗಳ ಬಹಿಷ್ಕಾರವಂತೂ ಬಹಳ ಜೋರಿನಿಂದ ನಡೆಯ ಹತ್ತಿದೆ. ಜನತೆಯು ಸಹಕಾರವಲ್ಲದೆ ಬ್ರಿಟಿಶ್ ಸಂಸ್ಥಾಗಳ ವ್ಯಾಪಾರವು ಬೆಳೆಯಲಾರದು. ಬಂದೂಕು ಗುಂಡುಗಳಿಂದ ರಾಜ್ಯವಾಳಬಹುದು; ಆದರೆ ಅವುಗಳ ಬಲದಿಂದ ವ್ಯಾಪಾರ ಮಾಡುವದು ಸಾಧ್ಯವಿಲ್ಲ. ಆದುದರಿಂದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸ್ವರಾಜ್ಯ ಕೊಡಲೇಬೇಕು.

ಹಿಂದುಸ್ಥಾನ

ಲಂಡನ್ ದಲ್ಲಿ ಕಾಂಗ್ರೆಸ್ ಪಕ್ಷದ ಪತ್ರಿಕೆಯಾಗಿ "ಇಂಡಿಯಾ ಪತ್ರಿಕೆ" ಪತ್ರಿಕೆಗೆ ೧೫೦೦೦ ರೂಪಾಯಿಯು ಜೋಡಣೆಯು ಕೇಳಲ್ಪಟ್ಟಿದೆ.

ಲಾಹೋರ ಅತ್ಯಾಚಾರ ವಿಚಾರಣೆಯು ಸಮಯದಲ್ಲಿ ಮ್ಯಾಜಿಸ್ಟ್ರೇಟ ಎಸ್. ಹ್ಯಾಮಿಲ್ಟನ ಸರು ಪ್ರಶ್ನೆ ಮಾಡಿದ್ದಕ್ಕೆ ಆರೋಪಿಯಾದ ಶ್ರೀ ಪರಿಕಿಶನರು ಕೆಳಗಿನಂತೆ ಉತ್ತರ ಕೊಟ್ಟರು.

ಗವರ್ನರರನ್ನು ಕೊಲ್ಲುವದಕ್ಕಾಗಿಯೇ ನಾನು ಲಾಹೋರಕ್ಕೆ ಬಂದೆ. ಒಟ್ಟಿಗೆ ೬ ಸಾರಿ ಗುಂಡು ಹಾರಿಸಿದೆ. ಅವುಗಳಲ್ಲಿ ಎರಡು ಗುಂಡುಗಳನ್ನು ಗವರ್ನರರಿಗೆ ಗುರಿಯಿಟ್ಟೆ. ಉಳಿದ ನಾಲ್ಕು ಗುಂಡುಗಳನ್ನು ಸ್ವಸಂರಕ್ಷಣೆಗಾಗಿ ಹಾರಿಸಿದೆ. ಗುಂಡು ಹಾರಿಸಿದೊಡನೆಯೇ ತಡ, ಅಧಿಕಾರಿಗಳು ನನ್ನನ್ನು ಕೈದಿ ಮಾಡಿದರು. ಗವರ್ನರರನ್ನು ಕೊಲ್ಲಲು ಏನು ಪ್ರಯತ್ನಿಸಿದೆ ನೆಂಬುದನ್ನು ನಾನು ಹೇಳುವದಿಲ್ಲ

ನಾಬರವತಿ ಜೇಲಿನಲ್ಲಿ ತಾ|೬ ನೆಯು ದಿವಸ ವಧ್ಯಾನ್ಹದಲ್ಲಿ ಜೇಲಿನ ಅಧಿಕಾರಿಗಳ ಕೋಣೆಗಳಿಗೆ ಒಮ್ಮಿಂದೊಮ್ಮೆ ಬೆಂಕಿ ಹತ್ತಿತು. ಎರಡು ಕೋಣೆಗಳು ಸಂಪೂರ್ಣವಾಗಿ ಸುಟ್ಟು ಹೋದವು. ಕ್ಯಾಪ್ಟನ್ ಅಡವಾನಿಯವರ, ಜೇಲಿನ ಅಧಿಕಾರಿಗಳು ಹಾಗು ಕೆಲವು ಕೈದಿಗಳೊಂದಿಗೆ ಕೂಡಿ ಬೆಂಕಿ ಆರಿಸಿದರು

ಕಾಂಗ್ರೆಸದ ಸರ್ವಾಧಿಕಾರಿಗಳಾದ ಸರದಾರ ವಲ್ಲಭಭಾಯಿಯವರಿಗೆ ಕ್ರಿ. ಲಾ. ಅಮೆಂಡ ಮೆಂಟ ಕಾಯದೆಯು ಅನ್ವಯ ೯ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿದ್ದರಿಂದ, ಅವರ ಸ್ಥಳದಲ್ಲಿ ಬಿಹಾರದ ಸುಪ್ರಸಿದ್ಧ ಕಾಂಗ್ರೆಸ್ ಪಕ್ಷಾಂಡರಾದ ಬಾಬು ರಾಜೇಂದ್ರ ಪ್ರಸಾದರವರು ಕಾಂಗ್ರೆಸದ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ

ಕಷ್ಟಗಳನ್ನು ನಿವಾರಣ ಮಾಡುತ್ತೇವೆಂಬುದಾಗಿ ಜೇಲಿನ ಅಧಿಕಾರಿಗಳು ವಚನ ಕೊಟ್ಟಿದ್ದರಿಂದ, ಪೂನಾದಲ್ಲಿ ಜೈಲಿನಲ್ಲಿರುವ ರಾಜಕೀಯ ಕೈದಿಗಳಾದ ಶ್ರೀ ಕೇಶವ ಬಲ್ವಂತಿಯವರು ತಮ್ಮ ಎನ್ನತ್ಯಾಗ ವ್ರತವನ್ನು ಮುರಿದು ತಾ|೫ ನೆಯ ದಿವಸ ಆಹಾರವನ್ನು ತೆಗೆದುಕೊಂಡರು. ಹೀಗೆ ಒಟ್ಟಿಗೆ ೫೨ ದಿನಗಳ ವರೆಗೆ ಅನ್ನತ್ಯಾಗ ಮಾಡಿದ್ದರು

ಶಿವಮೊಗ್ಗೂರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ಶ್ರೀ ಪೆಠಲಭಾಯ ಪಟೇಲರವರು ತಾ| ೬ ನೆಯ ದಿವಸ ಮಾಂಜರಾ ಜೇಲಿನಿಂದ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಮುಂಬಯಿಯಲ್ಲಿ ಪಂದೇತಿ ಒಟ್ಟಿಯು ಬಿಳಿ ಟೊಂಗ ಕಾರ್ಯಕ್ರಮವನ್ನು ಸಾಗಿಸುವ ಮುಂದೆ ಮೋಟಾರು ಹಾಯಿದ್ದರಿಂದ ಮರಣ ಹೊಂದಿದ ಬಾಬು ಗೇನೂಜಿಯವರ ಒಗ್ಗೆ ಕೋರೋನರ್ಸ ಕೋರ್ಟಿನಲ್ಲಿ ವಿಚಾರಣೆ ನಡೆಯಿತು. ಜ್ಯೂರಿ ಜನರು ೬ ವಿರುದ್ಧ ೫ ಮತಗಳಿಂದ ಅಪಘಾತದಿಂದ ಮರಣ ಹೊಂದಿದ ನೆಂಬುದಾಗಿ ತೀರ್ಪು ಕೊಟ್ಟರು.

ಕ್ರಿ. ಲಾ. ಅಮೆಂಡಮೆಂಟ ಕಾಯದೆಯ ೧೭ ನೆಯ ಕಲಮಿನನ್ವಯ ಮುಂಬಯಿಯಲ್ಲಿ ಒಂಧನಕ್ಕೊಳಗಾದ "ಫ್ರೀ ಪ್ರೆಸ್" ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಸದಾನಂದರವರಿಗೆ ೩ ತಿಂಗಳ ಶಿಕ್ಷೆ ಹಾಗು ದಂಡವು ವಿಧಿಸಲ್ಪಟ್ಟಿತು. ದಂಡ ಕೊಡದಿದ್ದಲ್ಲಿ ಮತ್ತೆ ೧ ತಿಂಗಳ ಶಿಕ್ಷೆಯನ್ನು ಅನುಭೋಗಿಸಬೇಕಾಗಿ ಹೇಳುವದರಲ್ಲಿ ಬಂದಿದೆ

ಪೋಲೀಸರು

ಮಣ್ಣು ತೂರಿದರು.

ಬೋರಸಾದ ತಾಲೂಕಿನ ಸನಾವ ಎಂಬ ಕಳ್ಳರ ಳಿ ಸ್ವರಾಜ್ಯ ದಿನವು ಆಚರಿಸಲ್ಪಟ್ಟಿತು. ಅಂದು ಸ್ತ್ರೀ ಪುರುಷರು ಬೇರೆ ಬೇರೆ ಮೆರವಣಿಗೆಗಳನ್ನು ಹೊರಡಿಸಿದ್ದರು. ಪೋಲೀಸ ಸಬ್ ಇನಸ್ಪೇಕ್ಟರರು ೬೦ ಜನ ಪೋಲೀಸರೊಂದಿಗೆ ಹೋಗಿ ಮೆರವಣಿಗೆ ತಡೆದರು. ರಾಷ್ಟ್ರಧ್ವಜಗಳನ್ನು ಜುಲುಮೆಯಿಂದ ಕಸಿದುಕೊಂಡರು. ಲಾಠಿಗಳಿಂದ ಜನರನ್ನು ಥಳಿಸಿದರು. ಎಂಟು ಜನರಿಗೆ ಗಾಯಗಳಾದವು. ಒಬ್ಬ ಸ್ವಯಂಸೇವಕನಿಗೆ ಲಾಠಿಯಿಂದ ೨೦ ಕಲ ಹೊಡೆತ ಬಿದ್ದವು ಅವನ ಎಡಗೈ ಮುರಿದು ಹೋದವು. ಇನ್ನಿಬ್ಬರೂ ಹೆಣ್ಣಿಗೆ ತಲೆಯೆತ್ತಿ ಕತ್ತು ಸರಿಸದಂತೆ ಬಳಿಕ ಪೋಲೀಸರು ಸ್ತ್ರೀಯರಿಗೆ ಹೆದರಿಸಿ ವಾಪಸು ಹೋಗಿ ಅದನ್ನು ತಡೆದರು. ಸ್ತ್ರೀಯರು ಎರಗಿ ಹೋಗಲು ನಿರಾಕರಿಸಿದರು. ಪೋಲೀಸರು ಅವರ ಮೇಲೆ ಮಣ್ಣು ತೂರಿ ಅವರನ್ನು ಹಿಮ್ಮೆಟ್ಟಿಸಿದರು

ಅಸೆಂಬ್ಲಿಯ ವಿಶೇಷ ಅಧಿವೇಶನ

ಈ ಸಲದ ವಿಶೇಷ ಕಾರ್ಯದರ್ಶಿ ಮಂಡಳದ ಅಧಿವೇಶನದಲ್ಲಿ ಕೆಳಗಿನ ಕೆಲವು ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಮಾಡುವೆನೆಂಬುದಾಗಿ ಆ ಆ ಸಭಾಸದರು ವಂಗಡ ಸೂಚನೆ ಕೊಟ್ಟಿದ್ದಾರೆ.

ಬಾಬು ಗಯಾ ಪ್ರಸಾದ ಸಿಂಗರವರು ಪೇಶಾವರ ಪ್ರಾಂತದಲ್ಲಿಯ ದಂಡಿನ ಅಳಿಕೆ ಮತ್ತು ಇಂಟರ್ನಮೆಂಟ ಆರ್ಡಿನನ್ಸಿನ ಬಗ್ಗೆ ಸವಿಸ್ತರ ಸಂಗತಿಗಳನ್ನು ತಿಳಿಸುವ ಪ್ರಶ್ನೆ ಮಾಡುವವಂದ್ದಾರೆ.

ಡಂಗೆ, ಧೋಪೆ, ಕೊಲೆ, ಮೊದಲಾದವುಗಳಿಗಾಗಿ ನೆರೆ ಮನೆ ಸೇರಿದವರನ್ನು ಬಿಟ್ಟು ಗೊಟ್ಟು ಒಟ್ಟಿಗೆ ಎಷ್ಟು ಜನ ನೆರೆಮನೆ ಸೇರಿರುವರು, ಮತ್ತು ಕ್ಷಮೆ ಬೇಡಿ ಎಷ್ಟು ಜನರು ಹೊರಗೆ ಬಂದಿರುವರು ಎಂಬುದನ್ನು ತಿಳಿಸಲು ಶ್ರೀ ಸಿ. ಎಸ್. ರಂಗಅಯ್ಯರವರು ಪ್ರಶ್ನೆ ಕೇಳಿ ತಕ್ಕವರಾಗಿದ್ದಾರೆ.

ಮುದ್ರಣ ದಬ್ಬಾಳಿಕೆಯು ಶಾಸನಾನಿಗೆ ನುಸಾರವಾಗಿ ಎಷ್ಟು ಪತ್ರಗಳು ನಿಂತು ಹೋದವು, ಎಷ್ಟು ವಾರ್ತಾಲಯಗಳಿಗೆ ಜಪ್ತಿ ವಾದವು, ಎಷ್ಟು ಪತ್ರಿಕೆ ಹಾಗು ಮುದ್ರಣಾಲಯಗಳಿಗೆ ಹೊಸೆಯು ಕೇಳಲ್ಪಟ್ಟಿತು, ಹೊಸೆಯಾಗಿ ಒಂದು ಹಣದಲ್ಲಿ ಎಷ್ಟು ಹಣವು ಜಪ್ತು ಮಾಡಲ್ಪಟ್ಟಿತು, ಯುರೋಪಿಯನ್ನರ ಆಡಳಿತೆಯಲ್ಲಿ ಸಾಗಿದ ಎಷ್ಟು ಮುದ್ರಣಾಲಯಗಳಿಗೆ ದಬ್ಬಾಳಿಕೆಯು ಆರ್ಡಿನನ್ಸು ಹಚ್ಚಲ್ಪಟ್ಟಿತು. ಮತ್ತು ೯ ನೆಯ ಆರ್ಡಿನನ್ಸಿನ ಅನ್ವಯ ಒಟ್ಟಿಗೆ ಎಷ್ಟು ಸೆಕ್ಯೂರಿಟಿಗಳು ಸರಕಾರದ ತಿಜೋರಿಗೆ ತೆಗೆದು ಕೊಳ್ಳಲ್ಪಟ್ಟಿವೆ ಮೊದಲಾದವುಗಳ ವಿಷಯವಾಗಿ, ಸವಿಸ್ತರ ಸಂಗತಿ ತಿಳಿಸಲು ಕೇಳುವೆ ವಾಗಿ ಸರದಾರ ಕಾಂತಸಿಂಗರು ಸೂಚನೆ ಕೊಟ್ಟಿದ್ದಾರೆ.

ಬಂಡೀಗಾಲಿಯ ಪರಿಷತ್ತಿನ ಕಾರ್ಯಕಲಾಪ.

ಸಂಯುಕ್ತ ರಾಜ್ಯಘಟನೆಯ ಉಪ ಮಂಡಳದವರು ಕಾ॥ ೫ ನೆಯ ದಿವಸ ಮತ್ತೆ ಚರ್ಚೆನಡಿಸಿದರು. ಸರ್ ಮಹಮ್ಮದ ಶಾಫಿಯವರು ಮುಸಲ್ಮಾನರ ಪರವಾಗಿ ಭಾಷಣಮಾಡುವಾಗ, ಸೃಷ್ಟಿಯನ್ನು ಎಲ್ಲರ ನಿದರ್ಶನಕ್ಕೆ ತಂದ ಕೊಟ್ಟು, ಪ್ರೆಸಿಡೆರು ಸಂಯುಮಾನ ಮಂಡಳದಲ್ಲಿ ಭಾರತೀಯರನ್ನು ಸೇರಿಸಕೊಳ್ಳದಿದ್ದದು ಮತ್ತು ಸಧ್ಯದ ರಾಜ್ಯದಾಡಳಿತೆಯು ವಿಷಯವಾಗಿ ಜನರಲ್ಲಿ ಆರಂತೋಷ ಹುಟ್ಟಿಸಿದ್ದು ಇವೇ ಇಂತಹ ಕಠಿಣ ಪರಿಸ್ಥಿತಿಗೆ ಕಾರಣಗಳಾಗಿವೆ ಯೆಂಬುದಾಗಿ ವಿಶದ ಪಡಿಸಿದರು. ಬಳಿಕ ಅಲ್ಪ ಸಂಖ್ಯಾಕರು ವಿಶೇಷತಃ ಮುಸಲ್ಮಾನರು ಇವರ ಹಿತಸಂಬಂಧಗಳನ್ನು ಸಂರಕ್ಷಿಸುವಂತಹ ಪದ್ಧತಿಯು ಬೇಕಾಗಿರುವದೆಂದೂ, ಇಂಡಿಯಾ ಕಾನ್ಸಿಲನ್ನು ಮುಚ್ಚಿಬಿಡಬೇಕೆಂದೂ ಹೇಳಿ ಅವರು ತಮ್ಮ ಭಾಷಣ ಮುಗಿಸಿದರು.

ಬಳಿಕ ಲಾರ್ಡ್‌ರೀಡಿಂಗರು, ಹಿಂದೂ ಮುಸ್ಲ್ಮಾನರ ಪ್ರಶ್ನೆಯು ಬೇಗನೆ ಬಗೆಹರಿಯ ಬೇಕೆಂಬುದಾಗಿ ಆಶೆಯನ್ನು ವ್ಯಕ್ತಪಡಿಸಿ, ಸರ್ ಸಪ್ರೂರವರ ಯೋಜನೆಗೆ ಲಿಬ್ ಲ್ ಪಾರ್ಟಿಯ ಪರ ಬೆಂಬಲವಿದೆಯೆಂದೂ, ಹಿಂದುಸ್ಥಾನದ ಭಾವೀ ರಾಜ್ಯಘಟನೆಯಲ್ಲಿ ಇಂತಿಂತಹ ಭದ್ರತೆಗಳಿರಬೇಕೆಂದೂ ತಮ್ಮ ಮತವನ್ನು ವ್ಯಕ್ತಪಡಿಸಿದರು.

ಆಗಾಖಾನರು ಲಂಡನಕ್ಕೆ ಬಂದ ಕೂಡಲೆ ಮುಸಲ್ಮಾನ ಪ್ರತಿನಿಧಿಗಳು ಅವರ ಮನೆಯಲ್ಲಿ ಸೇರಿ, ಹಿಂದೂ ಮುಸಲ್ಮಾನರ ಪ್ರಶ್ನೆಯ ಬಗ್ಗೆ ಅಲ್ಪಸಂಖ್ಯಾಕ ಉಪಮಂಡಲದಲ್ಲಿ ಸರ್ ಸೆಟಲ್‌ವಾಡು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕುರಿತು ವಿಚಾರ ಮಾಡಿದರು. ಪಂಜಾಬದಲ್ಲಿ ೧೦೦ ಕ್ಕೆ ೫೭ ಹಾಗು ಬಂಗ್ಲಾದಲ್ಲಿ ೧೦೦ ಕ್ಕೆ ೫೫ ರಂತೆ ಪ್ರತಿನಿಧಿತೆಯನ್ನು ಕೊಡಲು ಹಿಂದೂ ಪ್ರತಿನಿಧಿಗಳು ಒಪ್ಪಿದಲ್ಲಿ ಮಾತ್ರ, ಸರ್ ಸೆಟಲ್‌ವಾಡು ಸಂಯುಕ್ತ ಮತದಾರ ಸಂಘದ ಯೋಜನೆಗೆ ಒಪ್ಪಿಗೆ ಕೊಡಬೇಕಾಗಿ ಕೆಲವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬಳಿಕ ಕೊತ್ತಿನ ವರೆಗೆ ಚರ್ಚೆಯಾಗಿ ಯಾವದೂ ನಿರ್ಣಯವಾಗಲಿಲ್ಲ ಬಳಿಕ ಅವರು ಮುಸಲ್ಮಾನರ ಈ ಬೇಡಿಕೆಗಳನ್ನು ಪೂರ್ತಿಗೊಳಿಸಿದಲ್ಲಿ ಮಾತ್ರ ಅವರು ಸಂಯುಕ್ತ ಮತದಾರ ಸಂಘದ ಯೋಜನೆಗೆ ಒಪ್ಪಿಗೆ ಕೊಡುವರಾಗಿ ಅಲ್ಪಸಂಖ್ಯಾಕ ಉಪಮಂಡಲದ ಸಭೆಯಲ್ಲಿ ಭಾಷಣ ಮಾಡಲು ಸರ್ ಮಹಮ್ಮದ ಶಾಫಿಯವರಿಗೆ ಕೇಳಿ ಕೊಂಡರು

ಬಹುಸಂಖ್ಯಾಕ ಮುಸಲ್ಮಾನರಿಗೆ ಭಿನ್ನ ಭಿನ್ನ ಮತದಾರ ಸಂಘಗಳೂ ಬೇಕಾಗಿದ್ದರೂ ಸಹ, ಅಲ್ಪಸಂಖ್ಯಾಕರಾಗಿ ಇಪ್ಪ ಪ್ರಾಂತಗಳಲ್ಲಿ ಅವರಿಗೆ ಈಗಿನಂತೆ ಸ್ಥಳಗಳನ್ನು ಕಾಯ್ದಿಟ್ಟಲ್ಲಿ ಮತ್ತು ಸಂಯುಕ್ತ ಮತದಾರ ಸಂಘದ ದ್ವಾರವಾಗಿ ಒಂಗಾಲ ಹಾಗು ಪಂಜಾಬ ಪ್ರಾಂತಗಳಲ್ಲಿ ಅವರಿಗೆ ಜನಸಂಖ್ಯೆಯ ಪ್ರಮಾಣಕ್ಕನುಸರಿಸಿ ಪ್ರತಿನಿಧಿತ್ವವನ್ನು ಕೊಟ್ಟಲ್ಲಿ, ಮುಸಲ್ಮಾನ ಪ್ರತಿನಿಧಿಗಳು ಸಂಯುಕ್ತ ಮತದಾರ ಸಂಘದ ಯೋಜನೆಗೆ ಒಪ್ಪಿಕೊಳ್ಳುವರೆಂಬ ದಾಗಿ ಸರ್ ಮಹಮ್ಮದ ಶಾಫಿಯವರು ಅಲ್ಪಸಂಖ್ಯಾಕ ಉಪಮಂಡಲದ ಸಭೆಯಲ್ಲಿ ಭಾಷಣ ಮಾಡಿದರು. ಡಾ. ಮುಂಜೆಯವರು ಹಿಂದೂ ಜನರ ಪರವಾಗಿ ಸರ್ ಮಹಮ್ಮದ ಶಫಿಯವರಿಗೆ ಉತ್ತರ ಕೊಟ್ಟರು, ಅವರ ವಿಚಾರಗಳು ತಮಗೆ ಸಮ್ಮತವಿಲ್ಲವೆಂಬ ದಾಗಿ ತಿಳಿಸಿದರು. ಸರ್ ಮಹಮ್ಮದ ಶಾಫಿಯವರು ತಮ್ಮ ಯೋಜನೆಯನ್ನು ಹಿಂದಕ್ಕೆ ತೆಗೆದುಕೊಂಡರು.

ಇಷ್ಟು ದಿನಗಳ ವರೆಗೆ ಬೇರೆ ಬೇರೆಯವರಿಂದ ಮಂಡಿಸಲ್ಪಟ್ಟ ಹಕ್ಕಿ ಬಾಧ್ಯತೆಗಳ ಸಂಬಂಧವಾಗಿ ವಿಚಾರ ಮಾಡಿ ಕಟ್ಟಾ ವರವಿಯನ್ನು ಸಿದ್ಧಪಡಿಸುವೆನೆಂಬ ದಾಗಿ ಹೇಳಿ, ಮಿ. ಮ್ಯಾಕಡೋನಾಲ್ಡರು, ಅಷ್ಟರಲ್ಲಿ ಒಡಂಬಡಿಕೆಯನ್ನುಂಟುಮಾಡಿಕೊಳ್ಳಲು ಎಲ್ಲರಿಗೂ ವಿನಂತಿ ಮಾಡಿಕೊಂಡರು.

ಸಂಯುಕ್ತ ರಾಜ್ಯಘಟನೆಯ ಉಪ ಮಂಡಲದಲ್ಲಿ ಕಾನ್ಸರ್ವೇಟಿವ್ ಪ್ರತಿನಿಧಿಗಳ ಪರವಾಗಿ ಭಾಷಣಮಾಡುವಾಗ ಸರ್ ಸ್ಯಾಮ್ಯುಯಲ್ ಹೋರೆಯವರು, ಸರ್ ಸಪ್ರೂರವರ ಯೋಜನೆಯನ್ನು ಸ್ವೀಕರಿಸಲ್ಲಿ ವಿನೇಚಿಸಿದರು. ಅದರಲ್ಲಿ ತಮಗೆ ಕಂಡು ಬಂದ ದೋಷಗಳನು ವಿವರಿಸಿ, ತಮ್ಮ ಸಂಕಲ್ಪನೆಯನ್ನು ತಾವೇ ಮಾಡಿಕೊಳ್ಳಲಿಕ್ಕೆ ಭಾರತೀಯರು ಇನ್ನೂ ಸಮರ್ಥರಾಗಿಲ್ಲವೆಂದೂ, ಭಾರತೀಯರ ತಮ್ಮ ತಮ್ಮೊಳಗೆ ಜಾತಿ ಮತ್ತು ಧರ್ಮ ಇವುಗಳ ಸಂಬಂಧವಾಗಿ ಹೊಡೆದಾಡುತ್ತಿರುವರೆಂದೂ ಅವರು ಹೇಳಿದರು ಬಳಿಕ ಶ್ರೀ ಜಯಕರ, ದಿವಾಣ ಬಹದ್ದೂರ ಎ ರಾಮಸ್ವಾಮಿ ಮುದಲಿಯಾರ ಹಾಗು ಬಿಕಾನೇರದ ಮಹಾರಾಜರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಆ ಮೇಲೆ ಸಭೆಯು ಮುಂದುವರಿಸಲ್ಪಟ್ಟಿತು.

ಎಲ್ಲ ಉಪಮಂಡಲಗಳೂ ಮುಂದಿನ ವಾರದಲ್ಲಿ ತಮ್ಮ ತಮ್ಮ ವರದಿಗಳನ್ನು ಒಪ್ಪಿಸುವದರಿಂದ ಪರಿಷತ್ತಿನ ಕಾರ್ಯವು ೨೧ ನೆಯ ತಾರೀಖಿನ ವರೆಗೂ ಸಾಗತಕ್ಕದ್ದಿದೆ.

ಹಿಂದುಸ್ಥಾನದ ಸಂಬಂಧವಾಗಿ ಭಾಷಣ ಮಾಡುವಾಗ ಮಿ. ಮ್ಯಾಕಡೋನಾಲ್ಡರು ಹೀಗೆ ಹೇಳಿದರು:—

ತನ್ನ ರಾಜ್ಯಕಾರಭಾರವನ್ನು ತಾನೇ ಸಾಗಿಸಿಕೊಳ್ಳುವಷ್ಟು ಹಿಂದು ಸ್ಥಾನಕ್ಕೆ ಸ್ವಾತಂತ್ರ್ಯ ಅಧಿಕಾರಗಳನ್ನು ಕೊಟ್ಟಲ್ಲಿ ಯಾವ ಅನಿಷ್ಟವೂ ಸಂಭವಿಸದು. ಇಂತಹ ಅಧಿಕಾರಗಳನ್ನು ಕೊಟ್ಟೇನೆ. ತನ್ನ ರಾಜ್ಯಭಾರವನ್ನು ಸಾಗಿಸಿಕೊಳ್ಳುವ ಸಂಪೂರ್ಣವಾದ ಭಾರವು ಹೊರಗಿನವರ ಮೇಲೆ ಇರದೆ, ತನ್ನ ಮೇಲೆಯೇ ಬಿದ್ದಿದೆಯೆಂದು ಹಿಂದುಸ್ಥಾನಕ್ಕೆ ಎನಿಸುವದು. ಆದರೆ ಇಂತಹ ಅಧಿಕಾರಗಳನ್ನು ಕೊಡುವ ವರೆಂದೆ ಅದರ ಭದ್ರತೆಯ ಕಡೆಗೆ ಮಾತ್ರ ಲಕ್ಷ್ಯ ಕೊಡಲು ಮರೆಯತಕ್ಕದ್ದಲ್ಲ.

ಎಮ್ಮೆಯ ಹೊಟ್ಟೆಯಲ್ಲಿ ಆನೆಯ ಮರಿ ಹುಟ್ಟಿತು

"ತಿವಟೊಗ್ಗ ಜಿಲ್ಲೆಯ ಹಳ್ಳಿಯು ಹೊಳೆ ಅಳಿಗಾಲ್ರಮದ ಗೌತರಾದ ಹನವಂತಪ್ಪನವರ ಮನೆಯಲ್ಲಿ ಎಮ್ಮೆಯು ಹೊಟ್ಟೆಯಿಂದ ಒಂದು ಆನೆಯ ಮರಿ ಹುಟ್ಟಿತು. ಆ ಮರಿಗೆ ಸೊಂಡಿಲು, ಕಿವಿಗಳು, ಕುಂಭಸ್ಥಲ, ಬಾಲ ಇವುಗಳು ಆನೆಯಂತೆಯೇ ಇದ್ದವು. ಕಾಲುಗಳು ಮಾತ್ರ ಎಮ್ಮೆಯ ಕಾಲುಗಳಂತೆ ಕಾಣಿಸುತ್ತಿದ್ದವು. ಅದು ಒಂದು ದಿನ ಮಾತ್ರ ಇದ್ದು ಸತ್ತು ಹೋಯಿತು. ಈ ವಿಚಿತ್ರ ಸೃಷ್ಟಿಯನ್ನು ಕಂಡು ಜನರೆಲ್ಲರೂ ಆಶ್ಚರ್ಯಪಟ್ಟರು." ಎಂಬುದಾಗಿ ಎಚ್ ಚನ್ನಬಸಪ್ಪನವರು "ಇಂದುವಾಡು" ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಿದ್ದಾರೆ.

ಚೀನದಲ್ಲಿ ಒಬ್ಬ ಮನುಷ್ಯನಿಗೆ ತಲೆಯ ಮೇಲೆ ಕೋಡುಗಳಿದ್ದು, ಓರ್ವ ಜಪಾನಿ ಡಾಕ್ಟರರು ಅವನನ್ನು ಪರೀಕ್ಷಿಸಿ ಬಹು ಆಶ್ಚರ್ಯಪಟ್ಟರು.

ಡಾ. ಹುಲ್ಯಾಳರ ಮೇಲಿನ ಸೀಡೆಯು ಹೋಯಿತು.

(ಸ್ವಂತ ಸುದ್ದಿ ಗಾರರಿಂದ)

ಜಮಖಂಡಿಯಲ್ಲಿಯ ಲೋಕಪ್ರಿಯ ಡಾಕ್ಟರಾಗಿರುವ ಹುಲ್ಯಾಳರ ಇವರ ಮೇಲಿನ ಗಂಡಿ ನೆಯ ಖಲವಿನ ಪ್ರಕರಣವು ಮುಂದೆ ಮುಂದೆ ಬೀಳುತ್ತ ಬಂದು, ತಾ॥ ೫—೧—೩೫ ನೆಯ ದಿವಸ ಪೋಲೀಸ ಫಿರ್ಯಾದಿಯು ತಿರುಗಿ ತೆಗೆದುಕೊಳ್ಳಲ್ಪಟ್ಟಿತು.

ಈ ಸಂಸ್ಥಾನದ ಪ್ರಜಾಪರಿಷತ್ತಿನ ೩ ನೆಯ ಅಧಿವೇಶನವು ಹುನ್ನೂರಲ್ಲಿ ಇದೇ ತಿಂಗಳ ಕೊನೆಗೆ ಅಥವಾ ಫೆಬ್ರುವರಿಯ ಮೊದಲನೆಯ ವಾರದಲ್ಲಿ ಕೂಡುವುದಿದೆ.

ಜೇಲಿನಲ್ಲಿ ಸತ್ಯಾಗ್ರಹಿಗೆ ಮರಣ

ಕಾಯಿದೆಭಂಗದ ಮೂಲಕವಾಗಿ ಶಿಕ್ಷೆಗೆ ಗುರಿಯಾದ ಶ್ರೀ ನಾರಾಯಣ ಗುಪ್ತರವರು ಶ್ರೀಹನಾಪಳ್ಳಿ ಜೇಲಿನಲ್ಲಿ ತಾ॥ ೮ನೆಯ ದಿವಸ ಅಸ್ವಾಸ್ಥದಿಂದ ಮರಣ ಹೊಂದಿದರಾಗಿ ತಿಳಿಯಿಸುತ್ತದೆ.

ಪರದೇಶಿ ಬಟ್ಟೆಯ ವಿರುದ್ಧ ೭೦೦ ಜನರ ಅನ್ನತ್ಯಾಗ

ಬಡೋದಾ ಸಂಸ್ಥಾನದಲ್ಲಿಯು ಪಟ್ಟಣದ ಜವಳಿ ವ್ಯಾಪಾರಸ್ಥರು ತಮ್ಮಲ್ಲಿಯ ಪರದೇಶಿ ಬಟ್ಟೆಯನ್ನು ಒತ್ತಟ್ಟಿಗೆ ಕಟ್ಟಿಡಲು ಒಪ್ಪಿಕೊಳ್ಳು ದ್ದರಿಂದ ಅಲ್ಲಿಯ ೭೦೦ ಜನರು ಶುಕ್ರವಾರ ದಿಹನಾ ತಮ್ಮು ಬಜಿಯವರ ನೇತೃತ್ವದಲ್ಲಿ ತಾ॥೬ರಿಂದ ಆ ಅಂಗಡಿಗಳ ಮುಂದೆ ಅನ್ನತ್ಯಾಗ ಸತ್ಯಾಗ್ರಹ ಹೂಡಿದ್ದಾರೆ ಕಮಾರಿ ದಹನಾ ತಮ್ಮುಒಜಿಯವರು ಶ್ರೀ ಅಬ್ಬಾಸ ತಮ್ಮುಒಜಿಯವರ ಪುತ್ರಿಯಾಗಿರುವರು.

ಪುಣೆಯ ಶ್ರೀ ಜಿ. ಎಸ್. ಕರಂದೀಕರಂ ತಾ॥ ೬ನೆಯ ದಿವಸ ಅಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮುಂದೆ "ಕೇಸರಿ" ಪತ್ರಿಕೆಗೆ ತಾವು ಸಂಪಾದಕ, ಪ್ರಕಾಶಕ ಹಾಗೂ ಮುದ್ರಕರಾಗಿದ್ದೇವೆಂದು ದಾಖಲಿ ರಿಜಿಸ್ಟ್ರೇಶನ್ ಮಾಡಿದರು. ಮಾಜಿಸ್ಟ್ರೇಟರು ಪ್ರೆಸ್ ಆಡಿನನ್ಸದನ್ವಯ ಇವರಿಗೆ ೧೦೦೦ ರೂಪಾಯಿ ಜಾಮೀನು ಇಡಲು ಕೇಳಿ ಕೊಂಡರು ಅದನ್ನು ಇಡಲ್ಪಟ್ಟಿತು.

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ ವನಸ್ಪತಿಗಳ ಅದ್ಭುತ ಮಹಿಮೆ.

* ಬಾಲಾರ್ಕಮಧು. *



ಇದನ್ನು ಮಕ್ಕಳು ಆನಂದದಿಂದು ಸೇವಿಸುತ್ತಾರೆ. ಇದು ಮಧುರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಉಣಿಸುವ ಹಾಲೂ ಅನ್ನವೂ ಮೈಗೆಹತ್ತಿ ಶರೀರದಲ್ಲಿ ಪೌಷ್ಟಿಕ ರಸಗಳುಂಟಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಮಕ್ಕಳಿಗೆ ಬಹು ಶಕ್ತಿಯೂ ದೀರ್ಘಾಯುಷ್ಯವೂ ಹೆಚ್ಚುವುದು. ಕೇವಲ ವೈದ್ಯ ಪೊಗಳಿಕೆಯೆಂದು ತಾತ್ಸಾರಮಾಡದೆ ಒಂದೇಒಂದು ಶೀಸೆ ತರಿಸಿಕೊಂಡಲ್ಲಿ ಇದರ ಅಪಾರ ಗುಣವು ತಾನಾಗಿ ತಿಳಿಯುವದು.

ದೊಡ್ಡ ಶೀಸೆ ೧ ಕ್ಕೆ ೦—೧೫—೦ ಟಪಾ. ಖ. ೦—೪—೦.

ಆರ್ಡರ ಜೊತೆಯಲ್ಲಿ ಅಡ್ವಾನ್ಸ ಪೈಸೆಯಾದರೂ ಕಳುಹಿಸಿಕೊಡಬೇಕಾಗುತ್ತದೆ. ಅಡ್ವಾನ್ಸ ಇಲ್ಲದ ಆರ್ಡರಗಳನ್ನು ಗಮನಿಸುವದಿಲ್ಲ.

M. V. Prasadika Oushadhalaya, SHIMOGA.
Mysore State.

ಲೋಕದಲ್ಲಿ ಅತ್ಯಂತ ಸುಖಿ

ಎಂದರೆ ಸಂಪೂರ್ಣವಾದ ಆರೋಗ್ಯವನ್ನು ಹೊಂದಿದವನೇ ಸೈ. ಅನೇಕ ಹತ್ತು ವರ್ಷದ ಹುಡುಗರು ಸಹ ವಿವಿಧ ದುಶ್ಚಟಗಳ ಬಲಿಗೆ ಬಿದ್ದು, ತಮ್ಮ ಆರೋಗ್ಯವನ್ನು ಕೆಡಿಸಿಕೊಂಡು, ಹಾಸಿಗೆ ಹಿಡಿದು ಯಾತನೆಗೂ ಪಾತ್ರರಾದವರಾಗುವರು.

ಅತಂಕ ನಿಗ್ರಹ ಮಾತ್ರೆಗಳು

ತಾರುಣ್ಯದ ಸ್ವೈರವೃತ್ತಿಯ ಭೋಗದಿಂದಲೂ ಧಾತುವಿನ ಹ್ರಾಸದಿಂದಲೂ ಉಂಟಾದ ಎಲ್ಲ ಬಗೆಯ ದೌರ್ಬಲ್ಯಗಳಿಗೆ ಈ ಮಾತ್ರೆಗಳು ರಾಮಬಾಣವಾಗಿವೆ. ದೇಹಕ್ಕೆ ಒಳ್ಳೇ ಬಲ ಕೊಟ್ಟು, ಧಾತುವನ್ನು ಇವು ಪೋಷಿಸುವವು. ೩೨ ಗುಳಿಗೆಗಳ ಟಿನ್ನಿಗೆ ಬೆಲೆ ಒಂದೇ ರೂಪಾಯಿ. ಹೆಚ್ಚಿನ ಸಂಗತಿಗಳನ್ನು ಪುಸ್ತಕದಲ್ಲಿ ಹೂಗಿ ದೊರೆಯುವ ನಮ್ಮ ಕ್ಯಾಟಲಾಗಿನಲ್ಲಿ ನೋಡಿಕೆವಳ್ಳಿರಿ.

ಅತಂಕನಿಗ್ರಹ ಔಷಧಾಲಯ,
ನಂ. ೩೬, ಬ್ರಾಡ್ವೇ ಮದರಾಸು.

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರತ ನಗರದ ಶ್ರೇಷ್ಠಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ. ಕಾದಂಬರಿ)	೨—೪—೦
೩	ನೀಳ್ಕತೆಗಳು ಭಾಗ ೧.	೧—೪—೦
೪	ಪತಿವತೀಕರಣ ನಾಟಕ.	೦—೧೨—೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೧೨—೦
೭	ಲಕ್ಷ್ಮೀಬಾಯಿ ರಾಜ್ಞಿಯ ಚರಿತ್ರೆ.	೨—೦—೦
೮	ಶೈವ ಸುಧಾರ್ಣವ (ಸಚಿತ್ರ)	೩—೮—೦

ಬೇರೆಲ್ಲಾ ಪುಸ್ತಕಗಳಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಜಾಗಲಕೋಟೆ.

ಹಣವ ಕಂಪನಿಗಳೂ ಈ ವರೆಗೂ ಕೊಡದಷ್ಟು ಲಾಭವನ್ನು ಈ ೩ ವರ್ಷಗಳವರಿಗೆ ಒಂದೇಸವನೆ ಹಂಚಿದೆ

ಜನರಲ್

ಅಶ್ಯೂರನ್ಸ ಸೊಸಾಯಿಟಿ. ಲಿ. ಅಜಮೀರ.

ಈ ಸೊಸಾಯಿಟಿಯ ಆಸ್ತಿಯು ೨೫ ಲಕ್ಷ ರೂ. ಗಳಿಗಿಂತಲೂ ಮಿಕ್ಕಿದೆ

ಲಾಭ.

ವಿಮೆದಾರರಿಗೆ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೧ ನೇ ವರ್ಷದಲ್ಲಿ ಹಿಂದೆ ವಿಮೆ ಕಂಪನಿಯು ಕೊಟ್ಟ ಅತ್ಯಂತ ಹಚ್ಚು ಲಾಭದ ಹಣಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೩೫ ನೇ ಮಾರ್ಚ ತಿಂ.	೧೯೩೫ ನೇ ದಿಸೆಂಬರ ತಿಂ.	೧೯೩೬ ನೇ ದಿಸೆಂಬರ ತಿಂ.
ಇದೀ ಆಯುಷ್ಯದ (ತಡವಾಗಿ ಮಾಡಿಸುವುದಕ್ಕನ್ನು)	ಇದೀ ಆಯುಷ್ಯದ (ತಡವಾಗಿ ಮಾಡಿಸುವುದಕ್ಕನ್ನು)	ಇದೀ ಆಯುಷ್ಯದ (ತಡವಾಗಿ ಮಾಡಿಸುವುದಕ್ಕೆ
ವರ್ಷವೊಂದಕ್ಕೆ ೧೭ ½ ರೂ.	ವರ್ಷವೊಂದಕ್ಕೆ ೨೧ ½ ರೂ.	ವರ್ಷವೊಂದಕ್ಕೆ ೨೫॥ ೦/೦ ರೂ.
ವರ್ಷ.	ವಾರ್ಷಿಕ ಉತ್ಪನ್ನ.	ಹೊಸ ವ್ಯವಹಾರ.
೧೯೩೬	೬,೪೮,೪೭೦	೧೯,೨೫,೫೦೦
೧೯೩೭	೭,೧೧,೫೫೪	೩೮,೦೧,೫೦೦
೧೯೩೮	೯,೩೫,೫೦೧	೬೨,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರ ಹಾಗೂ ಅತ್ಯಂತ ಸೋಹಿತವಾದ ಗಳಿಕೆ ನಿಬಂಧಗಳ ಪೂರ್ಣ ಲಾಭವನ್ನು ಹೊಂದಿರಿ.

ಬಗಲಕೋಟೆಯ ಏಜಂಟರು:— ವಿ. ಜಿ. ಪರ್ವತಿಕರ ಮತ್ತು ಮಕ್ಕಳು.

ಜೀಪ ಏಜಂಟ:— ಎಸ್. ಆರ್. ಸರದೇಸಾಯಿ, ಮುಂಬೈ ನಂ ೪.

THE UNITED KARNATAK INSURANCE COMPANY
LTD. DHARWAR.

ಸುಸಂಧಿ ಕ್ಷರೆಮಾಡಿರಿ ಕಳೆದುಕೊಳ್ಳ ಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ.

(೧೯೧೪ ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೬ ನೆ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು.

೧ ಜೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ ಎಲ್ ಬಿ, ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಜೇರಮನ

೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಎಂಡ ಎಸ್ ಗದಗ

೩ ಶ್ರೀನಿವಾಸರಾವ ಶೇಷಗಿರಿರಾವ ಮುತಾಲಿಕದೇಸಾಯಿ ಬಿ ಎ ಆನ್ಲೇಗೇರಿ

೪ ಮಿ. ರಾಮಚಂದ್ರ ರಂಗೋ ಸಾವಕಾರ ವತನದಾರ ಹಳೇಹುಬ್ಬಳ್ಳಿ

೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ

೬ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡದಹುಬ್ಬಳ್ಳಿ ವಕೀಲ ಬೈಲಹೊಂಗಲ

೭ ಮಿ॥ ಅನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

೮ ರಾಮರಾವ ವೆ ಭಂಡಿವಾಡ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ

೯ ಅಬ್ದುಲ್‌ಕರೀಮ ಅನೀಸಸಾಹೇಬ ಹಣಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊಸ ಇನ್‌ಶ್ಯೂರನ್ಸ ಕಂಪನಿಯೆಂದರೆ ಇದೇ ಮೊತ್ತಮೊದಲನೇದು. ಈ ಕಂಪನಿಯು ಡಾಯರೆಕ್ಟರರೂ ಮತ್ತು ಕೆಲಸ ನಡೆಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪನಿಗಳಿಗೆ ಏಜಂಟರಾಗಿದ್ದರೂ ವಿಮೆ ಇಳಿಸುವುದಕ್ಕೆ ಸಹಾಯವಾಗಿ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟು ಹೆರು ಪಡೆಯುವುದೆಂಬ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯು ಶೀಘ್ರದಲ್ಲಿ ಮಹಾರಾಷ್ಟ್ರಕ್ಕೆ ಇನ್ನುತ್ತರೆ ಮತ್ತು ವಿಮೆ ಇಳಿಸುವ ಕೆಲಸವು ಪ್ರಾರಂಭವಾಗಿರುವದು. ಶೀಘ್ರದಲ್ಲಿ ಮಹಾರಾಷ್ಟ್ರದಲ್ಲಿಯೂ ಮತ್ತು ವಿಮೆಯ ಕೆಲಸವನ್ನು ತಂದ ಕೊಡುವದಕ್ಕೂ ಎಲ್ಲ ಪೇಟೆ ಪೇಟೆ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಏಜಂಟರಾಗಲು ಸುಲಭ ಸವಲತ್ತುಗಳು ವಿಮೆಯ, ಮತ್ತು ಕಮಿಶನ ದರಗಳು ಲಾಭಕರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L Huilgolkar
ಸೆಕ್ರೆಟರಿ
ಯು. ಕ. ಇ. ಕಂ ಲಿ ಧಾರವಾಡ.

ಬಾಲಗೃಹ ಚೂರ್ಣ
ಬಾ. ಕಿ, ೧—೪—೦

ಡಾ. ಬೈಲೂರ.

ಥಂಡಿ ಉರಿಯ ಗುಳಿಗೆಗಳು
ಬಾ. ಕಿ. ೦—೮—೦

ಇವರ ಔಷಧಗಳು

ಕಾಫ್‌ಸಾಯಿರಪ್ :— ನೆಗಡಿ, ಗೊಬ್ಬರ, ಮೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ ಹಾರುವಿಕೆ (ಡಬಾ), ಕೋಡಗಕೆಮ್ಮು, ಇವುಗಳಮೇಲೆ ಹೊತರ್ತಾಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿಮೋನಿಯಾ ಬೇನೆಯಮೇಲು ನಮ್ಮ ಕಾಫ್‌ಸಾಯಿರಪ್‌ಔಷಧದ ಉಪಯೋಗವು ಚನ್ನಾಗಿ ಗುಣವದರಿಂದ ಎಲ್ಲರಿಗೂ ತಿಳಿಸುತ್ತೇವೆ. ಈ ಕಾಫ್‌ಸಾಯಿರಪ್‌ನ್ನು ಸಣ್ಣವಯಿಕ್ಕಾಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ್ನ ಪಥ್ಯಕದ್ದ ಬದಿಂತೆ ಕೊಡಲು ಅತಿಂತಿಲ್ಲ. ಇದು ಸಂಪ್ರಯಕ್ಕೆ ಯೋಗ್ಯವಾಗಿರುವದು. ಕಿ. ಸಣ್ಣ ಬಾ ೦.೬—೦ ದೊಡ್ಡ ಬಾ. ೧-೧೨—೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗ ವನ್ನು ಕರಿಸಿಕೊಳ್ಳಬಹುದು.

ಕಿ. ರೂ. ಕಿಂತ ಹೆಚ್ಚಿಗೆ ಔಷಧಗಳನ್ನು ತರ್ಸಿಕೊಳ್ಳುವವರಿಗೆ ಬಿಲ್ಲಿನ ಕಮಿಶನ್ ಮತ್ತು ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಪತ್ರ:— ಡಾ॥ ಹರಿ ಮುಹಾದೇವ ಬೈಲೂರ. ದ ಬೆಳಗಾವ.

ಎಲಿಶವಿಪೆಟ್ ಎಜನ್ಸಿ

ನಾವು ಕರ್ನಾಟಕ ಮೋಟರ ಟ್ರಾನ್ಸಪೋರ್ಟ ಕಂಪನಿಯು ಹಾಗೂ ವಿಲಿಶವಿಪೆಟ್ ಕಂಪನಿಯ ಸಬ ಎಜಂಟರಿರುತ್ತೆವೆ ಈ ಗಾಡಿಗಳನ್ನು ಕರಿಸಲಿಚ್ಛಿಸುವವರು ನಮ್ಮಕಡೆಯಿಂದಲೆ ತರಿಸಿಕೊಳ್ಳಬೇಕು ಬಹಳ ಸೋವಿಯಾಗುವದು. ಬಾಗಲಕೋಟೆಯಲ್ಲಿಯ ಸುತ್ತುಮುತ್ತಲಿನ ಖಾಸಗಿ ವ್ಯವಸ್ಥಿತ ಮೋಟರ ಮಾಲಕರು ಗೈಡೋವಿ ದೊರಕುವಾಗಬೇಕೆಂದು ಒಂದು ಜನರಲ್ ಮೋಟರಸ್ಟೋರ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲಕೋಟೆಯಿಂದ ವಿಜಾಪುರ ಇಲಕಲ್ಲ ನರಗುಂದ ಮುಂತಾದ ಸ್ಥಳಗಳಿಗೆ ಹೋಗುವದು.

ಪ್ರವಾಸಕ್ಕೆ ಗೈಡೋವಿಗೂರಾ ಒಂದು. ತಾ. ೩೦-೩-೩೦ ನೇ ದಿವ್ಸ (ಚೈತ್ರ ಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ.)

ಇಲಕಲ್ಲದಿಂದಾ ೯॥ಘಂಟೆಗೆ ಹೋಟು ಹುನಗುಂದಿ, ಅಮಿನಗಡ, ಕಮತಗಿ, ಗುಳೇದಗುಡ್ಡ, ಬದಾಮಿ, ಶ್ರೀ ಬನಶಂಕರಿದೇವಸ್ಥಾನ, ಹೊಳಪಗುಡ್ಡ ಕಡಿವಿ, ಜಾಲಿಹಾಳ, ಹುಲಿಹಾಳ, ಕೊಪ್ಪಾಳ, ರೋಣ, ಅಬ್ಬಿಗೇರಿ, ನರೆಗಲ್ಲ, ಕೊಟುಮಚಗಿ, ನಾರಾಣಾಪುರ, ಮಾರ್ಗವಾಗಿ ಗದಿಗ್ಗೆ ದಿನಾಲ ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದೆವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ, ಹೊರಟು ಸಂಜೆ ೫ ಘಂಟೆಗೆ ಇಲಕಲ್ಲಿಗೆ ಬಂದು ಮುಟ್ಟುತ್ತದೆ. ತರಾಸಿದ ಮೇಲೆಗಿಂತಾ ೧೫ ನಿಮಿಟ ಮುಂಚಿತವಾಗಿ ಪ್ಯಾಸಿಂಜರರು ಸ್ಟ್ಯಾಂಡಿನ ಮೇಲೆ ಹಾಜರ ಇರಬೇಕು ಡ್ರಾಯವರನವರಿಯಿಂದಾ ಮೋಟರನ್ನ ಸ್ಥಳವಿದ್ದಲ್ಲಿ ಖಾತ್ರಿಮಾಡಿಕೊಂಡು ಟಿಕೀಟು ತೆಗೆದು ಕೊಳ್ಳತಕ್ಕದ್ದು.

ಇದು ಅಲ್ಲದೆ ನಮ್ಮಲ್ಲ ಮೋಟರ ರಿಪೆರಿ ವರ್ಕಶಾಪ ಇರುತ್ತದೆ ಮತ್ತು ಹೊಸದಾಗಿ ಎಲ್ಲ ನಮುನೆಯ ಗಾಡಿಗಳಿಗೆ ಬಾಡಿಗಳನ್ನು ತಯಾರಿಸಿ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವೀಸ—
ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ವಿಲಿಶವಿಪೆಟ್ ಸೋಲ ಎಜಂಟ್ಸ ಅಂಡ ಬಾಡಿಬಿಲ್ಡರ್ಸ ಬಾಗಲಕೋಟೆ

THE POONA SCHOOL OF COMMERCE

Reopens on 16th June. Students coached for London Chamber of Commerce and other commercial examinations in banking, Accountancy Shorthand Type-writing etc. Apply for prospectus to:—

Secretary, Budhwar Chowk; Poona-city.

ಈ ಪತ್ರಿಕೆಯು ಬಾಗಲಕೋಟೆ ವಿದ್ಯಾವರ್ಧಕ ಮುದ್ರಾಣಾಲಯದಲ್ಲಿ ಮುದ್ರಿಸಲ್ಪಟ್ಟು ಕಛೇರಿಯಿಂದ ಪ್ರಕಟಿಸಲ್ಪಟ್ಟಿತು.

ರ. ನಂ. ಬಿ ೧೯೪೭೭ ವಾ. ಚಂ. ಅಂಚೇವೆಚ್ಚ ಸೇರಿ ೪ ರೂಪಾಯಿಗಳು ಮಾತ್ರ.

ಪ್ರತಿ ರವಿವಾರ ಪ್ರಕಟಿಸಲ್ಪಡುವದು.

ಯಥಾ ಧೇನವಃ ಕ್ಷೀರಂ । ಬಲಧಾನ್ಯಾನಿ ಭೂಮಯಃ ॥ — ಮನು

ಸಂಪಾದಕರು— ವೆಂಕಟೇಶ ಶೇತುರಾವಮಾಚಾರ್ಯ ಕೆರೂರ

ವರ್ಷ ೬	ಬಾಗಲಕೋಟ ರವಿವಾರ ಮುತ ಪುಷ್ಯ ೬ ಹೀ ೪ ಕಿ ೧೦ ಕಲಿಯುಗ ಕಾ. ೧೮-೧-೧೯೩೧ Kannadiga Date 18—1—1931.	೪೧

ದಿ. ಬಾಗಲಕೋಟ ಕೋ, ಆಪರೇಟವ್ಹ ಅರ್ಬನ್ ಬ್ಯಾಂಕ ಲಿ. ಬಾಗಲಕೋಟ.

ಠೇವುದಾರರಿಗೆ ಅಖಂಡವಾದ ಭದ್ರತೆ.

ಸ್ವಲ್ಪೇ ಹೆಚ್ಚಿನ ಬಡ್ಡಿಯ ಆಶೆಗಾಗಿ ಅಪರಿಚಯದವರ ಕಡೆಗೆ ಠೇವು ಇಟ್ಟು ಗಂಟು ಬಡ್ಡಿಯನ್ನು ಕೂಡಿಯೇ ಕಳೆದುಕೊಳ್ಳಬೇಡಿ ೧. ಪ್ರತಿವರ್ಷವು ನಮ್ಮ ಬ್ಯಾಂಕವನ್ನು ಸರಕಾರಿ ಆಡಿಟರರು ತಪಾಸ ಮಾಡುತ್ತಾರೆ. ಠೇವುದಾರರಿಗೆ ೧೦೦ ಕ್ಕೆ ೪ ಟಕ್ಕೆ ದಂತೆ ಡಿವಿಡೆಂಡ ಹಂಚಲ್ಪಟ್ಟಿದೆ. ಇದಕ್ಕೆ ಇನ್‌ಕಮ್‌ಟ್ಯಾಕ್ಸ ಬೀಳುವದಿಲ್ಲ.

ಠೇವುಗಳ ಬಡ್ಡೀದರವು ಕೆಳಗಿನಂತಿರುತ್ತದೆ.

ಚಾಲತೀ ಠೇವು.	ನೂರಕ್ಕೆ ವರ್ಷಕ್ಕೆ	೨॥
ಸೇವ್ಹಿಂಗ್ಸ ಬ್ಯಾಂಕ ಠೇವು	”	೪ ರಂತೆ
ವರ್ಷದ ಮುದ್ದತ ಠೇವು	”	೬ ರಂತೆ

ಹೆಚ್ಚಿನ ವಾಯ್ದದ ಠೇವಿನ ಮೇಲಿನ ಬಡ್ಡಿಯದರದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗ ಸವ.ಕ್ಷವಾ ವಿಚಾರ ಮಾಡಬೇಕು.
ಹೋಮ ಸೇವ್ಹಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೂಡಾ ಶೀಘ್ರವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆಶಿಸುತ್ತೇನೆ.

ಬಾಗಲಕೋಟ.
ತಾ॥ ೨೨-೨-೧೯೩೦

Sd/ D. R. Huddar
ಸೆಕ್ರೇಟರಿ

Sd/ M. S. Mangalwedhekar
ಚೇರಮನ್

ಕಿಲ್ಲೋಸ್ಕರ ನೇಗಿಲಗಳು



ಇವುಗಳ ವೈಶಿಷ್ಟ್ಯವು.

೧ ತಿರುಗುವ ಕುಳವುಳ್ಳದ್ದು.
೨ ಬೆಲೆಯಲ್ಲಿ ವಿದೇಶೀ ರೆಂಟಿಗಿಂತ ಅಗ್ಗ.
೩ ಲಕ್ಷಾವಧಿಜನರು ಹೂಡಿ ಅನುಭವಹೊಂದಿದು ಇರುವ ಕಾರಣ ಈ ನೇಗಿಲುಗಳಿಗೆ ಈ ಹಂಗಾಮಿನಲ್ಲಿ ರತೆಪಿಲ್ಲದೆ ಮಾಗಣಿಯುಂಟು. ಸದ್ಯಕ್ಕೆ ಹಂಗಾಮವು ಪ್ರಾರಂಭವಾಗಿರುವದು. ಇವತ್ತೇ ಆರ್ಡರಕೊಟ್ಟು ತರಿಸಿಕೊಂಡಲ್ಲಿ ಲಾಭವುಂಟು

ಕಿಲ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿಲ್ಲೋಸ್ಕರವಾಡಿ. ಜಿ. ಸಾತಾರಾ

ದಿ. ಅಶೋಕ ಬಾಂಕ ಲಿಮಿಟೆಡ್ ಬಾಗಲಕೋಟೆ.

೧೯೨೩ ನೇ ಇಸ್ವಿಯ ಇಂಡಿಯನ್ ಕಂಪನೀಜ ಆ್ಯಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಬಾಂಕಿನ ಠೇವಿನ ದರವು ಕೆಳಗೆ ತೋರಿಸಿದ ಪ್ರಕಾರಾ ಇರುತ್ತದೆ.

ಚಾಲತೀ ಠೇವಿಗೆ	ನೂರಕ್ಕೆ	ವರ್ಷಕ್ಕೆ	೨॥ ರೂ.
ಸೇವ್ಹಿಂಗ್ಸ ಬ್ಯಾಂಕ	”	”	೪ ರೂ.
ಮುದ್ದತೀ ಠೇವಿಗೆ	”	”	೬॥ ರೂ.

ಇದಲ್ಲದೆ ೩-೬ ಮತ್ತು ೯ ತಿಂಗಳ ಠೇವು ಇಡುವದಾದಲ್ಲಿ ಸಮಜಸವಬಂದು ದರವನ್ನು ಗೊತ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಅಂದರೆ ಬೆಳ್ಳಿ. ಭಂಗಾತ ಕಾಳುಕಡಿ ಸರಕಾರೀ ಕಾಗದ ಮತ್ತು ವಿಮೆಯ ವಾಲಿಸಿಗಳಮೇಲೆ ಸಹಾ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸವಲತ್ತು! ವರ್ತಕರು ತಮ್ಮ ಮಾಲನ್ನು ವ್ಹಿ. ಪಿ. ದ್ವಾರಾ ತರಿಸುವಬದಲಾಗಿ ನಮ್ಮ ಬ್ಯಾಂಕಿನ ಮುಖಾಂತರ ತರಿಸಿಕೊಂಡರೆ ನೂರಕ್ಕೆ ೧೨ ಆಣೆಯಂತೆ ಉಳಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಕೊಳ್ಳಬೇಕು.

V R Torvi
Managing Director

ಶವರಲೆಟ ಗಾಡಿಗಳ ಎಜನ್ಸಿ

ನಾವು ಹೊಸದಾಗಿ ಶವರಲೇಟ ಗಾಡಿಗಳ ಎಜನ್ಸಿಯನ್ನು ಹಿಡಿದಿರುತ್ತೇವೆ. ಕೊಳ್ಳುವವರು ನಮ್ಮ ಕಡೆಯಿಂದಲೇ ತರಿಸಿಕೊಳ್ಳಬೇಕು. ಅಂಥರ ಬಹಳ ಸೋಪಯೋಗುವದು,

ವಿಜಾಪೂರ ಜಿಲ್ಲೆಯಲ್ಲಿಯ ಮತ್ತು ಸುತ್ತು ಮುತ್ತಲಿನ ಪಾಸಗಿ ವ ಸರ್ವೀಸ
ಮೋಟಾರ ಮಾಲಕರಿ ಗ್ಯೆರಸೊಯ ದೂರವಾಗಬೇಕೆಂದು
ಆರ್. ಜಿ. ಚವ್ಹಾಣ ಎಂಡ ಸನ, ಬೆಳಗಾವ. ಇವರು ಮ್ಮ
ಜನರಲ ಮೋಟಾರ ಅ ಕ್ಸೆಸರಿ ಸ್ಟೋಅರ್ಸದ ಶಾಖೆಯನ್ನು
ತಾ॥ ೧೦ ಸೆಪ್ಟೆಂಬರ ೧೯೨೭ನೇ ಇಸ್ವಿಯಿಂದ ಬಾಗಲಕೋಟಿಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಜಿ. ಎಂ. ಸಿ., ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಯರ್ಸ, ಟೂಬ್ಸು, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಬೇರೆಯ ದರದಿಂದ ಸಿಗುವವು. ನಮ್ಮಲ್ಲಿ ಶೇಕಂಡ ಹ್ಯಾಂಡ ಡಾಜ್ ಶೇವ್ಹರೋಲೇಟ ಮತ್ತು ಇಂಟರ ನ್ಯಾಸನಲ್ ಗಾಡಿಗಳು ಜಾಲ ತಮ್ಮಲ್ಲಿ ಇರುವವು. ಯೋಗ್ಯ ಬೆಲೆಯಿಂದ ಮಾರಲಿಕ್ಕೆ ತಿರ್ಮಾನ ಮಾಡಲಾಗಿದೆ— ವಾಯ್ ಜಿ ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸು, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದ ದಿಂದ ವ್ಹಲ್ಕನಾಯಿಸ್ಕಿಂಗ ಮಾಡಿ ಕೊಡುವೆವು
ಬಾಗಲಕೋಟೆ—ಬೆಳಗಾವಿ ಬಾಗಲಕೋಟೆ ಇಳಕಲ್ಲ, ಸರ್ವೀಸ ಲಂಡಾಪ್ರಕಾರನಡೆಯುತ್ತೆ.

ಶುಲಭಕ್ರಯ! ಡಾಕ್ಟರ ಜೀ ಬೀ. ಯವರ ಸುಗಂಧ ನಶ್ಯದಪುಡಿ. ಶುಲಭಕ್ರಯ!!

ಪ್ರಸಿದ್ಧವಾದ ಈ ಸುಗಂಧ ನಶ್ಯಪುಡಿ ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಿಸಿ ಒಂಟಿ ತಲಿ ನೋವು ತಲೆಯಲ್ಲಿನ ಭೋಗಗಳು ಕಣ್ಣುಗಳಲ್ಲಿ ಉಂಟಾಗುವಕ್ಕ ಸಮವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂತಕ್ಕೆ ಮೇಲ್ಪಟ್ಟ ೬೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರುಬೊಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಪುಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ ವ್ಹಿ. ಪಿ. ೪ ಆಣೆ. ಡಜನ್ ೧ ರೂ. ಕ್ರಯ ರೂ ೨—೮—೦ ವ್ಹಿ.ಪಿ. ಚಾರ್ಜು ೪ ಆಣೆ.

Registered Trade mark

ವಿಳಾಸ—ಗುರುಬಸವ ಅಂಡ್ ಕಂಪೆನಿ,ಲಿಮಿಟೆಡ್ ಪೊ ಬಾ ಗಾ ಪಾರ್ಕಟೌನ ಮದರಾಸು.

☞ ದಯಮಾಡಿ ನಮ್ಮ ಹೆಸರನ್ನು ಅಡ್ರೆಸ್ಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ಭೂಲೋಕದ ಕಾಮಧೇನು

ದೇವಲೋಕದ ಕಾಮಧೇನು ಹೇಗೆ ದೇವತೆಗಳ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷವಿದಿಗಳನು ಕೊಡುವ—

ಕ್ರಯವು ಇನಾಂ!!! ಜಾ, ಹಾನಿಯು ಇಲ್ಲದೆ
ನರರಿಗೆ ಉಚಿತವಾಗಿ ಕೊಡುವ ಶುದ್ಧ ನಮ್ಮ

ವೈದ್ಯವಿದ್ಯೆ

ಯಿಂಬ ಆರೋಗ್ಯ ವರ್ಧಕದಲ್ಲಿ ಅನೇಕ ರಹಸ್ಯವಾದ ವಿಷಯಗಳಿವೆ.

ಏಜಂಟರು:—ಜಂಬುಲಿಂಗೆಪ್ಪಾ ಜಾಲವಾದಿ.
ಸ್ವೀಕರಸರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
೧೯೪,ಸ್ಟೀವನಾಟಜಾರ್, ಮದರಾಸು

ಸೋಡಿದರೆ ಬಿಡದಿರುವ ಕಾದಂಬರಿಗಳು.

೧	ಮಹಾತ್ಮಾ ಶುಲಸೀದಾಸ	೧—೪—೦
೨	ಜಲಂಧರ ನಾಟಕ	೦—೧೦—೦
೩	ವಡಗಾನದ ವಿಷಯ	೧—೪—೦
೪	ಅಂಜಿಕೆ	೧—೪—೦
೫	ಬಾಳಾಗ್ನಿ ತಿಲಕ	೧—೪—೦
೬	ನಂದೀರ ಕಾಶೀನು	೧—೪—೦
೭	ಭಗವಾ ದಾಸ	೧—೦—೦
೮	ಸ್ವಪ್ನಲೀಲೆ	೧—೧೨—೦
೯	ಕಂಕಣಜೋರ	೧—೪—೦
೧೦	ಭಯಂಕರ ಕೊಲೆ	೦—೧೨—೦
೧೧	ಇಂದಿರಾಮಂಜಿ	೦—೧೦—೦
೧೨	ಪದ್ಮಡಿ ಕಮಲಾ	೧—೦—೦

ಇವೆಲ್ಲ ನೂರಾರು ಬಗೆಯ ಪುಸ್ತಕಗಳು ಪ ಮ್ಮಲ್ಲಿಸಿಗುವವು. ಕ್ಯಾಟಲಾಗಿಗೆ ಬರೆಯಿರಿ. ಬು ಕ್‌ಸೆಲ್ಲರಿಗೆ ಧಾರಾಳವಾದ ಕಮಿಶನ್

ವಿಳಾಸ:— ಫಿ. ಪ ಕಾಲೆ
ಪೋ. ಅನಂದವನ, (ಜಿ ನಾರವಾಡ)

ಕ ನ್ನ ಡಿ ಗ.

ಕನ್ನಡಿಗ ಪುಸ್ತಕ ಬಗ್ಗೆ ೩೦ ಶಕೆ ೧೮೮೫

ತನ್ನ ಜನನಿಯ ತೋಡಿದಂಥ ಮುಳ್ಳನೆದೆಯೊಳ್
ತನ್ನ ಪಾದದು ಚುನ್ನ ಮೇಣಬಸ್ತಿಯನೊಂದು
ಚಿನ್ನಯಾಕಾಶದಲ್ಲಿ ।

ಲೇಖನ ಸ್ವಾತಂತ್ರ್ಯಕ್ಕೆ ತಡೆಹಾಕುವ ಕರಾಳ ಶಾಸನವಾದ ಪ್ರೆಸ್ ಆರ್ಡಿನನ್ಸ

ಜೀವಿಸಿರುವಷ್ಟು ಕಾಲ
ನಾವು
ಅದರ ನಿಷೇಧಾರ್ಥವಾಗಿ

ಅಗ್ರಲೇಖ ಬರೆಯುವದೇ ಇಲ್ಲ.

ವಾಙ್ಮಯ ಪರಿಚಯ

ತ್ಯಾಗವೀರ ಲಿಂಗರಾಜರ ಚರಿತ್ರೆ— ಬರೆದವರು ಶ್ರೀ ಹರ್ಡೇಕರ ಮಂಜಪ್ಪನವರು ಪುಟಗಳು; ಕ್ರೌನ ಅಷ್ಟಮಾಲಿಕದ ೯೨ ಬೆಲೆ ೧—೧೦—೦

ಯಾರಿದಾದರೂ ಜೀವನ ಚರಿತ್ರೆಯನ್ನು ಬರೆಯುವಾಗ, ಚರಿತ್ರಕಾರನು ಚರಿತ್ರನಾಯಕನೊಡನೆ ಸಹೃದಯನಾಗಿ ಅವನ ಸಾಹಸ ಸಂಪಾದನೆಗಳನ್ನು ಸಹಾನುಭೂತಿಯಿಂದ ಆಲೋಕಿಸುವದೇ ಶ್ರೇಷ್ಠವಾದ ಮಾರ್ಗವು ಈ ಶ್ರೇಷ್ಠದೃಷ್ಟಿಯಿಂದಲೇ ಈ ಗ್ರಂಥವು ಬರೆಯಲ್ಪಟ್ಟಿದ್ದರಿಂ, ಈ ಪುಸ್ತಕದ ಪಾಠನದಿಂದ ಓದುಗರ ಮನಸ್ಸು ವಿಕಾಸ ಹೊಂದುವಂತಿಲ್ಲ. ಹೀಗಾಗುವದಕ್ಕೆ ಚರಿತ್ರನಾಯಕನಲ್ಲಿ ಅಂತಹ ಗುಣಾಂಶಗಳು ಇಲ್ಲದಿರುವದೇ ಕಾರಣವಾಗಿರಬಹುದೆಂದು ನಮ್ಮ ಊಹೆ. ದೈವದ ಲಾಟೆಯಿಂದ ದೊಷ್ಟ ನೀಚ ಗತಿಯಾಗಿದಿಗೆ ಬಂದ ಲಿಂಗರಾಜರಲ್ಲಿ ಅಂತಹ ಅಸಾಮಾನ್ಯ ಸದ್ಗುಣಗಳು ಇದ್ದದ್ದು ಈ ಚರಿತ್ರೆಯಲ್ಲಂತೂ ಒಡೆದು ಕಾಣುವಂತಿಲ್ಲ.

ಲಿಂಗರಾಜರು ಅಕ್ಕಹಕ್ಕಿಳ್ಳೆ ಹವಣಿಸಿದ ಅವರ ಅಧೀರತೆಯನ್ನೂ ರೈತರು ವಿರೋಧಿಸುತ್ತಿದ್ದರೂ ಸರಕಾರದ ಬೆಂಬಲದಿಂದ ಭೂಕಂದಾಯವನ್ನು ವಸೂಲಿ ರೈತರ ಜೋರಿಯನ್ನು ಹೆಚ್ಚಿಸಿ ತಮ್ಮ ಆದಾಯವನ್ನು ಬೆಳ್ಳಿಚ್ಚಿದ್ದು ಅವರ ಧನೇಷಣೆಯನ್ನೂ, ಒಂದು, ಎರಡು, ಮೂರು ಹೆಂಡತಿರು ಕಾರಾಧೀನರಾಗಿ ಹೋದಮೇಲೆ ತಾವು ವಿರಾಗಿಗಳವರಾಗಿದ್ದರೂ ಇನೇ ಇನೇ ಹೆಣ್ಣುಗಳನ್ನು ಮದುವೆಯಾದದ್ದು ಅವರ (ದಾರೇಷಣ ಅನ್ನೋಣಾಬೇಡ) ಅವರ ಪುತ್ರೇಷಣವನ್ನು ಹೊರಗೆಡಹಿ ಅವರನ್ನು ತೀರ ಸಾಮಾನ್ಯ ಕೋಟಿಗೆ ಎಳೆದುಬಿಡುತ್ತವೆ. ಚರಿತ್ರಕಾರನ ಲೇಖಣಿಯ ಪ್ರಭಾವದಿಂದ ಮೂಕ್ಕೆ ತಂತ್ರಯು ಸಮಾಜಕ್ಕೆ ಆದರ್ಶಪ್ರಾಯವಾದೀತೆಂದು ಆಶಿಸುವದೇ ಅಲ್ಲ. ದ್ಯಾಕ್ಟೆಡ್ಡಾ ತೀಲರೂ ಗುಣಗಂಭೀರರೂ ಆದ ಮಂಜಪ್ಪನವರಿಂದ ಸಹಜವಾಗಿ ಹರಿದಿರುವ ವಾಕ್ಪ್ರವಾಹಿನಿಯ ಗಾಂಭೀರ್ಯವು ಕೆಲವು ಕೆಡೆಗೆ ವಿಷಯ ಕ್ಷುದ್ರತೆಯ ಮೂಲಕ ಹೊಳ್ಳು ಶಬ್ದಾಡಂಬರದಂತೆ ಭಾಸವಾಗುವದು. ಶೌರ್ಯ ಸಾಹಸ ಔದಾರ್ಯಾದಿಗಳ ಉದಾಹರಣೆಗಳು ಸಾಕಷ್ಟು ಇಲ್ಲದ್ದರಿಂದ ಲಿಂಗರಾಜರ ಪತ್ನಿಯರನ್ನು ವಿಜಾಪುರ ಕೈ ಹೆರಿಯಲಿಕ್ಕೆ ತಂದಿದ್ದನ್ನೂ, ಲಿಂಗರಾಜರು ತಾವು ಇರಲಿಕ್ಕೆ ಬೆಳಗಾವಿಯಲ್ಲಿ ಬಂಗಲೆಯನ್ನು ಕಟ್ಟಿಸಿದ್ದನ್ನೂ ಚರಿತ್ರೆಯಲ್ಲಿ ಬರೆಯುವ ಭಾಗವು ಚರಿತ್ರಕಾರಂಗೆ ಬಿತ್ತಿದಂಬುದಾಗಿ ತೋರುತ್ತದೆ. ಅದಕ್ಕೆ ಅಂಗರಾಜರ ಜೀವನದ ಹರಮಕ್ಕಿತಿಯನ್ನು ಎಷ್ಟು ಕೆಂಕಾಡಿದರೂ ತೀರದು. ಮಂಜಪ್ಪನವರು ಆ ಬಗೆ ಒಂದು ಮಹಾ ಕಾವ್ಯವನ್ನು ಬರೆಯಬಹುದಾಗಿತ್ತು. ಈ ತಮ್ಮ ಮೃತ್ಯುಪತ್ರದಿಂದ ಲಿಂಗರಾಜರು ವೀರಕ್ಕೆವೆ ಸಮಾಜಕ್ಕೆ ಮಾಡಿದ ವಹಿವಾಟಕಾವನ್ನು ಎತ್ತು ಹೊಗಳಿದರೂ ಕಡಿಮೆಯೇ. ಲಿಗವರು, ಲಿಂಗರಾಜರ ಬಂಗಾರದ ಪ್ರತಿಮೆಯನ್ನು ಮಾಡಿಸಿ ಮನೆಗಳಲ್ಲಿ ಪೂಜಿಸಿದರೂ ಆವರ ಋಣದ ಒಂದು ಕಣಕಾಂಶ ಸಹ ಮುಟ್ಟುವ ತಿಲ್ಲ. ಈ ಪುಸ್ತಕದ ಈ ಭಾಗವನ್ನು ಓದಿ ನಮ್ಮ ಲಿಂವ ಶ ಬಾಂಧವರಲ್ಲಿ ಅಲ್ಲಲ್ಲಿಗೆ ಲಿಂಗರಾಜರ ಸಿಸ್ಸೀಮ ತ್ಯಾಗದ ಉದಾಹರಣೆಗಳು ಬೆಳೆದು ಅ ಸಮಾಜವು ಹೆಚ್ಚು ಹೆಚ್ಚು ಮನ್ನಣೆಗೆ ಪಾತ್ರವಾಗಲೆಂಬುದೇ ನಮ್ಮ ಪ್ರಾರ್ಥನೆ.

ಬಿಡುಗಡೆಹೊಂದಿದ ಸೆರೆಯಾಳುಗಳ ಪರಿಷತ್ತು

ಪ್ರಕೃತ ಕಾಯದೇಫಂಗ ಚಳವಳಿಯು ಆರಂಭವಾದುದಿಂದ ಅಂದರೆ ಕಳೆತ ೧೯೨೦ ಕಿಂಗಳುಗಳಲ್ಲಿ ಕರ್ನಾಟಕದಲ್ಲಿ ಸುಮಾರು ೩೦೦೦ ಜನರು ಸೆರೆಯಾಳುಗಳಾಗಿರಬಹುದು. ಅವರಲ್ಲಿ ಎಷ್ಟೋ ಮಂದಿ ತಮಗಾಗಲೇ ಬಿಡುಗಡೆಹೊಂದಿ ಮನೆಗೆ ಕಮ್ಮೆ ಊರುಗಳಿಗೆ ಬಂದಿರುವರು. ಆನೇಕ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯ ಬಂಧಮುಕ್ತ ಸೆರೆಯಾಳುಗಳೆಲ್ಲರೂ ಒಂದೆಡೆಗೆ ಸೇರುವದು ಅವಶ್ಯವಿದೆ ಸೆರೆಮನೆಯಲ್ಲಿಯ ಅನುಭವ ಹೇಳೋಣ, ಸೆರೆಮನೆಯಲ್ಲಿ ಅವಶ್ಯವಿದ್ದ ಸುಧಾರಣೆಗಳ ವಿಚಾರ ಸೆರೆಮನೆಯಲ್ಲಿ ನಾವು ಅಚರಿಸಬೇಕಾದ ರೀತಿ ಮತ್ತು ಪಾಲಿಸಬೇಕಾದ ನಿಯಮ ಈ ವಿಷಯಗಳ ವಿಚಾರವು ಮಹತ್ವದ್ದಿರುವದು. ಇವೆಲ್ಲದೆ ಮುಂದೆ ವಿಧಾಯಕ ಕಾರ್ಯಕ್ಕೆಮ ಪದೇಶಿಕ ಖಾದಿಕ್ಷಾರ ಹಾಗು ಗ್ರಾಮಸಂಘಟನೆಯ ಕಾರ್ಯಮುಂತಾದವುಗಳನ್ನು ಸಂಘಟನಾರೀತಿಯಿಂದ ಮಾಡುವ ವಿಚಾರವನ್ನು ನಾವು ಇನ್ನು ಮಾಡಬೇಕು

ಈ ವಿಷಯದ ವಿಚಾರ ಮಾಡುವದಕ್ಕಾಗಿ ನಿಮ್ಮ ಜಿಲ್ಲೆಯಲ್ಲಿಯ ಬಂಧಮುಕ್ತ ಸೆರೆಯಾಳುಗಳ ಪರಿಷತ್ತನ್ನು ನಾವು ಆದಷ್ಟು ತೀವ್ರದಿಂದ ಅಂದರೆ ಮುಂದಿನ ವಾರದಲ್ಲಿ ಕೂಡಿಸಬೇಕು. ಜಿಲ್ಲೆಯಲ್ಲಿಯ ಬಂಧಮುಕ್ತರಾದ ಪ್ರತಿಯೊಬ್ಬ ಸಕ್ರಿಯಕಾರ್ಯಕರ್ತರಿಗೂ ಪರಿಷತ್ತಿನ ಆಮಂತ್ರಣವನ್ನು ತಿಳಿಸಿ ಅವರನ್ನು ಬರಮಾಡಿಕೊಳ್ಳಬೇಕು. ನಿಮ್ಮ ಜಿಲ್ಲೆಯಲ್ಲಿಯ ಅನುಭವಿಕ ಹಿರಿಯ ಸಕ್ರಿಯಕಾರ್ಯಕರ್ತರನ್ನು ಈ ಪರಿಷತ್ತಿಗೆ ಅಧ್ಯಕ್ಷಸ್ಥಾನಿಗಿ ಆರಿಸಬಹುದು.

ಪರಿಷತ್ತಿನ ಕಾರ್ಯಕಲಾಪಗಳು ಜೊಳ್ಳವಾಗಿ ಪಡೆದು ವೈಶಿಷ್ಟ್ಯ: ಯಾವ ಯಾವ ಸಕ್ರಿಯಕಾರ್ಯಕರ್ತರು ಯಾವ ಯಾವ ಕಾರ್ಯವನ್ನು ಕೈಕೊಳ್ಳಬೇಕೆಂಬದನ್ನು ನಿರ್ಣಯಿಸಬೇಕು. ಆ ವಿಷಯಕ್ಕೆ ಬೇಕಾಗುವ ಎಲ್ಲ ಅಕ್ಷರಲೇಖನಗಳ ವಿಚಾರವನ್ನು ಮಾಡಬೇಕು

ಆ ವಿಷಯದಲ್ಲಿ ನಾವು ಏನು ಮಾಡಿರುವರೆಂಬ ವರದಿಯನ್ನು ಇಲ್ಲಿಗೆ ಕೊಡಲೆ ಬರೆದು ತೀಸುವದಾಗಬೇಕು. ಪರಿಷತ್ತಿನ ಕಾರ್ಯಕಲಾಪಗಳನ್ನು ಸಂಕ್ಷೇಪವಾಗಿ ತಿಳಿಸಬೇಕು.

ನಮ್ಮ ಬಂಧು
ರಂಗನಾಳ ತಿಪ್ಪಾಳದ

ಶ್ರೀ ಮುದವೀಡು ಕೃಷ್ಣರಾಯರಿಗೆ ೧೫ ತಿಂ. ಶಿಕ್ಷೆ

ಸಂಯಾಡದಲ್ಲಿ ಸಾರ್ವಜನಿಕವಾಗಿ ಭಾಷಣ ಮಾಡಕೂಡದೆಂಬುದಾಗಿ ಅಧಿಕಾರಿಗಳು ಹೊರಡಿಸಿದ ಆಜ್ಞೆಯನ್ನು ಅಮಾನ್ಯ ಮಾಡಿ, ರಾಷ್ಟ್ರಧ್ವಜವಂದನೆಯು ಸಮಾಪ್ತಿಯಾದ ತಕ್ಷಣ ಭಾಷಣ ಮಾಡಿದ ಕರ್ನಾಟಕದ ಕಡುಲೋಹಿಗಳಾದ ಶ್ರೀ ಮುದವೀಡು ಕೃಷ್ಣರಾಯರ ಖಟ್ಲೆಯು ವಿಚಾರಣೆಯು ಧಾರವಾಡ ಜಿಲ್ಲಾ ೨ನೇ ವಿಚಾರಣೆಯ ಕೋರ್ಟಿನಲ್ಲಿ ನಡೆದು, ಕಾ॥ ೧೫ನೇ ದಿವಸ ಅವರಿಗೆ ೫೦ ರೂ ದಂಡ ಇಲ್ಲವೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲಾಯಿತು. ಶ್ರೀ ಕೃಷ್ಣರಾಯರು ದಂಡವನ್ನು ಕೊಡಲು ನಿರಾಕರಿಸಿ, ಸೆರೆವಾಸದ ಅನುಭವವನ್ನು ತೆಗೆದುಕೊಳ್ಳಲು ಮತ್ತು ಸುಧಾರಣೆಯು ಸಾರಿ ಕಾರಾಗೃಹಕ್ಕೆ ತೆರಳಿದರು. ಅದರಂತೆ ಶನಿವಾರದಲ್ಲಿ ಇವರಿಗೆ ತಿಂಗಳು ಸಾದಾ ಶಿಕ್ಷೆಯಾಗಿತ್ತು.

ಶ್ರೀ ಭಿಸೆಯವರಿಗೆ ೯ ತಿಂಗಳ ಶಿಕ್ಷೆ

ಮಂತಾತಾ ಸಮಾಜದ ಪ್ರಸಿದ್ಧ ಮುಂಬಳಿಗರೂ, ಧಾರವಾಡ ನಗರ ಸಭೆಯ ಸದಸ್ಯರೂ ಆಗಿರುವ ಶ್ರೀ ನರಸಿಂಗರಾವ ಭಿಸೆಯವರಿಗೆ ೧೫ನೇ ನೆಯ ಕಲಮಿನನ್ವಯ ಕಾ॥ ೧೫ನೇ ದಿವಸ ೯ ತಿಂಗಳ ಕಾರಾಗೃಹವಾಸದ ಶಿಕ್ಷೆಯು ದೊರೆತಿದೆ.

ಹಾವೇರಿಯಲ್ಲಿ ಲಾಠೀರಾಜ್ಯ

೧೨ ಜನರಿಗೆ ಗಾಯ

ಶ್ರೀ ನಧಶಿಖ್ಖಿ ನೊದಲಾದವನ್ನು ಜೈಲಿಗೆ ಹಾಕಿರುವ ಸುದ್ದಿಯನ್ನು ಕೇಳಿದ ಕೂಡಲೆ ಕಾ॥ ೧೫ನೇ ದಿವಸ ಸಂಪೂರ್ಣ ಹರತಾಳ ಪಾಲಿಸಲಾಯಿತು. ಊರ ಜನರು ವೆರವಣಿಗೆ ಹೊರಡಿಸಿದರು ಊರಲ್ಲಿ ಅಲ್ಲಲ್ಲಿ ಪೋಲೀಸರು ಗುಂಪುಗಳು ಸಜ್ಜಾಗಿ ನಿಲ್ಲಿಸಲ್ಪಟ್ಟಿದ್ದವು. ವೆರವಣಿಗೆಯು ದ್ಯಾವಮ್ಮನ ಕಟ್ಟಿಗೆ ಬರುವಷ್ಟರಲ್ಲಿ ಮಾಮಲೇದಾರರೂ ಪೊಲಿಸಾಧಿಕಾರಿಗಳೂ ಅಲ್ಲಲ್ಲಿ ಅದಕ್ಕೆ ಅಡ್ಡಿಮಾಡಿದರು. ಆದರೂ ವೆರವಣಿಗೆಯವರು ಚದುರಿ ಹೋಗಲಿಲ್ಲ. ಪೋಲೀಸರು ಲಾಠೀ ಪ್ರಹಾರ ಮಾಡಿದರು. ೧೦-೧೨ ಜನರಿಗೆ ಗಾಯಗಳಾಗಿವೆ. ಶ್ರೀ ಹನ್ನಪುಲ್ಲಪ್ಪ ಶಾಂತಾರಾಮ, ಅಪ್ಪಾಸಾ, ಕರಿಗುದರಿ, ಕಾಂಡೂ, ನಾಡಿಗೇರ, ಗುಡ್ಡೋಕುಲಕರ್ಣಿ ಮೊದಲಾದ ೧೨ ಜನರನ್ನು ಹಿಡಿದಿದ್ದಾರೆ. ಬಾದು ವಾಪಸಾದ ವರೆಗೆ ಸಭೆಗಳನ್ನು ಜರುಗಿಸಕೂಡದೆಂಬುದಾಗಿ ಅಧಿಕಾರಿಗಳು ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಶ್ರೀ ಗೋವರ್ಧನದಾಸರಿಗೆ ೮ ತಿಂಗಳ ಕಠಿಣ ಶಿಕ್ಷೆ

ಬಾಗಲಕೋಟೆಯಲ್ಲಿ ಕೌನ್ಸಿಲ್ ಚುನಾವಣೆಯು ಪಿಕೆಟಿಂಗ ಕಾರ್ಯ ಕರೂರಲ್ಲಿ ಅಡವಿಯು ಕಾಯ ದೆಭಂಗ ಇವುಗಳ ಬಗ್ಗೆ ಪ್ರಾಪ್ತವಾದ ಬೇರೆ ಬೇರೆ ಶಿಕ್ಷೆಗಳನ್ನು ವಜಾಮಾಡಿಕೊಂಡು, ವಿಜಾಪುರ ಜೇಲಿನಿಂದ ಹೊರಬಿದ್ದಕೂಡಲೆ ಮತ್ತೆ ಬಂಧನಕ್ಕೆ ಸ್ವಇಚ್ಛೆಯಿಂದ ಬದಾಮಿಗೆ ಕರೆದೊಯ್ಯಲ್ಪಟ್ಟ, ಶ್ರೀ ಗೋವರ್ಧನ ದಾಸರಿಗೆ ಬೇರೊಂದು ಅಪರಾಧಕ್ಕಾಗಿ ಮತ್ತೆ ೮ ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯು ದೊರೆತಿರುವದಾಗಿ ತಿಳಿದ ಬಂದಿದೆ.

ಬಳ್ಳಾರಿಯಲ್ಲಿ ೧೫ಳಳನೆಯ ೫ಲಮು ಮುರಿದರು

(ಸ್ವಂತ ಸುದ್ದಿಗಾರರಿಂದ)

ಕಾ॥ ೧೫ನೆಯು ದಿವಸ ಜಿಲ್ಲೆಯ ಶ್ರೀ ಅಮರಪ್ಪ ಗದಗ ಇವರು ಇತರ ನಾಲ್ಕು ಜನ ಸ್ವಯಂಸೇವಕರೊಡನೆ, ಬೆಳಿಗ್ಗೆ ಪ್ರಕಾಶಸಂಕೇತನೆಯನ್ನು ಹೊರಡಿಸಿ, ೧೫ಳಳನೆಯ ೫ಲವನ್ನು ಮುರಿದರು. ಪೋಲೀಸ ಅಧಿಕಾರಿಗಳು ಹಾದಿಯಲ್ಲಿ ಅವರಿಗೆ ಅಡ್ಡಿಮಾಡಿ ಅವರನ್ನು ಸೆರೆಮಿಡಿದು ಕೊಂಡು ಹೋದರು.

ಲಾಹೋರ ಒಳಸಂಚಿನ ಖಟ್ಲೆಯು ಆರೋಪಿಗಳಾಗಿರುವ ಇಬ್ಬರು ಪಂಜಾಬಿ ತರುಣರನ್ನು ಈ ಊರಿನ ಸೆಂಟ್ರಲ್ ಜೇಲಿಗೆ ತಂದಿರುತ್ತಾರೆ.

ಮುಂಬಯಿಯಲ್ಲಿ ಡೊಣ್ಣೆಯ ರಾಜ್ಯ.

ಸೊಲ್ಲಾಪುರದ ಶ್ರೀ ಧನಶೆಟ್ಟಿ ವೆಂದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ಮುಂಬಯಿಗೆ ತಿಳಿದ ಕೂಡಲೆ ಮುಂಬಯಿಯಲ್ಲಿ ಸಂಪೂರ್ಣ ಹರತಾಳ ಆಚರಿಸಲಾಯಿತು. ಕೆಲವು ಜನರು ಟ್ರಾಮ್ಮನ್ನು ಕಾರ್ ಹಾಗು ಮೋಟಾರುಗಳಿಗೆ ಅಡ್ಡಿಮಾಡಿ ಪ್ರವಾಸಿಕರಿಗೆ ತೊಂದರೆ ಕೊಟ್ಟರು ಕೆಲವು ಪುಂಡ ಜನರು ಕಲ್ಲುಗಳನ್ನು ಒಗೆಯಲಾರಂಭಿಸಿದರು. ಇಷ್ಟರಲ್ಲಿ ಅಲ್ಲಿ ಪ್ರಚಂಡ ಜನಸಮುದಾಯವು ಬಂದು ನೆರೆಯಿತ್ತು. ಪೋಲೀಸರು ಹಾಗು ಕಾರ್ಪೊರೇಷನ್ ಲಾರಿಗಳಿಂದ ಜನರನ್ನು ಥಳಿಸಿ ಅವರನ್ನು ಚದುರಿಸಿದರು. ಸುಮಾರು ೭೦ ಜನರಿಗೆ ಪೆಟ್ಟುಗಳು ಬಿದ್ದವು.

ಬೆಳಗಾವಿಯಲ್ಲಿ ಝಾಂಗಟಿಯ ಮೇಲೆ ಗದೆ

ಬೆಳಗಾವಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಹಿಕೀಮತ ಸಾಹೇಬರು, ಡಿಸ್ಟ್ರಿಕ್ಟ ಪೋಲೀಸ ಕಾರ್ಯದರ್ಶಿಯು ೪೫ನೆಯ ಕಲಮಿನನ್ವಯ ಒಂದು ನೋಟೀಸು ಹೊರಡಿಸಿ, ಬೆಳಗಾವಿ ಪಟ್ಟಣ ಹಾಗು ದಂಡಿನ ಹದ್ದಿಯಲ್ಲಿ ೨ ತಿಂಗಳ ವರೆಗೆ ಝಾಂಗಟಿ ಬಾರಿಸಿಯಾಗಲಿ ಇಲ್ಲವೆ ಕಂಸು ಊದಿಯಾಗಲಿ ತಮ್ಮ ಸುತ್ತಲು ಯಾರೂ ಜನರನ್ನು ನೆರೆಯಿಸಿಕೊಳ್ಳಬಾರದೆಂಬು ದಾಗಿ ಆಜ್ಞೆ ವಿಧಿಸಿದ್ದಾರೆ

ಗೌಡನು ಚಳವಳಿಯಲ್ಲಿ ಸೇರಿದನು.

ಗುಜರಾತಿನ ಪ್ರಾಂತದ ಒಲಪಾಡ ತಾಲೂಕಿನಲ್ಲಿನ ರೈತರು ಹಪ್ತೆ ಕೆಡಬಾರದೆಂಬುದಾಗಿ ನಿರ್ಧರಿಸಿಕೊಂಡು ತಮ್ಮ ತಮ್ಮ ಹೊಲಗಳನ್ನು ಬಿಟ್ಟ ಹೊಗಟು ಹೋಗಹತ್ತಿದಾರೆ. ಈಗಾಗಲೆ ೩೦—೩೫ ಹಳ್ಳಿಗಳು ಬರಿದಾಗಿವೆ. ನ್ಯಾಸಿಎಂಬ ಹಳ್ಳಿಯ ರೈತರು ತಮ್ಮ ತಮ್ಮ ಮನೆಗೆ ಕೆಡಕಿ ಹಾಗು ಬಾಗಿಲುಗಳನ್ನಾದರೂ ತಮ್ಮೊಂದಿಗೆ ಒಯ್ದಿದ್ದಾರೆ ಅಲ್ಲಿಯಗೌಡನು ತನ್ನ ಸರಕಾರೀ ಉದ್ಯೋಗಕ್ಕೆ ರಾಜೀನಾಮೆ ಕೊಡದೆ, ಸತ್ಯಾಗ್ರಹ ಚಳವಳಿಯಲ್ಲಿ ಸೇರಿಕೊಂಡಿದ್ದನೆ

ಮಧ್ಯಪ್ರಾಂತದ ಸರ್ವಾಧಿಕಾರಿಗಳಿಗೆ ಶಿಕ್ಷೆ

ಸುಮಾರು ಮಧ್ಯಪ್ರಾಂತ ಸತ್ಯಾಗ್ರಹ ಯುದ್ಧ ವಂಡರದ ಸರ್ವಾಧಿಕಾರಿಗಳಾದ ಶ್ರೀ ಅಪ್ಪಾಸಾಹೇಬ ಹರದೆಯವರಿಗೆ ಅನ್ಯಾಯ ಶೀಟ ಆರ್ಡಿನನ್ಸ್‌ನನ್ವಯ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರೂ. ದಂಡ, ಇಲ್ಲವೆ ಮತ್ತೆ ೧೫ ತಿಂಗಳ ಸೆರೆವಾಸ ಹೀಗೆ ಶಿಕ್ಷೆಯಾಗಿದೆ.

ಬಾಗಲಕೋಟೆಯಲ್ಲಿ "ಸ್ವದೇಶಿ ಸ್ಟೋರ್ಸ" ಉದ್ಘಾಟನೆ ಸಮಾರಂಭ.

ಸೋಮವಾರ ಮಾಘ ಶುದ್ಧ ೧ ತಾರೀಖು ೧೯—೧—೧೯೩೧ ನೇ ದಿವಸ ಮುಂಜಾನೆ ೧೦॥ ಗಂಟೆಗೆ ಪೋಸ್ಟ ಆಫೀಸಿನ ಹತ್ತರಿರುವ ಅಂಗಡಿಯಲ್ಲಿ

ದೇಶದಲ್ಲಿ ಈಗ ಸ್ವದೇಶಿ ಮತ್ತು ಬಹಿಷ್ಕಾರದ ಗಾಳಿಯು ಬೀಸಹತ್ತಿರುವದರಿಂದ ಜನರು ಒಲವು ಹೆಚ್ಚಿಹತ್ತು ಸ್ವದೇಶಿ ಒಡವೆಗಳ ಕಡೆಗೆ ಹೊರಳಹತ್ತಿದಯಿಷ್ಟೆ, ಆದರೆ ನಿಜವಾದ ಸ್ವದೇಶಿ ವಸ್ತುಗಳು ಯಾವವೆಂಬದನ್ನು ತಿಳಿಯಲು ಸಾಮಾನ್ಯಮನುಷ್ಯರಿಗೆ ಬೊಡಲೇ ದುಸ್ತರವಾದ ಮಾತು. ಇದಲ್ಲದೆ ತಮ್ಮ ಬೇಳಿಕೆಯಿಟ್ಟುಕೊಳ್ಳಲು ಇದೇ ಸಮಯವೆಂದು ಕೆಲವರ್ತಕರು ಪರದೇಶಿ ವಸ್ತುಗಳಿಗೆ 'ಸ್ವದೇಶಿಯ' ವೆಂದು ಸುಳ್ಳು ಸೊಟ್ಟು ಹೇಳಿ ಗಿರಾಕಿಗಳನ್ನು ತಪ್ಪಿಸುತ್ತಿರುವುದೂ ಇದಕ್ಕೆ ಜೋಡಾಗಿದೆ. ವರ್ತಕರ ಈ ಸ್ವಾರ್ಥಕ್ಕೆ ಬೈತ್ತಿಗೆ ಕಡೆಯಾಗಬೇಕೆಂದೂ ಮತ್ತು ಗಿರಾಕಿಗಳಿಗೆ ವಿಶ್ವಾಸನೀಯವಾದ ಸ್ವದೇಶಿ ಒಡವೆಗಳು ಸುಲಭವಾಗಿ ದೊರೆಯಬೇಕೆಂದೂ ಈಗ ಅಲ್ಲಲ್ಲಿಗೆ ಕೇವಲ ಸ್ವದೇಶಿ ವಸ್ತುಗಳನ್ನಷ್ಟೆ ಮಾರುವಂಥ ಅಂಗಡಿಗಳು ಹೊಂಡಹತ್ತಿವೆ. ದೇಶಪ್ರೇಮದಿಂದ ಪ್ರೇರಿತರಾದವರೇ ಎಲ್ಲೆಲ್ಲೂ ಈ ಉದ್ಯಮೆಯಲ್ಲಿ ಮುಂದೆ ಬಂದಿದ್ದರಿಂದ ಈ ಅಂಗಡಿಗಳಿಗೆ ಜನರ ಮನ್ನಣೆಯೂ ಹೆಚ್ಚಿದೆ. ಅಂಥದೆ ಒಂದು ಅಂಗಡಿಯನ್ನು ಬಾಗಲಕೋಟೆಯಲ್ಲಿಯೂ ಹೊಂಡಿಸಬೇಕೆಂದು ಯೋಚಿಸಿದ್ದಾಗಿದೆ. ಅದು ಊರ ಜನರ ವಿಶ್ವಾಸಕ್ಕೆ ಪಾತ್ರವಾಗಬೇಕಾದರೆ ಅದು ಒಬ್ಬಿಬ್ಬರ ಒಡೆತನದವಾಗಿರಕೂಡದೆಂದು ನೆನೆದು ಅಂಥ 'ಶೆಅರ್ಸ' ಪದ್ಧತಿಯ ಮೇಲೆ ತೆರೆಯಬಕ್ಕದ್ದೆಂದು ನಿರ್ಧರಿಸಿದೆ ಇದರಿಂದ ಊರೊಳಗಿನ ದೇಶಪ್ರೀತಿಯುಳ್ಳವರೆಲ್ಲರೂ ಇದರಲ್ಲಿ ಭಾಗ ತೆಗೆದುಕೊಳ್ಳಲು ಅವಕಾಶವಾಗಿದೆ. ಈಗ ಕೆಲವು "ಶೇಅರ್ಸ"ಗಳು ಕೂಡಿದ್ದು ಸದರೀ ಅಂಗಡಿಯನ್ನು ಇದೇ ತಿಂಗಳ ೧೯ ನೇ ತಾರೀಖಿಗೆ (ಮಾಘ ಶುದ್ಧ ಪ್ರತಿಪದ) ಸ್ಥಾಪಿಸಿ ಅದರ ಉದ್ಘಾಟನೆ ಸಮಾರಂಭವನ್ನು ಪರಮ ದೇಶಭಕ್ತರಾದ ಶ್ರೀಮನ್ ದಿವಾಳರ ಹಸ್ತದಿಂದ ಜರುಗಿಸಬೇಕೆಂದು ಠರಾವು ಮಾಡಿದೆ. ಶೆಅರ್ಸ ಕೊಳ್ಳತಕ್ಕವರಾಗಲಿ, ಈ ಬಗ್ಗೆ ಇನ್ನೂ ಹೆಚ್ಚಿನ ಸಂಗತಿಗಳನ್ನು ತಿಳಿಯಲಿಚ್ಛಿಸುವವರಾಗಲಿ ಶ್ರೀ ಕರ್ವತಿ ವೆಂಕಟರಾಯರಿಗೆ (ಯೂನಿಯನ್ ಬ್ಯಾಂಕ) ಸಮಯ್ಪಿಸಿ ಭೆಟ್ಟಿಯಾಗಬೇಕು. ಉದ್ಘಾಟನ ಸಮಾರಂಭದ ಸಮಯದಲ್ಲಿ (ಸೋಮವಾರ ಬೆಳಿಗಿನ ೧೦॥ ಘಂಟೆಗೆ) ಎಲ್ಲರೂ ಬಂದು ಈ ಸೂಚನೆಯ ಪ್ರಯತ್ನಕ್ಕೆ ತಮ್ಮ ಅನುಮತಿ ಆಶೀರ್ವಾದಗಳನ್ನಿಯಬೇಕೆಂದು ಬೇಡಿಕೊಳ್ಳುವ.

ಬಾಗಲಕೋಟ ತಾ॥ ೧೭-೧-೧೯೩೧ } ಶ್ರೀ ಜೋಶಾಪೂರ ಕೃಷ್ಣರಾಯರು.

"ಫ್ರೀಪ್ರೆಸ್" ಪತ್ರಿಕೆಗೆ ೪೦೦೦ ರುಪಾಯಿ ಹೊಣೆ ಬೇಡಿದರು

ಮುಂಬಯಿಯ ರಷ್ಟ್ರೀಯ ಪಕ್ಷದ ಇಂಗ್ಲೀಷ ದೈನಿಕ ಪತ್ರಿಕೆಯಾದ "ಫ್ರಿಪ್ರೆಸ್" ಪತ್ರಿಕೆಗೆ ೪೦೦೦ ರುಪಾಯಿ ಸರಕಾರದವರು ಮುದ್ರಣಾಲಯ ಹಾಗು ಪತ್ರಿಕೆ ಇವುಗಳಿಗೆ ಕೂಡಿ ಪ್ರೆಸ್ ಆರ್ಡಿನನ್ಸದನ್ವಯ ಒಟ್ಟಿಗೆ ೪೦೦೦ ರುಪಾಯಿ ಹೊಣೆ ಬೇಡಿದ್ದಾರೆ.

ಅಹಮ್ಮದನಗರದ ಜೈಲಿನಲ್ಲಿ ಬಾಂಬು ಬಿತ್ತು

ಅಹಮ್ಮದನಗರದಲ್ಲಿ ತಾ॥ ೧೩ ನೆಯ ದಿವಸ ರಾತ್ರಿ ೯ ಗಂಟೆಗೆ ಯಾರೋ ಕೆಲವರು ಎಲ್ಲಿಯು ಸೊಸಾಯಿಟಿ ಹಾಯಸ್ಕೂಲದ ಕಂಪೌಂಡಿನಲ್ಲಿ ನಿಂತುಕೊಂಡ. ಜೈಲಿನೊಳಗೆ ಒಂದು ಬಾಂಬು ಒಗೆದರು. ಜೈಲಿನ ಕಾವಲು ಗಾರನನ್ನು ಕೊಲ್ಲುವದೇ ಅವರ ಉದ್ದೇಶವಾಗಿತ್ತು. ಅಂದು ಮುಂಜಾನೆ ಮೆರವಣಿಗೆಯ ಕಾಲಕ್ಕೆ ಸೆರೆ ಹಿಡಿಯಲ್ಪಟ್ಟ ಇಬ್ಬರು ಸ್ವಯಂ ಸೇವಕರು ಅಲ್ಲಿ ಇಡಲ್ಪಟ್ಟಿದ್ದರು. ಯಾರಿಗೂ ಅಪಾಯ ಸಂಭವಿಸಿಲ್ಲ. ಪೋಲೀಸರು ಈ ಬಗ್ಗೆ ಶೋಧ ನಡಿಸಿದ್ದಾರೆ.

ಬನಾರಸದಲ್ಲಿ ಬಾಂಬು ಹಾರಿತು

ಬನಾರಸದಲ್ಲಿ ತಾ॥ ೧೧ ನೆಯ ದಿವಸ ಸಂಜೆಯಲ್ಲಿ ಗೇಟಬಳಿಗೆ ಪೋಲೀಸ ಸ್ಟೇಷನದ ಹತ್ತರ ಒಂದು ದುಂಡುಗಿನ ಪದಾರ್ಥವು ಇಡಲ್ಪಟ್ಟಿತ್ತು. ಅಲ್ಲಿ ಹಾಯ್ದು ಹೋಗುತ್ತಿದ್ದ ಒಬ್ಬ ಮುಸಲ್ಮಾನ ಹುಡುಗನು ಕೈಯಲ್ಲಿ ತೆಗೆದುಕೊಂಡು ಅದನ್ನು ಪರೀಕ್ಷಿಸಿ ನೆಲದ ಮೇಲೆ ಧೊಸ್ಸನೆ ಒಗೆದನು. ಅದು ಒಮ್ಮಿಂದೊಮ್ಮೆ ಹಾರಿ ಅವನ ಕೈಗಳಿಗೆ ಗಾಯ ಮಾಡಿತು.

ಬಾಧಾಭಾಯಿಯವರ ಮೊಮ್ಮಗಳಿಗೆ ಶಿಕ್ಷೆ

ಸ್ವಲ್ಪ ದಿನಗಳ ಹಿಂದೆ ಥೋಲಕಾದಲ್ಲಿ ಒಂದನೆಯ್ಯಾಗಾದ ಕುಮಾರಿ ಮಿಠೇಬೇನ ನದರೋಜಿಯವರಿಗೆ ೩. ಪಿ. ಕೋಡಿನ ೧೫೩ ಹಾಗು ೧೧೭ನೆಯ ಆರ್ಡಿನನ್ಸದನ್ವಯ ೪ ತಿಂಗಳ ಸಾದಾ ಕಾರ್ಯಾಗೃಹವಾಸ ಹಾಗು ೧೪೦ ರೂ. ದಂಡ ಇಲ್ಲವೆ ೧॥ ತಿಂಗಳ ಸೆರೆಮನೆ ಹೀಗೆ ಶಿಕ್ಷೆಯಾಗಿದೆ. ಇವರು ದಿವಂಗತ ದಾಧಾಭಾಯಿಯವರ ಮೊಮ್ಮಕ್ಕಳಲ್ಲಿ ೪ ತಿಂಗಳ ಅವಧಿಯಲ್ಲಿ ಈಗ ಎರಡು ಸಾರಿ ಸ್ವರಾಜ್ಯಾಶ್ರಮ ಕಂಡು ಬಂದಿದ್ದಾರೆ.

ನಾಟಕದಲ್ಲಿಯೂ ರಾಜದ್ರೋಹ ಕಾಣಿಸಿತು

ಅವ್ಯಕ್ತಪುರದಲ್ಲಿ ತಾ॥ ೧೨ ನೆಯ ದಿವಸ ಜಾಲಿಂಪಾನವಾಲಾಬಾಗದಲ್ಲಿ ನೇಪಿಕ ಸಭೆಯಲ್ಲಿ ಇಬ್ಬರು ಹುಡುಗರು ನಾಟಕವನ್ನಾಡಿ ತೋರಿಸಿದರು. ನಾಟಕದಲ್ಲಿ ಒಬ್ಬನು ಕಾಂಗ್ರೆಸ್ ಕಾರ್ಯಕರ್ತನ ಪಾತ್ರವನ್ನೂ ಮತ್ತೊಬ್ಬನು ಪೋಲೀಸನ ಪಾತ್ರವನ್ನು ವಹಿಸಿಕೊಂಡಿದ್ದರು. ಪೋಲೀಸನಾದವನು ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಪಿಸ್ತೂಲು ಹಾರಿಸುವ ನಾಟಕ ಅದು. ಅವನಿಗೆ ತಗುಲಲಿಲ್ಲ. ಅದಕ್ಕೆ ಪೋಲೀಸನು ಪಶ್ಚಾತ್ತಾಪ ಪಟ್ಟು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟನು.

ಇದಾದ ಕೆಲವು ದಿನಗಳ ಮೇಲೆ ಆ ಕಾಂಗ್ರೆಸ್ ಕಾರ್ಯಕರ್ತರು ಅವರ ಮೇಲೆ ಪೋಲೀಸರ ವಿಷಯಕ್ಕೆ ಅಪ್ರೀತಿ ಹುಟ್ಟಿಸಿದರೆಂಬ ದೋಷ ಹೊರಿಸಿ, ಅವರನ್ನು ವಿಚಾರಣೆಗೆ ತಂದು ಮಾಡಿದರು. ಮ್ಯಾಜಿಸ್ಟ್ರೇಟರು ಇಬ್ಬರಿಗೂ ಪ್ರತ್ಯೇಕವಾಗಿ ೪ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೫೦ ರೂ. ದಂಡ ಹೀಗೆ ಶಿಕ್ಷೆ ವಿಧಿಸಿದರು.

ಧಾರವಾಡದ ಪತ್ರ
(ಸ್ವಂತ ಸುದ್ದಿಗಾರರಿಂದ)

ಶ್ರೀ ಮುದವೀಡು ಕೃಷ್ಣರಾಯರ ಮೇಲಿನ
ಖುಟ್ಟಿಯ ವಿಚಾರಣೆಯು.

ಡಿಸೆಂಬರ ೨೨ನೇ ತಾರೀಖಿನ ದಿನ ಧಾರವಾಡ ಸಿವಿ ಮ್ಯಾಜಿಸ್ಟ್ರೇಟರು ಶ್ರೀ. ಮುದವೀಡು ಕೃಷ್ಣರಾಯರು ಧಾರವಾಡ ಪಟ್ಟಣದ ಹದ್ದಿನಲ್ಲಿ ಮಾತನಾಡಿರುವ ಹೇಳಿಕೆಯ ಪತ್ರಿಕೆದ. ನೋಟೀಸು ತೆಗೆದಿದ್ದರು. ಅದನ್ನು ಕೃಷ್ಣರಾಯರು ಮುರಿದು ಅಂದೇ ಧ್ವಜವಂದನೆಯು ಸಮಾರಂಭದಲ್ಲಿ ಭಾಷಣ ಮಾಡಿದರು. ಸಿವಿ ಮ್ಯಾಜಿಸ್ಟ್ರೇಟರ ನೋಟೀಸನ್ನು ಅಮಾನ್ಯ ಮಾಡಿದ್ದಕ್ಕಾಗಿ ದಿಪ್ಪಿಳ್ಳಿ ಪೋಲೀಸ ಇನ್ಸ್ಪೆಕ್ಟರ ನೇ ಕಲಮಿನ ಪ್ರಕಾರ ಅವರ ಮೇಲೆ ಖುಟ್ಟಿಯನ್ನು ಹೂಡಿರುವರು. ಈ ಖುಟ್ಟಿಯ ವಿಚಾರಣೆಯು ಸೋಮವಾರ ೧೨ನೇ ತಾರೀಖಿನ ದಿನ ಶ್ರೀ. ತಿವೇಕರ ಇವರ ಎದುರಿಗೆ ನಡೆಯಿತು. ಕೃಷ್ಣರಾಯರ ಜಾಬ್ತಾಬೀತು ಓದಿ ತೋರಿಸಿದನಂತರ, ತಮ್ಮ ಗಂಭೀರವಾದ ಸ್ವರದಲ್ಲಿ ತಾವು ಬರೆದು ತಂದ ವಾಙ್ಮಯವನ್ನು ಓದಿ ತೋರಿಸಿ ಈ ವಿಚಾರಣೆಯಲ್ಲಿ ತಾವು ಹೇಳುವುದೇನೂ ಇಲ್ಲವೆಂದೂ ಭಾಗ ತೆಗೆದುಕೊಳ್ಳುವದಿಲ್ಲವೆಂದು ಹೇಳಿದರು. ಶ್ರೀ ಬಾಗೇವಾಡಿ, ಪೋಲೀಸ ಕಾನ್ಸ್ಟೇಬಲ್ ಮುರಗೋಡ, ಬಸವನಗೌಡಾ ಪಾಟೀಲ ವಗೈರೆ ಸಿವಿ ಮ್ಯಾಜಿಸ್ಟ್ರೇಟರಾದ ಶ್ರೀ. ಹಿರೇಮಠ ಇವರೆಲ್ಲರ ಸಾಕ್ಷಿಯಾಯಿತು. ತೀರ್ಪು ಮುಂದುವರಿಸಲ್ಪಟ್ಟಿತು

ಸೊಲ್ಲಾಪುರ ವೀರಾಳುಗಳ ಗಲ್ಲು

ಶ್ರೀ ಮಲ್ಲಪ್ಪ ಧನಶೆಟ್ಟಿ, ಸಾರಡಾ, ಶಿಂದೆ, ಕುರ್ಬಾನ ಹುಸೇನ ಈ ನಾಲ್ಕು ಸೊಲ್ಲಾಪೂರದ ತಂಡಿನ ಕಾಯಿದೆಯ ವೀರರನ್ನು ಯರವಡಾ ಜೇಲಿನಲ್ಲಿ ಗಲ್ಲಿಗೇರಿಸಿದ ಸುದ್ದಿಯು ಮಧ್ಯಾನ್ಹದಿಂದ ಇದ್ದೀತೆಂತು ಅವರ ವಿಶ್ವಸನೀಯವಾದ ತಾರು ರಾತ್ರಿ ಬಂದು ಮುಟ್ಟಿತು. ತಡದಲೆ ಈ ಸುದ್ದಿಯನ್ನು ಊರಿಗೆಲ್ಲ ಕುಂಗಾಯವನ್ನು ಹೊತ್ತಿದು ಹರಡಲಾಯಿತು. ಮತ್ತು ಮುಂದಿನ ಮಂಗಳವಾರ ಎಲ್ಲರೂ ಹರತಾಳವನ್ನೇ ಪಾಲಿಸಬೇಕಾಗಿ ತಿಳಿಸಿತ್ತು. ಗಲ್ಲಿಗೇರಿಸಿದ ಸುದ್ದಿಯು ಊರೆಲ್ಲ ಹಬ್ಬಿದ ತಡದಲೇ ಒಂದು ತರದ ಹಾ ಹಾ ಕಾರವು ಎಲ್ಲ ಕೆಡೆಯಲ್ಲಿ ಎದ್ದಿತು. ಎಲ್ಲರಿಗೂ ಅನುಷ್ಠಾನ. ಹಳಪಳೆ, ವ್ಯಾಯಸರಾಯ ಸಾಹೇಬರು ಅಖಿಲ ಹಿಂದುಸ್ಥಾನದಲ್ಲಿಯ ಎಲ್ಲ ಜನರೂ ಏಳುಮತ ದಿಂದ ಅವರನ್ನು ಕ್ಷಮಿಸಲು ಕೇಳಿಕೊಂಡ ಬೇಡಿಕೆಗೆ ಇನ್ನೂ ವಿಚಾರಮಾಡುತ್ತಲಿದ್ದೇವೆ ಎಂದು ಉತ್ತರ ಕೊಟ್ಟಿತ್ತು, ಇತ್ತ ಈ ನಾಲ್ವರನ್ನು ಗಲ್ಲಿಗೇರಿಸಿದ್ದು ತಪ್ಪ ಅನ್ಯಾಯವೆಂದು ಎಲ್ಲರೂ ಗುಡುಗುಟ್ಟುತ್ತಿದ್ದರು. ಆಯಿತು. ಬೆಳಗಾಯಿತು. ಗಾಂಧಿ ಚೌಕಿನಲ್ಲಿ ನಿಲ್ಲಿಸಿದ ರಾಷ್ಟ್ರಧ್ವಜವು ಕೆಳಗೆ ಅರ್ಧಕ್ಕೆ ಇಳಿಸಲಾಯಿತು. ಎಲ್ಲ ಶಾಲೆಗಳೂ ಬಂದಾದವು. ಅಂಗಡಿಕಾರರಲ್ಲಿ ಬಹುತರವಾಗಿ ಎಲ್ಲರೂ ವ್ಯವಹಾರವನ್ನು ಬಂದು ಮಾಡಿದ್ದರು. ಮೆರವಣಿಗೆಗಳು ಹೊರಡಬಾರದೆಂದು ಪೋಲೀಸರು ಎಷ್ಟೋ ಪ್ರಯತ್ನಮಾಡಿದರೂ, ಮಧ್ಯಾನ್ಹದಲ್ಲಿ ಕಾಲೇಜ ಮತ್ತು ಶಾಲೆಯ ವಿದ್ಯಾರ್ಥಿಗಳದ್ದು ಹಾಗು ಸಾಯಂಕಾಲದಲ್ಲಿ ಹೆಂಗಸರದು ಮೆರವಣಿಗೆಗಳಾದವು.

ಸಾಯಂಕಾಲ ೬॥ ಘಂಟೆಗೆ ತಡಪಾ ಬೈಲಿನಲ್ಲಿ ಶ್ರೀ. ಶಂಕರಪ್ಪಾ ಮಿಣಜಗಿ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಸಭೆಗೆ ಏನಿಲ್ಲೆಂದರೂ ೪|೫ ಸಾವಿರ ಜನರಿದ್ದರು. ಶ್ರೀ. ಬೆಳಗಾವಿ ರಾಮಚಂದ್ರರಾಯರು ಶ್ರೀ. ಹುರಳಿ, ಶ್ರೀಮತಿ ಕೃಷ್ಣಾಬಾಯಿ ಪಣಜೀಕರ, ಬೆಳಗಾವಿಯಿಂದ ಬಂದಿದ್ದ ಶ್ರೀ. ಜೋಶಿ ನಾರಾಯಣರಾಯರು, ಶ್ರೀ ತಿವಾಕರರು ಭಾಷಣಗಳನ್ನು ಮಾಡಿದರು ಸಭೆಯು ೯ ಗಂಟೆಯವರೆಗೆ ಇರುತ್ತಿತ್ತು. ಸಭೆಯಲ್ಲಿ ಶರೀಕ ಎಲ್ಲರ ಮುಖದ ಮೇಲೂ ದುಃಖವು ವ್ಯಕ್ತವಾಗುತ್ತಿತ್ತು.

ಮಿಶ್ರಸಮಾಜದಲ್ಲಿ

ಸ್ತ್ರೀಯರ ಮೆರವಣಿಗೆಯು ತಡಪಾ ಬೈಲಿಗೆ ಹೋಗುವಾಗ ಮಾರ್ಗದಲ್ಲಿರುವ ಮಿಶ್ರ ಸಮಾಜಕ್ಕೆ ಭೆಟ್ಟಿಯನ್ನು ಕೊಟ್ಟಿತು. ಸಮಾಜದಲ್ಲಿ ಕಾಲೇಜದ ಪ್ರೊಫೆಸರರು, ವಕೀಲರು, ಇಸ್ಕೂಲರರು ಬೈಸಾಜಿಯಿಂದ ಬಿಸ್ಕುಟ್ ಮುಂತಾದವುಗಳನ್ನು ಅಡುತ್ತ ತುಂಬಿದ್ದರು ಶ್ರೀಮತಿ ಕೃಷ್ಣಾಬಾಯಿ ಪಣಜೀಕರ, ರಾಧಾಬಾಯಿ ತಿವಾಕರ ಇವರು ಒಳಗೆ ಹೋದ ತಡದಲೇ ಎಲ್ಲ ಮಹನೀಯರ್ಯ ಗಡಿಬಿಡಿಗೆ ಎದ್ದು ಸಮಾಜವನ್ನು ಬಂದು ಇಡಲು ಸಮಯ ತಿಳಿಸಿದರು.

ದಿ. ಧಾರವಾಡ ಡ್ರಾಮೆಟಿಕ ಪ್ರಸೋಶಿಯೇಶನ ವರು ವಿಲಾಯತ ಖಾನರ ಸಂಗೀತ ಕಚೇರಿಯನ್ನು ಏರ್ಪಡಿಸಿದ್ದರು. ಅವರಾದರೂ ತಮ್ಮ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಿದರು.

ಕರ್ನಾಟಕದಲ್ಲಿ
ಕರನಿರಾಕರಣೆಯ ಚಳವಳಿ

ಕಾರವಾರ ಜಿಲ್ಲೆಯ ಸಿರಸಿ ತಾಲೂಕದಲ್ಲಿ ಕರನಿರಾಕರಣೆಯ ಚಳವಳಿಯು ಬೇಗನೆ ಪ್ರಾರಂಭನಾಗತಕ್ಕದ್ದಿದೆ. ಅಧಿಕಾರಿಗಳು ಪ್ರತಿ ವರ್ಷವೂ ಫೆಬ್ರುವಾರಿ ೧೦ ನೆಯ ತಾರೀಖಿನ ಸುಮಾರಿಗೆ ಹಪ್ಪೆ ಎತ್ತುವರು. ಸಿದ್ದಾಪೂರ ತಾಲೂಕದಲ್ಲಿಯು ಕೆಲವು ಪ್ರಮುಖ ಜನರ ವೇಲೆ ಅಧಿಕಾರಿಗಳು ಅಪ್ಪಣೆ ಹೊರಡಿಸಿ ತಿರಿಗೆಯನ್ನು ನಿಲ್ಲಿಸುವದಿಲ್ಲವಾಗಿ ಹೇಳಿಕೆ ಕೊಡಲು ಅವರಿಗೆ ಕೇಳಿಕೊಂಡ್ದಿರಿಂದ, ಅವರು ಹಾಗೆ ಹೊಣೆ ಕೊಟ್ಟಲು ನಿರಾಕರಿಸಿದ್ದಾರೆ. ಅಧಿಕಾರಿಗಳು ಅವರ ಕೆಲವು ಆಸ್ತಿಯನ್ನು ಜಪ್ತ ಮಾಡಿದ್ದಾರೆ.

ಸಿದ್ದಾಪೂರ ತಾಲೂಕದಲ್ಲಿ
ಗೌಡರಿಗೆ ಬಹಿಷ್ಕಾರ

ಸಿದ್ದಾಪೂರ ತಾಲೂಕದ ಕಾರೇಕಟ್ಟ, ಕೋರ್ಲಕೈ ಹೆಗ್ಗೆಕೊಪ್ಪ, ಶಿರಳಗಿ ವೊದಲಾದ ಗ್ರಾಮಗಳ ಗೌಡರ ಮೇಲೆ ಅಲ್ಲಲ್ಲಿಯ ಜನರು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಗೌಡರು ತಮ್ಮ ತಮ್ಮ ಉದ್ಯೋಗಗಳಿಗೆ ತಡಾ ಹೊಡೆಯದಿದ್ದದ್ದೇ ಇದಕ್ಕೆ ಕಾರಣವಾಗಿದೆ. ಹೆಗ್ಗೆಕೊಪ್ಪದ ಗೌಡರ ಚಿಗಪ್ಪನವರು ತೀರಿಕೊಂಡಾಗ, ಅವರಿಗೆ ಹುಗಿಯಲಿಕ್ಕೆ ಜಾಣಿ ತೋಡಲು ಹೊಲೆಯರು ಸಿಗಲಿಲ್ಲ

ಸಿದ್ದಾಪೂರ ತಾಲೂಕದ ಓರ್ವ ಪಟೇಲರು ತಮ್ಮ ಅಡಿಕೆಯ ಚೀಲಗಳನ್ನು ಕುಮಟಾ ಪೇಟೆಗೆ ಮಾರಾಟಕ್ಕೆ ಕಳಿಸಿದ್ದರು. ಕುಮಟೆಯಲ್ಲಿಯ ಯಾವ ವ್ಯಾಪಾರಸ್ಥರೂ ಅವುಗಳನ್ನು ಕೊಂಡುಕೊಳ್ಳಲಿಲ್ಲ ಅವು ದಿವಸಗಳ ವರೆಗೆ ಅಲ್ಲಿ ಹಾಗೆಯೇ ಬಿದ್ದವು. ಅದನ್ನು ಕಂಡು ಕೊಂಡ. ಆ ಪಟೇಲರು ಅವುಗಳನ್ನು ಬೇರೆ ಕಡೆಗೆ ಕಳಿಸಿದರು. ಅಲ್ಲಿಯಾದರೂ ಅವುಗಳನ್ನು ಯಾರೂ ಬೇಡಲಿಲ್ಲ ಅವು ಮತ್ತೆ ಕುಮಟೆಗೆ ತರಲ್ಪಟ್ಟವು ಅಲ್ಲಿ ಚಳವಳಿಯವರು ಸ್ವಯಂಸೇವಕರ ವತಿಗೆ ಲಕ್ಷ ಕೊಟ್ಟು, ಅವನ್ನು ಹೇರಿಕೊಂಡು ಹೋಗಲು ಒಲ್ಲೆಂದು ಹೇಳಿ, ಅವನ್ನು ಹಾನಿಯಲ್ಲಿಯೇ ಒಗೆದು ಬಿಟ್ಟರು. ಪಟೇಲರು ಪೋಲೀಸರು ಹಾಗು ಪಾವಲೇದಾರರಲ್ಲಿಗೆ ಹೋಗಿ ನಡೆದ ಸಂಗತಿಯನ್ನೆಲ್ಲ ಅವರ ಕಿವಿಯ ವೇಲೆ ಹಾಕಿದರು. ಅವರಾದರೂ, ಅದನ್ನು ಮನಸಿನ ವೇಲೆ ತೆಗೆದ ಕೊಳ್ಳಲಿಲ್ಲ. ಗೌಡರು ನಿರಂತರಾಗಿ ತಿರುಗಿ ಬಂದ . ಚೀಲಗಳನ್ನೂ ಹಾನಿಯಲ್ಲಿ ಹಾಗೆಯೆ ಬಿಟ್ಟಿರುವುದಿವೆ.

ಹುಬ್ಬಳ್ಳಿಯಲ್ಲಿ
ಶ್ರೀ ದೇಶಪಾಂಡೆಯವರಿಗೆ ತಿಕ್ಕೆ

ಬೆಳಗಾವಿ ಜಿಲ್ಲೆಯಲ್ಲಿಯು, ಹುಬ್ಬಳ್ಳಿಯ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಅನಂತ ಅಮೃತ ದೇಶಪಾಂಡೆಯವರಿಗೆ ೧೧೭ ನೆಯು ಕಲಮಿನನ್ವಯ ಗೋಕಾವಿ ಮಾಮಲೇದಾರರು ೫॥ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು

ಶ್ರೀ ಧನಶೆಟ್ಟಿ, ಸಾಡರ್ಕ, ಸಿಂದೆ ಹಾಗು ಕುರ್ಬಾನ ಹುಸೇನರನ್ನ

ಯರೋಡಾದಲ್ಲಿ ಗಲ್ಲಿಗೇರಿಸಿದರು.

[ಸ್ಪೆಶಲ್ ಕಂತಿಯು ವಾರ್ತೆ ಮುಂಬಯಿ. ಕಾ॥ ೧೩—೧—೧೯೩೧]

ಸೊಲ್ಲಾಪುರದಲ್ಲಾದ ದಂಗೆಯು ನಿಮಿತ್ತವಾಗಿ ಗಲ್ಲಿಸಲ್ಪಟ್ಟಿಗೆ ಗುರಿಯಾದ ಶ್ರೀ ಮಲ್ಲಪ್ಪ ಧನಶೆಟ್ಟಿ, ಸಾಡರ್ಕ, ಸಿಂದೆ ಹಾಗು ಕುರ್ಬಾನ ಹುಸೇನ ಈ ನಾಲ್ವರನ್ನೂ ನಿನ್ನಿನ ದಿವಸ ಮುಂಜಾನೆ ೬—೧೫ ಗಂಟೆಗೆ ಯರೋಡಾ ಜೇಲಿನಲ್ಲಿ ಗಲ್ಲಿಗೆ ಹಾಕಿದರು. ಗೃಹಮಂತ್ರಿಗಳು ಆಸಮಯದಲ್ಲಿ ಅಲ್ಲಿ ಪ್ರತ್ಯಕ್ಷವಿದ್ದರು. ಯರೋಡಾಕ್ಕೆ ಹೋಗುವ ಎಲ್ಲ ಮಾರ್ಗಗಳಲ್ಲಿಯೂ ಪೋಲೀಸರ ಕಾವಲು ಇತ್ತು. ಆ ಮಾರ್ಗಗಳಲ್ಲಿಯ ಹೋಗಿಬರುವವರೆಲ್ಲರೂ ಪೋಲೀಸರಿಂದ ಸಜಕ್ಷ್ಮವಾಗಿ ಪರೀಕ್ಷಿಸಲ್ಪಡುತ್ತಿದ್ದರು.

ಗಲ್ಲಿಗೆ ಹಾಕಲ್ಪಟ್ಟ ಮೇಲೆ ಅವರವರ ಜಡದೇಹಗಳು ಅವರವರ ಧರ್ಮಾನುಸಾರವಾಗಿ ಅಲ್ಲಿಯೇ ವ್ಯವಸ್ಥೆಮಾಡಲ್ಪಟ್ಟಿವೆ. ಅವರ ಜಡದೇಹಗಳು ಅವರ ಬಂಧು ಬಳಗದವರಿಗೆ ಕೊಡಲ್ಪಡಲಿಲ್ಲ. ಪುಣೆ ಹಾಗು ಮುಂಬಯಿಯಲ್ಲಿ ಈ ಮೂಲಕವಾಗಿ ಎಲ್ಲೆಲ್ಲಿಯೂ ಅಸಂತೋಷವುಂಟಾಗಿದೆ. ತಮಿಳ ಪರಿಸ್ಥಿತಿಯುಂಟಾದಲ್ಲಿ ಅದನ್ನು ಕೂಡಲೆ ಎದುರಿಸಲು ಈ ಎರಡೂ ಸ್ಥಳಗಳಲ್ಲಿ ಅನೇಕ ಜನ ಪೋಲೀಸರು ನಿಯಮಿಸಲ್ಪಟ್ಟಿದ್ದಾರೆ.

ಮೌ. ಮಹಮ್ಮದ ಅಲ್ಲಿಯವರ
ಮರಣದ ಸುದ್ದಿ ಕೇಳಿ
ಮತ್ತೊಬ್ಬನು ಮರಣಹೊಂದಿದನು.

ಮೌಲಾನಾ ಮಹಮ್ಮದ ಅಲ್ಲಿಯವರು ಮರಣ ಹೊಂದಿದರೆಂಬ ಸುದ್ದಿಯನ್ನು ಕೇಳಿ ಅಖಿಲಭಾರತ ಮುಸ್ಲಿಮ್ ಸ್ವಯಂಸೇವಕ ಸಂಘದ ಕಪ್ತಾನರಾದ ಸೇಲಮದ ಖಾದಿರ ಹುಸೇನು ಒಮ್ಮಿಂದೊಮ್ಮೆ ಮೂರ್ಛೆಹೊಂದಿ ಮರಣ ಹೊಂದಿದರಂತಾಗಿ ತಿಳಿದು ಬರುತ್ತದೆ.

೭ ಬೊಟ್ಟಿನ
ವಿಚಿತ್ರ ಕೂಸು.

ಮೀರಜಿಯಲ್ಲಿ ಒಂದು ಕೂಸು ಕಾಯಿಯ ಹೊಟ್ಟಿನಿಂದ ವಿಕ್ರಾಳವಾಗಿ ಹುಟ್ಟುತ್ತಲೆ ಸತ್ತು ಹೋಯಿತ್ತು. ಅದರ ತಲೆಯು ಭವ್ಯವಾಗಿದೆ ಕಾಲು ಕಿರಿದಾಗಿರುವವು. ಕೈಗೆ ಏಳೇಳು ಬೆರಳುಗಳುಂಟು. ಪ್ರೀ ಇಂಪ್ರಿಯಲ್ ಕೆಳಗೆ ತಾಡುಗಳುಂಟು. ಇದನ್ನು ನೆರೆಯಲ್ಲಿ ತಾಯಿಟ್ಟಿದ್ದು, ಇದನ್ನು ನೋಡಲು ಜನರು ತಂಡ ತಂಡವಾಗಿ ಹೋಗುತ್ತಿರುವರು.

ಮಹಾತ್ಮಾಗಾಂಧಿಯವರು
ಹಾಲು ತೆಗೆದು ಕೊಳ್ಳುವದನ್ನು ಬಿಟ್ಟರು

ಸಜನ ಕ್ರಿಯೆಯು ಮುಂದುವಾಗಿ ಮಲ ಬದ್ಧತೆಯುಂಟಾದ ಮೂಲಕವಾಗಿ ಮಹಾತ್ಮಾ ಗಾಂಧಿಯವರು ಇತ್ತೀಚೆಗೆ ಹಾಲು ತೆಗೆದ ಕೊಳ್ಳುವದನ್ನು ಬಿಟ್ಟು ಬಿಟ್ಟಿದ್ದಾರೆ ಅವರು ಈಗ ಪ್ರತಿನಿತ್ಯದಲ್ಲಿಯೂ ಜೋಳ ಇಲ್ಲವೆ ಸೆಜ್ಜೆಯ ರೊಟ್ಟಿ, ಬದಾವಣೆ ಹಾಗು ಕಾಯಿ ಪಲ್ಲೆ ತೆಗೆದು ಕೊಳ್ಳುತ್ತಿರುವರು. ಸ್ವಲ್ಪ ದಿನಗಳ ಹಿಂದೆ ಅವರಿಗೆ ಭಯಂಕರ ಹೊಟ್ಟೆಕಡಿತ ವೆದ್ದಿತ್ತು. ಅಂದು ಅವರು ತೆಗೆದುಕೊಂಡ ಆಹಾರವನ್ನೆಲ್ಲ ಕಾರಿಬಿಟ್ಟು, ೨೪ ತಾಸು ಉಪವಾಸ ಮಾಡಿದರು. ಯರವಡಾ ಜೇಲಿನಲ್ಲಿಯೂ ನೀರು ಮತ್ತು ಅಲ್ಲಿಯ ಹವೆ ಅವರಿಗೆ ಬಾಧಿಸುತ್ತಿರುವದು. ಅವರನ್ನು ಬೇರೆ ಜೇಲಿಗೆ ಒಯ್ಯುವವರಿದ್ದಾರಾಗಿ ವದಂತಿಯಿದೆ.

"ನನಗೆ ಲಾರ್ಡ ಪದವಿಯನ್ನು ಕೊಡುವರೆಂದು ಹಿಂದುಸ್ಥಾನದಲ್ಲಿ ಸುಳ್ಳು ಸುದ್ದಿಯಾಗಿದೆ. ಆದರೆ ಇದು ಬರೇ ಸುಳ್ಳು ಸುದ್ದಿ ಇದೆ" ಎಂದು ಸರ್ ಸಪ್ರೂರವರು ಹೇಳಿದ್ದಾರೆ.

'ಹಿಂದುಸ್ಥಾನವು
ಸ್ವತಂತ್ರವಾಗುವ ವರೆಗೂ ಜೀವಿಸುತ್ತೆನೆ"

ಶ್ರೀ ವಿಠ್ಠಲಭಾಯಿ ಪಟೇಲರವರು ಮದ್ರಾಸಕ್ಕೆ ಬಂದ ಕೂಡಲೆ, "ಫ್ರೀಪ್ರೆಸ್"ದ ಪ್ರತಿನಿಧಿಯು ಅವರನ್ನು ಕಂಡುಕೊಂಡು, ಅವರೊಡನೆ ಮಾತುಕತೆಯಾಡಿದರು. ಆಗ ವಿಠ್ಠಲಭಾಯಿಯವರು ಕೆಳಗಿನಂತೆ ತಿಳಿಸಿದರು.

"ಹಿಂದುಸ್ಥಾನವು ಸ್ವತಂತ್ರವಾಗುವ ವರೆಗೂ ನಾನು ಜೀವಿಸುತ್ತೇನೆಯೂದ್ದರಿಂದ ನನ್ನ ಮೃತ್ಯುವಿನ ವಿಷಯವಾಗಿ ಯಾರೂ ಚಿಂತಾಕುಲರಾಗಬಾರದು"

ಪಜಾವನಿಗೆ
ಪ್ರೊಫೆಸರ ಪದವಿ.

ಅಮೇರಿಕೆಯಲ್ಲಿ ಪ್ರತಿವರ್ಷವೂ ನಾವಲಿಗರ ಪರಿಷತ್ತು ಸೇರಿ, ಒಳ್ಳೇ ಕವ್ಯವನ್ನು ಮಾಡುವನಿಗೆ ಅಲ್ಲಿ ಇನಾಮು ಕೊಡಲ್ಪಡುವದು. ಇವರ್ಷ ನಿಯೂ ಒಬ್ಬ ನಾವಲಿಗನು ಮೂರು ವರ್ಷ ಒಂದೇ ಸವನೆ ಮೊದಲನೆ ನಂಬರನ್ನು ಪಡೆದಿದ್ದರಿಂದ, ಅವನಿಗೆ ಪ್ರೊಫೆಸರ ಎಂಬ ಪದವಿಯನ್ನು ದೊರೆತಿದೆ.

ಬೆಳಗಾವಿಯಲ್ಲಿ ಬಡಿಗೆಯ ರಾಜ್ಯ.

ನೂ ರಾ ರು ಜ ನ ರಿ ಗೆ ಗಾ ಯ

(ಶಂತಿಯು ವಾರ್ತೆ)

ಸೊಲ್ಲಾಪುರದ ಮುಂದಾಳುಗಳಾದ ಶ್ರೀ ಧನಶೆಟ್ಟಿ, ಸಾರ್ದಾ, ಸಿಂದೆ ಹಾಗೂ ಕಂಬಾನ ಹುಶೇನ ಈ ನಾಲ್ವರನ್ನು ಗಲ್ಲಿಗೇರಿಸಿದ ಸುದ್ದಿಯು ಕಾ| ೧೨ ನೆಯು ದಿವಸ ಮಧ್ಯಾಹ್ನಕ್ಕೆ ಇಲ್ಲಿಗೆ ಮುಟ್ಟಿತ್ತಾಯಿತು. ಈ ದುಃಖದಾಯಕವಾದ ಸುದ್ದಿಯು ತಿಳಿದ ಕೂಡಲೆ ಅಂಗಡಿಕಾರರೆಲ್ಲರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿ ಹರತಾಳ ಪಾಲಿಸಿದರು. ನಿಷೇಧವನ್ನು ವ್ಯತ್ಯಪಡಿಸುವದಕ್ಕಾಗಿ ನಾಗರಿಕರು ಬಹುನೆತ್ತಿಯ ಪ್ರಚಂಡ ಮೆರವಣಿಗೆಯನ್ನು ಹೊರಡಿಸಿದರು. ಸುಮಾರು ೩೦೦೦ ಜನರು ಮೆರವಣಿಗೆಯಲ್ಲಿ ಭಾಗವಹಿಸಿಕೊಂಡಿದ್ದರು. ಅಕ್ಟಿಂಗ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಶ್ರೀ ಹಿರೇಮಠ ಸಾಹೇಬರು ೧೪ ನೆಯ ಕಲಮಿನನ್ನಯ ಹೊರಡಿಸಿದ ಕಟ್ಟಪ್ಪಣೆಯು ೪-೩೦ ಗಂಟೆಗೆ ಪಟ್ಟಣದಲ್ಲಿ ಸಾರಲ್ಪಟ್ಟಿತು. ೭ ದಿನಗಳ ವರೆಗೆ ಮೆರವಣಿಗೆಗಳನ್ನು ಜರುಗಿಸಕೂಡದೆಂಬ ದಾಗಿ ಆ ಕಟ್ಟಪ್ಪಣೆಯಲ್ಲಿ ಬರೆಯುವದರಲ್ಲಿ ಬಂದಿತ್ತು. ಮ್ಯಾಜಿಸ್ಟ್ರೇಟರು ಹೊರಡಿಸಿದ ಕಟ್ಟಪ್ಪಣೆಯನ್ನು ಮೀರಿ ಸುಮಾರು ೩೦೦೦ ಜನರು ಮೆರವಣಿಗೆಗಳಿಂದ ಪಟ್ಟಣದ ಮುಖ್ಯ ವಸ್ತಿ ಬೀದಿಗಳಲ್ಲಿ ಸಂಚರಿಸಿದರು. ಮೆರವಣಿಗೆಯು ಖಡೆ ಬಜಾರದ ಪೋಲೀಸ ಚೌಕಿಯ ಹತ್ತರ ಹೋದ ಕೂಡಲೆ ಅಲ್ಲಿ ಪೋಲೀಸರು ಅದಕ್ಕೆ ಅಡ್ಡಿ ಮಾಡಿದರು. ಜನರು ಹಿಡಿಯಲು ಧಿರಾಕರಿಸಿ ಶಾಂತವೃತ್ತಿಯುಳ್ಳವರಾಗಿ ಅಲ್ಲಿಯೇ ಕುಳಿತುಕೊಂಡರು. ಜನರು ಜಮಾರಿ ಹೋಗದೆ ಕುಳಿತುಕೊಂಡಿದ್ದನ್ನು ಕಂಡು ಪೋಲೀಸರು ಅವರ ಮೇಲೆ ಏರಿ ಹೋಗಿ ಅವರನ್ನು ಲಾಠಿಗಳಿಂದ ಥಳಿಸಿದರು. ಒಟ್ಟಿಗೆ ೧೫೫ ಜನರಿಗೆ ಗಾಯಗಳಾಗಿವೆ. ಅವರಲ್ಲಿ ಇಪ್ಪತ್ತಾರು ಸ್ತ್ರೀಯರಿರುತ್ತಾರೆ. ೧೨ ಜನರು ಗಂಭೀರ ಸ್ಥಿತಿಯಲ್ಲಿದ್ದಾರೆ ೧೨ ವರ್ಷದೊಳಗಿನ ಸಣ್ಣ ಸಣ್ಣ ಬಾಲಕರಿಗೂ ಮತ್ತ ಸ್ವಾಸ್ಥಿಕ ಕದಪು ಸ್ವಯಂಸೇವಕರುಗಳಿಗೂ ಪೆಟ್ಟುಗಳು ಬಿದ್ದಿವೆ. ಸ್ವಾಸ್ಥಿಕ ಸಂಘದ ಡಾಕ್ಟರರು ಹಾಗು ಸ್ವಯಂಸೇವಕರು ಗಾಯಹೊಂದಿದವರಿಗೆ ಉಪಚಾರ ಮಾಡಿದರು. ಗಾಯಹೊಂದಿದವರಲ್ಲಿ ಶ್ರೀ ಜೀವ ಇರಾವ ಆತಾಳಿ, ಕಲಪುಟಿಗಿ, ನಳಿ, ಗಿಂಡಿ ಹಾಗು ಕಾವಲಿ ಇವರೇ ಮೊದಲಾದವರು ಪ್ರಮುಖರಾಗಿರುವರು.

ಸಂಜೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಸಾವಿರಾರು ಜನರು ಸಭೆಗೆ ಬಂದಿದ್ದರು ಗಲ್ಲಿಗೇರಿಸಲ್ಪಟ್ಟ ಶ್ರೀ ಧನಶೆಟ್ಟಿ, ಸಾರ್ದಾ, ಸಿಂದೆ ಮತ್ತು ಕಂಬಾನ ಹುಶೇನ ಇವರ ಆತ್ಮಗಳಿಗೆ ಶಾಂತಿಯು ಸಿಗಲೆಂಬುದಾಗಿ ಸಭೆಯಲ್ಲಿ ಸಾರ್ವಜನಿಕವಾಗಿ ಪ್ರಾರ್ಥನೆಯು ಜರುಗಿ, ಲಾಠಿ ರಾಜ್ಯದ ಬಗ್ಗೆ ನಿಷೇಧವನ್ನು ವ್ಯತ್ಯಪಡಿಸುವದರಲ್ಲಿ ಒಂದು.

ಇವತ್ತಾದರೂ ಹರತಾಳವನ್ನು ಆಚರಿಸುವದರಲ್ಲಿ ಒಂದಿದೆ.

ಕಳಕವಾಡಿಯಲ್ಲಿಯೂ ಮೆರವಣಿಗೆಯನ್ನು ಹೊರಡಿಸುವದರಲ್ಲಿ ಬಂದಿತ್ತು. ಪೋಲೀಸರು ಅಲ್ಲಿಯೂ ಮೆರವಣಿಗೆಗೆ ಅಡ್ಡಿ ಮಾಡಿ ಒಂದು ತಾಸಿನ ವರೆಗೆ ಅವರಿಗೆ ಮುಂದಕ್ಕೆ ಹೋಗಗೊಡಲಿಲ್ಲ. ನಂತರದಲ್ಲಿ ಜನರು ಗಾಂಧಿ ಮೈದಾನದಲ್ಲಿ ಪ್ರಾರ್ಥನೆ ಮಾಡಿ, ಶಾಂತವೃತ್ತಿಯಿಂದ ತಿರುಗಿ ಹೊಂಟು ಹೋದರು.

ಈ ೧೪ ನೆಯ ಕಲಮನ್ನು ಇದಿ ಜಿಲ್ಲೆಯಲ್ಲೆಲ್ಲ ಬಳಕೆಯಲ್ಲಿ ತಂದಿರುವರಾಗಿ ತಿಳಿಯುತ್ತದೆ. ಅಕ್ಟಿಂಗ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾಗಿರುವ ಶ್ರೀ ಹಿರೇಮಠ ಸಾಹೇಬರು ಜಿಲ್ಲೆಯಲ್ಲೆಲ್ಲ ಪಬ್ಬಾಳಿಕೆಯನ್ನು ಜೋರಾಗಿ ಕ್ಯಾರಂಭಿಸುವವರೆದ್ದಾರಾಗಿ ಕಂಡ. ಬರುತ್ತದೆ.

ಮುಂಬಯಿಯಲ್ಲಿ
ಡೊಣ್ಣೆಯ ರಾಜ್ಯ.

ಸೊಲ್ಲಾಪುರದ ಶ್ರೀ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ಮುಂಬಯಿಗೆ ತಿಳಿದ ಕೂಡಲೆ ಮುಂಬಯಿಯಲ್ಲಿ ಸಂಪೂರ್ಣ ಹರತಾಳ ಆಚರಿಸಲಾಯಿತು ಕೆಲವು ಜನರು ಟ್ರಾಮ್ವೆಸ್ ಕಾರ್ ಬಸಗಳು ಮೋಟಾರುಗಳಿಗೆ ಅಡ್ಡಿಮಾಡಿ ಪ್ರವಾಸಿಕರಿಗೆ ತೊಂದರೆ ಕೊಟ್ಟರು ಕೆಲವು ಪುಂಡ ಜನರು ಕಲ್ಲುಗಳನ್ನು ಒಗೆಯಲಾರಂಭಿಸಿದರು. ಇಷ್ಟರಲ್ಲಿ ಅಲ್ಲಿ ಪ್ರಚಂಡ ಜನಸವ ದಾಯವು ಬಂದು ನೆರೆದಿತ್ತು. ಪೋಲೀಸರು ಹಾಗು ಸೈಜರ್ಂಟರು ಲಾಠಿಗಳಿಂದ ಜನರನ್ನು ಥಳಿಸಿ ಅವರನ್ನು ಹದುರಿಸಿದರು. ಸುಮಾರು ೭೦ ಜನರಿಗೆ ಪೆಟ್ಟುಗಳು ಬಿದ್ದವು.

ಸತ್ಯಮೂರ್ತಿಯವರಿಗೆ
೬ ತಿಂಗಳ ಕಠಿಣ ಶಿಕ್ಷೆ

ಮದ್ರಾಸದಲ್ಲಿ ಪರದೇಶಿ ಬಟ್ಟೆಯು ಅಂಗಡಿಗಳ ಮುಂದೆ ಸ್ವಯಂಸೇವಕರೊಂದಿಗೆ ಪಿಕೆಟಿಂಗ ನಡಿಸಿದ ನಿಮಿತ್ತವಾಗಿ ತಮಿಳುನಾಡು ಸತ್ಯಾಗ್ರಹ ಮಂಡಳದ ಅಧ್ಯಕ್ಷರಾದ ಶ್ರೀ ಎಸ್. ಸತ್ಯಮೂರ್ತಿಯವರಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ. ಉಳಿದ ೧೦ ಜನ ಸ್ವಯಂಸೇವಕರಿಗೂ ಪ್ರತ್ಯೇಕವಾಗಿ ೬ ತಿಂಗಳ ಶಿಕ್ಷೆಯು ದೊರೆತಿದೆ. ಶ್ರೀ ಸತ್ಯಮೂರ್ತಿಯವರ ಸ್ಥಳದಲ್ಲಿ ಶ್ರೀ ಕೆ. ಭಾಷ್ಯಂಕರವು ಅಧ್ಯಕ್ಷರಾಗಿರುವರಾಗಿ ತಿಳಿದು ಬರುತ್ತದೆ.

ಡಾ. ಹರ್ಡೀಕರರಿಗೆ
೯॥ ತಿಂಗಳ ಕಠಿಣ ಶಿಕ್ಷೆ.

ಹುಬ್ಬಳ್ಳಿಯಲ್ಲಿ ಕಾ॥ ೩೫ ವೆಯ ದಿವಸ ಶ್ರೀ. ಲಾ ಅಮೆಂಡಮೆಂಟ ಕಾಯದೆಯ ೧೬ (೧) (೨) ನೆಯ ಕಲಮಿನನ್ವಯ ಸೆರೆಹಿಡಿಯಲ್ಪಟ್ಟು ವಿಚಾರಣೆಗಾಗಿ ಮುಂಬಯಿಗೆ ಒಯ್ಯಲ್ಪಟ್ಟ, ಹಿಂದುಸ್ಥಾನೀ ಸೇವಾದಲದ ಸಂಸ್ಥಾಪಕರು ಹಾಗು ಕಾರ್ಯದರ್ಶಿಗಳಾದ ಡಾ. ಹರ್ಡೀಕರರ ಖಟ್ಲೆಯು ವಿಚಾರಣೆಯು, ಕಾ| ೧೧ನೆಯ ದಿವಸ ಮುಂಬಯಿಯಲ್ಲಿ ಚೀಫ ಪ್ರೆಸಿಡೆನ್ಸಿ ಮ್ಯಾಜಸ್ಟ್ರೇಟರ ಮುಂದೆ ನಡೆಯು, ಅವರಿಗೆ ಮೊದಲನೆಯ ಅಪರಾಧಕ್ಕಾಗಿ ೬ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೩೦೦ ರೂ. ದಂಡ, ಇಲ್ಲವೆ ೩ ವಾರ ಸೆರೆಮನೆ, ಮತ್ತು ಎರಡನೆಯ ಅಪರಾಧಕ್ಕಾಗಿ ೯ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೫೦೦ ರೂ. ದಂಡ, ಇಲ್ಲವೆ ೧ ವಾರ ಸೆರೆಮನೆ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಎರಡೂ ಶಿಕ್ಷೆಗಳನ್ನೂ ಏಕಕಾಲಕ್ಕೆ ಅನುಭೋಗಿಸಬೇಕೆಂದು ಹೇಳುವದರಲ್ಲಿ ಬಂದಿದೆ ಒಟ್ಟಿಗೆ ೬ರಿಗೆ ೯ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೪೦೦ ರೂ ದಂಡ, ಇಲ್ಲವೆ ೩ ವಾರ ಸೆರೆಮನೆ ಹೀಗೆ ಶಿಕ್ಷೆಯಾದಂತಾಯಿತು. ಡಾ. ಹರ್ಡೀಕರರು ಎಷ್ಟಾರಣೆಯಲ್ಲಿ ಯಾವ ಕರಡಿಯಲಿಕೆಯನ್ನೂ ತೆಗೆದು ಕೊಳ್ಳಲಿಲ್ಲ.

ಶ್ರೀ ನರಿಮನ್ನರು ನಿರ್ದೋಷಿಗಳಾದರು.

ಕ್ರಿ ಲಾ. ಅನೆಂಡಮೆಂಟ ಕಾಯದೆಯು ಅಸ್ತಯ ತಿಳ್ಳಿಗೆ ಗುರಿಯಾದ ಮುಂಬಯಿಯ ಪ್ರಸಿದ್ಧ ಮುಂದಾಳುಗಳಾದ ಶ್ರೀ ಕೆ. ಎಫ್. ನರಿಮನ್ನರ ಖಟ್ಲೆಯ ಕಾಗದ ಪತ್ರಗಳನ್ನು ಹಾಯಕೋರ್ಟಿನವರು ತಾ। ೧೨ ನೆಯ ದಿವಸ ಪುನರ್ವಿಚಾರಣೆ ಮಾಡಿ, ಅವರು ನಿರ್ದೋಷಿಗಳೆಂದಾರಾಗಿ ನಿರ್ಣಯಿಸಿದರು

ಬನಾರಸದಲ್ಲಿ
ಮನೆಗಳಿಗೆ ಮುತ್ತಿಗೆ

ಬನಾರಸದಲ್ಲಿ ಟಪಾಲು ವೋಟಾರಿಗೆ ಅಡ್ಡಿಮಾಡಿ ಹಣವನ್ನು ಅಪಹರಿಸಿಕೊಂಡು ಹೋಗಲು ಪ್ರಯತ್ನಿಸಿದ ಆರೋಪಿಗಳನ್ನು ಕಂಡು ಹಿಡಿಯುವ ಉದ್ದೇಶದಿಂದ ಅಲ್ಲಿಯ ವೋಲೀಸ ಅಧಿಕಾರಿಗಳು ಏಳು ಮನೆಗಳಿಗೆ ಮುತ್ತಿಗೆ ಹಾಕಿ, ಅವುಗಳನ್ನ ಝಡತಿ ಮಾಡಿದರು. ಇಬ್ಬರು ತರುಣರು ಕೈದು ಮಾಡಲ್ಪಟ್ಟಿದ್ದಾರೆ.

ಬಡೋದಾದಲ್ಲಿ ಡೊಣ್ಣೆಯು ರಾಜ್ಯ
ನೂರಾರು ಜನರಿಗೆ ಗಾಯ

ಬಡೋದಾ ಸಂಸ್ಥಾನದ ಪ್ರಜಾಮಂಡಳದ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಯವರಿಗೆ ತಿಳ್ಳಿಹಾಡಿದ ಬಗ್ಗೆ ಅವರನ್ನು ಅಧಿ ನಂದಿಸುವದಕ್ಕಾಗಿ ಬಡೋದೆಯಲ್ಲಿ ತಾ। ೯ ನೆಯ ದಿವಸ ಯುವಕ ಸಂಘದವರು ಮೆರವಣಿಗೆ ಹೊರಡಿಸಿದ್ದರು. ವೋಲೀಸ ಅಧಿಕಾರಿಗಳು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿಮಾಡಿ, ಜನರನ್ನು ಲಾಠಿಗಳಿಂದ ಥಳಿಸಿ, ಮುಂದಾಳುಗಳನ್ನು ಸೆರೆ ಹಿಡಿದುಕೊಂಡು ಹೋದರು. ಲಾಠಿ ಪ್ರಹಾರದ ಮೂಲಕವಾಗಿ ನೂರಾರು ಜನರಿಗೆ ಗಾಯಗಳಾಗಿವೆ.

ಕಮೀಶನರರಿಗೆ
ಕರೇ ನಿಶಾನೆಯು ಮೆರವಣಿಗೆ

ತಾ। ೯ ನೆಯ ದಿವಸ ಜಂ.ಕೋಬಾಜಾದದಲ್ಲಿ ಕಮೀಶನರ ಸಾಹೇಬರು ದರಬಾರವನ್ನು ಕೂಡಿಸಿದ್ದರು. ಸುತ್ತುಮುತ್ತಲಿನ ಜಿಲ್ಲೆಗಳಲ್ಲಿಯ ಸರದಾರರು, ನವಾಬರು ಮತ್ತು ಉಚ್ಚ ಅಧಿಕಾರಿಗಳು ದರಬಾರಕ್ಕೆ ಬಂದಿದ್ದರು. ಕಾಂಗ್ರೆಸ್ ಸ್ವಯಂಸೇವಕರಾದರೂ ಅ ಸಮಯದಲ್ಲಿ ಕರೇ ನಿಶಾನೆಯ ಮೆರವಣಿಗೆ ಹೊರಡಿಸಿ, ದರಬಾರಕ್ಕೆ ಸಾಗಿ ಹೋಗಿ "ಕಮೀಶನರರೇ ತಿರುಗಿ ಹೋಗಿರಿ ಎಂಬುದಾಗಿ ಗಟ್ಟಿಯಾಗಿ ಕೂಗಿ, ಕರೇ ನಿಶಾನೆಗಳಿಂದ ಕಮೀಶನರರಿಗೆ ಸ್ವಾಗತ ಮಾಡಿದರು. ಒಬ್ಬ ಸ್ವಯಂಸೇವಕನು ದರಭಾಂಡಲ್ಲಿಯೇ ಕಾಯದೆಗೆ ಎರುದ್ಧವಾಗಿ ಸಿದ್ಧ ಪಡಿಸಿದ ಉಪ್ಪನ್ನು ಮಾರಿದನು. ವೋಲೀಸರು ಅವನನ್ನೂ ಹಾಗು ಇಬ್ಬರು ಸ್ವಯಂಸೇವಕರನ್ನು ಸೆರೆ ಹಿಡಿದು ಕೊಂಡು ಹೋದರು.

ಮಚ್ಛೀಸರ ಕಟ್ಟೆ
ಸ್ವಯಂಸೇವಕನನ್ನು ಮೆರೆಸಿದರು

ದಿಲ್ಲಿಯಲ್ಲಿ ಸಿಂದಿ ಅಂಗಡಿಯ ಮುಂದೆ ಪಿಕೆಟಿಂಗೆ ಜೋರಿನಿಂದ ನಡೆದಿದೆ. ತಾ। ೯ ನೆಯ ದಿವಸ ಒಬ್ಬ ಸ್ವಯಂಸೇವಕನು ಲಂಚ ತಗೆದು ಕೊಂಡು ಒಬ್ಬನಿಗೆ ಸಿಂದಿಯನ್ನು ಒಯ್ಯಲಿಕ್ಕೆ ಬಿಟ್ಟನು; ಇದು ಅಲ್ಲಿಯ ಕಾಂಗ್ರೆಸ್ ಅಧಿಕಾರಿಗಳಿಗೆ ತಿಳಿಯಿತು. ಅವರು ಅವನ ಮುಖಕ್ಕೆ ಮಸಿ ಹಚ್ಚಿ, ಅವನ ಕೊರಳೊಳಗೆ ಮಚ್ಛೀಸರ ಹಾಕಿ, ಅವನನ್ನು ಊರ ತುಂಬೆಲ್ಲ ಮೆರಸಿದರು. ವೋಲೀಸರು ಹಾದಿಯಲ್ಲಿ ಮೆರವಣಿಗೆಗೆ ಅಡ್ಡಿ ಮಾಡಿ, ಅವನನ್ನು ಬಿಡಿಸಿಕೊಂಡು ಹೋದರು ಈ ಮೂಲಕವಾಗಿ ಕಾಂಗ್ರೆಸ್ ಶಿಸ್ತಿನ ಕಾರ್ಯದರ್ಶಿ ಹಾಗು ಸಜನ ಸ್ವಯಂಸೇವಕರು ಬಂಧನಕ್ಕೆಳಗಾಗಿದ್ದಾರೆ.

ಸೊಲ್ಲಾಪುರದಲ್ಲಿ
ಮೆರವಣಿಗೆಗೆ ಪ್ರತಿಬಂಧ

ತಾ। ೧೨ ರಿಂದ ೨೬ ರವರೆಗೆ ಸೊಲ್ಲಾಪುರ ಪಟ್ಟಣದಲ್ಲಿ ಮೆರವಣಿಗೆಗಳನ್ನು ಹೊರಡಿಸ ಕೂಡದಾಗಿ ಅಲ್ಲಿಯ ಡಿ. ಮ್ಯಾಜಿಸ್ಟ್ರೇಟರು ೧೪೪ ನೆಯ ಕಲಮಿನಪ್ರಕಾರ ಆಜ್ಞೆಯನ್ನು ಹೊರಡಿಸಿದ್ದಾರೆ.

ಕಾಂಗ್ರೆಸದವರು ಗೋಕಾವಿಯ ಗಿರಣಿಗೆ ಬಹಿಷ್ಕಾರ ಹಾಕಿದ್ದನ್ನು ತೆಗೆದರಿಂದು ಹಿಟ್ಟಿದ ಸಂದರ್ಭವು ನಿರಾಧಾರವಾಗಿದ್ದು, ಬಹಿಷ್ಕಾರವು ಮುಂದೆನಂತಿರುವದು ಕಾರಣ ಅದರ ನೂಲನ್ನು ಕೊಳ್ಳಬಾರದೆಂದು ಕಾಂಗ್ರೆಸ್ ಅಧಿಕಾರಿಗಳು ಪ್ರಸಿದ್ಧಮಾಡಿದ್ದಾರೆ

ಥಂಡಿಯಿಂದ
೧೦೦ ಜನರು ಸತ್ತರು

ಚೀನ ದೇಶದಲ್ಲಿ ಇತ್ತೀಚ್ಚಲಾಗಿ ಬಹಳೇ ಥಂಡಿಯುಬೀಳಹತ್ತಿದ್ದರಿಂದ ನದಿಗಳು ಹಾಗು ಕಾಲುವೆಗಳೆಲ್ಲವೂ ಹೆಪ್ಪುಗಟ್ಟಿವೆ. ಈ ಮೂಲಕವಾಗಿ ಪೆಕಿಂಗದಲ್ಲಿ ನೂರಾರು ನಿರಾಶ್ರಿತ ಜನರು ಮರಣಹೊಂದಿದ್ದಾರೆ. ಇನ್ನು ಅನೇಕ ಕಡೆಗಳಲ್ಲಿ ಎಷ್ಟೋ ಜನರು ಮರಣ ಹೊಂದಿರುವರಾಗಿ ತಿಳಿಯುತ್ತದೆ.

ಮುಂಬಯಿಯಲ್ಲಿ
ಯುವ್ವ ಮಂಡಳದವರಿಗೆ ತಿಳ್ಳಿ

ಜನಗಣತಿಯ ಬಹಿಷ್ಕಾರ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಬಂಧವಾಗಿ ಮುಂಬಯಿಯ ೨೦ ನೆಯ ಯುವ್ವ ಮಂಡಳದ ಅಧಿಕಾರಿಗಳಾದ ಶ್ರೀ ಬಿ. ಸಿ. ವೈಶ್ಯ, ಕಾಂತಿಲಾಲ ಪರೇಖ, ಶ್ರೀ ಬೆಳಗಾವ ವಾಲಾ ಹಾಗು ಮೋಹನಲಾಲ ಶಕ್ಯ ಇವರಿಗೆ ೫॥ ತಿಂಗಳಿಂದ ೭॥ ತಿಂಗಳವರೆಗೆ ಬೇರೆ ಬೇರೆ ಅವಧಿಯ ತಿಳ್ಳಿಗಳು ವಿಧಿಸಲ್ಪಟ್ಟಿವೆ.

ಕಾಲಿಯಾನಪುರದಲ್ಲಿ
ಗೋಳೀಬಾರು.

ಅಲಹಾಬಾದ ಜಿಲ್ಲೆಯ ಕಾಲಿಯಾನಪುರದಲ್ಲಿ ಕಾಂಗ್ರೆಸ್ ಸಭೆಯು ಕೂಡಿದಾಗ ವೋಲೀಸ ಅಧಿಕಾರಿಗಳು ಜುಬ್ಬರಷ್ಟು ಸೆರೆಹಿಡಿದರು. ಜನರು ಅವರನ್ನು ವೋಲೀಸರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದರು. ಆಗ ವೋಲೀಸ ಹಾಗು ಜನರಲ್ಲಿ ಕದನವಾಯಿತು. ವೋಲೀಸರು ಗೋಳೀಬಾರ ಮಾಡಿದರು. ಇಬ್ಬರಿಗೆ ಧಯಂಕರ ಗಾಯಗಳು ಪ್ರಭವಿಸಿವೆ.

ಕರನಿರಾಕರಣೆಯ ಚಳವಳಿಯಲ್ಲಿ ಭಾಗವಹಿಸಿ ತಮ್ಮ ತಮ್ಮ ಹೊಲಗಳನ್ನು ಬಿಟ್ಟು ಹೋದ ರೈತರ ಮಕ್ಕಳಕಲಾವಾಗಿ, ಕಾಯುರಾ ಜಿಲ್ಲೆಯಲ್ಲಿ ಬೋಚಾಸನ ಎಂಬ ಹಳ್ಳಿಯಲ್ಲಿ ಮೊನ್ನೆ ಮೊನ್ನೆ ಒಂದು ಔದಿಕ್ಯೋಗಿಕ ಶಾಲೆಯನ್ನು ಸ್ಥಾಪಿಸುವವರಲ್ಲಿ ಬಂದಿದ್ದು, ಕಾಯುರಾ ಜಿಲ್ಲೆಯ ಸರ್ವಾಧಿಕಾರಿಗಳಾದ ಶ್ರೀಮತಿ ಭಕ್ತಿ ಲಕ್ಷ್ಮಿದೇವಿಯವರು ಅದನ್ನು ತೆರೆಯುವ ಸಮಾರಂಭವನ್ನು ಸಾಂಗಗೊಳಿಸಿದರು.

ಗುಜರಾಥದಲ್ಲಿ ಆಳರಸರ ಅನನ್ವಿತ ಕೃತ್ಯಗಳು

ಪುಣೆಯ ಕ್ರೈಸ್ತ ಸೇವಾ ಸಂಘದ ಫಾದರ ಎಡ್ವಿನ್‌ರವರು ೧೫ ದಿನಗಳ ವರೆಗೆ ಗುಜರಾಥ ಪ್ರಾಂತದಲ್ಲಿ ಸಂಚರಿಸಿ, ಅಲ್ಲಿಯ ಸ್ಥಿತಿಗತಿಗಳನ್ನು ಕುರಿತು "ಕ್ರಾನಿಕಲ್" ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದು, ಅದರ ಸಾರವನ್ನು ಕೆಳಗೆ ಕೊಟ್ಟಿದೆ.

ನಾನು ಸ್ವಲ್ಪ ದಿನಗಳ ಹಿಂದೆ ಗುಜರಾಥ ಪ್ರಾಂತದಲ್ಲಿಯ ಆನಂದ, ನಡಿಯಾದ, ಬಾರ್ಡೋಲಿ, ಬೋರಸಾದ ಮೊದಲಾದ ತಾಲೂಕುಗಳಲ್ಲಿಗೆ ಒಟ್ಟಿಗೆ ೬೦ ಹಳ್ಳಿಗಳಲ್ಲಿ ೧೫ ದಿನಗಳ ವರೆಗೆ ಸಂಚರಿಸಿ ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದೆನು. ಮುಂಬಯಿ ಸರಕಾರದ ಒಬ್ಬ ಮಾಜಿ ಮಂತ್ರಿಗಳು ಹಾಗು ಎಷ್ಟೋ ಜನ ಗೆಳೆಯರಾದರೂ ನನ್ನೊಂದಿಗೆ ಆ ಹಳ್ಳಿಗಳಿಗೆ ಬಂದಿದ್ದರು. ಶ್ರೀ ಅಮೃತ ಲಾಲ ಠಕ್ಕರರವರು ಬೇರೆ ಬೇರೆ ಹಳ್ಳಿಗಳಿಗೆ ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ವಿಚಾರಿಸಲು ನನಗೆ ಕೇಳಿಕೊಂಡರು. ನಾವು ಆ ಆ ಹಳ್ಳಿಗಳಲ್ಲಿ ರೈತರಿಗೆ ಭೆಟ್ಟಿಯಾಗಿ, ಅವರಿಗೆ ಪ್ರಶ್ನೆ ಮಾಡಿ ಅವರ ಸಂಕಷ್ಟಗಳನ್ನು ತಿಳಿದುಕೊಂಡೆವು. ರೈತರೂ ತಮ್ಮತಮ್ಮ ಕಷ್ಟನಷ್ಟಗಳನ್ನು ಪ್ರಾಮಾಣಿಕತನ ಹಾಗು ಸರಳತನದಿಂದ ನಮ್ಮ ಮುಂದೆ ಹೇಳಿಕೊಂಡರು.

ಸರಳನದಲ್ಲಿ ನನಗೊಬ್ಬ ತರುಣ ಮನುಷ್ಯನು ಭೆಟ್ಟಿಯಾದನು. ಅವನ ಸ್ಥಿತಿಯು ಆಗ ಭಯಂಕರವಾಗಿತ್ತು. ಅವನು ಬಹಳೇ ಅಶಕ್ತನಾಗಿದ್ದನು. ಅವನು ಆಗಾಗ್ಗೆ ಕಮ್ಮಿತ್ತಿದ್ದಲ ಮತ್ತು ಕಾರಿಕೊಳ್ಳುತ್ತಿದ್ದನು. ಅವನ ಸರಕಾರಿ ಹಪ್ಪೆ ಕೂಡಲು ನಿರಾಕರಿಸಿದ್ದನ್ನೆ ತಾ॥೨೬ ನೆಯ ನಿಮ್ಮಂಬರ ದಿವಸ ಪೋಲೀಸ ಅಧಿಕಾರಿಗಳು ಅವನ ಹೊಲಕ್ಕೆ ಹೋಗಿ ಹಪ್ಪೆ ಕೊಡಲು ಅವನಿಗೆ ಕೇಳಿಕೊಂಡರು. ಅವನು ಕೊಡುವದಿಲ್ಲವಾಗಿ ಹೇಳಿದನು. ಪೋಲೀಸರು ಅವನನ್ನು ಒಳತಾಗಿ ಥಳಿಸಿ ಅವನನ್ನು ಪೊಲೀಸ ಚೌಕಿಗೆ ಕರಕೊಂಡು ಹೋದರು. ಅಂದು ರಾತ್ರಿ ಅವನ ಭಯಂಕರ ಗಾಬರಿ ಮಾಡಿಸಿದ್ದರಿಂದ ಸರಕಾರಿಯಲ್ಲಿ ಅವನನ್ನು ಬಿಟ್ಟುಬಿಟ್ಟರು.

ಥಾವಸಾದಲ್ಲಿ ಅನೇಕ ಜನ ರೈತರು ತಮ್ಮ ಹೊಲಗಳಲ್ಲಿ ಬೆಳೆಗಳನ್ನು ಕಾಯುವ ಉದ್ದೇಶದಿಂದ ಹೊಲಗಳಲ್ಲಿ ಮಲಗಿಕೊಂಡಿದ್ದರು. ತಾ॥೨೬ನೆಯ ದಿವಸ ರಾತ್ರಿ ಕೆಲವು ಜನ ಪೋಲೀಸರು ಆ ಹೊಲಗಳಲ್ಲಿ ಹೊಕ್ಕು ಅವರನ್ನು ಒಳತಾಗಿ ಥಳಿಸಿದರು. ಒಬ್ಬ ಮನುಷ್ಯನು ಒಂದೂ ಕಣ್ಣ ಮೊನೆಯಿಂದ ಗುಣ—೩೦ ಸಲ ಹೊಡೆಯಲ್ಪಟ್ಟನು. ಅವನ ಎಲುಬುಗಳು ಜಜ್ಜಿ ಹೋಗಿದ್ದವೆಂಬ ಮಾತು ಇನ್ನೂ ಮುಂದಿಲ್ಲ. ಒಬ್ಬ ಅಶಕ್ತ ಮನುಷ್ಯನನ್ನು ಕುತ್ತಿಗೆಹಿಡಿದು ಕಳಗೆ ನೂಕಿ ಅವನ ಮೇರೆಯ ಮೇಲೆ ಒಳತಾಗಿ ಪೆಟ್ಟುಕೊಟ್ಟರು. ಇದೇಹಳ್ಳಿಯಲ್ಲಿ ಇಬ್ಬರು ವಿಧವೆಯರೊಡನೆ ನಾನು ಸಂಭಾಷಣೆಮಾಡಿದೆನು. ಅವರು ಹೀಗೆ ಹೇಳಿದರು

ತಾ॥೧೬ ನೆಯ ದಿವಸ ಸಂಜೆಯಲ್ಲಿ ಇಬ್ಬರು ಪೋಲೀಸರು ಮನೆಗೆ ಬಂದು ಬಾಗಿಲುಗಳನ್ನು ನೂಕಿದರು. ಬಾಗಿಲ ಕೆರೆದೆವು ಅವರು ಒಮ್ಮಿಲೆ ಒಳಹೊಕ್ಕರು. ಆಗ ಮನೆಯಲ್ಲಿ ಗಂಡಸರು ಯಾರೂ ಇದ್ದಿದ್ದಿಲ್ಲ. ಪೋಲೀಸರು ನಮ್ಮನ್ನು ಕುತ್ತಿಗೆ ಹಿಡಿದು ನೆಲದ ಮೇಲೆ ತಡವಿ ಒಳತಾಗಿ ಥಳಿಸಿದರು. ಸಬ್ ಇನಸ್ಪೆಕ್ಟರರು ಹೊರಗೆ ನಿಂತಿದ್ದರು. ನಾವು ಈ ಬಗ್ಗೆ ಅವರ ಕಡೆಗೆ ದೂರು ಹೇಳಿದೆವು. ನಾವು ವಿಧವೆಯರಾಗಿದ್ದೆವೆಂಬುದು ಗೊತ್ತಿದ್ದರೂ ಸಹ, ಅವರು ಅಗದಿ ನೀಚತನದಿಂದ "ಗಂಡಂದಿರಲ್ಲಿ ಹೋಗಿ ನಿಮ್ಮ ದುಃಖ ತೋಡಿಕೊಳ್ಳಿರಿ" ಎಂಬುದಾಗಿ ಉತ್ತರ ಕೊಟ್ಟರು.

ಪೋಲೀಸರಿಂದ ಹೀಗೆ ಅನ್ಯಾಯವಾಗಿ ಹೊಡತ ತಿಂದು ಅವಮಾನಕ್ಕೊಳಗಾದ ಜನರನ್ನು ನೋಡಿದ ಕೂಡಲೆ, ತನ್ನ ಜನುಯಾಯಿಗಳಿಗಾಗಿ ಕಷ್ಟ ಸಹಿಸಿದ ಕ್ರೈಸ್ತನ ಮೂರ್ತಿಯೇ ಪ್ರತ್ಯಕ್ಷವಾಗಿ ನನ್ನ ಮುಂದೆ ಬಂದು ನಿಂತುಕೊಂಡಂತಾಗುತ್ತಿತ್ತು. ನಿರಾಶ್ರಿತರಾದ ಈ ವಿಧವೆಯರೊಡನೆ ಮಾತಾಡುತ್ತ ನಿಂತಾಗಂತೂ, ಅವರು ನನ್ನ ತಾಯಿಯಂತೆಯೇ ಇವರಾಗಿ ನನಗೆ ಎನಿಸಿತು. ನನ್ನ ತಾಯಿ ಹಾಗು ಭಗಿನಿಯರು ಪೋಲೀಸರಿಂದ ಅವಮಾನ ಹೊಂದಿದ್ದಿರೆ ಎಷ್ಟು ದುಃಖವಾಗುತ್ತಿತ್ತೊ ಅಷ್ಟೇ ದುಃಖವು ಈ ಅರ ಕಷ್ಟಪರಂಪರೆಯನ್ನು ಕೇಳುವ ಸಮಯದಲ್ಲಿಯೂ ನನಗೆ ಒತ್ತರಿಸಿ ಬಂತು.

ಜಪ್ತಿಯ ಜುಲುಮೆ

ರೈತರ ಜೀವನಕ್ಕೆ ಅತ್ಯವಶ್ಯವಾದ ಸರಕು ಹಾಗು ಧಾನ್ಯಗಳನ್ನು ಜಪ್ತು ಮಾಡಕೂಡದೆಂಬುದಾಗಿ ಲ್ಯಾಂಡ ರೆವ್ಹಿನ್ಯೂ ಕೋಡದಲ್ಲಿ ಬರೆದಿದ್ದರೂ ಸಹ, ಅಧಿಕಾರಿಗಳು ಅತ್ತ ಲಕ್ಷ್ಯ ಕೊಡದೆ ಅನ್ಯಾಯವಾಗಿ ನೇರಲು, ಪನಕದ ಒಕ್ಕಲತನದ ಉಪಕರಣ ಮತ್ತು ಹಂಪುಗಳನ್ನು ಜಪ್ತ ಮಾಡಿಕೊಂಡು ಹೋಗಿದ್ದಾರು. ಜಪ್ತ ಮಾಡಿದ ಸಾಮಾನುಗಳನ್ನು ಕೇಡ ಕಡಿಮೆ ಬೆಲೆಗೆ ಮಾರಿದ್ದಾರು. ಭೂಮಿಗಳ ಒಡೆಯರಿಂದ ಹಪ್ತೆಯ ಧನವನ್ನು ವಸೂಲ ಮಾಡಲು ಶಕ್ಯವಾಗದಿದ್ದಾಗ ಕಂದಾಯ ಖಾತೆಯ ಅಧಿಕಾರಿಗಳು ನೆರೆ ಹೊರೆಯವರಿಗೆ ಪೀಡೆ ಕೊಟ್ಟು ಅವರಿಂದ ಆ ಧನವನ್ನು ವಸೂಲ ಮಾಡಿಕೊಂಡಿರುವರು. ಇಲ್ಲಿ ಕೇಳಿಗೆ ಅನ್ಯಗಳನ್ನು ಉದಹರಿಸಿರುತ್ತದೆ.

ಪಿಪಲಾಗ ಎಂಬ ಹಳ್ಳಿಯಲ್ಲಿ ಎಷ್ಟೋ ಭಂಡೆಕೊಂಡೆಗಳನ್ನು ಜಪ್ತ ಮಾಡಿರುವರು. ನರಶುಂದಾ ಎಂಬ ಹಳ್ಳಿಯಲ್ಲಿ ಒಬ್ಬ ಮನೆಯ ಬಾಗಿಲು ಹಾಗು ಚೌಕಟ್ಟುಗಳನ್ನು ಕಿತ್ತಿ ಒಯ್ದು ಅವರಿಗೆ ನೂರಾರು ರೂಪಾಯಿಗಳ ಹಾನಿ ಮಾಡಿರುವರು. ತಾ॥೭ ನೆಯ ದಿವಸ ಕೆಲವು ಜನ ಪೋಲೀಸರು ಅಜಾರಪುರಕ್ಕೆ ಹೋಗಿ ಅಲ್ಲಿಯ ರೈತರನ್ನು ಒಳತಾಗಿ ಹೊಡೆದರು. ಅಲ್ಲಿ ಒಂದು ಗಿಡದ ಮೇಲೆ ಕಟ್ಟಿದ ರಾಷ್ಟ್ರಧ್ವಜವನ್ನು ಕೆಳಗೆ ತೆಗೆದುಕೊಳ್ಳಲು ಆಜ್ಞೆ ವಿಧಿಸಿದರು. ರೈತರು ಅದಕ್ಕೆ ಒಪ್ಪಲಿಲ್ಲ. ಪೋಲೀಸರು ಅವರನ್ನು ಹೊಡೆದು ಬಡಿದು ಅವರ ತಲೆಯ ಮೇಲಿನ ಗಾಂಧಿ ಟೊಪ್ಪಿಗೆಗಳನ್ನು ಕಸಿದುಕೊಂಡು ಅವುಗಳನ್ನು ಸುಟ್ಟು ಬಿಟ್ಟರು. ಇದಾದ ಎರಡು ದಿನಗಳ ತರುವಾಯ ದಲ್ಲಿ ವಾಮಲೇದಾರರು ಅಲ್ಲಿಗೆ ಹೋಗಿ ಜಪ್ತಿಯ ಸಪ್ತ ಸುರವನ್ನು ಮಾಡಿದರು. ಹಂಪುಗಳ ಕೆಲವು ಸಾಮಾನುಗಳನ್ನು ಜಪ್ತ ಮಾಡಿದರು. ಹಂಪುಗಳ ಸಾಮಾನುಗಳನ್ನು ಜಪ್ತ ಮಾಡಿದ್ದರಿಂದ ಹೊಲಗಳಿಗೆ ನೀರು ಬಿಡುವದು ನಿಂತು ಹೋಯಿತು. ಬೆಳೆಗಳು ಒಣಗಿ ಹೋದವು. ಆದ್ದರಿಂದ ಒಬ್ಬನು ಎಲ್ಲರ ಪರವಾಗಿ ಹಪ್ತೆಯನ್ನು ಕೊಟ್ಟನು. ಮಾಮಲೇದಾರರೂ, ಅವರ ಕೈಕೆಳಗಿನ ಅಧಿಕಾರಿಗಳೂ ಅವನನ್ನು ಒಳತಾಗಿ ಥಳಿಸಿ ಅವನನ್ನು ಅವಮಾನ ಗೊಳಿಸಿದರು,

ಬೋರಿಯಾವಿಯಲ್ಲಿ ಒಬ್ಬ ಪಟೇದಾರರಿದ್ದರು. ಅವರಿಗೆ ಸರಕಾರದಿಂದ ಪದವಿಯೂ ಸಿಕ್ಕಿತ್ತು. ಅವರು ಇತ್ತೀಚೆಗೆ ಪದವಿಗೆ ರಾಜೀನಾಮೆ ಕೊಟ್ಟರು. ಕಾಯದೆ ಭಂಗ ಚಳವಳಿಯಲ್ಲಿ ಸೇರಿ, ಈಗ ಜೈಲಿಗೆ ಹೋಗಿರುವರು. ಅವ

ರಿಗೆ ೨೫೦ ರು. ದಂಡವಾದರೂ ಆಗಿದ್ದು ಅವರು ದಂಡವನ್ನು ಕೊಟ್ಟಿಲ್ಲ ಕಾ। ೩೦ ನೆಯ ದಿವಸ ಕೆಲವು ಜನ ಪೋಲೀಸರು ಅವರ ಮನೆಯಲ್ಲಿ ನುಗ್ಗಿ ಹೋಗಿ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋದರು. ಇಷ್ಟಕ್ಕೆ ಸಂತೋಷಪಡದೆ ಅವರು, ವಿಧವೆಯಾಗಿರುವ ಅವರ ಅತ್ತಿಗೆಯ ಮನೆಗೂ ಮುತ್ತಿಗೆ ಹಾಕಿ ಅಡಿಗೆಯ ಮನೆಯಲ್ಲಿ ಒಳಹೊಕ್ಕರು. ಆಗ ಮನೆಯಲ್ಲಿ ಗಂಡಸರು ಯಾರೂ ಇರಲಿಲ್ಲ. ಹೆಂಗಸರು ಅದೇ ಊಟಕ್ಕೆ ಕುಳಿತುಕೊಳ್ಳುತ್ತಿದ್ದರು. ಪೋಲೀಸರು ಅಲ್ಲಿಯ ಎಲ್ಲ ಸಾಮಾನುಗಳನ್ನೂ ಅಸ್ತವ್ಯಸ್ತ ಮಾಡಿದರು. ಎಣ್ಣೆ ಮತ್ತು ತುಪ್ಪವನ್ನು ನೆಲದ ಮೇಲೆ ಚೆಲ್ಲಿದರು. ಅಡಿಗೆಯನ್ನು ಕೆಡಿಸಿದರು. ಕೆಲವು ಸಾಮಾನು ಹಾಗೂ ರುಪಾಯಿಗಳನ್ನು ತೆಗೆದುಕೊಂಡು ಹೋದರು

ಡಾಕ್ಟರಿಗಾದರೂ ಅಧಿಕಾರಿಗಳು ಪೀಡೆ ಕೊಡಹತ್ತಿದ್ದಾರೆ. ಪೋಲೀಸರ ಅಪ್ಪಣೆಯನ್ನು ಪಡೆದುಕೊಳ್ಳದೆ ಯಾರಿಗೂ ಉಪಚಾರ ಮಾಡಕೂಡದಾಗಿ ನಡಿಯುವಾದವಲ್ಲಿ ಸಿವಿಲ್ ಸರ್ಜನರಿಗೆ ಅಪ್ಪಣೆಕೊಟ್ಟಿದ್ದಾರೆ. ಸಲಾಸನದಲ್ಲಿ ಗಾಯ ಹೊಂದಿದ ಮನುಷ್ಯನಿಗೆ ಆಕ್ಷಯು ಡಾಕ್ಟರರು ಔಷಧೋಪಚಾರ ಮಾಡಲಿಲ್ಲ ಗಿಡದಿಂದ ಬಿದ್ದಿದ್ದರಿಂದ ಗಾಯವಾಗಿರುವೆಂದು ಸುಳ್ಳು ಹೇಳಲು ಅವರು ಅವನಿಗೆ ಒತ್ತಾಯಮಾಡಿದರೆ. ಅವನು ಹಾಗೆ ಹೇಳಲು ಒಪ್ಪಲಿಲ್ಲ ಔಷಧೋಪಚಾರ ಮಾಡದೆ ತಿರುಗಿ ಕಳಿಸಿಕೊಟ್ಟ ।

ನಮಸ್ಕಾರ ಹಾಗೂ. ಅನಂತ ತಾಲೂಕಗಳಲ್ಲಿ ನನಗೆ ತಿಳಿದು ಬಂದ ಸಂಗತಿಗಳನ್ನೆಲ್ಲ ಮೇಲೆ ವರ್ಣಿಸಿದ್ದಾರೆ. ಇಂತಹ ಎಷ್ಟೋ ಸಂಗತಿಗಳು ನನ್ನ ಟಿಪ್ಪಣಿಯಲ್ಲಿವೆ. ಇಂತಹ ಜಳವಳಿಯಲ್ಲಿ ಸೇರಿದವರಿಗೆ ಕಷ್ಟನಷ್ಟಗಳು ಬರುವದೂ ಅಸ್ವಾಭಾವಿಕವಾಗಲಾರದು ದಂಡ, ಶಿಕ್ಷೆ ಮೊದಲಾದವುಗಳು ಅನುವದು ಸಹಜವಾದದ್ದೆ ಇದೆ. ಆದರೆ ದಬ್ಬಾಳಿಕೆಯನ್ನು ಅವಲಂಬಿಸಿದಾಗ ಅಧಿಕಾರಿಗಳು ನ್ಯಾಯದ ಕಡೆಗೆ ವಿಶೇಷವಾಗಿ ಲಕ್ಷ್ಯಕೊಡಬೇಕು. ಮಾನವಂತರಾದವರು ಹಾಗೂ ಸಬ್ ಇನಸ್ಪೆಕ್ಟರರು ಇಷ್ಟಕ್ಕೇ ಸುಮ್ಮಗೇಳುತ್ತಾರೆ. ಪೋಲೀಸರು ಹುಂಬರೂ ಅಜ್ಞಾನಿಗಳೂ ಇರುತ್ತಾರೆ

ಕೆಳಗಿನ ಅಧಿಕಾರಿಗಳು ಮಾಡಿಸಿದ ಕೃತಿಗಳ ವಿಷಯವಾಗಿ ಮೇಲಿನ ಅಧಿಕಾರಿಗಳಿಗೆ ಏನೂ ಗೊತ್ತಾಗುವದಿಲ್ಲ. ಆದ್ದರಿಂದ ಸರಕಾರದವರು ಒಂದು ವಿಚಾರಣಾಮಂಡಲವನ್ನು ನಿಯುಕ್ತಿಸಿ ಮೇಲಿನ ಸಂಗತಿಗಳ ಬಗ್ಗೆ ವಿಚಾರ ಮಾಡಬೇಕು. (ಮುಂದಿನಸಾರುವದು.)

ಲೇಜಿಸ್ಲೇಟಿವ್ಹ ಅಸೆಂಬ್ಲಿಯ ಅಧಿವೇಶನ

ಲೇಜಿಸ್ಲೇಟಿವ್ಹ ಅಸೆಂಬ್ಲಿಯು ಅಧಿವೇಶನವು ತಾ॥ ೧೪ ನೆಯ ದಿವಸ ದಿಲ್ಲಿಯಲ್ಲಿ ಪ್ರಾರಂಭವಾಯಿತು. ಶ್ರೀ ಪಣ್ಣಾಬಾ ಚೆಟ್ಟಿಯವರನ್ನು ತಾತ್ಕಾಲಿಕ ಅಧ್ಯಕ್ಷರನ್ನಾಗಿ ನಿಯಮಿಸಿದ ಬಗ್ಗೆ ವೈಸ್ರಾಯಿ ಸಂತಾಯದಿಂದ ಬಂದ ಸಂದೇಶವನ್ನು ಸೆಕ್ರೆಟರಿಯವರು ಓದಿ ತೋರಿಸಿದರು ಶ್ರೀ ಚೆಟ್ಟಿಯವರು ಅಧ್ಯಕ್ಷಸ್ಥಾನದಲ್ಲಿ ಕುಳಿತುಕೊಂಡರು. ಬಳಿಕ ಶ್ರೀ ಚೆಟ್ಟಿ ಹಾಗೂ ಎಲ್ಲ ಸಭಾಸದರೂ ರಾಜ್ಯನಿಷ್ಠೆಯ ಬಗ್ಗೆ ಶಪಥ ತೆಗೆದುಕೊಂಡರು.

ಶಪಥ ತೆಗೆದ ಕೊಳ್ಳುವ ಸಮಾರಂಭವು ಮುಗಿದ ಬಳಿಕ ಶ್ರೀ ಚೆಟ್ಟಿಯವರು, ಸೆಲ್ಲಾಪುರದ ಮುಂದಾಳುಗಳಿಗೆ ಅವರಲ್ಲಿನ ತಿಳಿವಳಿಕೆಯ ಬಗ್ಗೆ ಅಧಿವೇಶನವನ್ನು ಮುಂದೂಡಬೇಕಾಗಿ ಶ್ರೀ ಗುಂಜಾಳರಿಂದ ಬಂದ ಸೂಚನೆಯನ್ನು ಸಭೆಯ ಮುಂದಿಟ್ಟರು.

ಸೆಲ್ಲಾಪುರದ ಶ್ರೀ ಧನಶೆಟ್ಟಿ ಎಂಬವರು ದವರನ್ನು ಗಲ್ಲಿಗೆ ಹಾಕಿದ್ದು ನಿಜವಿದೆಯೇ ನೆಂದು ದಾಗಿ ಶ್ರೀ ಗುಂಜಾಳರವರು ಕೇಳಿದರು.

"ಗಲ್ಲಿಗೆ ಹಾಕಿದ್ದು ನಿಜವಿದೆ" ಯೆಂಬುದಾಗಿ ಜೇವ್ಸ್ ಕೈರಾವರವರು ಉತ್ತರ ಕೊಟ್ಟರು ಶ್ರೀ ಗುಂಜಾಳರು ತಮ್ಮ ಸೂಚನೆಯನ್ನು ತಿರುಗಿ ತೆಗೆದುಕೊಂಡರು

ಬಳಿಕ ಸರ್ ಜಾರ್ಜ ಶಿಕ್ಸ್ಬೀರರು ಸ್ಟ್ಯಾಂಡಿಂಗ ಫಾಯನಾನ್ಸ ಕಮೀಟಿ ಹಾಗೂ ಪಬ್ಲಿಕ್ ಅಕಾವಂಟ್ಸ ಕಮೀಟಿಗಳಿಗೆ ಸಭಾಸದರನ್ನು ಆರಿಸುವ ವಿಷಯವಾಗಿ ಸೂಚನೆ ತಂದರು. ಅದು ಸ್ವೀಕೃತವಾಯಿತು.

ತಂತರದಲ್ಲಿ ಸರ್ ಜಾರ್ಜ ರೇನಿಯವರು ಮುಂದಿನ ವಾರದ ಕಾರ್ಯದ ವಿವರವನ್ನು ತಿಳಿಸಿ, ಮುದ್ರಣಾಲಯ, ಕಾನೂನಾಕರಣೆ, ಬೆಂಗಾಲ ಸಿವಿಲ್ ಲಾ ಅಮೆಂಡಮೆಂಟ ಕಾಯದೆ, ಪಂಜಾಬ ಕ್ರಿಮಿನಲ್ ಪ್ರೊಸೀಜರ ಕೃತ್ಯ ಕಾಯ್ದೆ ಇಂಡಿಯನ್ ಮರ್ಚಂಟ ಶಿಪಿಂಗ ಕೃತ್ಯ ಮೊದಲಾದವುಗಳ ಕಂಬಂಧವಾಗಿ ತರಕಾರಿದವರು ನಾಳೆಯ ದಿವಸ ಸೂಚನೆ ತರತಕ್ಕವರಿದ್ದಾರಾಗಿ ಹೇಳಿದರು.

ತಾ। ೧೫ ನೆಯ ದಿವಸ ಅಧ್ಯಕ್ಷರನ್ನಾರಿಸುವ ಕಾರ್ಯವು ನಡೆಯತಕ್ಕದ್ದಿದ್ದು, ವೈಸ್ರಾಯರ ಭಾಷಣವಾದರೂ ಅಂದೇ ಆಗುವದು

ಸಾಬರಮತಿ ಜೆಲಿನಲ್ಲಿ ಕೈದಿಗಳ ವರ್ಗೀಕರಣಕ್ಕೆ ವಿರೋಧ.

ಸಾಬರಮತಿ ಜೇಲಿನಲ್ಲಿಯ ರಾಜಕೀಯ ಕೈದಿಗಳು, "ವರ್ಗೀಕರಣ ಪದ್ಧತಿಯನ್ನು ತೆಗೆದೊಗೆಯರಿ ಇಲ್ಲದಿದ್ದರೆ ಅನ್ನತ್ಯಾಗ ಸತ್ಯಾಗ್ರಹವನ್ನು ಕೂಡುವೆವು" ಎಂಬ ದಾಗಿ ಜೇಲಿನ ಅಧಿಕಾರಿಗಳಿಗೆ ನಿರ್ವಾಣಿಯು ಪತ್ರ ಒದಿದ್ದಾರೆ

ಕ್ಯಾಪ್ಟನ್ನರ ಹೆಂಡತಿ ಕತ್ತಿಯಿಂದ ಹೊಡೆದನು.

ಲಾಹೋರ ಜಿಲ್ಲೆಯ ವಲತೋಹಾದ ನಿವಾಸಿಯಾದ ಕಚ್ಚನಸಿಂಗ ಎಂಬ ಶರಣನು, ತಾ। ೧೩ ನೆಯ ದಿವಸ ಸಂಜೆಗೆ ವೊಗಲಪುರದಲ್ಲಿ ಕ್ಯಾಪ್ಟನ್ ಕರ್ಟಿಸರ ಮನೆಯಲ್ಲಿ ನುಗ್ಗಿ ಹೋಗಿ, ಅವರ ಹೆಂಡತಿಯನ್ನು ಮತ್ತು ಹೆಣ್ಣುಮಕ್ಕಳನ್ನು ಕತ್ತಿಯಿಂದ ಹೊಡೆದು ಗಾಯಪಡಿಸಿದನು. ಏನೆಸ್ ಟಿಟಿಸರು ಅಂದೇ ಸಂಜೆಯಲ್ಲಿ ಆಸ್ಪತ್ರೆಯಲ್ಲಿ ವರಣ ಹೊಂದಿದರು. ಅಪರಾಧಿಯು ಆಗಿಂದಾಗ್ಗೆ ಸೆರೆಹಿಡಿಯಲ್ಪಟ್ಟನು.

ಪೋಲೀಸರ ಮುಂದೆ ಅವನು ಕೆಳಗಿನಂತೆ ಜವಾಬು ಕೊಟ್ಟಿರುವನಾಗಿ ತಿಳಿಯುತ್ತದೆ.

ಒಬ್ಬ ಬ್ರಿಟಿಶ ಅಧಿಕಾರಿಯನ್ನು ಕೊಲ್ಲುವ ಉದ್ದೇಶದಿಂದ ಹೋದ ವರ್ಷ ಪಂಜಾಬ ರೆಜಿಮೆಂಟದ ಬ್ಯಾಟಲಿಯನ್ನದಲ್ಲಿ ಸೇರಿದೆ. ನನ್ನ ಉದ್ದೇಶವು ಸಫಲವಾಗಲಿಲ್ಲ. ಅಲ್ಲಿಂದ ಹೊರಬಿದ್ದು ಬಂದ ಮೇಲೆ ಕಾಂಗ್ರೆಸ್ ಚಳವಳಿಯಲ್ಲಿ ತೊಡಗಿಕೊಂಡೆ. ಚಳವಳಿಯು ಮುಖಾಂತರವಾಗಿ ನನಗೆ ಆರು ತಿಂಗಳ ಶಿಕ್ಷೆಯಾಯಿತು. ಶಿಕ್ಷೆಯನ್ನು ಅನುಭವಿಸಿ, ಮೂರು ತಿಂಗಳದ ಹಿಂದೆ ಬಿಡುಗಡೆ ಹೊಂದಿ ಬಂದೆ. ಅಂದಿನಿಂದ ಬ್ರಿಟಿಶ ಅಧಿಕಾರಿಯನ್ನು ಕೊಲ್ಲುವ ಯೋಚನೆಯಲ್ಲಿಯೇ ನಾನು ತೊಡಗಿಕೊಂಡೆ. ನನ್ನ ಹಳ್ಳಿಯಲ್ಲಿ ಇನ್ನೂ ಎಷ್ಟೋ ಜನರು ಬ್ರಿಟಿಶ ಅಧಿಕಾರಿಗಳನ್ನು ಕೊಲ್ಲುವ ವಿಚಾರದಲ್ಲಿರುವರು.

ಬೆಳಗಾವಿ ಜಿಲ್ಲೆಯ ಅಳ್ಳಂಗೇರಿಯ ತಾಳದ ರಾ। ತುರ್ಪದ ಬಸಪ್ಪ ಎಂಬ ಪೋಲೀಸನು, ಸರಕಾರಿ ದಬ್ಬಾಳಿಕೆಯನ್ನು ನಿವೇದಿಸಿ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವನು.

ಮುಂಬಯಿಯಲ್ಲಿ

ಸೊಲ್ಲಾಪೂರ ವೀರಾಳುಗಳ ದಿನಾಚರಣೆ

ನೂರಾರು ಜನರಿಗೆ ಡೊಣ್ಣೆಯ ಪೆಟ್ಟು.

(ತಂತಿಯ ವಾರ್ತೆ)

ತಾ|| ೧೬ ನೆಯ ದಿನದಂದು ''ಸೊಲ್ಲಾಪೂರ ವೀರಾಳುಗಳ ದಿನ'' ವನ್ನು ಆಚರಿಸಬೇಕೆಂದು ಮುಂಬಯಿಯ ಕಟ್ಟಾಗ್ರಹಿಯು ಮಂಡಳದವರು ತೀರ್ಮಾನಿಸಿದ ಪ್ರಕಾರ ಮುಂಬಯಿಯಲ್ಲಿ ಆದಿನವು ಯಥಾಸಾಂಗವಾಗಿ ಆಚರಿಸಲ್ಪಟ್ಟಿತು. ಪಟ್ಟಣದಲ್ಲೆಲ್ಲ ಸಂಪೂರ್ಣ ಹರತಾಳವಾಯಿತು. ಶಾಲೆ, ಕಾಲೇಜ, ಗಿರಣಿ ಅಂಗಡಿ ಮೊದಲಾದವುಗಳೆಲ್ಲವೂ ಮುಚ್ಚಿ ಹೋಗಿದ್ದವು. ಸ್ವಯಂಸೇವಕರು ಟ್ರಾಮು ಕಾರುಗಳ ಮುಂದೆ ಪಿಕೆಟಿಂಗ ಮಾಡಿದರು ಪೋಲೀಸರು ಅವರ ವೇಷ ಏನಿಹೋಗಿ ಅವರನ್ನು ಬಂಧಿಸಿಕೊಂಡು ಹೋಗಿ ಥಳಿಸಿದರು. ಸ್ತ್ರೀಸ್ವಯಂಸೇವಕಿಯರು ಹಾಗು ಕೋರ್ಟಿನ ಮುಂದೆ ಪಿಕೆಟಿಂಗ ಮಾಡಿದರು. ಅವರಿಗಾದರೂ ಹೊಡೆತಗಳು ಬಿದ್ದಿವೆ. ಪ್ರೊಸೀಶನು ಹಾಗು ಸೈನಿಕರು ಅಲ್ಲಲ್ಲಿ ಸಶಸ್ತ್ರರಾಗಿ ನಿಂತಿರುವುದಾಗಿ ತಿಳಿದು ಬಂದಿದೆ. ನೂರಾರು ಜನರಿಗೆ ಗಾಯಗಳಾಗಿವೆ. ಇವರಲ್ಲಿ ೧೫ ಜನರು ಕಠಿಣ ಸ್ಥಿತಿಯಲ್ಲಿದ್ದಾರೆ.

ಕೋರ್ಟಿನ ಹಲಿಗೆಗೆ ಬೆಂಕಿ ಹಚ್ಚಿದರು.

ಮಾನಸಿಗಂಜಾಲ್ಲಿಯ ದಿವಾಣಿ ಕೋರ್ಟಿನ ಹೊರಭಾಗದಲ್ಲಿ ಅಷ್ಟಿರುವ ಅಧಿಕಾರಿಗಳು ಒಂದು ಹಲಿಗೆಯ ಮೇಲೆ ಸರಕಾರಿ ಪ್ರಕಟಣೆ ಹಾಗು ಕಾಯದೆಭಂಗ ಜನರಿಗೆ ಪರಿಚಯ ಆಗುವಂತೆ ಕೆಲವು ಚಿತ್ರಗಳನ್ನು ಅಂಟಿಸಿದ್ದರು. ತಾ|| ೧೭ ನೆಯ ದಿನ ರಾತ್ರಿ, ಯಾರೋ ಕೆಲವರು ಅಲ್ಲಿಗೆ ಹೋಗಿ ಅವುಗಳಿಗೆ ಬೆಂಕಿ ಹಚ್ಚಿ ಆ ಹಲಿಗೆಯನ್ನು ಸಂಪೂರ್ಣ ಸುಟ್ಟುಬಿಟ್ಟಿದ್ದಾರೆ.

ಪಿಯಾನು ಬಾರಿಸುವಾಗ ಮರಣ ಹೊಂದಿದ್ದು.

ಎಪ್ಪತ್ತಾರವುದ್ದದ ಮಿಸೆಸ್ ಜಾನೆಲ್ ಬ್ರೌನ್ ಎಂಬ ೭೮ ವರ್ಷದ ವಿದುಷಿಯು ತನ್ನ ಮನೆಯಲ್ಲಿ ಪಿಯಾನು ಬಾರಿಸುತ್ತ ಕುಳಿತಾಗ ಒಮ್ಮಿಂದೊಮ್ಮೆ ಮರಣ ಹೊಂದಿದಳು.

ಹುಬ್ಬಳ್ಳಿಯಲ್ಲಿ

ಮೆರವಣಿಗೆಗೆ ಅಡ್ಡಿ.

(ಸ್ವಂತ ಸುದ್ದಿಗಾರರಿಂದ)

ನೊಲ್ಲಾಪುರದ ಮಲ್ಲಪ್ಪ ಧನಶೆಟ್ಟಿ ಮೊದಲಾದವರನ್ನು ಯರೋಡಾ ಜೇಲಿನಲ್ಲಿ ಗಲ್ಲಿಗೇರಿಸಿದ ಸುದ್ದಿಯನ್ನು ಕೇಳಿ ಹುಬ್ಬಳ್ಳಿಯಲ್ಲಿ ಸಂಪೂರ್ಣ ಹರತಾಳವು ಆಚರಿಸಲಾಯಿತು. ಶ್ರೀ ಪಾವಟೆ ಬಳೇ ಅಂಗಡಿ, ವಂ.ರಾತೆ, ಕೆಂಪಣ್ಣವರ ಮುಂತಾದವರ ಮೊದಲಾದ ೮ ಜನ ಪ್ರಮುಖರು ವಿನಂತಿ ಪತ್ರ ಹೊರಡಿಸಿ, ಮೆರವಣಿಗೆ ಸಭೆ ಮೊದಲಾದವುಗಳನ್ನು ಜರುಗಿಸಿ, ನಿಷೇಧ ಸ್ಥಳಪಡಿಸಬೇಕಾಗಿ ನಾಗರಿಕರಿಗೆ ಕೇಳಿಕೊಂಡಿದ್ದರು. ಅವರ ಮೇಲೆ ಮ್ಯಾಜಿಸ್ಟ್ರೇಟರು ೧೫೪ ನೆಯ ಕಲಮಿನ ಕ್ರಮಕಾರ ನೋಟೀಸು ಹೊರಡಿಸಿದ್ದರು. ಅವರಲ್ಲಿ ಕೆಲವರು ತನ್ನ ಸಹಿಯನ್ನು ತಿರುಗಿ ತೆಗೆದುಕೊಂಡರು. ಮಧ್ಯಾಹ್ನದಲ್ಲಿ ಇಲ್ಲಿ ಕಾಂಗ್ರೆಸ್ ಕಮೀಟಿ ಇಲ್ಲವೆಂದೂ, ಮೆರವಣಿಗೆ ಸಭೆ ಮೊದಲಾದವುಗಳು ಆಗುವದಿಲ್ಲವೆಂದೂ ಸರಕಾರದ ವತಿಯಿಂದ ಡಂಗುರ ಸಾರುವದರಲ್ಲಿ ಬಂದಿತ್ತು. ಕಾಂಗ್ರೆಸ್ ಸ್ವಯಂಸೇವಕರು ಸಭೆಸೇರಿ ಆಗಿಯೆಂದು ಡಂಗುರ ಸಾರಿದ್ದರಿಂದ ಪೋಲೀಸರು ಅವನನ್ನು ಬಂಧಿಸಿಟ್ಟು ಕೆಲಹೊತ್ತಿನ ಮೇಲೆ ಬಿಟ್ಟುಬಿಟ್ಟರು. ೩೫ ಗಂಟೆಯ ಸುಮಾರಿಗೆ ಕಿಲ್ಲೆಯಲ್ಲಿಯು ಲೋಕಮಾನ್ಯ ಬೈಲಿನ ಪ್ರಮುಖರೂ ಪೋಲೀಸರು ಕಾವಲು ರಚಿಸಿಕೊಂಡು ನಿಂತಿದ್ದರು. ಮೆರವಣಿಗೆಯು ದೊಡ್ಡ ಕಡೆಯಿಂದ ಹೊರಟು ಗಾಂಧಿ ಚೌಕಿಗೆ ಬಂದು ತಲುಪಿತು. ಅಲ್ಲಿ ಪೋಲೀಸರು ಅಡ್ಡಿ ಮಾಡಿದರು. ಮೆರವಣಿಗೆಯಲ್ಲಿ ಸೇರಿದವರು ಬೇರೆ ಬೇರೆ ಗುಂಪುಗಳನ್ನು ಮಾಡಿಕೊಂಡು ಹಿಂದಿರುಗಿ, ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿಯೂ, ಗಾಂಧಿ ಚೌಕಿನಲ್ಲಿ ಹಾಯುವ ವಿಜಯವನ್ನು ಸಂಪಾದಿಸಿ ಕಛಾಸ್ಥಾನಕ್ಕೆ ತಲುಪಿದರು.

ಗುಳಪ್ಪನ ಬೈಲಿನಲ್ಲಿ ಶ್ರೀ ಪುರಾಣೇಕರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಗೋಪಾಲ, ಕೆಂಪಣ್ಣವರ, ಗೋಕಾಕರ, ಕರಿಗುದರಿ, ಖಾ. ರಂಧಳ್ಳಿ ಮುಂತಾದವರು ಮುಂತಾದವರ ಭಾಷಣಗಳಾಗಿ, ಪರಮೇಶ್ವರನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂಬ ಆಶಯದ ತರಾವು ಪಾಸು ಮಾಡಲ್ಪಟ್ಟಿತು. ೧೫೦೦ ಜನರಿಗೆ ದಾಯುವ ಸಭೆಯಲ್ಲಿ ಕೂಡಿತ್ತು.

ಅಂಕೋಲೆಯಲ್ಲಿ

ಹೆಂಗಸರ ಕಾಯದೆ ಭಂಗ

ಅಂಕೋಲೆಯ ಮೂವರು ಒಕ್ಕಲಿಗಿತಿಯರು ಒಂದು ದಿವಸ ಗುಡ್ಡದಿಂದ ಹೊರಿ ತಂದ ಅವುಗಳನ್ನು ಪಟ್ಟಣದಲ್ಲಿ ಮಾರಬಂದರು. ಆಗ ಆಡವಿಯ ಅಧಿಕಾರಿಗಳು ಅವರಿಗೆ ಅಡ್ಡಿಮಾಡಿ ಅವುಗಳನ್ನು ಜಪ್ತಮಾಡಿಕೊಂಡು ಹೋದರು ಮರುದಿವಸ ನೂರಾರು ಜನ ಒಕ್ಕಲಿಗಿತ್ತಿಯರು ಆಡವಿಗೆ ಹೋಗಿ ಕಟ್ಟಿಗೆ ತಂದು ಅವುಗಳನ್ನು ಸಾರ್ವಜನಿಕವಾಗಿ ಲಿಲಾವು ಮಾಡಿದರೆಂದು ಮೂರು ಖಂ—೬೦ ಹೆಂಗಸರು ವಾರಂಟು ವಾದವು ಆಕಸಿರು ಅಧಿಕಾರಿಗಳು ಕಣ್ಣಾ

ಶ್ರೀ ಏಕಾಂಬರ ಅಯ್ಯರರ ಪೃಕೃತಿ

ತಂಬಳು ರೋಗದ ಬಗ್ಗೆ ಶಸ್ತ್ರಕ್ರಿಯೆಯನ್ನು ಹೊಂದಿ ಜೆ. ಜಿ. ಹೊಸ್ಪಿಟಲದಲ್ಲಿ ಉದಜಾರ ಪಡೆಯುತ್ತಿರುವ ಹಿಂದುಸ್ಥಾನೀ ಸೇವಾದಳದ ಸಂಘಟಕರಾಗಿರುವ ಶ್ರೀ ಏಕಾಂಬರ ಅಯ್ಯರವರ ಪೃಕೃತಿಯು ಈಗ ಸ್ವಲ್ಪ ಸುಧಾರಿಸಹತ್ತಿದೆಯೆಂದು ತಿಳಿಯುತ್ತದೆ.

೫೮ ವರ್ಷದಲ್ಲಿ ೬೯ ಮಕ್ಕಳನ್ನು ಹಡೆದವಳು

ಜರ್ಮನಿಯಲ್ಲಿ ಮಿಸೆಸ್ ಬೆರ್ಗರ್ಡಶೇಕ ಬರ್ಗ್ ಎಂಬುವವಳು ತನ್ನ ೫೮ನೆಯ ವರ್ಷದೊಳಗಾಗಿ ಒಟ್ಟಿಗೆ ೬೯ ಮಕ್ಕಳನ್ನು ಹಡೆದಳು ಆಶ್ಚರ್ಯವು ಸತ್ಯವಂತರ ಅವಳ ಗಂಡನು ಎರಡನೆ ದವಳನ್ನು ಲಗ್ನವಾಗಲು ಆತನಿಂದ ಗಲಮಕ್ಕಳಾದವರೆಲ್ಲ ಹುಟ್ಟಿದ ಮಕ್ಕಳಲ್ಲಿ ೬೭ ಮಾತ್ರ ಜೀವಂತವಿರುವರು. ಅವನ ವಯಸ್ಸು ಈಗ ೬೭.

ದಿಲ್ಲಿಯಲ್ಲಿ
ಪೋಲೀಸರು ಬೆದರಿದರು

ದಿಲ್ಲಿಯಲ್ಲಿ ಸೂನಾರಿ ಬಾಗದಲ್ಲಿ ತಾ॥ ೧೧ ನೆಯ ದಿವಸ ಬಾಂಬು ಹಾರಿದಂತೆ ಭಯಂಕರವಾದ ಸ್ಫೋಟವು ಕೇಳಿಸಿತು. ಪೋಲೀಸರು ಭಯಭೀತರಾಗಿ ಎಲ್ಲ ವಾಹನಗಳನ್ನೂ ನಿಲ್ಲಿಸಿ ಅ ಬಗ್ಗೆ ಶೋಧ ಮಾಡಿದರು. ಮೋಟಾರ ಹಾರ್ನ ಟೊಂಗಿಗಳ ನಂಬರು ಬರೆದುಕೊಂಡರು. ಅ ಮಾದಿಯಲ್ಲಿ ಹೋಗಿ ಖಾತರವನ್ನು ಶುಡತಿ ಮಾಡಿದರು. ಏನೆಂಬುವದು ಪತ್ತೆಯಾಗಲಿಲ್ಲ

ಶ್ರೀ ರಂಗಾರವರ ತೂಕವು
೪೦ ಪೌಂಡು ಕಡಿಮೆಯಾಯಿತು.

ಜೇಲಿನಲ್ಲಿ ಸಿಗುವ ಕಟ್ಟು ಆಹಾರದಿಂದ ನಿಸೇ ಧಾರ್ಥವಾಗಿ ಖಾಂಡವಾ ಜೇಲಿನಲ್ಲಿಯ ರಾಜ ಕೀಯ ಖೈದಿಗಳು ಉನೆಯ ತಾರೀಖಿನಿಂದ ಅನ್ನ ತ್ಯಾಗವ್ರತ ಕೈಕೊಂಡಿದ್ದಾರೆ. ಶ್ರೀ ಪೂರ್ಣ ಚಂದ್ರ ರಂಗಾರವರಿಗೆ ಜಾಯಲ್ಲಿ ಅಧಿಕಾರಿಗಳು ಒತ್ತಾಯದಿಂದ ಆಹಾರವನ್ನು ಹಾಕುತ್ತಿರುವರಾಗಿ ತಿಳಿಯುತ್ತದೆ. ಶ್ರೀ ರಂಗಾರವರ ತೂಕವು ೪೦ ಪೌಂಡು ಕಡಿಮೆಯಾಗಿದೆ.

ಪ್ರಕಟಣೆ

ಬಾಗಲಕೋಟೆಯ ಶ್ರೀ ಬಸವೇಶ್ವರ ಹಾಯಸ್ಕೂಲ ಪ್ಲೇಗಿನ ಮೂಲಕ ಬಂದು ಇಪ್ಪತ್ತಪ್ಪತ್ತು ಈಗ ಸೋಮವಾರ ತಾ॥ ೧೯-೧-೪೦ ನೇ ದಿವಸ ಪುನಃ ಪ್ರಾರಂಭವಾಗುವದು. ೧ ರಿಂದ ೭ನೇ ಇಯತ್ತೆಯ ವರೆಗೆ ಎಲ್ಲ ಕ್ಲಾಸುಗಳ ಅಭ್ಯಾಸವು ಯಥಾಪ್ರಕಾರ ನಡೆಯುವದು. ವಿದ್ಯಾರ್ಥಿಗಳು ಸಕಾಲಕ್ಕೆ ಬರಬೇಕು.

ಬಾಗಲಕೋಟೆ ತಾ॥ ೭-೧-೧೯೪೦

ಎಚ್. ಎಫ್ ಕಟ್ಟೀಮನಿ
ಪ್ರಿನ್ಸಪಾಲ.

ಲಕ್ಷಾಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ
ವನಸ್ಪತಿಗಳ ಅದ್ಭುತ ಮಹಿಮೆ.
• ಬಾಲಾರ್ಕಮಧು. •



ಇದನ್ನು ಮಕ್ಕಳು ಆನಂದದಿಂದು ಸೇವಿಸುತ್ತಾರೆ. ಇದು ಮಧುರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಉಣಿಸುವ ಹಾಲು ಅನ್ನವೂ ಮೈಗೆಹತ್ತಿ ಶರೀರದಲ್ಲಿ ಪೌಷ್ಟಿಕ ರಸಗಳುಂಟಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಮಕ್ಕಳಿಗೆ ಒಳ್ಳೆಯ ಶಕ್ತಿಯೂ ದೇಹಧಾರ್ಢ್ಯವೂ ಹೆಚ್ಚುವುದು. ಕೇವಲ ವೈದ್ಯ ಹೊಗಳಿಕೆಯೆಂದು ತಾತ್ಸಾರಮಾಡದೆ ಒಂದೇಒಂದು ತೀಸೆ ತಂದುಕೊಂಡಲ್ಲಿ ಇದರ ಅಪಾರ ಗುಣವು ತಾನಾಗಿ ತಿಳಿಯುವದು.

ಬೆಲೆ ತೀಸೆ ೧ ಕ್ಕೆ ೦—೧೨—೦ ಟಪಾ ೦—೪—೦.

ಅರ್ಡರ ಜೊತೆಯಲ್ಲಿ ಅಡ್ವಾನ್ಸು ವೆಂಬಲಗು ಕಳುಹಿಸಿಕೊಡತಕ್ಕದ್ದು. ಅಡ್ವಾನ್ಸು ಇಲ್ಲದ ಅರ್ಡರುಗಳನ್ನು ಗಮನಿಸುವದಿಲ್ಲ.

M. V. Prasadika Oushadhalaya, SHIMOGA.
Mysore State.

ಲೋಕದಲ್ಲಿ ಅತ್ಯಂತ ಸುಖಿ
ಯೆಂದರೆ ಸಂಪೂರ್ಣವಾದ ಆರೋಗ್ಯವನ್ನು ಹೊಂದುವದೇ ಸೈ. ಅನೇಕ ಹಳ್ಳು ವರ್ಷದ ಹುಡುಗರು ಸಹ ವಿವಿಧ ದುಶ್ಚಟಗಳ ಬಲಿಗೆ ಬಿದ್ದು, ತಮ್ಮ ಆರೋಗ್ಯವನ್ನು ಕೆಡಿಸಿಕೊಂಡು, ಹತಾಶೆಗೆ ಹಿಡಿದು ಹತಾಶರಾಗಿ ಬಾಂದವರಾಗುವದು.

ಅತಂಕ ನಿಗ್ರಹ ಮಾತ್ರೆಗಳ
ಕಾರುಣ್ಯದ ಸ್ವೈರವೃತ್ತಿಯ ಭೋಗದಿಂದಲೂ ಧಾತುವಿನ ಹ್ರಾಸದಿಂದಲೂ ಉಂಟಾದ ಎಲ್ಲ ಬಗೆಯ ದೌರ್ಬಲ್ಯಗಳನ್ನು ನಿವಾರಣೆ ಈ ಮಾತ್ರೆಗಳು ರಾಮಬಾಣವಾಗಿವೆ. ದೇಹಕ್ಕೆ ಒಳ್ಳೇ ಬಲ ಕೊಟ್ಟು, ಧಾತುವನ್ನು ಇವು ಪೋಷಿಸುವವು. ೩೨ ಗಳಿಗೆಗಳ ಟಿನ್ನಿಗೆ ಬೆಲೆ ಒಂದೇ ರೂಪಾಯಿ. ಹೆಚ್ಚಿನ ಸಂಗತಿಗಳನ್ನು ಪುಕ್ಕಟೆ ಹಾಗಿ ದೊರೆಯುವ ನನ್ನ ಕ್ಯಾಟಲಾಗಿನಲ್ಲಿ ನೋಡಿಕೆವಳ್ಳಿರಿ.

ಅತಂಕನಿಗ್ರಹ ಔಷಧಾಲಯ,
ಸಂ॥ಟಿ, ಬ್ರಾಡ್ವೇ ಮದರಾಸು.

ವಾಸದೇವ ಪುಸ್ತಕಾಲಯದಲ್ಲಿ.

೧	ಸುರತ ನಗರದ ಶ್ರೀಷ್ಠಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ. ಕಾದಂಬರಿ)	೨—೪—೦
೩	ನೀತ್ಯತೆಗೆಳು ಭಾಗ ೧.	೧—೪—೦
೪	ಪತಿವಶೀಕರಣ ನಾಟಕ.	೦—೧೪-೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೧೨-೦
೭	ಲಕ್ಷ್ಮೀಬಾಯಿ ರಾಣಿಯ ಚರಿತ್ರೆ.	೨—೦—೦
೮	ಶೈವ ಸುಧಾರ್ಣವ (ಸಚಿತ್ರ)	೩—೪—೦

ಕೆಳಯುಗಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ

ಯಾವ ಕಂಪನಿಗಳೂ ಈ ವರೆಗೂ ಕೊಡಮಾಡಿಷ್ಟು ಲಾಭವನ್ನು ಈ ೩ ವರ್ಷಗಳವರಿಗೆ ಒಂದೇಸಲನೆ ಹಂಚಿದೆ!

ಜನರಲ್

ಅಶ್ಯೂರನ್ಸ ಸೊಸಾಯಿಟಿ. ಲಿ. ಅಜಮೀರ.

ಈ ಸೊಸಾಯಿಟಿಯ ಇನ್ಸೂರನ್ಸು ೨೫ ಲಕ್ಷ ರೂ. ಗಳಿಗಿಂತಲೂ ವಿಸ್ತಾರವಿದೆ

ಲಾಭ.

ವಿಮೆದಾರರಿಗೆ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೧ ನೇ ವರ್ಷದವರೆಗೆ ಹಿಂದೆ ವಿಮೆ ಕೊಡಮಾಡಿದ್ದು ಕೊಟ್ಟ ಅತ್ಯಂತ ಹೆಚ್ಚು

ಲಾಭದ ಹಣಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೨೪ ನೇ ಮಾರ್ಚ ತಿಂ.	೧೯೨೫ ನೇ ಡಿಸೆಂಬರ ತಿಂ.	೧೯೨೬ ನೇ ಡಿಸೆಂಬರ ತಿಂ.
ಹಿಡೀ ಆಯುಷ್ಯದ (ತಡವಾಗಿ ಪಾವತಿಯಾಗತಕ್ಕದ್ದು) ವರ್ಷಕ್ಕೊಮ್ಮೆಗೆ ೧೫ ½ ರೂ.	ಇತರ ಆಯುಷ್ಯದ (ತಡವಿಲ್ಲದೆ ಪಾವತಿಯಾಗತಕ್ಕದ್ದು) ವರ್ಷಕ್ಕೊಮ್ಮೆಗೆ ೨೧ ½ ರೂ	ಇತರ ಆಯುಷ್ಯದ (ತಡವಿಲ್ಲದೆ ಪಾವತಿಯಾಗತಕ್ಕದ್ದು) ವರ್ಷಕ್ಕೊಮ್ಮೆಗೆ ೨೫॥ ೦/೦ ರೂ.

ವರ್ಷ.	ವಾರ್ಷಿಕ ಉತ್ಪನ್ನ.	ಹೊಸ ವ್ಯವಹಾರ.
೧೯೨೬	೬,೪೮,೪೬೨	೧೯,೭೩,೫೦೦
೧೯೨೭	೭,೧೫,೩೫೪	೨೮,೦೫,೫೦೦
೧೯೨೮	೯೫೫,೨೦೧	೬೦,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರ ಹಾಗು ಅತ್ಯುತ್ತಮ ಪೋಷಾಪಾದ ಗಳಿಕೆ ಸಿಷ್ಟುಗಳ ಪೂರ್ಣ ಲಾಭವನ್ನು ಹೊಂದಿರಿ

ಬಾಗಲಕೋಟೆಯ ಏಜಂಟರು:— ವ್ಹಿ. ಜೆ ಪರ್ವತಿಕರ ಮತ್ತು ಮಕ್ಕಳು.

ಚೀಫ ಏಜಂಟ:— ಎಸ್. ಆರ್. ಸರದೇಸಾಯಿ, ಮುಂಬೈ ನಂ ೪.

THE UNITED KARNATAK INSURANCE COMPANY LTD. DHARWAR.

ಸುಸಂಧಿ ತ್ವರೆಮಾಡಿರಿ ಕಳೆದುಕೊಳ್ಳ ಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿವಿಟಿಡ್ ಧಾರವಾಡ.

(೧೯೧೪ ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಒಪ್ಪಂದದ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು.

೧ ಬೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಜೇರಮನ

೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉಮಡಗಿ ಎಲ್ ಎಮ್ ಎಂಡ ಎಸ್ ಗದಗ

೩ ಶ್ರೀನಿವಾಸರಾವ ಶೇಷಗಿರಿರಾವ ಮುಕಾಲಿಕದೇಸಾಯಿ ಬಿ ಎ ಆಣ್ಣಿಗೇರಿ

೪ ವಿ. ರಾಮಚಂದ್ರ ರಂಗೋ ಸಾವಕಾರ ಪತನದಾರ ಹಳೇಮುಬ್ಬಳ್ಳಿ

೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ

೬ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡವಮುಬ್ಬಳ್ಳಿ ವಕೀಲ ಬೈಲಹೊಂಗಲ

೭ ವಿ॥ ಅನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

೮ ರಾಮರಾವ ವೆ ಭಂಡಿವಾಡ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ

೯ ಅಬ್ದುಲ್‌ಕರೀಮ ಅಬೂನಸಾಹೇಬ ಹಣಗ್ಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊಂಟ ಇನ್‌ಶ್ಯೂರನ್ಸ ಕಂಪನಿಯುಂದನೆ ಇದೇ ಮೊದಲನೇದು. ಈ ಕಂಪನಿಯು ಡಾಯರೆಕ್ಟರರೂ ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪನಿಗಳಿಗೆ ಏಜಂಟರಾಗಿಯಾಗಲಿ ವಿಮೆ ಇಳಿಸಿಯಾಗಲಿ ಸಹಾಯವಾಗಿ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಕಾಪ್ಟು ಹೆಚ್ಚು ಪಡೆಯುವೇಕೆಂಬ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯ ಶೇರುಗಳು ಮಾರಾಟಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಪ್ರಾರಂಭವಾಗಿರುವದು. ಶೇರುಗಳನ್ನು ಮಾರುವದಕ್ಕೂ ಮತ್ತು ವಿಮೆಯ ಕೆಲಸವನ್ನು ಕಂದ ಕೊಡುವದಕ್ಕೂ ಎಲ್ಲ ದೊಡ್ಡ ದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಎಜನ್ಸಿ ಕಮಿಶನುಗಳು ಸುಲಭ ಸವಲತ್ತುಗಳು ವಿಶೇಷ, ಮತ್ತು, ಕವಿತನ ದಿನಗಳು ಲಾಭಕರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

K. L Huilgolkar
ಸೆಕ್ರೆಟರಿ
ಯು. ಕ. ಇ. ಕಂ. ಲಿ. ಧಾರವಾಡ.

ಬಾಲಗೃಹ ಜೊರ್ಜ್ ಬಾ. ಕಿ, ೧—೪—೦

ಡಾ. ಬೈಲೂರ.

ಥಂಡಿ ಉರಿಯು ಗುಳಿಗೆಗಳು ಬಾ. ಕಿ ೦—೮—೦

ಇವರ ಔಷಧಗಳು

ಕಾಫ್ ಸಾಯಿರಪ್ ಕಿ— ನೆಗಡಿ, ಗೊಬ್ಬರ, ಮೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟಿ ಹಾರುವಿಕೆ (ಡಬಾ), ಕೋಡಗಗೆಮ್ಮು, ಇವುಗಳಮೇಲೆ ಹೊರ್ತಾಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿಮೋನಿಯಾ ಬೇನೆಯಮೇಲೆ ನಮ್ಮ ಕಾಫ್ ಸಾಯಿರಪ್ ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿಸಿರುತ್ತೇವೆ. ಈ ಕಾಫ್ ಸಾಯಿರಪ್ ವನ್ನು ಸಣ್ಣ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಆತಂಕವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕಿ. ಸಣ್ಣ ಬಾ. ೧ ೬—೦ ದೊಡ್ಡ ಬಾ. ೦—೧೨—೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳ ಬಹುದು.

೩ ರೂ. ಕಿಂತ ಹೆಚ್ಚಿಗೆ ಔಷಧಗಳನ್ನು ತಕ್ಕೊಳ್ಳುವವರಿಗೆ ೧೨ ಟಕ್ಕ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಪತ್ತೆ:— ಡಾ॥ ಹರೀ ಮಹಾದೇವ ಬೈಲೂರ. ದ. ಬೆಳಗಾವ.

ವಿಲಿಶವಿಪೆಟ್ ಎಜನ್ಸಿ,

ನಾವು ಶವರಲೇಟ ಮೋಟರ ಕಂಪನಿಯ ಬೆಳಗಾಂವ ಮೋಟರ ವರ್ಕ್ಸ ಟ್ರಾನ್ಸ ಪೋರ್ಟ ಕಂಪನಿಯ ಹಾಗೂ ವಿಲಿಶ್ ವಿಪೆಟ್ ಕಂಪನಿಯ ಸಬ ಎಜಂಟರಿರುತ್ತೇವೆ ಈ ಗಾಡಿಗಳನ್ನು ತರಿಸಿಕೊಳ್ಳುವವರು ನಮ್ಮ ಕಡಿಯಿಂದಲೆ ತರಿಸಿಕೊಳ್ಳಬೇಕು. ಬಹಳ ಸೋವಿಯಾಗುವದು. ಬಾಗಲಕೋಟೆಯಲ್ಲಿಯ ಸುತ್ತುಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟರ ಮಾಲಕರ ಗೈರಸೋವಿ ದೂರವಾಗಬೇಕೆಂದು ಒಂದು ಜನರಲ್ ಮೋಟರಸ್ಟೊರ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲಕೋಟೆಯಿಂದಾ ವಿಜಾಪುರ ಇಲಕಲ್ಲ ನರಗುಂದ ಮುಂತಾದ ಸ್ಥಳಗಳಿಗೆ ಹೋಗುವದು.

ಪ್ರವಾಸಿಕರ ಗೈರಸೋವಿದೂರಾಬೇಕೆಂದು. ತಾ. ೩೧-೩-೩೦ ನೇ ದಿವ್ಸ (ಜೈತ್ರ ಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ.)

ಇಲಕಲ್ಲದಿಂದಾ ೯॥ಘಂಟೆಗೆ ಹೋಟು ಹುನಗುಂದ, ಅಮಿನಗಡ, ತಮತಗಿ, ಗುಳೇದಗುಡ್ಡ, ಬದಾಮಿ, ಶ್ರೀ ಬನಶಂಕರಿದೇವಸ್ಥಾನ, ಜೊಳಚಗುಡ್ಡ ಹಶಿಬಿ, ಜಾಲಿಹಾಳ, ಹೀರೆಹಾಳ, ಕೊಪ್ಪಾಳ, ರೋಣ, ಅಬ್ಬಿಗೇರಿ, ನರೆಗಲ್ಲ, ಕೊಟುಮಚಗಿ, ನಾರಾಣಾಪುರ, ಮಾರ್ಗವಾಗಿ ಗದಿಗ್ಗೆ ದಿನಾಲ ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದೆವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ ಹೊರಟು ಸಂಜೆ ೫ ಘಂಟೆಗೆ ಇಲಕಲ್ಲಗೆ ಬಂದು ಮುಟ್ಟುತ್ತದೆ. ಕರಾಸಿದ ವೇಳೆಗಿಂತಾ ೧೫ ಮಿನಿಟ ಮುಂಚಿತವಾಗಿ ಪ್ರಾಸಿಂಜರರು ಸ್ಟ್ಯಾಂಡಿನ ವೇಲೆ ಹಾಜರ ಇರಬೇಕ್ಕದ್ದು ಡ್ರಾಯವರನಕಡಿಯಿಂದಾ ಮೋಟರನಲ್ಲಿ ಸ್ಥಳವಿದ್ದಬಗ್ಗೆ ಖಾತ್ರಿಮಾಡಿಕೊಂಡು ಟಕೀಟು ತೆಗೆದು ಕೊಳ್ಳಬೇಕ್ಕದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರೀಪೆರಿ ವರ್ಕಶಾಪ್ ಇರುತ್ತದೆ ಮತ್ತು ಹೊಸದಾಗಿ ಎಲ್ಲ ನಮುನೇಯ ಗಾಡಿಗಳಿಗೆ ಬಾಡಿಗಳನ್ನು ತಯಾರಿಸಿ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವೀಸ—

ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ವಿಲಿಶವಿಪೆಟ್ ಸೋಲ ಎಜಂಟ್ಸ ಅಂಡ ಬಾಡಿಬಿಲ್ಡರ್ಸ ಬಾಗಲಕೋಟೆ

THE POONA SCHOOL OF COMMERCE

Reopens on 16 th. June. Students coached for London Chamber of Commerce and other commercial examinations in banking. Accountancy Shorthand Type-writing etc. Apply for prospectus to:—

Secretary, Budhawar Chowk; Poona-city.

ಈ ಪತ್ರಿಕೆಯು ವೆಂಕಟೇಶ ಶೇಷಾಂಗಾಚಾರ್ಯ ಕಡೂರು ಇವರಿಂದ ಬಾಗಲಕೋಟೆ ವಿದ್ಯಾರ್ಣವ ಮುದ್ರಾ ಯಂತ್ರದಲ್ಲಿ ಮುದ್ರಿಸಲ್ಪಟ್ಟು ಅವರಿಂದ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ. ನಂ. ಬಿ ೧೯೪೭ ವಾ. ಚಂ. ಅಂಚೆವೆಚ್ಚ ಸೇರಿ ೪ ರೂಪಾಯಿಗಳು ಮಾತ್ರ.

ಪ್ರತಿ ರವಿವಾರ ಪ್ರಕಟಿಸಲ್ಪಡುವದು.

ಧರ್ಮೋ ರಕ್ಷತಿ ರಕ್ಷಿತಃ । ಸತ್ಯಮೇವ ಜಯತೇ ನಾನೃತಮ್ ॥ — ಮನು

ಸಂಪಾದಕರು— ವೆಂಕಟೇಶ ಶೇತುರಾವ ಮಾಜಗಾಂವ್ಕರ ಕೆರೂರ

ಪುಟ ೬ | ಬಾಗಲಕೋಟೆ ರವಿವಾರ ದಿನಾಂಕ ೨೫ ಜನವರಿ ಸನ್ ೧೯೩೧ | Kannadiga Date 25—1—1931. | ಸಂ ೪೨

ದಿ ಬಾಗಲಕೋಟ ಕೊ-, ಆಪರೇಟಿವ್ ಅರ್ಬನ್ ಬ್ಯಾಂಕ ಲಿ. ಬಾಗಲಕೋಟ

ಶೇವುದಾರರಿಗೆ ಅಖಂಡವಾದ ಭರವಸೆ.

ಸ್ವಲ್ಪೀ ಹೆಚ್ಚಿನ ಬಡ್ಡಿಯ ಆಶೆಗಾಗಿ ಅನಿಶ್ಚಯವಿರುವವರ ಕಡೆಗೆ ಶೇವು ಇಟ್ಟು ಗಂಟು ಬಡ್ಡಿಯನ್ನು ಕೂಡಿಯೇ ಕಳೆದುಕೊಳ್ಳಬೇಡಿರಿ. ಪ್ರತಿವರ್ಷವು ನಮ್ಮ ಬ್ಯಾಂಕವನ್ನು ಸರಕಾರಿ ಆಡಿಟರು ತಪಾಸ ಮಾಡುತ್ತಾರೆ. ಶೇರುದಾರರಿಗೆ ೧೦೦ ಕ್ಕೆ ೪ ಟಕ್ಕೆ ದಂತೆ ಡಿವಿಡೆಂಡ ಹಂಚಲ್ಪಟ್ಟಿದೆ. ಇದಕ್ಕೆ ಇನ್‌ಕಮ್‌ಟ್ಯಾಕ್ಸ ಬೀಳುವದಿಲ್ಲ.

ಶೇವುಗಳ ಬಡ್ಡೀದರವು ಕೆಳಗಿನಂತಿರುತ್ತದೆ

ಚಾಲತೀ ಶೇವು.	ನೂರಕ್ಕೆ ವರ್ಷಕ್ಕೆ	೩॥
ಸೇವ್ಹಿಂಗ್ಸ ಬ್ಯಾಂಕ ಶೇವು	,,	೪ ರಂತೆ
ವರ್ಷದ ಮುದ್ದತ ಶೇವು	,,	೬ ರಂತೆ

ಹೆಚ್ಚಿನ ವಾಯ್ದೆದ ಶೇವಿನ ನೇರೆಲಿನ ಬಡ್ಡಿಯುವಂದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗ ಸವಲತ್ತಿನಾ ವಿಚಾರ ಮಾಡಬೇಕು.
ಹೊಸ ಶೇವಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೂಡಾ ಇಟ್ಟಿದ್ದೇವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

ಬಾಗಲಕೋಟ
ತಾ॥ ೨೨-೨-೧೯೩೦

Sd/ D. R. Huddar ಸೆಕ್ರೇಟರಿ
Sd/ M. S Mangalwedhekar ಜೇನೆಜರ್

ಕಿಲೋಸ್ಕರ ನೇಗಿಲುಗಳು



ಇವುಗಳ ವೈಶಿಷ್ಟ್ಯವು.

೧— ೧ ತಿರುಗುವ ಕಳವಳವಿದ್ದ್ರೆ,
೨ ಬೆಲೆಯಲ್ಲಿ ವಿದೇಶೀ ರೆಂಟೆಗಿಂತ ಅಗ್ಗ,
೩ ಲಕ್ಷಾವಧಿಜನರು ಹೊಡಿ ಅನುಭವಹೊಂದಿದು ಇರುವ ಕಾರಣ ಈ ನೇಗಿಲುಗಳಿಗೆ ಈ ಹಿಂಗಾಮಿನಲ್ಲಿ ರೆಂಟೆಪಿಲ್ಲದೆ ಮಾಗಣಿಯಾಗುವದು. ಸದ್ಯಕ್ಕೆ ಹಿಂಗಾಮವು ಪ್ರಾರಂಭವಾಗಿರುವದು. ಇವತ್ತೇ ಆರ್ಡರ ಕೊಟ್ಟು ತರಿಸಿಕೊಂಡಲ್ಲಿ ಲಾಭವುಂಟು.

ಕಿಲೋಸ್ಕರ ಬಂಧುಗಳು ಲಿಮಿಟೆಡ್
ಕಿಲೋಸ್ಕರವಾಡಿ. ಜಿ. ಸಾತಾರಾ

ದಿ. ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ.

೧೯೧೩ ನೇ ಇಸ್ವಿಯ ಇಂಡಿಯನ್ ಕಂಪನೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಬ್ಯಾಂಕಿನ ಶೇವಿನ ದರವು ಕೆಳಗೆ ಕೊಟ್ಟಿರುವ ಪ್ರಕಾರ ಇರುತ್ತದೆ.

ಚಾಲತೀ ಶೇವಿಗೆ	ನೂರಕ್ಕೆ ವರ್ಷಕ್ಕೆ	೩॥ ರೂ.
ಸೇವ್ಹಿಂಗ್ಸ ಬ್ಯಾಂಕ	,,	೪ ರೂ.
ಮುದ್ದತೀ ಶೇವಿಗೆ	,,	೬॥ ರೂ.

ಇದಲ್ಲದೆ ೩ ತಿಂಗಳ ಮತ್ತು ೯ ತಿಂಗಳ ಶೇವು ಇಡುವವರಿಗೆ ಸವಲತ್ತುಗಳಿಂದು ಇವನ್ನು ಕೊಟ್ಟು ಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗ ಸಮ್ಮತವಾದ ಇಂದರೆ ಬೆಳ್ಳಿ. ಧಂಗಾತ ಕಾಳುಕಡಿ ಸರಕಾರೀ ಕಾಗದ ಪತ್ರ ವಿವೇಯ ವಾಲಿಸಿಗಳಮೇಲೆ ಸಹಾ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸವಲತ್ತು! ವರ್ತಕರು ತಮ್ಮ ಮಾಲನ್ನು ವ್ಹಿ. ಪಿ. ದ್ವಾರಾ ಕಳಿಸುವದಿದ್ದಲ್ಲಾಗಿ ನಮ್ಮ ಬ್ಯಾಂಕಿನ ಮುಖಾಂತರ ಕಳಿಸಿಕೊಂಡರೆ ನೂರಕ್ಕೆ ೧೨ ಆಣೆಯಂತೆ ಹಣವನ್ನು ತಂದು ಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಕೊಳ್ಳಬೇಕು.

V R Torvi
Managing Director

ಶವರಲೆಟ ಗಾಡಿಗಳ ಎಜನ್ಸಿ

ನಾವು ಹೊಸದಾಗಿ ಶವರಲೇಟ ಗಾಡಿಗಳ ಎಜನ್ಸಿಯನ್ನು ಹಿಡಿದಿರುತ್ತೇವೆ. ಕೊಳ್ಳುವವರು ನಮ್ಮ ಕಡೆಯಿಂದರೇ ತರಿಸಿಕೊಳ್ಳಬೇಕು. ಅಂದರೆ ಬಹಳ ಸೋವಯುಗುವದು;



ವಿಜಾಪೂರ ಜಿಲ್ಲೆಯಲ್ಲಿಯು ಮತ್ತು ಪುಣೆ ಮುಂತ್ತಾದ ಪ್ರಾಂತಗಳಿಗೆ ವ ಸರ್ವೀಸ ಮೋಟಾರ ಮಾಲೀಕರ ಗೈರಸೋಯ ದೂರವಾಗಬೇಕೆಂದು
ಆರ್. ಜಿ. ಚವ್ಹಾಣ ಎಂಡ ಸನ, ಬೆಳಗಾವ. ಇವರು ಮ್ಮ
ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸ ಶಾಖೆಯನ್ನು
ತಾ॥ ೧೦ ಸೆಪ್ಟೆಂಬರ ೧೯೨೬ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಜಿ. ಎಂ. ಸಿ, ಓವರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಯರ್ಸ, ಟೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಕೋ ೈ ದರದಿಂದ ಸಿಗುವವು ತವಲ್ಲಿ ಶೇಂಡ ಹ್ಯಾಂಡ ಡಾಜ್ ಶೆಂವರೋಲೇಟ ಮತ್ತು ಇಂಟರ ನ್ಯಾಶನಲ್ ಗಾಡಿಗಳು ಜಾಸ್ತಿಯಲ್ಲಿ ಇರುವವು. ಯೋಗ್ಯ ದರದಿಂದ ಮಾರಲಿಕ್ಕೆ ತಿಗುತ್ತವೆ ಚಾಲಕರು— ವಾಯ್ ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ಪ್ರಲ್ಯನಾಯಿಯಿಂಗ ಮಾಡಿ ಕೊಡುವಪ್ಪ
ಬಾಗಲಕೋಟೆ—ಬೆಳಗಾವಿ ಬಾಗಲಕೋಟೆ ಇಳಕಲ್ಲ, ಸರ್ವತ್ರ ಲುಡಾಪ್ರಕಾರನಡೆದಿದೆ.

ಶುಲಭತ್ರಯ! ಡಾಕ್ಟರ ಜೀ ಬಿ. ಯವರ ಸುಗಂಧ ನಶ್ಯದಪುಡಿ. ಶುಲಭತ್ರಯ!!

ಪ್ರಸಿದ್ಧವಾದ ಈ ಸುಗಂಧ ನಶ್ಯಪುಡಿ ಕರುಳು ಹುಣ್ಣು ಯಲ್ಲಪ್ಪ, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ತಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಿಸಿ ಒಟೆ ತಲೆ ನೋವ್ ತಲೆಯಲ್ಲಿನ ಶೋಗಗಳು ಕಣ್ಣುಗಳಲ್ಲಿ ಸುಟಾಗತಕ್ಕ ಸವ ವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಾರ್ಕಿ ನೋಲ ಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುವಾಸುತ್ತದೆ. ಮತ್ತೊಟ್ಟ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಮಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಪೋಷಣವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ [illegible] ವಿ. ಪಿ. [illegible] ರೂ [illegible] ವಿ. ಪಿ. ಡಾಜ್ರ ಲೆಟರ್.

Registered Trade Mark

ವಿಳಾಸ— ಗುರುಬಸವ ಆಯರ್ವೇದ ಕಂಪೆನಿ, ಲಿಮಿಟೆಡ್ ಪೋ. ಬಾಗಲಕೋಟೆ ಪಾರ್ಕಟೌನ ಮದರಾಸು.

☞ ದಯವಿಟ್ಟು ನಮ್ಮ ಹೆಸರನ್ನು ತಪ್ಪಿಸದೆ ಸರಿಯಾಗಿರುವಂತೆ ಬರೆಯಿರಿ.

ಭೂಲೋಕದ ಕಾಮಧೇನು

ದೇವಲೋಕದ ಕಾಮಧೇನು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೆ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷದಿಗಳನ್ನು ಕೊಡುವ —

ಕ್ರಯವು ಚಿಕ್ಕಾಸಿಲ್ಲ ಅಂ. ಹಾಸಲು ಉಲ್ಲದೆ

ಸರ್ವಸ್ವ ಸುಖವನ್ನು ಕೊಡತಕ್ಕ ಪುಸ್ತಕ

ವೈದ್ಯವಿದ್ಯೆ

ಯೆಂಬ ಆರೋಗ್ಯ ವಜ್ರಾಗ್ರದರ್ಶನ ಅನೇಕ ರಹಸ್ಯವಾದ ವಿಷಯಗಳನ್ನೆ

ಪಬ್ಲಿಶರು— ಜಂಬಯ್ಯಸ್ವಾಮಿ ಹಾಲಮಠದ.
ಸ್ಟೇಷನರ್ ಬಾಗಲಕೋಟೆ.

ರಾಜವೈದ್ಯ ಹಾರಾಯಣಜಿ ಕೇಶವಜಿ:
ಗಿರಸಿ, ಜೋಗಬಜಾರ್, ಮುಂಬಾಯಿ

ನೋಡಿದರೆ ಬಿಡದಿರುವ ಕಾದಂಬರಿಗಳು.

೧ ಮಹಾತ್ಮಾ ಶುಲಭದಾಸ	೧–೮–೦
೨ ಜಲಂಧರ ನಾಟಕ	೦–೧೦–೦
೩ ವಡಗಾಂವ ವಿಜಯ	೧–೪–೦
೪ ಕಂಠಕೆ	೧–೪–೦
೫ ಸಾಧ್ವೀ ತಿಲಕ	೧–೦–೦
೬ ವೀರ ಕಾಶೀಮ	೧–೪–೦
೭ ಭಗವಾ ಧ್ವಜ	೧–೮–೦
೮ ಸ್ತ್ರೀಕಲೀಲೆ	೦–೧೪–೦
೯ ಕಂಕಣಾಜಿಕೋರ	೧–೪–೦
೧೦ ಭಯಂಕರ ಕೊಲೆ	೦–೧೪–೦
೧೧ ಇಂದುಮತಿ	೦–೧೦–೦
೧೨ ಸದ್ಗತಿ ಅವಳಾ	೧–೦–೦

ಇನ್ನೂ ನೂರಾರು ಬಗೆಯ ಪುಸ್ತಕಗಳು ಸಿ
ಸ್ಟಿಸಿಗುವವು. ಕ್ಯಾಟಲಾಗಿಗೆ ಬರೆಯಿರಿ. ಬು
ಕ್ಸೆಲ್ಲರಿಗೆ ಧಾರಾಳವಾದ ಕಮಿಶನ್
ವಿಳಾಸ— ಬಿ. ಜೀ. [illegible]
ಪೋ. ಆನಂದವನ, (ಬಿ. ಧಾರವಾಡ)

ಕನ್ನಡಿಗ.

ಕನ್ನಡಿಗ ವಾರ ಶುದ್ಧ ೬ ಶಕೆ ೧೮೫೨

ಸ್ವಾ ವನಸಿನ ಮೇ .ಮುಡಿ ಕಟ್ಟುವನಾನು
ನಿನ್ನ ಬೆಸನವ ಮಾಡಿದಂಥ ಮಕ್ಕಳಡೊಳ್ಕು
ಕೃಷ್ಣಾದರು ಜನ್ನ ಮೇಣಬಸ್ತಿಯನೊಂದು
ಚಿನ್ನಯಾಳಾಶದಲ್ಲಿ ।

ಲೇಖನ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ

ಕರಾಳ ಶಾಸನವಾದ

ಪ್ರೆಸ್ ಆರ್ಡಿನನ್ಸ

ಜೀವಿಸಿರುವಷ್ಟು ಕಾಲ
ನಾವು
ಅದರ ನಿಷೇಧಾರ್ಥವಾಗಿ

ಅಗ್ರಲೇಖ
ಬರೆಯುವದೇ ಇಲ್ಲ.

ವ್ಹಾಯಿಸರಾಯರು ವ್ಯರ್ಥ ಒದರಿಕೊಂಡರು

ದಿಲ್ಲಿಯಲ್ಲಿ ಸೇರಿದ ಲೇಬಿಸ್ಲೇಟಿವ್ ಅಸೆಂಬ್ಲಿಯ ಸಭಾನಡವಣಿಗೆಯನ್ನು ದ್ವೇಷಿಸಿ ತಂ| ೧೭ ನೆಯ ದಿವಸ ವ್ಹಾಯಿಸರಾಯರು ಒಂದು ಭಾಷಣ ಮಾಡಿದ್ದಾರೆ. ಅಗ ಅವರು ಅದೆಷ್ಟು ಚಡಪಡಿಸಿ ಹೋಗಿದ್ದರು ಮತ್ತು ಅವರಿಗೆ ಏನು ಆಗಿ ಹೋಗಿದ್ದರು ಇವೆಲ್ಲವನ್ನು ಇತ್ತೀಚೆಗೆ ಓದಿದ್ದೇವೆ. ಇಂಥ ಸಂದರ್ಭದಲ್ಲಿ ಅವರು ಆಡಿದ ಮಾತುಗಳು ಅವರ ಮನಸ್ಸಿನ ಸ್ಥಿತಿಯನ್ನು ಚೆನ್ನಾಗಿ ತೋರಿಸುತ್ತವೆ. ಅವರು ಹೇಳಿದ್ದೇನೆಂದರೆ:

"ಹಿಂದುಸ್ಥಾನದ ಜಿಲ್ಲಾ ಪರಿಸ್ಥಿತಿಯು ಈಗ ತುಂಬ ಕೆಟ್ಟುಹೋಗಿದೆ. ಅದನ್ನು ಸುಧಾರಿಸಿಕೊಳ್ಳುವ ಸಂಬಂಧವಾಗಿ ಒಂದು ಹೊಸ ಯೋಜನೆಯು ನಿನ್ನೆ ಮುಂಬೈ ಬಾತಕ್ಕಿದ್ದಿದೆ. ಅಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ನಿಜಾಂಶವಿರುವಷ್ಟೇ ಅಷ್ಟಿದೆ, ಹೊಸ ರಾಜ್ಯ ಪದ್ಧತಿಯನ್ನು ಪ್ರಾರಂಭಿಸುವ ಸಮಯದಲ್ಲಿ ಉಶ್ಚಮವಾದ ಆರ್ಥಿಕ ಪರಿಸ್ಥಿತಿಯು ಇಲ್ಲಿ ಇರುವದು ಅವಶ್ಯವಾಗಿದೆಯೆಂಬ ವಿಚಾರವೂ ಅವರಲ್ಲಿ ಸೇರಿಕೊಂಡಿದೆ

ಜಗತ್ತಿನಲ್ಲಿಯು ವ್ಯಾಪಾರವು ಮಂದವಾಗಿ ದುಃಸ್ಥಿತಿಯು ಪ್ರಾಪ್ತವಾಗಿರುವ ಈ ಸಮಯದಲ್ಲಿ ಕಾಯದೆ ಭಂಗ ಚಳವಳಿಯು, ಪರಿಸ್ಥಿತಿಯನ್ನು ಮತ್ತಷ್ಟೂ ಕೆಡಿಸಬಹುದಿದೆ. ರಾಜ್ಯ ಯಂತ್ರವನ್ನು ನಿಲ್ಲಿಸುವ ಪ್ರಯತ್ನ ಹಾಗು ಅವಿಶ್ವಾಸ ಇವುಗಳ ಬದಲಾಗಿ ಪರಸ್ಪರ ವಿಶ್ವಾಸ ಹಾಗು ಸಹಕಾರ್ಯ ಉತ್ಪನ್ನವಾದಲ್ಲಿ ಮಾತ್ರ ಮಧ್ಯದ ಅರ್ಥಿಕ ಸ್ಥಿತಿಯಿಂದ ಪಾರಾಗುವ ಶಕ್ತಿಯಿದೆ. ಜಾವಳಿಯ ಧ್ಯೇಯವು ಏನೇ ಇರಲಿ, ಸರಕಾರದ ಸತ್ತೆಯು ವಿರುದ್ಧವಾಗಿ ಹೋರಾಡುವದು ಹಾಗು ಶಾಂತತೆ ಮತ್ತು ಸುವ್ಯವಸ್ಥೆಗಳನ್ನು ಭಂಗಗೊಳಿಸುವದು ಇಲ್ಲಿಲ್ಲಿ ಜೋರಿನಿಂದ ಸಾಗಿಸಲ್ಪಟ್ಟಿದೆ. ಭೂಕಂದಾಯವನ್ನು ಕೊಡುವಂತೆ ಉಪದೇಶ ಮಾಡುತ್ತಿರುವದು ಅದರಲ್ಲಿ ಹೆಚ್ಚಿನದಾಗಿದೆ. ಕೆಲವು ಭಾಗಗಳಲ್ಲಿ ಚಳವಳಿಯು ಪುಂಡರ್ಕರು ಭೂಕಂದಾಯವನ್ನು ಕೊಡುವದನ್ನು ನಿಲ್ಲಿಸಿ ಬಿಟ್ಟಿದ್ದು ಉಳಿದ ಕಡೆಗಳಲ್ಲಿಯೂ ಈ ಬಗ್ಗೆ ಪ್ರಯತ್ನ ನಡೆದಿದೆ.

ಕೆಲವು ಕಡೆಗಳಲ್ಲಿ ಅತ್ಯಾಚಾರವೂ ಪ್ರಾರಂಭನವಾಗಿದೆ ಅತ್ಯಾಚಾರದಿಂದ ಪ್ರಜಾಲಿಕ ಸರಕಾರವನ್ನು ಸದಬಡಿಯುವ ಬಗ್ಗೆ ಒಂದು ಸಂಘಟನೆಯಾದರೂ ಆಸ್ತಿತ್ವದಲ್ಲಿ ಬಂದಿರುವದೆಂಬುದಾಗಿ ಕೆಲವು ತಿಂಗಳ ಅನುಭವದಿಂದ ನನಗೆ ಖಾತ್ರಿಯಾಗಿದೆ. ಈ ಸಂಘಟನೆಯನ್ನು ಮುರಿಬಡಿಯುವ ಉದ್ದೇಶ ಸರಕಾರವು ಪ್ರಯತ್ನಿಸುತ್ತಲಿದೆ. ಈ ದುಷ್ಟ ಚಳವಳಿಯನ್ನು ಸಮೂಲವಾಗಿ ನಾಶಗೊಳಿಸಲು ಜನರು ಸರಕಾರಕ್ಕೆ ಸಹಾಯಮಾಡದಿದ್ದಲ್ಲಿ ಸರಕಾರಕ್ಕೆ ಈ ಕಾರ್ಯದಲ್ಲಿ ಸಂಪೂರ್ಣ ಯಶಸ್ಸಿಗಲಾರದು. ಕೆಲವು ವೃತ್ತಪತ್ರಿಕೆಗಳಾದರೂ ಕ್ರಾಂತಿಕಾರರಿಗೆ ಉತ್ತೇಜನ ಕೊಡಹತ್ತಿವೆ. ಕರ್ತವ್ಯತತ್ಪರತೆಯನ್ನು ಬಿಟ್ಟುಗೊಟ್ಟು ನಾಶಕಾರಕ ಹಾಗು ಭಯಂಕರವಾದ ತತ್ವಗಳ ಕಡೆಗೆ ವರ್ತಮಾನಪತ್ರಗಳು ತಮ್ಮ ಲೇಖನಿಕೆಯನ್ನು ಹೊರಳಿಸಿದಲ್ಲಿ, ಸರಕಾರವೂ ಸ್ವಸ್ಥ ಕೂಡಲಾರದು ಈ ವರ್ತಮಾನಗಳ ವಿಷಯವಾಗಿ ವಾದ ಮಾಡಲು ನಿಮಗೆ ಅಧಿಕಾರವಿದೆ ನೀವು ಪೂರ್ಣ ಜವಾಬ್ದಾರಿಯಿಂದ ವಿಚಾರ ಮಾಡಿ ನಿರ್ಣಯ ಕೊಡಬೇಕೆಂದು ನನಗೆ ಖಾತ್ರಿಯಿದೆ. ಆದರೆ ಕೇವಲ ಈ ಒಕ್ಕಣ್ಣಿಕೆಯು ಉಪಾಯದಿಂದ ಚಳವಳಿಯು ತಗ್ಗಿ ಹೋಗಲಾರದು. ಸರ್ವರ ಲಕ್ಷ್ಯವೂ ಈಗ ಒಂದಿಗಾಲಿಯ ಪರಿಷತ್ತಿನ ಕಡೆಗೆ ಹೋಗಿದೆ. ಸರ್ವ ಪಂದು ಸ್ಥಾನವೂ ಖಾಲಿ ಹೊಂದಬೇಕು. ಈ ಸ್ಥಾನವನ್ನು ಪ್ರಸ್ಥಾಪಿಸಲು, ರಾಜ್ಯಪದ್ಧತಿಯಲ್ಲಿ ಸುಧಾರಣೆ ಮಾಡಬೇಕೆಂದು ಸಂಸ್ಥಾನಿಕರು ಸಮ್ಮತಿ ತೋರಿಸಿದ್ದಾರೆ.

ಮಿ. ಗಾಂಧಿಯವರು ಕಳ್ಳು ಮೂರ್ಖ ಹಿಡಿದಿರುವರೆಂದು ಯಾರಿಗೆ ಎಷ್ಟೇ ಅನಿಸಲಿ, ಅವರ ಘೋರಣದ ಪರಿಣಾಮವು ದುಃಖಜನಕವಾಗಿರುವದೆಂದು ಯಾರು ಎಷ್ಟೇ ತಿಳಿದುಕೊಳ್ಳಲಿ, ಹಿಂದುಸ್ಥಾನದ ಸಲುವಾಗಿ ಎಷ್ಟೇ ಸ್ವಾರ್ಥತ್ಯಾಗ ಮಾಡಿದರೂ ಅದನ್ನು ತುಸುವಾಗಿಯೇ ಕಾಣುವ ಮಿ. ಗಾಂಧಿಯವರ ಆತ್ಮಕಲಬಲವು ಯಾರ ಸ್ಮರಣದಲ್ಲಿಯೂ ಬರದೆ ಇರಲಿಕ್ಕಿಲ್ಲ. ಅವರೊಂದಿಗೆ ಮತಭೇದ ತಳೆದವರು ತಪ್ಪು ಮೂರ್ಖ ಹಿಡಿದಿರುವರೆಂದು ಅವರ ಅನುಯಾಯಿಗಳು ಅನ್ನಬಹುದು ಆದರೆ ಈ ದೇಶದ ರಾಜ್ಯಸೂತ್ರವನ್ನು ಸಾಗಿಸುತ್ತಿರುವ ಪಕ್ಷ ಜ್ಞಾತಿಬಾಂಧವರು ಪ್ರಾಪಂಚಿಕತನದಿಂದಲೇ ಹಿಂದುಸ್ಥಾನದ ಸೇವೆ ಮಾಡುತ್ತಿರುವರೆಂಬುದು ಮಿ ಗಾಂಧಿಯವರಿಗೆ ಅನಿಸದೆ ಹೋಗಲಿಕ್ಕಿಲ್ಲ ಆದರೆ ಈಗಿನ ದಿನಮಾನವೇ ಬಹು ವಿಲಕ್ಷಣವಾಗಿದೆ ಪರಸ್ಪರರ ಅಂತಿಮ ಉದ್ದೇಶವು ಬಹುಮಟ್ಟಿಗೆ ಭಿನ್ನವಾಗಿರದಿದ್ದರೂ ಸಹ ಅದನ್ನು ಕೃತಿಯಲ್ಲಿ ತರಲು ಯೋಜಿಸಿದ ಪ್ರಯತ್ನಗಳೇ ಅದರ ಸಿದ್ಧಿಗೆ ವಿಘ್ನವನ್ನುಂಟು ಮಾಡುತ್ತವೆ. ಹಿಂದುಸ್ಥಾನವು ಸುಖಿಯಾಗಿದ್ದುದನ್ನು ಸೂಚಿಸಬೇಕೆಂದೇ ನಾನು ಇಷ್ಟಿಸುತ್ತಿದ್ದೇನೆ. ಕಾಂಗ್ರೆಸ್‌ದಂತಹ ದೊಡ್ಡ ಸಂಸ್ಥೆಯು ಎಷ್ಟರಮಟ್ಟಿಗೆ ರಾಜ್ಯಕಾರಭಾರಕ್ಕೆ ಅಡ್ಡಗಾಲು ಹೂಡಿಯಲು ಯತ್ನಿಸುತ್ತಿದೆಯೋ, ಅಷ್ಟರಮಟ್ಟಿಗೆ ಅದನ್ನು ಹತ್ತಿಕ್ಕುವ ಪ್ರಯತ್ನವು ಸರ್ಕಾರದಿಂದ ನಡೆಯಬೇಕಾಗುತ್ತದೆ. ಇಲ್ಲಿ ನಡೆದ ಅತ್ಯಾಚಾರ ಹಾಗು ಬಂಡಿಗಾಲಿಯ ಪರಿಷತ್ತಿನ ಕಾರ್ಯಕಲಾಪಗಳನ್ನು ಕಾಂಗ್ರೆಸ್‌ದವರು ಲಕ್ಷದಲ್ಲಿ ತೆಗೆದುಕೊಂಡು ತಮ್ಮ ಪ್ರಸ್ತುತದ ಘೋರಣವನ್ನು ಬದಲಾಯಿಸಬೇಕು ಲಂಡನ್‌ನಲ್ಲಿ ಈಗ ನಡೆದ ಪ್ರಯತ್ನವನ್ನು ಸಿದ್ಧಿಗೊಯ್ಯುವದಕ್ಕಾಗಿ ಅಲ್ಲಿಯ ಜನರೊಂದಿಗೆ ಇಲ್ಲಿಯವರೂ ಕೂಡಿಕೊಂಡು ನಡೆದಲ್ಲಿ ನಿಜವಾಗಿಯೂ ಹಿಂದುಸ್ಥಾನದ ಕಲ್ಯಾಣವಾಗುವದು.

ಪೋಲೀಸ ಸಾಹೇಬರು
ತುರುಬು ಹಿಡಿದು ಜಗ್ಗಿದರು

ಸಾಬರಮತಿ ಆಶ್ರಮದಲ್ಲಿರುವ ಲೀಲಾವತಿ ಬೇನ ಆಶರವರನು ಪೋಲೀಸ ಅಧಿಕಾರಿಗಳು ಸೆರೆ ಹಿಡಿದುಗೊಂಡು ಡಿ. ಡಿ. ಕಲೆಕ್ಟರವರ ಮುಂದೆ ವಿಚಾರಣೆಗಾಗಿ ಒಯ್ದು ನಿಲ್ಲಿಸಿದರು. ಆಗ ಅವರು ಪೋಲೀಸ ಅಧಿಕಾರಿಗಳು ತಮ್ಮೊಡನೆ ಹೇಗೆ ಅಸಭ್ಯತನದಿಂದ ವರ್ತಿಸಿದರೆಂಬುದನ್ನು ಕರಿತು ಕಲೆಕ್ಟರರ ಕಡೆಗೆ ಕಳಗಿನಂತೆ ದೂರು ಹೇಳಿದರು :—

"ಪೋಲೀಸರು ನನ್ನನ್ನು ಸೆರೆಹಿಡಿದು ಲಾಕಪ್ಪಿನಲ್ಲಿಟ್ಟರು. ಸ್ವಲ್ಪ ಹೊತ್ತಿನ ಮೇಲೆ ಎಲ್ಲೂ ಎಂಬ ಪೋಲೀಸನು ನನ್ನ ಬಳಿಗೆ ಬಂದು ನನ್ನ ಹೆಸರು ಹಾಗು ಪತ್ತೆ ಕೇಳಿದನ. ನಾನು ನನ್ನ ಹೆಸರು ಹಾಗು ಪತ್ತೆ ತಿಳಿಸಿದೆನು. ನಂತರದಲ್ಲಿ ಅವನು ನನಗೆ ನನ್ನ ಗಂಡನ ಹೆಸರು ಕೇಳಿದನು ಹಿಂದೂ ಹೆಂಗಸರು ಗಂಡನ ಹೆಸರು ಉಚ್ಚರಿಸುತ್ತಿರವದಿಲ್ಲವಾಗಿ ನಾನು ತಿಳಿಸಿದೆನ. ಆ ಮೇಲೆ ಅವನು ನನಗೆ ನನ್ನ ತವರುಮನೆಯ ಪತ್ತೆ ಕೇಳಿದನು. ನನ್ನ ತವರುಮನೆಯವರು ಮುಂಬಯಿಯಲ್ಲಿ ಇರುತ್ತಿರುವರಾಗಿ ನಾನು ತಿಳಿಸಿದೆನು. ಇಷ್ಟು ಕೇಳಿಕೊಂಡು ಅವನು ಸಬ್ ಇನಸ್ಪೆಕ್ಟರರಲ್ಲಿಗೆ ಹೋಗಿ ನಡೆದದ್ದನ್ನೆಲ್ಲ ಅವರಿಗೆ ತಿಳಿಸಿದನು. ಸಬ್ ಇನಸ್ಪೆಕ್ಟರ್‌ಗುಲಾಮ ಹುಸ್ಮಾದರು ನನ್ನನ್ನು ತಮ್ಮ ಆಫೀಸಿಗೆ ಕರೆಯಿಸಿಕೊಂಡು, ಅನಾಚ್ಯ ಶಬ್ದಗಳಿಂದ ನನ್ನನ್ನು ಬೈದರು. ಸಭ್ಯತೆಯಿಂದ ವರ್ತಿಸಲು ನಾನು ಕೇಳಿಕೊಂಡೆನು. ಅವರು ಸಿಟ್ಟಾಗಿದ್ದರು. ಕುರ್ಚಿಯಿಂದ ಎದ್ದು ಬಂದು ನನ್ನ ವೇಸರೆಯ ಮೇಲೆ ಒಳಕಾಗಿ ಹೊಡೆದರು. ತುರುಬು ಹಿಡಿದು ನನ್ನನ್ನು ಮೇಲಕ್ಕೆತ್ತಿ ನಾಲ್ಕು ಸಾರೆ ನೆಲದ ಮೇಲೆ ಧೊಪ್ಪನೆ ಒಗೆದು, ಎಷ್ಟೋ ಸಾರೆ ಒದ್ದರ. ನಾನು ಪ್ರಜ್ಞೆತಪ್ಪಿ ಬಿದ್ದೆನು. ಆಗ ಅವರು ನನ್ನ ತಂದೆಯ ಹಾಗು ಅಣ್ಣನ ಪತ್ತೆಯನ್ನು ನನ್ನಿಂದ ತಿಳಿದುಕೊಂಡರು ಆ ಮೇಲೆ ಅವರು ನನ್ನನ್ನ ಮ್ಯಾಜಿಸ್ಟ್ರೇಟರ್ಸರಿಗೆ ಒಪ್ಪುವ ಮ್ಯಾಜಿಸ್ಟ್ರೇಟರು ಡಿ. ಡಿ. ಕಲೆಕ್ಟರರಲ್ಲಿಗೆ ಒಪ್ಪಿಸಲು ತಿಳಿಸಿದರು. ಅವರು ನನಗೆ ಏನೂ ಕೇಳಲಿಲ್ಲ ೪ ಗಂಟೆಗೆ ನಾನು ಸೆರೆಹಿಡಿಯಲ್ಪಟ್ಟು ರಾತ್ರಿಯೆಲ್ಲ ಲಾಕಪ್ಪಿನಲ್ಲಿದ್ದೆ."

ಬಂಗಾಲದಲ್ಲಿ
೪೨ ಮನೆಗಳು ಜಪ್ತವಾದವು

ಮಿದನಾಪೂರ ಜಿಲ್ಲೆಯಲ್ಲಿರುವ ಕೊಂಟಾಯಿ ಹಾಗು ತಮಲುಕ್ ಭಾಗದಲ್ಲಿರುವ ಒಟ್ಟಿಗೆ ೪೨ ಮನೆಗಳನ್ನು ಸರಕಾರದವರು ಜಪ್ತ ಮಾಡಿ, ಅಲ್ಲಿರುವವರೆಗೆ ಅನ್ನಗಳನ್ನು ಬಟ್ಟುಗೊಟ್ಟು ಹೋಗಲು ಕೇಳಿಕೊಂಡಿದ್ದಾರೆ.

ಪೋಲೀಸರು ಸುಮ್ಮನೆ
ಗೋಳೀಬಾರ ಮಾಡಿದರು

ಸ್ವಾತಂತ್ರ್ಯ ದಿನದ ದಿವಸ ಬಂಬಯಿಯಲ್ಲಿ ಸಂಭವಿಸಿದ ಗೋಳಿ ಬಾರಿಗೆ ಬಲಿಯಾಗಿ ಮರಣಹೊಂದಿದ ತ್ರೀ ಲಕ್ಷ್ಮಣದಾಸ ಹಾಗು ಮೋಹನಲಾಲ ಇವರ ಬಗ್ಗೆ ಸಿಟಿ ಕೊರೋನರ ಕೋರ್ಟಿನಲ್ಲಿ ತಾ|| ೧೯ ನೆಯ ದಿವಸ ವಿಚಾರಣೆ ನಡೆಯಿತು. ಗೋಳೀಬಾರಿನ ಮೂಲಕ ಸಾವು ಗಾಯ ತಂದಿ ಅವರು ಮರಣಹೊಂದಿದರಾಗಿಯೂ, ಪೋಲೀಸರು ಸುಮ್ಮ ಸುಮ್ಮನೆ ಗೋಳೀಬಾರಮಾಡಿದರಾಗಿಯೂ ಜ್ಯೂರಿಯವರು ಬಹು ಮತದಿಂದ ನಿರ್ಣಯ ಕೊಟ್ಟರು.

ಕಲಕತ್ತೆಯಲ್ಲಿ
ಬಾಂಬುಗಳು ಸಿಕ್ಕವು.

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ|| ೧೯ ನೆಯ ದಿವಸ ಅಲ್ಲಿರುವ ಎಷ್ಟೋ ಮನೆಗಳನ್ನು ಝಡತಿಮಾಡಲು ಕೆಲವು ಕಡೆಗಳಲ್ಲಿ ಪೋಲೀಸರಿಗೆ ಬಾಂಬು. ಕಾಡತೂಸು ಮೊದಲಾದವುಗಳು ಸಿಕ್ಕಿವೆ.

ಪೋಲೀಸ ಸಾಹೇಬರು
ಲಂಚ ತಿಂದರು

ಬಂಗಾಲ ಪ್ರಾಂತದ ರಂಗಪೂರ ಜಿಲ್ಲೆಯ ಪೋಲೀಸ ಸುಪರಿಂಟೆಂಡೆಂಟರಾದ ತ್ರೀ ಸುಕುಮಾರ ಸೇನಗುಪ್ತರು ೨೧ ಸಾರೆ ಲಂಚವನ್ನು ತಿಂದಿದ್ದಾರೆಂದು ಅ ಬಗ್ಗೆ ನಿಯುಕ್ತಿಮಾಡಲ್ಪಟ್ಟ ವಿಚಾರಣಾ ಮಂಡಲದವರಿಗೆ ಕಂಡು ಬಂದದ್ದರಿಂದ, ವೈಸರಾಯರಿಗೆಯು ಅವರಿಗೆ ಪೆನಶನ ಕೊಟ್ಟು ಅವರನ್ನು ಒತ್ತಾಯದಿಂದ ಮನೆಗೆ ಕಳಿಸಿದ್ದಾರೆ.

ಅಜಮೀರದಲ್ಲಿ
ಬಾಂಬು ಹಾರಿತು.

ಅಜಮೀರದಲ್ಲಿಯೂ ಪೊಲೀಸ ಜಾತಿಯ ಬಂಗಿಲದ ಹತ್ತಿರ ತಾ|| ೧೯ ನೆಯ ದಿವಸ ರಾತ್ರಿ ಒಮ್ಮಿದೊಮ್ಮೆ ಒಂದು ಬಾಂಬು ಹಾರಿತು. ಬಾಂಬು ಹಾರಿದ ಸಪ್ಪಳವನ್ನು ಕೇಳಿದೊಡನೆಲೆ ಯವತ್ತೂ ಪೋಲೀಸರು ಅಲ್ಲಿಗೆ ಒಂದು ಆ ಬಗ್ಗೆ ತೀವ್ರ ತನಿಖೆ ನಡಿಸಿದರು. ಕೆಲವು ಕಾಚಿನ ಚೂರುಗಳು ಅವರಿಗೆ ಸಿಕ್ಕಿವೆ. ಬಂಬು ಹಾರಿದ್ದರಿಂದ ಯಾರಿಗೂ ಅಪಾಯವಾಗಿಲ್ಲ ಅಧಿಕಾರಿಗಳು ಆರೋಪಿಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ.

ಪೋಷ್ಟ ಆಫೀಸ್.
ಸುಟ್ಟು ಹೋಯಿತು.

ಒಂಗಾಲ ತಾಲೂಕೆಯಲ್ಲಿಯ ನಬೀ ನಗರದ ಸಬ್ ಪೋಷ್ಟ ಆಫೀಸಿಗೆ ತಾ|| ೧೯ ನೇಯ ದಿವಸ ಬೆಂಕಿಹತ್ತಿಸಿದ್ದರಿಂದ ಅದು ಸಂಪೂರ್ಣವಾಗಿ ಸುಟ್ಟು ಕೋಯಿತು. ಒಳಗಿನ ಕಾಗದಪತ್ರಗಳೆಲ್ಲವೂ ಭಸ್ಮವಾಗಿಹೋದವು.

ಭಗತಸಿಂಗನನ್ನು
ಯರವಡಾ ಜೇಲಿಗೆ ತಂದಿಲ್ಲ

ಲಾಹೋರ ಒಂಸಿಚಿನ ಖುನ್ನೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಭಗತಸಿಂಗ, ರಾಜಗುರು ಹಾಗೂ ಸುಖದೇವ ಇವರನ್ನು ಯರವಡಾ ಜೇಲಿಗೆ ತರಿಸಲಿಕ್ಕಿರುವರೆಂಬುದಾಗಿ ಹಬ್ಬಿದ ವಾರ್ತೆಯು ಸಳ್ಳಿಗವದೆಂತು ಸರಕಾರ ವರ್ತಮಾನ ಪ್ರಸಿದ್ಧವಾಗಿದೆ.

ಹೆಣ್ಣು ಗಂಡು ಆಯಿತು

ಫ್ರಾನ್ಸ ದೇಶದಲ್ಲಿ ಲಿಲ್ಲೆ ಎಂಬಲ್ಲಿ ಕರ್ವರ್ನ್ ಎಂಬ ವಿದುಷಿಯು ೧೯೧೪ ನೆಯ ಜನವರಿ ತಿಂಗಳದಲ್ಲಿ ಒಂದು ವರ್ಗುವನ್ನು ಹೆತ್ತಳು ಡಾಕ್ಟರರೂ ದಾಯಿಯರೂ ಅದನ್ನು ಹೆಣ್ಣೆಂದು ರಜಿಸ್ಟರ ಮಾಡಿಸಿದರು. ವರ್ಗುವಿಗೆ ಮೇರಿಯೆ ಎಂಬುದಾಗಿ ನಾಮಕರಣ ಮಾಡಲ್ಪಟ್ಟಿತು. ಹುಡುಗಿಯು ದೊಡ್ಡವಳಾಗಲ್ಕೆ ತ್ತಿದ್ದ ಹಾಗೆ ಹುಡುಗನಂತೆ ಅಸಾಧಾರಣ ಶಕ್ತಿ ತೋರಿಸಹತ್ತಿದಳು. ತಾಯಿಗೆ ಸಂಶಯ ಹುಟ್ಟಿತು. ಹುಟ್ಟುವಾಗ ಪರೀಕ್ಷಿಸಿದ ಡಾಕ್ಟರರ ಬಳಿಗೆ ಹೋಗಿ ಮತ್ತೆ ಆ ಬಗ್ಗೆ ವಿಚಾರಿಸಿದಳು. ಅವರು ಮೊದಲಿನಂತೆಯೆ ನಿರ್ಣಯ ಕೊಟ್ಟರು. ತಾಯಿಗೆ ಸಮಾಧಾನವಾಗಲಿಲ್ಲ ಹುಡುಗಗೆ ೧೬ ವರ್ಷ ತುಂಬಿದಕೂಡಲೆ ಅವಳ ತಾಯಿಯು ಬೇರೆ ಡಾಕ್ಟರರಿಂದ ಅವಳನ್ನು ಪರೀಕ್ಷಿಸಿದಳು. ಅವರು ಅವಳು ಹುಡುಗಿಯಲ್ಲ ಹುಡುಗನೆಂದು ನಿಶ್ಚಯವಾದ ಸರ್ಟಿಫಿಕೇಟು ಕೊಟ್ಟರು ಮೇರಿಯು ತಾಯಿಯು ಈ ಸರ್ಟಿಫಿಕೇಟನ್ನು ಸರಕಾರ ಅಧಿಕಾರಿಗಳಿಗೆ ಒಪ್ಪಿಸಿ ಹುಡುಗಿಯಾಗಿ ರಜಿಸ್ಟರ ಮಾಡಿದ್ದನ್ನು ಹುಡುಗನಾಗಿ ಸ್ವೀಕರಿಸಬೇಕೆಂದು ಅರ್ಜಿ ಮಾಡಿದಳು. ರಜಿಸ್ಟ್ರೇಶನ್ ಅಧಿಕಾರಿಗಳು ಹಾಗೆ ಮಾಡಲು ಬರುವದಿಲ್ಲವೆಂದು ಅರ್ಜಿಗೆ ಉತ್ತರ ಕೊಟ್ಟರ. ಮೇರಿಯು ತಾಯಿಯವಳು ಈ ಬಗ್ಗೆ ಕೋರ್ಟಿಗೆ ಹೋಗಲಕ್ಕೆವರಿಂದ ಹೆಣ್ಣು ಗಂಡಾದದ್ದು, ಇದೇ ಸೋಜಿಗವು ಸರಿ.

ಬೆಳಗಾವಿಯಲ್ಲಿ

೧೮ ಜನ ಹೆಂಗಸರನ್ನು ಸೆರೆಹಿಡಿದರು.

[ಶಂತಿಯ ವಾರ್ತೆ ; ಬೆಳಗಾವಿ ತಾರೀಖು ೧೯—೧—೧೯೩೧]

ನಿನ್ನೆ ಆದಿತ್ಯವಾರ ದಿವಸ ಮುಂಜಾನೆ ಸುಮಾರು ೬೦ ಜನ ಸ್ತ್ರೀಯರು ಟಿಳಕ ಚೌಕಿನಲ್ಲಿ ಜರುಗಲಿಕ್ಕಿದ ರಾಷ್ಟ್ರಧ್ವಜವಂದನೆಯ ಸಮಾರಂಭಕ್ಕೆ ಮೆರವಣಿಗೆಯಿಂದ ಹೊರಟಿದ್ದರು. ಆಗ ಕಲವು ಜನ ಪೋಲೀಸರು ಮೋಟಾರ ಲಾರಿಯಲ್ಲಿ ಕುಳಿತುಕೊಂಡು ಬಂದು ಅವರನ್ನು ಹಾದಿಯಲ್ಲಿ ಅಡ್ಡ ಗಟ್ಟಿ, ಅವರಲ್ಲಿ ಶ್ರೀಮತಿ ಲಕ್ಷ್ಮೀಬಾಯಿ ಸೋಹನಿ, ಗಂಗಾಬಾಯಿ ಸೋಹನಿ, ಕಾಶೀಬಾಯಿ ಗದ್ರೆ, ಲಕ್ಷ್ಮೀಬಾಯಿ ಜೋಶಿ (ಜೋಶಿ ನಾರಾಯಣರಾಯರ ಪತ್ನಿಯವರು), ಸತ್ಯಭಾಮಾಬಾಯಿ ಕ್ಷಿಭು ಮಾನಕಾಬಾಯಿ ಗುಂಜೀಕರ, ಕಮಲಾಬಾಯಿ ಗುಂಜೀಕರ, ಕಮಲಾಬಾಯಿ ನಾಯಿಕ, ಯಲ್ಲಾಬಾಯಿ ಪಾಟೀಲ, ಕಾಶಿರಾಬಾಯಿ ಜೋಶಿ, ಮುಕ್ತಾಬಾಯಿ ಶಿರೋಡಕರ, ಗಂಗಾಬಾಯಿ ಘಾಲನೀಕರ, ಶಾಂತಾಬಾಯಿ ಕೋವಾಡಕರ, ಯಮುನಾಬಾಯಿ ಧಾರವಾಡಕರ, ಪಾರ್ವತಿಬಾಯಿ ಕಜುರೇಕರ, ದುರ್ಗಾಬಾಯಿ ಕಜುರೇಕರ, ಶಾಂತಾಬಾಯಿ ನಾಡಕರ್ಣಿ, ತುಳಸಾಬಾಯಿ ಅನಿಖಿಂಡಿ ಹೀಗೆ ೧೮ ಜನರನ್ನು ಸೆರೆಹಿಡಿದುಕೊಂಡು ಪೋಲೀಸ ಚೌಕಿಗೆ ಕರೆದೊಯ್ದರು. ಅಲ್ಲಿ ಅವರಿಂದ ಹೊಸೆ ಕೆಗೆದುಕೊಂಡು ಅವರನ್ನು ಬಿಟ್ಟು-ಬಿಟ್ಟರು. ಅವರ ವಿಚಾರಣೆಯ ಇಂದು ನಡೆಯತಕ್ಕದ್ದಿದೆ. ಅಳಿದವರಂದರೂ ಬಂಧನಕ್ಕೊಳಗಾಗಲು ಸಿದ್ಧರಾಗಿಯೇ ನಿಂತಿದ್ದರು ಆದರೆ ಮೋಟಾರ ಲಾರಿಯಲ್ಲಿ ಅವರಿಗೆಲ್ಲರಿಗೂ ಸ್ಥಳ ವಿದ್ದಿದ್ದಿಲ್ಲ.

ಉಳಿದವರು ಹಾಗೆಯೆ ಮೆರವಣಿಗೆಯನ್ನು ಮುಂದಕ್ಕೆ ಸಾಗಿಸಿಕೊಂಡು ಹೋಗಿ, ಟಿಳಕ ಚೌಕಿನಲ್ಲಿ ರಾಷ್ಟ್ರಧ್ವಜವಂದನೆಯ ಸಮಾರಂಭವನ್ನು ಪೂರ್ತಿಗೊಳಿಸಿ ತಿರುಗಿ ಹೊರಟು ಹೋದರು.

ಮ್ಯಾಜಿಸ್ಟ್ರೇಟರು ಹೊರಡಿಸಿದ ಆಜ್ಞೆಯನ್ನು ಮುರಿಯುವ ಉದ್ದೇಶದಿಂದಲೇ ಬೇರೆ ಕೆಲವು ಜನರು ೬॥ ಗಂಟೆಗೆ ಮೆ ವಣಿಗೆಯನ್ನು ಹೊರಡಿಸಿ, ಪಟ್ಟಣದ ಮುಖ್ಯ ಮುಖ್ಯ ಬೀದಿಗಳೆಲ್ಲೆಲ್ಲ ಸಂಚರಿಸಿ, ಟಿಳಕ ಚೌಕಿಗೆ ಬಂದು ಮುಟ್ಟಿದರು. ಅಲ್ಲಿ ಅವರು ರಾಷ್ಟ್ರಧ್ವಜವಂದನೆಯ ಕಾರ್ಯವನ್ನು ಪೂರ್ತಿಗೊಳಿಸಿ ತಿರುಗಿ ಹೊರಟು ಹೋದರು. ಅವರು ತಿರುಗಿ ಹೋದ ಸ್ವಲ್ಪ ಹೊತ್ತಿನಲ್ಲಿಯೇ, ಪೋಲೀಸರು ಅಲ್ಲಿಗೆ ಬಂದು ರಾಷ್ಟ್ರಧ್ವಜವನ್ನು ಬಲತ್ಕಾರದಿಂದ ತೆಗೆದುಕೊಂಡು ಹೋಗಲು ಬಹು ಪ್ರಯತ್ನ ಪಟ್ಟರು. ಆದರೆ ಅದು ಅವರಿಗೆ ಸಾಧ್ಯವಾಗಲಿಲ್ಲ. ಪಟ್ಟಣದಲ್ಲಿ ಎಲ್ಲೆಲ್ಲಿಯೂ ಉತ್ಸಾಹವೇ ಕಂಡ ಬರಹತ್ತಿದೆ.

ಖಾಲಾನಾ ವ.ಹಮ್ಮದ ಅಲ್ಲಿಯವರು ನಿಧನ ಹೊಂದಿದ ಮೂಲಕವಾಗಿ ತಾ॥ ೧೫ ಕ್ಕೆ ಮುಂದವರಿಲ್ಪಟ್ಟ ಮ್ಯುನಸಿಪಾಲಿಟಿಯ ಸಾಧಾರಣ ಸಭೆ, ತಾ॥ ೧೫ ನೆಯ ದಿವಸವಾದರೂ, ಸೊಲ್ಲಾಪುರದ ಮುಂದಾಳುಗಳನ್ನು ಗಲ್ಲಿಗೆ ಹಾಕಿದ್ದರ ಹಾಗು ಬೆಳಗಾವಿಯಲ್ಲಿ ಲಾಠೀ ರಾಜ್ಯ ಪ್ರಾರಂಭಿಸಿದ್ದರ ನಿಷೇಧಾರ್ಥವಾಗಿ ಮತ್ತೆ ಮುಂದಕ್ಕೆ ಹಾಕಲ್ಪಟ್ಟಿತು. ಸಭೆಯಲ್ಲಿ ದುಃಖಪ್ರದರ್ಶನ ತೀರ್ಮಾನುಗಳು ಸ್ವೀಕೃತವಾಗಿ, ಅವು ಅವರವರ ಸಂಬಂಧಿಕರಿಗೆ ಕಳಿಸಲ್ಪಟ್ಟವು.

ಬೆಳಗಾವಿ ಜಿಲ್ಲೆಯ ರೈತರ ಪರಿಷತ್ತು.

(ಶಂತಿಯ ವಾರ್ತೆ)

ಬೆಳಗಾವಿ ಜಿಲ್ಲೆಯ ರೈತರ ಪರಿಷತ್ತು ತಾ॥ ೧೫ ನೆಯ ದಿವಸ ಸಂಕೇಶ್ವರದಲ್ಲಿ ಹಾವೇರಿಯ ಸುಪ್ರಸಿದ್ಧ ವಕೀಲರಾದ ಶ್ರೀ. ಹೊಸಮನಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸುಮಾರು ೪೦೦ ಜನರು ಸಭೆಗೆ ಆಗಮಿಸಿದ್ದರು ಸ್ವಾಗತ ಕವಿತೆಯ ಚೇರಮನ್ನರಾದ ಬೆಳ್ಳಿದ ಬಾಗೇವಾಡಿಯ ಶ್ರೀ ವಲ್ಲಭ್ಬಾ ಕಟ್ಟಿಯವರು ತಮ್ಮ ಭಾಷಣದಲ್ಲಿ ರೈತರ ಕಷ್ಟನಷ್ಟಗಳನ್ನ ಕುರಿತು ಚನ್ನಾಗಿ ವಿವರಿಸಿ ಹೇಳಿದರು ಒಳಕ ಅಧ್ಯಕ್ಷರ ಸ್ಫೂರ್ತಿದಾಯಕ ಭಾಷಣ ವಾಯಿತು. ಸಭೆಯಲ್ಲಿ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯಗಳು ಸ್ವೀಕೃತವಾದವು.

೧ ಈ ವರ್ಷದ ಜಪ್ತಿಯನ್ನು ತಹಕೂಪ ಇಡಲು ಸರಕಾರಕ್ಕೆ ಕೇಳಿಕೊಂಡಿದ್ದು ೨ ರೈತರಿಗೆ ಕೆಲವು ಸಲಲತ್ತುಗಳನ್ನು ತೋರಿಸಬೇಕಾಗಿ ಜವೀನದಾರರಿಗೆ ವಿನಂತಿ ಮಾಡಿಕೊಂಡಿದ್ದು ೩ ಹಸ್ತೆಯ ದರವನ್ನು ಶಾಶ್ವತವಾಗಿ ಈಗಿನ ಜಧ್ದಪ್ಪಕ್ಕೆ ಇಳಿಸಬೇಕಾಗಿ ಸರಕಾರಕ್ಕೆ ಕೇಳಿಕೊಂಡಿದ್ದು. ೪ ಸ್ವದೇಶಿ ಹಾಗು ಖದ್ದರಕ್ಕೆ ಉತ್ತೇಜನ ಕೊಡಬೇಕೆಂದೂ ೫ ಪರದೇಶಿ ಸರಕುಗಳಿಗೆ ಬಹಿಷ್ಕಾರ ಹಾಕಬೇಕೆಂದೂ ೬ ಜನಗಣತಿಯ ಕಾರ್ಯದಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಕೂಡದೆಂದೂ ರೈತರಿಗೆ ಕೇಳಿಕೊಂಡಿದ್ದು. ೭ ಕಂದಾಯ ಇಲಾಖೆಯ ಅಧಿಕಾರಿಗಳು ಗುಬರಾಥದಲ್ಲಿ ರೈತರಿಗೆ ನಾನಾ ತರದಿಂದ ಪೀಡೆಕೊಡುತ್ತಿದ್ದದ್ದನ್ನು ನಿಷೇಧಿಸಿದ್ದು ಲ ಗೋಕಾಕ ತಾಲೂಕಿನ ರೈತರು ನೌಕರಿ ಮಾಡತಕ್ಕದ್ದಲ್ಲ ಹಾಗು ಅವುಗಳಿಗೆ ತಮ್ಮ ಹತ್ತಿ, ಅರಳಿ ಮಾರತಕ್ಕದ್ದಲ್ಲವೆಂಬುದಾಗಿ ಗೊತ್ತು ಪಡಿಸಿದ್ದು ೯ ಈಗಿನ ರಾಜ್ಯ ಕಾರಭಾರ ಪದ್ಧತಿಯು ರೈತರಿಗೆ ಹಾನಿಕಾರಕವಾಗಿದೆಯೆಂದು ಸಾರಿದ್ದು.

ಅಧಣಿ ತಾಲೂಕಿನ ರೈತರ ಪರಿಷತ್ತು ತಾ॥ ೨೬ನೆಯ ದಿವಸ ಅಥಣಿಯಲ್ಲಿ ನೇರೆಕಳ್ಳಿದ್ದಿದೆ. ಹುಕ್ಕೇರಿಯ ಪ್ರಸಿದ್ಧ ವಕೀಲರಾದ ಶ್ರೀ ಎಂ. ಪಿ ಪಾಟೀಲರವರು ಅದರ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದು, ಅಥಣಿಯ ಮ್ಯುನಸಿಪಾಲಿಟಿಯ ಚೇರಮನ್ನರಾದ ಶ್ರೀ ಮಹಾಜನರವರು ಸ್ವಾಗತಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಗೋಕಾಕ ತಾಲೂಕಿನ ರೈತರ ಪರಿಷತ್ತಾದರೂ ಫೆಬ್ರುವಾರಿ ೧೧ನೆಯ ತಾರೀಖಿನ ಒಳಗೆ ಕೂಡತಕ್ಕದ್ದಿದೆ. ಉಳಿದ ತಾಲೂಕುಗಳಲ್ಲಿಯಾದರೂ ರೈತರ ಪರಿಷತ್ತುಗಳನ್ನು ಕೂಡಿಸುವ ಬಗ್ಗೆ ವಿಚಾರ ನಡೆದಿದೆ.

ಸಂಕೇಶ್ವರದಲ್ಲಿ ಪರಿಷತ್ತಿನ ಕಾರ್ಯವು ಮುಕ್ತಾಯ ಹೊಂದಿದ ಮೇಲೆ ಕರ್ನಾಟಕದ ಪ್ರಸಿದ್ಧ ಮುಂದಾಳುಗಳಾದ ಶ್ರೀ ದೇಶಪಾಂಡೆ ಗಂಗಾಧರರಾಯರು ರೈತರನ್ನುದ್ದೇಶಿಸಿ, ರೈತರೇ ರಾಷ್ಟ್ರದ ಜೀವಾಳವಿದ್ದು, ಯಾಚನೆಯು ಮಾರ್ಗವನ್ನು ಕಟ್ಟಗೊಟ್ಟು ಅವರು ತಮ್ಮ ಕಾಲಮೇಲೆ ತಾವೇ ನಿಂತುಕೊಳ್ಳಬೇ

ಕೆಂದೂ, ಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳಂತೆ ನಡೆದುಕೊಂಡು ವಿಧಾಯಕ ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಬೇಕೆಂದೂ ಭಾಷಣ ಮಾಡಿದರು. ಸ್ವದೇಶಿ ವಸ್ತುಗಳನ್ನೇ ಕೊಂಡು ಕೊಳ್ಳುತ್ತೇವಾಗಿಯೂ, ಖದ್ದರ ಬಟ್ಟೆಯನ್ನೇ ಉಡುಪೋಗಿಸುತ್ತೇವಾಗಿಯೂ ಎಲ್ಲ ಕೈಕರೂ ಅಲ್ಲಿಂದಲ್ಲೇ ಪ್ರತಿಜ್ಞೆ ಮಾಡಿದರು.

ಗದಗ-ಬೆಟಗೇರಿಯ ಸುದ್ದಿಯು.

(ಸ್ವಂತ ಸುದ್ದಿಗಾರರಿಂದ)

ಹರತಾಳ ಹಾಗು ಸಭೆ.

ಶ್ರೀ ವಲ್ಲಪ್ಪ ಧನಶೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದ ಸುದ್ದಿಯು ತಾ॥ ೧೫ ನೆಯ ದಿವಸ ತಿಳಿದ ಕೂಡಲೆ, ಗದಗ ಬೆಟಗೇರಿ ಎರಡೂ ಊರುಗಳಲ್ಲಿ ಹರತಾಳವು ಸ್ವಯಂ ಸ್ಫೂರ್ತಿಯಿಂದ ಆ ಕ್ಷಣವೇ ಆಚರಿಸಲ್ಪಡುವದಕ್ಕೆ ಒಪ್ಪಿ ಬಂದಿತು. ಯಾವತ್ತೂ ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಅನೇಕ ಮನೆಕನವರು ಆ ದಿವಸ ಅನ್ನ ನೀರು ಸಹ ತೆಗೆದುಕೊಳ್ಳಲಿಲ್ಲ. ಸಾಯಂಕಾಲಕ್ಕೆ ೧೦೦೦೦ ಜನರ ಪ್ರಚಂಡ ಸಭೆಯು ಗಾಂಧಿ ಚೌಕಿನಲ್ಲಿ ನೆರೆದು, ಸಭೆಯಲ್ಲಿ ಸರಕಾರದವರ ಅನ್ಯಾಯ ಕೃತಿಯನ್ನು ನಿಷೇಧಿಸಲಾಯಿತು.

ಸ್ವದೇಶಿ ಹಾಗು ಬಹಿಷ್ಕಾರ

ಒಳಿದ ವಾರದಲ್ಲಿ ಇಲ್ಲಿಯ ಸ್ವದೇಶಿ ಮಂಡಳದವರು ಮುಳಗುಂದ ಗ್ರಾಮಕ್ಕೆ ಸ್ವದೇಶಿ ಪ್ರಚಾರಕಾರ್ಯಕ್ಕಾಗಿ ಹೋಗಿ, ಅಲ್ಲಿಯ ನೇಕಾರರಿಗೆ ಸ್ವದೇಶಿ ನೂಲನ್ನು ಉಪಯೋಗ ಮಾಡಲಿಕ್ಕೆ ಉಪದೇಶಮಾಡಿ ಬಂದರು

"ಉಲ್ಲಾಳ ಅಂಡ ಸನ್ಸ" ಎಂಬ ಅರಿವಿ ಅಂಗಡಿಯು ಮುಂದೆ ಪಿಕೆಟಿಂಗ ಯಥಾಪ್ರಕಾರವಾಗಿ ಒಂದು ತಿಂಗಳದಿಂದ ನಡೆದಿದ್ದು, ಅಂಗಡಿಯಲ್ಲಿ ಏನೂ ವ್ಯಾಪಾರವಾಗಿಲ್ಲ. ತಾ॥ ೧೫ ನೆಯ ದಿವಸ, ಮಾನ್ಯ ಸಾಹೇಬರು ಅಂಗಡಿಗೆ ಒಂದು ಹೋದರಂದಿನಿಂದ, ಇಬ್ಬರು ಪೊಲೀಸರು ಕಪ್ಪದೆ ಅಂಗಡಿಯ ಮುಂದೆ ಕಾವಲು ಮಾಡಲಿಕ್ಕೆ ಪ್ರಾರಂಭಿಸಿದ್ದಾರೆ. ಪೊಲೀಸರು ಅಂಗಡಿಯ ಮುಂದೆ ಸದಾ ನಿಲ್ಲುವದರಿಂದ ಆ ಅಂಗಡಿಗೆ ಬರುವ ಒಂದೆರಡು ಗಿರಾಕಿಗಳು ಸಹ ಬೆದರಿ ತಿರುಗಿ ಹೋಗುತ್ತಾರೆ. ಈ ಪ್ರಕಾರ ಪೊಲೀಸರು ಒಂದು ರೀತಿಯಿಂದ ಸ್ವದೇಶಿ ಪ್ರಚಾರಕಾರ್ಯಕ್ಕೆ ನೆರವಾಗಹತ್ತಿದ್ದಾರೆ.

ಸ್ವದೇಶಿ ಗಿರಣಿಗಳ ನೂಲಿನ ಚೀಲುಗಳ ಬೆಲೆ.

ಹೆಸರು	ನಂ.	ಸಂಖ್ಯೆ
ಹುಬ್ಬಳ್ಳಿ ಭಾರತ ಮಿಲ್	೨೦	೧೪೦ ಚಿಲ್ಲರೆ
	೨೦॥	
	೨೧	
ಸೊಲಾಪೂರ ಸ್ಪಿನಿಂಗ ಅಂಡ	೫೦	೪ ೧೦೦ ರೂ.
ವೀವ್ಹಿಂಗ ಪರದೇಶಿ ಗಿರಣಿಗಳು.	೬೦	
ಇಗ್ಲಂಡ	೪೦	೨ ೫೦೦ ರೂ
ಪಾನ ಮರ್ಚರಾಯಿಜ್ಡ ಯಾರ್ನ.	೨೬೪	೧೦ ೫೦೦೦ ರೂ.

ಇಂಗ್ಲಂಡದ ೪೦ ನಂಬರಿನ ನೂಲು ಬರದಂತೆಮಾಡುವ ಪ್ರಯತ್ನ ನಡೆದಿದೆ.

ಈ ಊರಲ್ಲಿ ಸಿಗರೇಟಿನ ವ್ಯಾಪಾರವು ಸಂಪೂರ್ಣವಾಗಿ ಕಡಿಮೆ ಆಗಿರುತ್ತದೆ ಅದರಿಂದ ಲಕ್ಷ್ಮಣರಾವ ಶಗ್ಗರಸಿ ಎಂಬೊಬ್ಬ ಸಿಗರೇಟಿನ ವ್ಯಾಪಾರಿಯು ೨-೩ ದಿನಗಳ ಕೆಳಗೆ ಚೀನದೇಶದಲ್ಲಿ ತಯಾರಿಸಿದ ಸಿಗರೇಟಿನ ಪ್ಯಾಕುಗಳನ್ನು ಈ ಊರಲ್ಲಿಯ ಉಳಿದ ವ್ಯಾಪಾರಸ್ಥರಿಗೆ ಅವುಗಳನ್ನು ಕೊಟ್ಟು, ಅವರಿಗೆ 'ಚೀನದೇಶದ ಸಿಗರೇಟಿನ ಮೇಲೆ ಕಾಂಗ್ರೆಸದವರು ಬಹಿಷ್ಕಾರ ಹಾಕಿಲ್ಲ ಕಾರಣ ಅವುಗಳ ವ್ಯಾಪಾರ ಮಾಡಲಿಕ್ಕೆ ಯಾವ ತರದಿಂದ ಅಡ್ಡಿ ಇಲ್ಲ' ಅಂತಾ ಅಂಗಡಿಕಾರರಿಗೆ ಬೋಧಮಾಡಿ ಕೊಟ್ಟಿದ್ದನು. ಈ ಸುದ್ದಿ ಸ್ವದೇಶಿ ಪ್ರಚಾರಕ ಮಂಡಲಕ್ಕೆ ತಿಳಿದ ಕೂಡಲೆ ಯಾವತ್ತೂ ಸಿಗರೇಟಿನ ವ್ಯಾಪಾರಿಗಳ ಕಡೆಗೆ ಹೋಗಿ ಆ ಸಿಗರೇಟ ಪ್ಯಾಕುಗಳನ್ನು ತಿರುಗಿ ಇಸಕೊಂಡು ಲಕ್ಷ್ಮಣರಾವ ಶಗ್ಗರಸಿಯವರಿಗೆ ಮುಟ್ಟಿಸಿದರು.

ಗದಗಿನ ವ್ಯಾಜಿಸ್ಟ್ರೇಟರಾದ ಮಿ ಪ ಠಾಣಸಾಹೇಬರವರು ಹಳ್ಳಿಗಳ ಮೇಲೆ ಸಂಚಾರಕ್ಕೆ ಹೋದಾಗ ರಾಜನಿಷ್ಠೆ ಸಭೆಗಳನ್ನು ನೆರೆಯಿಸಿ ತಾವೇ ಸ್ವತಃ ವ್ಯಾಖ್ಯಾನ ಕೊಡುತ್ತಿದ್ದಾರೆ. ೪-೫ ದಿವಸಗಳ ಹಿಂದೆ ಕಳಸಾಪುರ ಗ್ರಾಮಕ್ಕೆ ಹೋಗಿ ಅಲ್ಲಿಯೂ ರಾಜನಿಷ್ಠೆ ಸಭೆಯನ್ನು ನೆರೆಯಿಸಿ ಆ ಸಭೆಯಲ್ಲಿ ವ್ಯಾಖ್ಯಾನ ಕೊಟ್ಟರು ಅವರ ವ್ಯಾಖ್ಯಾನದ ಸಾರಾಂಶ ಕೆಳಗೆ ಬರೆದಂತೆ ಇರುವದು 'ಈಗ ನಡೆದ ರಾಜಕೀಯ ಚಳವಳಿಯನ್ನು ಬ್ರಾಹ್ಮಣರೇ ಹೂಡಿದ್ದರಿಂದ ನೀವು ಯಾರೂ ಆ ಚಳವಳಿಗೆ ಸಹಾಯ ಮಾಡಬೇಕಿರಿ. ಮತ್ತು ಬ್ರಾಹ್ಮಣರು ಲುಚ್ಚೀರು, ಲಫಂಗರು ಇವ್ವು ಜನರಿಗೆ ಮೋಸಗೊಳಿಸಿ ತಾವು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬೇಕೆಂಬ ನೆವದಿಂದ ಈ ಚಳವಳಿಯನ್ನು ಹೂಡಿದ್ದಾರೆ. ಈ ಪ್ರಕಾರ ಬ್ರಾಹ್ಮಣರ ನಿಂದೆಯನ್ನು ಮಾಡಿದರಂತೆ ದೊಡ್ಡ ಸರಕಾರೀ ಅಮಲದಾರರು ಈ ಪ್ರಕಾರ ಪ್ರಜೆಗಳಲ್ಲಿ ಜಾತಿಮತ್ಸರವನ್ನು ಹುಟ್ಟಿಸುವದೆಂದರೆ ಅದು ಕೇವಲ ಗರ್ಹಣೀಯವಾದದ್ದು. ಬ್ರಾಹ್ಮಣ ಸಮಾಜದವರು ಮಾನ್ಯಶ್ರೀದಾರ ಸಾಹೇಬರವರ್ಮ ಈ ತರಹದ ಭಾಷಣವನ್ನು ಯಾವ ರೀತಿಯಿಂದ ನಿಷೇಧಿಸುವರು ನೋಡಬೇಕು.

ವಿಜಾಪುರದ ಪತ್ರ-

(ಸ್ವಂತ ಸುದ್ದಿಗಾರರಿಂದ)

ಶ್ರೀ ಹೊದಲೂರರಿಗೆ ಬಿಡುಗಡೆ.

ಕ್ರಿ. ಲಾ. ಅನೆಂಡಮೆಂಟ ಕಾಯಿದೆಯ ಅನ್ವಯ ಶಿಕ್ಷೆಗೆ ಗುರಿಯಾದ ಶ್ರೀ ಉಡುಪೀ ಸಾಹೆ ಹೊದಲೂರರು ಅಪೀಲು ಮಾಡಿದ ವಿಚಾರಣೆಯು ಸೆಶನ್ಸ ಕೋರ್ಟಿನಲ್ಲಿ ನಡೆದು, ಅವರು ಅರ್ಧ ಗಂಟೆ ನಿರ್ಬಂಧವಾಸದಲ್ಲಿ ಅನುಭೋಗಿಸಿದಷ್ಟೇ ಶಿಕ್ಷೆಯು ಸಾಕಾಗಿದೆಯೆಂದು ಹೇಳಿ, ಕೋರ್ಟ ಸವು ಅವರು ಉಳಿದ ಶಿಕ್ಷೆಯನ್ನು ರದ್ದುಪಡಿಸಿದರು.

ರಾಷ್ಟ್ರಧ್ವಜವಂದನೆಯು.

ಸೆಪ್ಟೆಂಬರ ಆದಿತ್ಯವಾರ ದಿವಸ ಸಂಜೆ ಗೇಟದ ಹತ್ತಿರ ರಾಷ್ಟ್ರಧ್ವಜವಂದನೆಯು ಸಮಾರಂಭವು ಜರುಗಿತು. ಸಾವಿರಾರು ಜನ ಸ್ತ್ರೀ ಪುರುಷರು ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದರು.

ಶ್ರೀ ಸುಗುಣೇಂದ್ರರ ತೂಕವು ೧೩ ಪೌಂಡು ಕಡಿಮೆಯಾಯಿತು-

ಕ್ರಿ ಲಾ. ಅಮೆಂಡಮೆಂಟ ಕಾಯಿದೆಯ ೧೭ ನೆಯ ಕಲಮಿನನ್ವಯ ಶಿಕ್ಷೆಗೆ ಗುರಿಯಾಗಿ ವಿಜಾಪುರ ಜೈಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಆನಂದತೀರ್ಥರಾಗಿ, ಇಲ್ಲಿಯ ಶ್ರೀ ಕೇಶವ ಸುಗುಣೇಂದ್ರಾಚಾರ್ಯರ ತೂಕವು ೧೩ ಪೌಂಡು ಕಡಿಮೆಯಾದ್ದು, ಅವರು ಅಮರಣಾಂತವಾಗಿ ಬಳಲುತ್ತಿರುವರೆಂದೂ, ಅವರ ಔಷಧೋಪಚಾರದ ಬಗ್ಗೆ ಅಲ್ಲಿಯ ಅಧಿಕಾರಿಗಳು ಯೋಗ್ಯ ಕಾಳಜಿಯನ್ನು ತೆಗೆದುಕೊಳ್ಳುತ್ತಿರುವದಿಲ್ಲವೆಂದೂ ತಿಳಿದು ಬರುತ್ತದೆ.

ಮಹಾತ್ಮಾಗಾಂಧಿಯವರ ಬಿಡುಗಡೆ

(ಶಂತಿಯ ವಾರ್ತೆ)

ಮುಖ್ಯ ಧ ರ ವ್ಯ ಕ್ತ ಪ ಡಿಸಿದ ತೋರಣದ ಸಂಬ ಧವಾಗಿ ವಿಚಾರ ಮಾಡ ವ ಕಾರಿಸ.. ವ ಹಾತ್ಮಾ ಗಾಂಧಿ ಹಾಗು ಕೆಲವು ಕಾಂಗ್ರೆಸ್ ವ ಖಂಡರನ್ನು, ಸರಕಾರದವರು ಬೇಗನೆ ಬಿಡುಗಡೆ ಮಾಡುವ ವಿಚಾರದಲ್ಲಿ ದ್ದಾರೆಂದು ತಿಳಿಯುತ್ತದೆ. ಈ ಮೂಲಕವಾಗಿ ಪುಣೆ, ಬಂಬಯಿ, ಕಲಕತ್ತೆ, ಅಹಮ್ಮದಾಬಾದ ಮೊದಲಾದ ಕಡೆಗಳಲ್ಲಿ ವಿಶೇಷ ಉತ್ಸಾಹ ಹುಟ್ಟಿಕೊಂಡಿದೆ.

ಸುಭಾಶ ಬೋಸರಿಗೆ ಬಿಡುಗಡೆ.

(ಶಂತಿಯ ವಾರ್ತೆ)

ಮಾಲಡಾ ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಡಿಸಿದ ಗಳಿಕೆ ನಿಯಮ ಕಲವನ್ನು ಅವಮಾನ ಮಾಡಿದ್ದಕ್ಕಾಗಿ ೬ ದಿನಗಳ ಶಿಕ್ಷೆಗೆ ಗುರಿಯಾದ ಕಲಕತ್ತೆಯ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಸುಭಾಶ ಬೋಸರು ತಾ|| ೨೪ನೆಯ ದಿನ ಸಂಜಾನೆ ಒಮ್ಮೆಲೆ ಬಿಡುಗಡೆ ಹೊಂದಿದ್ದಾರೆ.

ಅಸೆಂಬ್ಲಿಯಲ್ಲಿ ರಾಜಕೀಯ ಕೈದಿಗಳ ಬಿಡುಗಡೆ.

(ಶಂತಿಯ ವಾರ್ತೆ)

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂಬುದಾಗಿ ಅಸೆಂಬ್ಲಿಯ ಮುಂದೆ ಇಂದಿರುವ ಸೂಚನೆಯ ಸಂಬಂಧವಾಗಿ ನೋಮು ವಾರ ದಿವಸ ಅಸೆಂಬ್ಲಿಯಲ್ಲಿ ಚರ್ಚೆಯಾಗುತ್ತಿದೆ.

ಕಲಕತ್ತೆಯಲ್ಲಿ ಮುಖಂಡರನ್ನು ಹಿಡಿದರು.

(ಶಂತಿಯ ವಾರ್ತೆ)

ಕಲಕತ್ತೆಯ ಪೋಲೀಸ ಅಧಿಕಾರಿಗಳು ತಾ|| ೨೪ ನೆಯ ದಿವಸ ಅಲ್ಲಿಯ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರ ಮನೆಗಳನ್ನು ಝಡತಿ ಮಾಡಿ, ಅವರನ್ನು ಸೆರೆಹಿಡಿದುಕೊಂಡು ಹೋದರು. ಅಧಿಕಾರಿಗಳು ಅವರ ಹೆಸರುಗಳನ್ನು ಯಾಂಗೂ ತಿಳಿಸಲಿಲ್ಲ.

ಶ್ರೀ ಜವಾಹರಲಾಲ ನೆಹರುರವರಿಗೆ ೯ ತಿಂಗಳ ಕಠಿಣ ಶಿಕ್ಷೆ.

ರಾಜದ್ರೋಹಾತ್ಮಕ ಭಾಷಣ ಮಾಡಿದ ಸಂಬಂಧವಾಗಿ ಮುಂಬಯಿಯ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಜವಾಹರಲಾಲ ನೆಹರುರವರಿಗೆ ತಾ|| ೨೫ ನೆಯ ದಿವಸ ೯ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಪೇಶಾವರದಲ್ಲಿ ಬಾಂಬು ಹಾರಿತು.

ಕಂಡಿ ಎಸ್ ವೇಲಗಾಡಿಯು ಪೇಶಾವರ ಸ್ಟೇಶನಕ್ಕೆ ಹೊಗುತ್ತಿರುವಾಗ ತಾ|| ೨೦ನೆಯ ದಿನ ಶಾಹೀಬಾಗ ರೆಜಿಮೆಂಟಿನ ಹತ್ತಿರ ಒಬ್ಬಿಂಗೊನ್ಮೆ ಒಂದು ಬಾಂಬು ಹಾರಿತು. ಯಾರಿಗೂ ಅಪಾಯವಾಗಿಲ್ಲ.

ಡಾ. ಬುರ್ಲಿ, ಕೆರೂರು, ಪದಕಿ ಮೊದಲಾದವರಿಗೆ ಬಿಡುಗಡೆ

ಕ್ರಿಮಿನಲ್ ಲಾ ಅಮೆಂಡಮೆಂಟ್ ಕಾಯದೆಯ ಅನ್ವಯ ಇಲ್ಲಿ ಶಿಕ್ಷೆಗೆ ಗುರಿಯಾದವರ ಖುಲ್ಲಾ ಕಾಗದ ಪತ್ರಗಳನ್ನು ಮುಂಬಯಿ ಹಾಯಕೋರ್ಟಿನವರು ಪುನರ್ವಿಚಾರಣೆ ಮಾಡಿ ಅವರನ್ನು ನಿರ್ದೋಷಿಗಳೆಂದು ನಿರ್ಣಯಿಸಿದ್ದರಿಂದ, ಡಾ. ಬುರ್ಲಿ, ಪದಕಿ, ವಳ್, ನಿಂಗಾಪುರ ಇವರು ವಿಜಾಪುರ ಜಿಲ್ಲೆಯಿಂದ ನೊವ್ಹಿನ ದಿವಸ ಬಿಡುಗಡೆ ಹೊಂದಿದ್ದಾರೆ. ಉಳಿದವರಾದ ಶ್ರೀ ಮುಗುಟೇಂದ್ರ ಕೆರೂರೆ ಮಿರ್ಜಿ, ಗದ್ದನಕೇರಿ ಇವರಿಬ್ಬರೂ ವಿನಾಕಾರಣ ಜೇಲಿನಲ್ಲಿದ್ದು ಬಿಡುಗಡೆ ಹೊಂದಿರುವವರಾಗಿ ತೋರುತ್ತದೆ.

ಸತ್ಯಾಕ್ರಯಿಗಳ ಅವರಿಗೆ ಗೀತೆ—

ನ್ಯಾಯ ದೇವಿಯೆ,! ಸೊಲ್ಲಾಪುರದ ನಾಲ್ವರು ನಿರಪರಾಧಿಗಳು. (ಅವರು ನಿರಪರಾಧಿಗಳೆಂಬುದು ಭಾರತೀಯರು ಹೊರೆಯುಡುತ್ತಿರುವರು!) ನಿನಗೆ ಆಹುತಿಯಾದರು. ಅವರ ಈ ಬಲಿಯು ವಿಶ್ವಕ್ಕೆ ಸಚಾರವಾಗಿ ನೀನು ನಮ್ಮಲ್ಲಿ ಧರ್ಮದೇವಿಯನ್ನು ಕೇಳು ಆಳಿಯು

"ತಂಗೀ! ನೀನು ಈ ಬಲಿಯನ್ನು ಬಯಸಿ ಬಾರದಾಗಿತ್ತು. ಆ ನಾಲ್ವರು ಕ್ರೂರಕರ್ಮಿಗಳಲ್ಲ. ನೂನವ ದ್ರೋಹಿಗಳಲ್ಲ. ಕರ್ಮಯೋಗಿಗಳು ಭಾರತೀಯ ನ್ಯಾಯ ಮಕ್ಕಳು."

ಎಂದು ಹೇಳುತ್ತಿದ್ದಳು. ಭಗವಂತನ ಸಂಕಲ್ಪವೆ ಈ ನಾಲ್ವರೂ ಹಿಗೆಯೇ ತಮ್ಮ ಜೀವನಮಾತ್ರೆ ಮುಗಿಸಬೇಕು. ರಾಷ್ಟ್ರಜೀವನಕ್ಕೆ ಸಂಜೀವನ ವೆರಯು ಬೇಕು ಎಂದಿತ್ತೇನೊ

ಆದರೆ ಆಳರಸರು ಕೊಂಚ ದೂರದೃಷ್ಟಿಯಿಂದ ವರ್ತಿಸಬಹುದಾಗಿತ್ತು. ಸ್ವಲ್ಪ ಭಾವನಾತಿಕ್ಯ ತೋರಿಸಬಹುದಾಗಿತ್ತು. ಅಲ್ಪಸ್ವಲ್ಪ ಮಾನವೀ ಹೃದಯವನ್ನು ಹೊರಗೆಡಿಸಬಹುದಾಗಿತ್ತು. ಭುತಕಾಲದ ತಪ್ಪು ಒಪ್ಪುಗಳನ್ನು ಹೆಕ್ಕಿಯನ್ನದೆ ಗೋತ್ರವೆನ್ನದೆ, ಕಕ್ಕಿಯನ್ನದೆ ಪಕ್ಕವೆನ್ನದೆ "ಜೀವಾದಾನವೆಂಬ" ರೆಂದು ಅಗಲಬೇಡಿತು. ಅದಕ್ಕೆ ಪ್ರಭುತ್ವದವರುತ್ತರವೇನೋ! ನಾಲ್ವರನ್ನೂ, ಗಲ್ಲಿಗೇರಿಸಿದ್ದು! ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಉಭಯಪಕ್ಷದವರ ಸ್ನೇಹಸಂಧಾನ ಸಮಯದಲ್ಲಿ, ಪ್ರಭುತ್ವದವರ ಈ ವರ್ತನದ ಪರಿಣಾಮವು ಹೇಗೆ ಕೊನೆಗಾಣುವುದೋ ಊಹಿಸಲಾಗದು.

ದನಕೆಟ್ಟಿ ವುಂಟಾದ ನಾಲ್ವರೂ ಪಡೆಗಾಲದಲ್ಲಿ

"ನಾವು ಅನಾಮಧೇಯರಾಗಿದ್ದೆವು. ಈ ಅತ್ಯಾಯ ಮರಣದಿಂದನಿಯಿಂದ ನಾವು ಅಮರತ್ವಹೊಂದಿದೆವು. ನಾವು ಆನಂದದಿಂದ, ನಗೆನೊಗದಿಂದ ಧೈರ್ಯದಿಂದ ಸಾವನ್ನು ಅಪ್ಪಿದೆವೆಂದು ನಮ್ಮ ಭಾರತೀಯರಿಗೆ ತಿಳಿಸಿ ನಮ್ಮ ಜೀವಿತಾವಶೇಷ ಭೌರವ ಜನಾಂಗದ ಸ್ವಾತಂತ್ರ್ಯ, ಸಮೃದ್ಧಿಯಲ್ಲಿ ಭಾರತೀಯ ಜಯಲಕ್ಷ್ಮಿಗೆ ಅಲ್ಪಸ್ವಲ್ಪವಾದರೂ ಸಹಾಯವಾದಲೆ ನಮ್ಮ ಸಾವು ನಿರರ್ಥಕವಲ್ಲವೆಂದು."

ಎಂಬುದಾಗಿ ಹೇಳಿದರೆಂದು ತಿಳಿಯುತ್ತದೆ. ಇದ ಸ್ಮಶಾನ ವೈರಾಗ್ಯವಲ್ಲ; ನಿರಂತಾ ವೇದಾಂತವಲ್ಲ. ಸತ್ಯಾಕ್ರಯಿಗಳ ಅವರಿಗೆ. —ವಿಶ್ವಬಂಧು

ಅಲಹಾಬಾದದ

ವರ್ಕಿಂಗ ಕಮೀಟಿಯ ಸಭೆಯು.

ಕಾಂಗ್ರೆಸ್ ವರ್ಕಿಂಗ್ ಕಮೀಟಿಯವರು ತಾ॥ ೨೧ ನೆಯ ದಿವಸ ಅಲಹಾಬಾದದಲ್ಲಿ ಸೇರಿ, ಮುಖ್ಯ ಪ್ರಧಾನ ವ್ಯಕ್ತಿಯಾದ ಸರಕಾರಿ ಧೋರಣವನ್ನು ವಿಷಯವಾಗಿ ವಿಚಾರಮಾಡಿ, ಆ ಬಗ್ಗೆ ಒಂದು ನಿರ್ಣಯವನ್ನು ಸರ್ವಾನುಮತದಿಂದ ಕೊಟ್ಟಿರುವದು ನಿಮಗೆ ತಿಳಿದಿರಬಹುದು.

ಹೀಗೆ ನಿರ್ಣಯವನ್ನು ಸರ್ವಾನುಮತದಿಂದ ಕೊಟ್ಟ ಮೇಲೆ ಕಾರ್ಯಕ್ಷೇತ್ರವು ಮುಂಬಯಿ ಪ್ರಾಂತದ ಪೂನಾ ಜಿಲ್ಲೆಯ ಶಾಸ್ತ್ರಿ ಮೊದಲಾದ ಪಂಡಿತ ಮೋತೀಲಾಲರಿಗೆ ಈ ರೀತಿಯಾಗಿ ಒಂದು ಕಾಗದ ಬರೆದರು.

"ನಾವು ಹೊಂಡಬೆನ ನಮ್ಮೊಡನೆ ಈ ವಿಚಾರವಿನಿಮಯ ಮಾಡಲು ನಿಮಗೆ ಏನೊಂದು ತೊಂದರೆ ಮಾಡಬೇಡಿರಿ"

ವರ್ಕಿಂಗ ಕಮೀಟಿಯ ಈ ಮೇಲಿನ ದನ್ನು ಪಜಾಂವಮಾಡಿ ಕಳುಹಿಸಿಕೆ ಅವರಿಗೆ ತಾ॥ ೨೨ ರಂದು ಉತ್ತರ ಕೊಟ್ಟರು.

"ನಾವು ಈ ಬಗ್ಗೆ ಒಂದು ನಿರ್ಣಯವನ್ನು ನಿರ್ಧಾರ ಮಾಡಿದ ಕಾರ್ಯದಲ್ಲಿ ನಿಮ್ಮ ಸಹಕಾರ ಇಂದ ಮಾಡುತ್ತೇವೆ. ನೀವು ವ್ಯಕ್ತಪಡಿಸಿದಂತೆ ನಿಮ್ಮೊಡನೆ ವಿಚಾರವಿನಿಮಯ ಮಾಡಲು ನಮಗೆ ಸಭೆಯಲ್ಲಿ ಪಾಸಾದ ನಿರ್ಣಯವನ್ನು ಉಲ್ಲಂಘಿಸುವಲ್ಲಿ. ಕಾಂಗ್ರೆಸ್ ಚಳುವಳಿಯನ್ನು ಹಾಗೆಯೆ ಮುಂದಕ್ಕೆ ಸಾಗಿಸುವೆವು"

ಮೌಲಾನಾ ಮಹಮ್ಮದ ಅಲ್ಲಿಯವರು ನಿಧನ ಹೊಂದಿದ ಬಗ್ಗೆ ಶೋಕ ಪ್ರದರ್ಶನ ಕಾರ್ಯವು ವರ್ಕಿಂಗ ಕಮೀಟಿಯಲ್ಲಿ ಪಾಸುಮಾಡಲ್ಪಟ್ಟಿದೆ.

ಕಟ್ಟಿ. ಹಬ್ಬು, ಕಾರಣವಿಲ್ಲದೆ ಸೆರೆಮನೆಯಲ್ಲಿರುವವರಿಗೆ ಬಿಡುಗಡೆ

(ವಿಜಾಪುರದ ಸ್ವಂತ ಸಂದಿಗ್ಧಾರಿಂದ)

ವಿಜಾಪುರ, ಹುನಗುಂದ ಹಾಗು ಇಲಕಲ್ಲ ಈ ಊರುಗಳಲ್ಲಿ, ಕ್ರಿ ಲಾ. ಅವೆಂಡ ಮೇಟಣ ಪೆಸು ಅನ್ಯಾಯ ಬಂಧನಕ್ಕೊಳಗಾಗಿ ಶಿಕ್ಷೆಗೆ ಗುರಿಯಾದವರು ಬಿಟ್ಟಿಯು ಕಾಗದಕಾರ್ಯಾಲಯದವರು ಪುನರ್ವಿಚಾರಣೆ ಮಾಡಿ, ಅವರನ್ನು ನಿರ್ದೋಷಿಗಳಾಗಿ ನಿರ್ಣಯಿಸಿದಂದು, ಶ್ರೀ ಕಾಕಾ ಕಾ ಖಾಪರ್ಡೆ, ಜೋಶಿ ಗಣಪತಿಪಂತ, ಮಾಲೂಕರಪಂತ, ರಾಘವೇಂದ್ರ ಹುಬ್ಬಿ, ಕಮಲಾಬಾಯಿ ಕಟ್ಟಿ, ಸುಬ್ಬರಾವ ವ್ಯಟ್ಟಿ, ಈ ಜನರು ತಾ॥ ೨೩ ನೇ ದಿನದ ಇಳಿಯು ಜೈಲಿನಿಂದ ಬಿಡುಗಡೆ ಹೊಂದಿದರು. ಶ್ರೀ ಪ್ರಕಾಶ, ಕಾಮತಾಕಿ, ಗೋಖಲೆ ಮೊದಲಾದ ಇನ್ನೂ ೭ ಜನರು ವಿಜಾಪುರ ಜೈಲಿನಲ್ಲಿ ಇರುವರು. ಅವರಿಗೂ ಬೇಗನೆ ಬಿಡುಗಡೆ ಹೊಂದಿಬರಲಿ.

ಶ್ರೀ ಕಟ್ಟಿ, ಕಡಣಾಚಾರ್ಯರು ಬಹಳೇ ಅಶಕ್ತರಾಗಿದ್ದರು. ಅವರನ್ನು ನೋಟುರದಲ್ಲಿ ಕರೆದುಕೊಂಡು ಹೋಗಲು ದಳ ಬಾಗಿ. ಉಳಿದವರು ಮೆರವಣಿಗೆಯಿಂದ ಹೊರಟು ಬಂದರು.

ಬೆಳಗಾವಿ ಜಿಲ್ಲೆಯ ಆರೋಪಿಗಳಿಗೆ ಬಿಡುಗಡೆಯಾಯಿತು.

ಬೆಳಗಾವಿ ಜಿಲ್ಲೆಯಲ್ಲಿ ಕ್ರಿವಿನಲ್ ಲಾ. ಅವೆಂಡಮೆಂಟ ಕಾಯಿದೆಯ ಪ್ರಕಾರ ನ್ಯಾಯವಿಚಾರಣೆಗೆ ಗುರಿಯಾದ ೨೩ ಜನರ ಖಟ್ಲೆಯು ಕಾಗದ ಪತ್ರಗಳು, ಮುಂಬಯಿ ಹಾಯಕೋರ್ಟಿನವರಿಗೆ ತಾ॥ ೨೦ ಕ್ಕೆ ಪುನರ್ವಿಚಾರಣೆ ಮಾಡಿ, ಅವರೆಲ್ಲರೂ ನಿರ್ದೋಷಿಗಳೆಂದು ನಿರ್ಣಯಿಸಿ, ಅವರನ್ನು ಬಿಡುಗಡೆ ಮಾಡಲು ಆಜ್ಞೆ ಕೊಟ್ಟರು.

ಹುಬ್ಬಳ್ಳಿಯಲ್ಲಿ ಸರ್ವಾಧಿಕಾರಿಗೆ ಶಿಕ್ಷೆ

ಧಾರವಾಡ ಜಿಲ್ಲೆ ತಾಲೂಕು ಹುಬ್ಬಳ್ಳಿ ಕಾಲೂಕಿನ ಜನರು ಸರ್ವಾಧಿಕಾರಿಗಳಾದ ಶ್ರೀ ರಾಮಚಂದ್ರರಾವ ಪಾಂಡ್ಯರವರಿಗೂ ಹಾಗು ವರ್ಕಿಂಗ ಕಮೀಟಿಯಲ್ಲಿ ಕೊಟ್ಟಾದ ನಿರ್ಣಯವನ್ನು ಓದಿದ ಬಗ್ಗೆ ಶ್ರೀ ವಿರಭದ್ರಪ್ಪ ಎಂಬ ಕಾರ್ಯಾಗ್ರಹಿಗೂ ಪ್ರತ್ಯೇಕವಾಗಿ ೫ ವಾರಗಳ ಕಠಿಣಶಿಕ್ಷೆಯಾಗಿದೆ.

ಮುಂಬಯಿಯ ಪೊಲೀಸ ಅಧಿಕಾರಿಗಳು ತಾ॥ ೨೧ ನೆಯ ದಿನದ ರಾತ್ರಿ ಎಲ್ಲಿಯು ಬಜಾರ ಗೇಟು ಸ್ಟ್ರೀಟ್‌ನಲ್ಲಿ ಎಷ್ಟ ಕಾಂಗ್ರೆಸ್ ಆಫೀಸಿಗೆ ಮುತ್ತಿಗೆಹಾಕಿ ೧೩ ಜನರನ್ನು ಸೆರೆಹಿಡಿದು ಕೊಂಡು ಹೋದರು.

ಕಾನವಾರ ಜಿಲ್ಲೆಯಲ್ಲಿ ಪೊಲೀಸರ ಪುಂಡಾಟಿಕೆ

ಮೆಣಸಿನ ಶ್ರೀ ಸುಬ್ರಾಯ ಗೌಡರ ಯವರು ಒಂದು ದಿವಸ ರಾತ್ರಿ ಚಿಕ್ಕಡಿಯಲ್ಲಿ ಕುಳಿತುಕೊಂಡು ತಮ್ಮ ಊರಿಗೆ ಶಿರ್ಸಿಗೆ ಹೊರಟಿದ್ದರು. ಶಿರಸಿಯು ಇನ್ನೂ ನಾಲ್ಕು ಮೈಲು ದೂರ. ಇವರು ಗಾಡಿಯನ್ನು ಹಿಂದಿನ ಗಾಡಿ ಬರಲೆಂದು ಗಾಡಿಯನ್ನು ನಿಲ್ಲಿಸಿ ಅಲ್ಲಿಯೇ ನಿದ್ದೆ ಹೋದನು. ಮಧ್ಯರಾತ್ರಿಯು ಸುಮಾರು ಕ್ಕೆ ಫೌಜದಾರರು ೨೦ ಪೊಲೀಸರೊಂದಿಗೆ ಮೆಣಸಿನಿಂದ ಬಂದರು. ಪೋಲೀಸರು ಗಾಡಿ, ಎತ್ತುಗಳನ್ನು ಮಾರ್ಗದಲ್ಲಿ ತಡಿಬಿಟ್ಟೀಯಾ" ಎಂದು ಗದರಿಸಿ ಗಾಡಿಯ ಆಳಿಗೆ ಬೆಕ್ಕಿನಂತೆ ಹೊಡೆದರು. ಗಾಡಿಯೊಳಗೆ ಮಲಗಿದ್ದ ಶ್ರೀ ಗೋಳಿಯವರಿಗೂ ಹೊಡೆಬಿದ್ದಿವು ಶ್ರೀ ಗೋಳಿಯವರು ಗಾಬರಿಗೊಂಡು ಎದ್ದು ಯಜಮಾನ ಕೊಕೆಯು ಸ್ಟೇರಿಂಗ್ ಎಂದು ಕೇಳಿದರು. ಇಳಿಗಾಡಿಯಿಂದ; ಇಲ್ಲದಿದ್ದರೆ ಮೆಟ್ಟಿನಿಂದ ಜೊಕೆಯುತ್ತೇನೆಂದು ಪೋಲೀಸನು ಗದ್ದರಿಸಿದನು. ಗೋಳಿಯವರು ಕೆಳಗಿಳಿದರು. ಒಬ್ಬನು ಹೊಡೆಯುತ್ತಿರುವಂತೆ ಹೊಡೆದನು ಇನ್ನೊಬ್ಬನು ಒಂದೂಕಿನ ಮೊನೆಯಿಂದ ತಿವಿದನು. ಮತ್ತೆರಡು ಬಂದೂಕಿನ ಗೋಳಿಯವರ ಫೌಜದಾರರಿಗೆ ದೂರಿಕೊಂಡರು. ಅವನು ಅತ್ತ ಲಕ್ಷ್ಯಕೊಡಲಿಲ್ಲ ಅಷ್ಟರಲ್ಲಿ ಹಿಂದಿನ ಗಾಡಿಯವರು ಅಲ್ಲಿಗೆ ಬಂದು ಮುಟ್ಟಿದರು ಗೋಳಿಯವರ ಕಷ್ಟವನ್ನು ನೋಡಿ, ಅವರನ್ನು ಬಿಡಿಸಹೋದರು. ಪೋಲೀಸರು ಅವರ ಮೇಲೆ ತಿರುಗಿಬಿದ್ದರು. ಗುಂಪು ಹಿಡಿದರು. ಅವರು ಅಂಜಿ ಓಡಿ ಹೋದರು. ಗೋಳಿಯವರು ಎಚ್ಚರದಪ್ಪಿ ಬಿದ್ದರು ಫೌಜದಾರರೂ ಪೋಲೀಸರು ಮುಂದೆ ಸಾಗಿದರು. ಆನೇಕ ಗಾಡಿಯವರು ಬಂದು ಗೋಳಿಯವರಿಗೆ ಉಪಚಾರ ಮಾಡಿ, ಅವರನ್ನು ಶಿರ್ಸಿಗೆ ಕರೆದು ಕೊಂಡು ಹೋದರು.

ಜೈಲಿನಿಂದ ಬಿಟ್ಟು ಬಂದಿರುವ ಪಂಡಿತ ಮದನಮೋಹನ ಮಾಲವೀಯರಿಗೆ ಕಫ್ಯೂಕೆಯು ಪ್ರಧಾನಿಸಿ ಕಟ್ಟಿದೆ. ಇನ್ನು ಒಂದು ತಿಂಗಳ ವರೆಗೆ ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕಾಗಿ ಡಾಕ್ಟರರು ಅವರಿಗೆ ಹೇಳಿದ್ದಾರೆ.

ಸುಬಾಶ ಬೋಸರು ಪೊಲೀಸ ಸಾಹೇಬರಿಗೆ ಎದುರುತ್ತರ ಕೊಟ್ಟರು.

ಕಲಕತ್ತೆಯ ಪ್ರಸಿದ್ಧ ಕಾಂಗ್ರೆಸಾ ಮುಖಂಡರಾದ ಶ್ರೀ ಸುಬಾಸಚಂದ್ರ ಬೋಸರು ಕರದ ವಾಲಡಾಕ್ಕೆ ಹೊರಟಿದ್ದಾಗ ಅವರು ನಾರಾ ಎಂಬ ಸ್ಟೇಶನದಲ್ಲಿ ವಾಲಡಾದ ಪೊಲೀಸ ಪಸಿಂಟೆಂಡೆಂಟರು ಅವರಿಗೆ ಭೆಟ್ಟಿಯಾಗಿ "ಬೋಸರೆಂದರೆ ನೀವೇ ಏನು?" ಎಂದು ಇವರಿಗೆ ಕೇಳಿದರು. ಶ್ರೀ ಬೋಸರು "ಅಹುದು" ಎಂದು ಉತ್ತರ ಕೊಟ್ಟರು. ಬಳಿಕ ಪೊಲೀಸ ಸಾಹೇಬರು, ವಾಲಡಾ ಜಿಲ್ಲೆಯಲ್ಲಿ ಕಾಲಿಡಕೂಡದೆಂಬ ಆಜ್ಞೆಯ ಮೇಲೆ ಕೊಡಿಸಲ್ಪಟ್ಟ ಗಳಿಕೆ ನೆಯ ಕಲಮಿನ ನೋಟೀಸನ್ನು ಇವರ ಕೈಯಲ್ಲಿ ಕೊಟ್ಟರು. ಶ್ರೀ ಬೋಸರು ಅದನ್ನು ಓದಿಕೊಂಡರು.

ಶ್ರೀ ಬೋಸರು ನೋಟೀಸನ್ನು ಓದಿ ಮುಗಿಸುವದರೊಳಗೆ ಪೊಲೀಸ ಸಾಹೇಬರು "ಆಜ್ಞೆಯಂತೆ ನಡೆದ ಕೊಳ್ಳುವಿರಾ" ಎಂಬುದಾಗಿ ಇವರಿಗೆ ಕೇಳಿದರು.

"ಈ ಜಿಲ್ಲೆಯನ್ನು ಬಿಟ್ಟು ಹೊರಟು ಹೋಗಲು ಕಳಿಸುವಿರಿ. ನನಗೆ ಕರೆತಂದ ಹಾಗಲು ಸ್ಪೆಶಲ್ ಟ್ರೇನ ಕಂಪನಿಯವರಿಗೆ ಹೇಳಿ ಏರ್ಪಾಡು ಮಾಡಿಸಿರಿ" ಎಂಬುದಾಗಿ ಶ್ರೀ ಬೋಸರು ಮುಗುಳ್ನಗೆಯಿಂದ ಉತ್ತರ ಕೊಟ್ಟರು.

ಪೊಲೀಸ ಸಾ.— ಇನ್ನು ಮೇಲೆ ಬರುವ ಗಾಡಿಯ ದರ್ಜೆಯನ್ನು ಕರೆಸಿಕೊಂಡು ಹೋಗಬೇಕೆನ್ನುವಿರಿ. ಅದಕ್ಕೆ ಎಂತಹ ವರ್ತಮಾನವಿರಾ ಹೇಳಿ ಹೇಳಿರಿ.

ಬೋಸರು— ನಾನು ವಾಲಡಾ ಜಿಲ್ಲೆಯಲ್ಲಿ ಸಾರ್ವಜನಿಕ ಶಾಂತತಾ ಭಂಗವಾಗುವದಾಗಿ ಅಪ್ಪಣೆಯಲ್ಲಿ ಬರೆದಿದೆ. ನಾನು ಕಳ್ಳ ಇಲ್ಲವೆ ದರೋಡೆಗಾರನಿದ್ದೇನಾ ತಿಳಿದು ನಿರೋ ಹೇಗೆ?

ಪೊ. ಸಾ.— ಅಪ್ಪಣೆಯಂತೆ ವರ್ತಿಸಿ ಜಿಲ್ಲೆಯನ್ನು ಬಿಟ್ಟು ಹೊರಟುಹೋಗಿರಿ ಇಲ್ಲವೆ ಅದರ ವಿರುದ್ಧ ವರ್ತಿಸಿ ಸೆರೆಯಾಳಾಗಿರಿ.

ಬೋಸರು— ನನಗೆ ಕಡಿಮೆಯೇ ನೆಟ್ಟಗೆ ಕಾಣ್ಲಿಲ್ಲವಂತೆ ಅಂದರೆ ಪ್ರತಿಯೊಬ್ಬ ಭಾರತೀಯನು ಈಗ ಒಂದಿಲ್ಲೊಂದು ರೀತಿಯಿಂದ ಸೆರೆಯಲ್ಲಿಯೇ ಇರುತ್ತಾನೆ.

ಪೊಲೀಸ ಸಾಹೇಬರು ತಿಪ್ಪೆಸ್ವಾಮಿ ಸ್ಟೇಟ್ಸಮನ್ ಕೋಣ ವಿಚಾರಿಸಿಕೊಂಡು ಬಂದು ಅಪ್ಪಣೆಯಂತೆ ನಡೆದುಕೊಳ್ಳುವಿರಿ" ಎಂದು ಬೋಸರಿಗೆ ಪ್ರಶ್ನೆ ಮಾಡಿದರು. ಬೋಸರು "ನಡೆದುಕೊಳ್ಳುವದಿಲ್ಲ" ವೆಂದು ಉತ್ತರ ಕೊಟ್ಟರು.

ಗಾಡಿಯು ಇಷ್ಟರಲ್ಲಿಯೇ ಸ್ಟೇಶನ್ ಬಿಟ್ಟಿತು. ಸಾಹೇಬರು ಗಾರ್ಡನಿಗೆ ಗಂಟ್ಟೆ ಮಾಡಿ ಗಾಡಿಯನ್ನು ನಿಲ್ಲಿಸಿದರು. ಪತ್ರ ಬರೆಯುವ ಬೋಸರ ಸಿನಾನು ಕೈದು ಮಾಡುವದರಲ್ಲಿ ಒಂದಿದೆಯೊಂದು ಇವರಿಗೆ ಹೇಳಿದರು.

ಪೊಲೀಸರು:— ಕಬ್ಬಿಣ ಕೊಯ್ಯುವ ಹೇಗೆ ಕರೆಯ ಬೇಕೆಂಬುದು ನಿನಗೆ ಗೊತ್ತಿಲ್ಲವೋ

ಪೊ. ಸಾ.:— ಈ ಏನಂದಿತ?

ಬೋಸರು— "ಏನು ಬೋಸ" ಎಂದು ಕರೆಯ ಬೇಕೆಂದಿ?

ಪೊ. ಸಾ.— ನಿಮ್ಮ ಯುರೊಪಿಯನ್ನರಿಗೆ ಹಾಗೆ ಕರೆಯುತ್ತಿದ್ದೆ.

ಬೋಸರು— ನಾನು ಹಿಂದೂ ಇದ್ದೇನೆಂ "ಸುಬಾಸ ಬಾಬೂ" ಎಂದು ಕರೆಯ ಬೇಕಾಗಿತ್ತು.

ಬಳಿಕ ಪೊಲೀಸ ಸಾಹೇಬರು ಅವನು ವೇಟಿಂಗ್ ರೂಮಿಗೆ ಕರೆದುಕೊಂಡು ಹೋಗಿ, ಮ್ಯಾಜಿಸ್ಟರ ಮುಂದೆ ವಿಚಾರಣೆಗೆ ನಿಲ್ಲಿಸಿದರು ಮತ್ತು ಪೊಲೀಸ್ ಗಾರ್ಡ ನೆಯ ಕಲಮಿನ ನೆನ್ನೆಯ ಮೇಲೆ ಅಪರಾಧ ಹೊರಿಸಿ, ಅವರಿಗೆ ಒಂದಿನಗಳ ಸಾದಾ ಶಿಕ್ಷೆ ವಿಧಿಸಿದ್ದರು. ಶ್ರೀ ಬೋಸ ವಿಚಾರಣೆಯಲ್ಲಿ ಯಾವ ತರದಿಂದಲೂ ಭಾಗ ತೆಗೆದುಕೊಳ್ಳಲಿಲ್ಲ.

ಬ್ರಿಟೀಶರ ಬಂಡವಾಳ ಹೊರಬಿತ್ತು

"ಇಟಲಿ ಪ್ರತಿನಿಧಿಯು ಮಿ. ಚರ್ಚಹಿಲ್ಲನನ್ನು ಕಂಡುಕೊಂಡ, ಏನು ವ್ಯತ್ಯಾಸವೇ ನಾಲ್ಕಾರು ಬಂಡೀಗಾಲಿಗಳು ರಷ್ಯನಿನಲ್ಲಿ ಸೈನ್ಯ ಪಡಿಸಿದ ಸರಕಾರಿ ಧೋರಣೆಯ ಸಂಬಂಧವಾಗಿ ಅವನ ಅಭಿಪ್ರಾಯ ಕೇಳಿಕೊಂಡನು. ಅವರು ಕೆಳಗಿನಂತೆ ಕೇಳಿದರು.

ಬಂಡೀಗಾಲಿಗಳು ಪರಿಕಲ್ಪಿಸಿದ ಮುಕ್ತಾಯ ಸಮಯದಲ್ಲಿ ಜರುಗಿದ ಭಾಷಣಗಳು ಬಹು ಸಂಖ್ಯಾತ ಬ್ರಿಟಿಶರಿಗೆ ಸಮ್ಮತವಾಗಿರುವವಲ್ಲಿ. ಹಿಂದುಸ್ಥಾನದ ಪ್ರಶ್ನೆಯನ್ನು ಕೆಲವಾದರೂ ಮಾತಿ ಬೇಗನೆ ಬಿಡಿಸುವದು ಬ್ರಿಟಿಶರಿಗೆ ಬೇಕಾಗಿತ್ತು. ಬ್ರಿಟಿಶ ರಾಷ್ಟ್ರವು ಅತ್ತಿ ಜರುಗಿದ್ದಕ್ಕೆ ತನ್ನ ಒಪ್ಪಿಗೆಯನ್ನು ಕೊಡುವದೆಂದು ನನಗೆ ಎನ್ನುವದಿಲ್ಲ. ಒಪ್ಪಿಗೆಯನ್ನು ಕೊಟ್ಟಲ್ಲಿ, ಬ್ರಿಟಿಶ ರಾಷ್ಟ್ರವ ದೊಡ್ಡಿಪ್ಪನ ಹಾಗು ಅಧಿಕಾರಕ್ಕೆ ಬಂದು ಬಾರದೆಂಬುದರಲ್ಲಿ ಸಂದೇಹವಿಲ್ಲ.

ಬ್ರಿಟಿಶರ ಅಭಿಪ್ರಾಯಗಳು ಪರಿಷತ್ತಿನಲ್ಲಿ ಚನ್ನಾಗಿ ಮಂಡಿಸಲ್ಪಟ್ಟಿಲ್ಲ. ಮುಂದಿನ ಕಾರ್ಯಕ್ಕೆ ವಿಘ್ನ ಬಂದಿತೆಂಬ ಅಂಜಿಕೆಯಿಂದ ಹಳ್ಳಿ ಬಾಧ್ಯತೆಗಳ ಸಂಬಂಧವಾಗಿ ಕೆಲವು ನಿಷ್ಕರ್ಷದ ವಿಚಾರಗಳು ಪ್ರಭಿಸ್ಫುಟವಾಗಿ ಕಾಣಿಸಿಕೊಳ್ಳಲಿಲ್ಲ ಕಛೇರಿಯ ಮುಂದೆ ಬಿದ್ದಿದ್ದರೂ ಅವು ಕಾಲ ಬೆಳೆಯವರೆಗಾಗಿ ಬಿಡಿಸಿಕೊಟ್ಟಿಲ್ಲ

ಈ ಸಲವೂ ಕಾಲವು ಕಳೆದು ಹೋಗಿಲ್ಲ ಇಂಡಿಯಾಗಾಲಿ ಹಿಂದುಸ್ಥಾನರಕ್ಷಣಾಲಾಲಿ ಮುಂತಾದ ಪರಿಷತ್ತು ಸೇರಿಕೆಯಾಗುವದಿದೆ. ಬ್ರಿಟಿಶ ರಾಷ್ಟ್ರವು ತನ್ನ ಅಭಿಪ್ರಾಯಗಳನ್ನು ಆಗ ಧೈರ್ಯದಿಂದ ಸ್ಪಷ್ಟವಾಗಿ ಭಾರತೀಯರ ಮುಂದೆ ಮುಂಡಿಸಿ ಬಿಡಬೇಕು.

ಕನ್ನಡ್ಲಗನ್ನು ಸಾಯುಹೊಡೆಯುವದೇ ನನ್ನ ಉದ್ದೇಶವಾಗಿತ್ತು.

ಲಾಹೋರಿನ ಕ್ರಿಶ್ಚಿಯನ್ ಕರ್ಟಿಸರ ಹೆಂಡತಿಯನ್ನು ಕರಾರಿಯಿಂದ ಇರಿದು ಕೊಲೆ ಮಾಡಿದ ಅಪರಾಧಕ್ಕಾಗಿ ಸೆರೆಹಿಡಿಯಲ್ಪಟ್ಟ ಶ್ರೀ ಸಜ್ಜನಸಿಂಗ ಖಟ್ಟೆಯ ವಿಚಾರಣೆಯು, ಕಳೆದ ವಾರದ ಕೊನೆಯ ವಿಚಾರಣೆಯಲ್ಲಿ ಆರಾಪಿ ವ್ಯಾಜಿಸ್ಟ್ರೆಟರಾದ ಮಿಸ್ಟರ್ ಪರ್ಸಿವಲ್ ಅವರ ಮುಂದೆ ಪ್ರಾರಂಭವಾಯಿತು. ಮೊದಲು ಕ್ರಿಶ್ಚಿಯನ್ ಕರ್ಟಿಸ್, ಸಭಾ ಇನಸ್ಪೆಕ್ಟರ ಮೆಹರ್ ಅಲಿಖಾನ, ಇನಸ್ಪೆಕ್ಟರ ಅಲ್ಲಿಕು ಸೇನ ಮೇಜರ ಪವರ ಸಾಕ್ಷಿಗಳ ಒವ್ವು ಬಳಿಕ ಶ್ರೀ ಸಜ್ಜನಸಿಂಗರು ಜವಾಬು ಹೇಳಿಕೆಯನ್ನು ಕೊಟ್ಟರು. ಅವರು ತಮ್ಮ ಜವಾಬಿನಲ್ಲಿ ಕೆಳಗಿನಂತೆ ಹೇಳಿದರು.

"ಲಾಹೋರ ಕ್ಯಾಂಟೋನಮೆಂಟಿನಲ್ಲಿ ಕನ್ನಡಿಗರಲನ ಸಾಯಿಸಿಹಿಡಿಯುವದಕ್ಕಾಗಿಯೇ ನಾನು ಲಾಹೋರಿಗೆ ಬಂದೆ. ಕರ್ನಲ್ಲರು ಕ್ರಿಶ್ಚಿಯನ್ ಕರ್ಟಿಸರ ಬಂಗಲೆಯ ಬಳಿಯೇ ಇರುತ್ತಿರುವದರಿಂದ ತಿಳಿದು ಒಂಟಿತು ಇವ್ವರಿಂದ ಬಂಗಲೆ ಎಲ್ಲಿ ಒಳಕೊಕ್ಕೆ ವಿ.ಸಿನ್ ಕರ್ಟಿಸ್ಸನ್ನು ಕರ್ತವ್ಯಾಣದಿಂದ ಗಾಯ ಪಡಿಸುವೆ ಬಳಿಕ ಕೆಲವು ಲನು ಹಡಿಸಲು ಸೌಕರ್ಯವಿಲ್ಲ ಅಡ್ಡಾಡಿ ಅವರ. ಸಿಗಲಿಲ್ಲ. ಮತ್ತೆ ತಿರುಗಿ ಬಾವ ಮಿಸೆಸ್ ಕರ್ಟಿಸ್ ಹಾಗು ಅವರ ಇಬ್ಬರು ವಿ.ಳ್ಳನ್ನು ಗಾಯಪಡಿಸಿದೆ. ಜಾಲಿಯಾಕ್ಕ ವಾಲಾ ಬಾಗ ಮತ್ತು ಪೇಶಾವರಗಳಲ್ಲಿ ಯುರೋಪಿಯನ್ನರು ಚಿಕ್ಕ ಚಿಕ್ಕವರನು ಕೊಂದಿದ್ದು ಜ್ಞಾಪಕಕ್ಕೆ ಬಂತು. ಚಿಕ್ಕವರು ಳೊಂದು ಅದು ಪೆದ್ದು ತೀರಿಸಿಕೊಳ್ಳದೇಂದೆ. ಅದರೆ ಚಿಕ್ಕವರನ್ನು ಕೊಲ್ಲುವದು ಸರಿಯಾಗಿ ತೋರಲಿಲ್ಲ. ಕನ್ನಡ್ಲಗನ್ನು ಹುಡುಕಲು ಓಡಿದೆ. ಪಿಕೆಟಿಂಗ್‌ಕ್ಕಾಗಿ ನನಗೆ ಈಗೊನ್ನೆ ಶಿಕ್ಷೆಯಾಗಿತ್ತು ಪಿಕೆಟಿಂಗ ಮಾಡಿದ್ದು ಕಾಂಗ್ರೆಸಿನ ಪರವಿಯಿಂದ ಅಲ್ಲ. ಸಿಪಸಗಂಜ ಗೋಲೀಬಾರಿನ ಅನ್ಯಾಯವನ್ನು ನೋಡಿ ಯಾವ ಸೀಖರನೂ ಸ್ವಸ್ಥ ಕೂಡುವಂತಿರನು.

ಮುಖ್ಯಪ್ರಧಾನರ ಸ್ವರಾಜ್ಯದ ಕಲ್ಪನೆ

ಕಾಂಗ್ರೆಸ್ಸಿನ ದಿವಸ ಮುಖ್ಯ ಮಂತ್ರಿಗಳಾದ ಮಿ. ಮ್ಯಾಕ್‌ಡೋನಾಲ್ಡ್‌ರು, ಹಿಂದುಸ್ಥಾನದ ಭಾವೀ ರಾಜ್ಯಘಟನೆಯ ವಿಷಯವಾಗಿ ಬಂಡೀ ಗಾಲಿಯ ಪರಿಸ್ಥಿತಿಯಲ್ಲಿ ಭಾಷಣ ಮಾಡಿ, ಸರಕಾರಿ ಧೋರಣೆಯನ್ನು ವ್ಯಕ್ತಪಡಿಸಿದರು. ಅವರ ಭಾಷಣದ ಸಾರವನ್ನು ಕೆಳಗೆ ಕೊಟ್ಟಿದೆ.

ಇನ್ನು ಸ್ವಲ್ಪ ಅವಧಿಯಲ್ಲಿಯೇ ಪರಿಷತ್ತಿನ ಕಾರ್ಯವು ಮುಗಿಯಬೇಕಾಗಿದೆ. ಇಂತಹ ದೊಡ್ಡ ಪರಿಷತ್ತಿಗೆ ನಾನು ಅಧ್ಯಕ್ಷನಾದದ್ದು ನನ್ನ ಜೀವಿತದಲ್ಲಿ ಇದೇ ಮೊದಲನೆಯದಾಗಿದೆ. ಪರಿಷತ್ತಿನ ಪ್ರಾರಂಭದ ಕಾಲದಲ್ಲಿ ಭಾಷಣ ಮಾಡುವಾಗ "ನನ್ನೊಡನೆ ಸಹಕಾರ ಮಾಡಿ, ಸ್ವತಂತ್ರ ರಾಜ್ಯಸಂವಿಧಾನವನ್ನು ಹೊಂದಲು ಇಂದಿರುವಿರಾದ್ದರಿಂದ, ನಮ್ಮ ವಿನಾ ಬೇರೆ ಯಾರೂ ಏನೂ ಆಗಬೇಕಾಗಿಲ್ಲವೆಂದು" ನಾನು ನಿಮಗೆ ಹೇಳಿದ್ದೆನು. ಹೀಗೆ ಹೇಳಿದ್ದೆ ತಪ್ಪಾಗಿಲ್ಲ ಹೌದು. ನನಗೆ ತೋರುತ್ತದೆ. ಹಿಂದುಸ್ಥಾನಕ್ಕೆ ತಿರುಗಿ ಹೋಗಿ ನೀವು ಕೆಲಸಮಾಡಿ ಹೇಳುವಿರಾಗಿ ನಾನು ಆಶಿಸುತ್ತೇನೆ.

"ಬ್ರಿಟಿಶರು ನಮಗೆ ಯೋಗ್ಯ ಅವರ ಸತ್ಕಾರಮಾಡಿದರು. ನಾವು ನನ್ನ ಪ್ರಶ್ನೆಯಷ್ಟನ್ನು ಅವರ ಮುಂದೆ ಮಂಡಿಸಿದೆವು. ಅವರು ಶಾಸ್ತ್ರ ಪ್ರಶ್ನೆಯನ್ನು ನಮ್ಮ ಮುಂದೆ ಮಂಡಿಸಿ ಪ್ರಧಾನ ಕಾರ್ಯವಾಹಿ ಪೂರ್ವಕವಾಗಿ ವಿಚಾರ ಮಾಡಿದೆವು. ಅಲ್ಲಿಯ ವಿಚಾರದ ಮೇಲೆಯೆ ಒಂದು ತೀರ್ಮಾನವು ಆಯಲಂಬಿಸಿದೆ"

ನನಗೆ ತೃಪ್ತಿಯಿದ್ದದ್ದನ್ನು ನಾವು ಮಾಡಿ ತೀರುವೆವೆ. ನೀವು ಹಿಂದುಸ್ಥಾನಕ್ಕೆ ಹೋಗಿ ಇಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ ನಿಮಗೆ ಇನ್ನೂ ಸಮ್ಮತಿ ಪಡೆದುಕೊಳ್ಳಬೇಕಾಗಿದೆ. ಮತ್ತು ಫಾಲ್ಸ್‌ಮೆಂಟಿನ ಒಪ್ಪಿಗೆ ತೆಗೆದುಕೊಳ್ಳಬೇಕಾಗಿದೆ.

ಸಾಯಮನ್ ಕಮೀಶನ್ ನಿಯಮಿಸಲ್ಪಟ್ಟಿದ್ದಿಲ್ಲವಾದರೆ ಈಗ ಆದಷ್ಟು ಕಾರ್ಯವು ಆಗುತ್ತಿರಲೇ ಇಲ್ಲ. ಆದ್ದರಿಂದ ಭಾರತೀಯರು ಸಾಯಮನ್ ಕಮೀಶನ್ನಿಗೆ ತುಂಬಾ ಋಣಿಯಾಗಿರಬೇಕು. ಸಾಯಮನ್ ಕಮೀಶನದ ರಿಪೋರ್ಟು ಬರದ್ದಿರೆ. ಬ್ರಿಟಿಶರ ಪಾರ್ಲಿಮೆಂಟ್ ಸಭ್ಯರುಗಳು ಅಭಿಪ್ರಾಯದ ವಿಚಾರವನ್ನು ವಿಸ್ತೃತವಾಗಿ ವಿಚಾರಮಾಡಲಿಕ್ಕೆ ಸಿದ್ಧರಾಗುತ್ತಿದ್ದಿಲ್ಲ. ಹಿಂದುಸ್ಥಾನದ ಮಹತ್ವದ ಪ್ರಶ್ನೆಯನ್ನು ಇಲ್ಲಿ ತಂದಿರುವದಿಲ್ಲವೆಂದು ಹೇಳಲು ನನಗೆ ಒಹಳೇ ವಿಷಾದವಾಗುತ್ತದೆ

ಜನರಲ್ಲಿ ದ್ವೇಷವನ್ನು ಹುಟ್ಟಿಸಲು ಪ್ರಯತ್ನಿಸುವವನು ಸ್ವತಂತ್ರಶ್ರೀ ಜಳವಳಿಯನ್ನು ಮುಂದಕ್ಕೆ ಸಾಗಿಸಿಕೊಂಡು ಹೋಗಲು ತಕ್ಕವನಾಗಿರುವದಿಲ್ಲ ಜನರಲ್ಲಿ ಸಂಶಯವನ್ನು ಹರಡಿ, ಅವರವರಲ್ಲಿ ಅನೈಕ್ಯತೆಯನ್ನುಂಟುಮಾಡುವವನು ಜನರಿಗೆ ಎಂದೂ ಹಿತಮಾಡಲಾರನು.

ಬ್ರಿಟಿಶ ಜನರು ಹಿಂದೂ ಅಥವಾ ಬೇರೆ ಜಾತಿಯ ಒಬ್ಬರ ಪಕ್ಷಪಾತ ಮಾಡುವದಿಲ್ಲ. ನಮ್ಮ ಸ್ವಾರ್ಥಸಾಧಿರುವದಕ್ಕಾಗಿ ಮತಭೇದದ ಉಪಯೋಗಮಾಡುವೆಂಬುದು ನಮ್ಮ ಇಚ್ಛೆಯಿಲ್ಲ. ಈ ಪರಿಷತ್ತಿನಿಂದ ನಿಮ್ಮ ನಿಮ್ಮಲ್ಲಿಯ ಮತಭೇದವು ಈಗ ಎಷ್ಟೋ ಕಿಲ್ಲದಂತಾಗಿದೆ. ನೀವೆಲ್ಲರೂ ಏಕಮತರಾಗಿದ್ದೆ ಕೆಂಬುದೇ ನಮ್ಮ ಇಚ್ಛೆಯಾಗಿದೆ. ಆ ಬಗ್ಗೆ ವಿಚಾರಮಾಡಿ ನಿಮ್ಮ ನಿಮ್ಮೊಳಗೆ ನೀವು ಒಡಂಬಡಿಕೆ ಮಾಡಿಕೊಳ್ಳಬೇಕು.

ಹಿಂದುಸ್ಥಾನಕ್ಕೆ ಪೂರ್ಣ ಜವಾಬದಾರಿಯ ರಾಜ್ಯಪದ್ಧತಿಯನ್ನು ಕೊಡಬೇಕೆಂದೇ ಬ್ರಿಟಿಶಸರಕಾರವು ಇಚ್ಛಿಸುತ್ತಿರುವದು. ಗವರ್ನರ ಜನರಲ್ ಕೌನ್ಸಿಲವು ಲೆಜಿಸ್ಲೇಟಿವ್ ಅಸೆಂಬ್ಲಿಗೆ ಜವಾಬದಾರವಾಗಿರಬೇಕೆಂಬ ತತ್ವವು ನಮಗೂ ಒಪ್ಪಿಗೆಯಾಗಿದೆ. ಆದರೆ ಸಂಸ್ಥಾನ ಮತ್ತು ಪ್ರದೇಶದ ಕಾರಭಾರ ಈ ವಿಷಯಗಳು ವೈಸರಾಯರಿಗೆ ಅಧೀನವಾಗಿರತಕ್ಕದ್ದು ಅವಶ್ಯವಾಗಿದೆಯೆಂದು ಎನಿಸುತ್ತಿದೆ. ಕಾಲಟ್ಟು ಖಾತೆಗಳ ಹೊರತು, ಹಿಂದುಸ್ಥಾನದ ಹಣವನ್ನು ತನಗೆ ತೋರಿದಂತೆ ವೆಚ್ಚಮಾಡುವ ಹಾಗೂ ಕಾರಬಾರಿಯ ಹಣಕಾಸಿನ ವಿಷಯ ಮಾಡುವ ಅಧಿಕಾರಿಗಳು ಅಸೆಂಬ್ಲಿಗೆ ವಶವಾಗಿರತಕ್ಕದ್ದು.

ಸದ್ಯದ ಸ್ಥಿತಿಯಲ್ಲಿ ವೈಸರಾಯರ ಕೌನ್ಸಿಲದಲ್ಲಿ ದ್ವಿದಳ ಪದ್ಧತಿಯು ಇರುವದು ಸಹಜವೆ. ಇದೇಕಾರಣದಿಂದ ಪರೋಕ್ಷ ಮಾರ್ಗದಿಂದ ಪ್ರಯತ್ನವಾಡುವದು ಅವಶ್ಯವಾಗಿದೆ. ಗವರ್ನರ ಜನರಲ್ಲರಿಗೆ, ವಿಶೇಷ ಅಧಿಕಾರವಿರುವದು ಅವಶ್ಯವಿದ್ದಾಗ, ಮಂತ್ರಿಮಂಡಲದವರು ರಾಜ್ಯ ಕಾರಭಾರದಲ್ಲಿ ಅಂಥ ಪ್ರಸಂಗ ಬಂದಾಗ ನೋಡಿಕೊಳ್ಳಬೇಕು. ಇಲಾಖೆಯ ಕಾರಭಾರದ ಜವಾಬ್ದಾರಿಕೆಗೆ ಪೂರ್ಣ ಜವಾಬ್ದಾರಿ ದೊರೆಯುವದೇ ಬ್ರಿಟಿಶ ಸರಕಾರದ ಧೋರಣವಿರುವದು. ಮತ್ತು ಗವರ್ನರರಿಗೂ ವಿಶಿಷ್ಟ ಪದ್ಧತಿಯದೆಶೆಯಿಂದ ಸ್ಪೇಶಲ್ ಅಧಿಕಾರವಿರಬೇಕು.

ವೈಸರಾಯರ ವಿನಂತಿಯನ್ನು ಮನ್ನಿಸಿ, ಕಾಂಗ್ರೆಸ್ ಜಳವಳಿಯು ಮುಂದುಡರು ನಮ್ಮ ಯೋಜನೆಗಳ ವಿಚಾರಮಾಡಿ ಅದು ಯಶಸ್ವಿಯಾಗುವಂತೆ ಏನಾದರೂ ಸೂಚನೆ ಮಾಡಿದರೆ, ಅವರೊಡನೆ ಸಹಕಾರ ಮಾಡಲು ನಾವು ಸಿದ್ಧರೇ ಇರುವೆವು.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿ ಸರ್ ಸಪ್ರೂ ರವರು ಕೇಳಿಕೊಂಡಿರುವರು. ಅದಕ್ಕೆ ನನ್ನ ಒಪ್ಪಿಗೆಯೇನೊ ಇದೆ. ಆದರೆ ಕಾಂಗ್ರೆಸ್‌ದವರು ತಮ್ಮ ಜಳವಳಿ ನಿಲ್ಲಿಸಿದಲ್ಲಿ ಮಾತ್ರ, ಸಪ್ರೂ ರವರ ವಿನಂತಿಯು ಮನಸ್ಸಾಗುವದು

ಬ್ರಿಟಿಶ ಅಧಿಕಾರಿಗಳನ್ನೇ ಹದ್ದುಪಾರು ಮಾಡಬೇಕು

ದಿಲ್ಲಿಯಲ್ಲಿ ಸೇರಿದ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಕಾಂಗ್ರೆಸ್ಸಿನೇತೃದಿವಸ "ಬಂಗಾಲ ಕ್ರಿಮಿನಲ್ ಲಾ ಅವೆಂಡಮೆಂಟ್ ಕಾಯಿದೆಯು ಪಸ್ಸಿವೆಂಟರಿಬಿಲ್ಲು" ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತ್ತು.

ಸರ್ ಹರಿಸಿಂಗ್‌ಗೌರ್ ಮೌಲವಿ ಮಹಮ್ಮದ ಯಾಕುಬ್ ಮುಂತಾದ ಮುಸಲ್ಮಾನ ಸದಸ್ಯರು ಈ ನಾಲ್ವರು ಮೊದಲು ಅಸೆಂಬ್ಲಿಯಿಂದ ಹೊರಗೆ ಹೋಗಿಯಾದ ಮೇಲು ಸಭಾಸದರು ತಡೆಗೊಟ್ಟು ಕಳಿಸದೇಕಾಗಿ ಹೇಳಿದರು. "ಬಂಗಾಲದಲ್ಲಿಯ ರಾಜ್ಯಕ್ರಾಂತಿಕಾರರನ್ನು ಹದ್ದುಪಾರು ಮಾಡಲು ಎರಿಕಾಂದಿನವರು ಉತ್ಸಾಹಗಿದ್ದರೆ ಅವರು ಮೊಲು ಬಂಗಾಲದಲ್ಲಿ ಅತಂತೊಷವನ್ನು ಹುಟ್ಟಿಸಿದ ಕಲವು ಬ್ರಿಟಿಶ ಅಧಿಕಾರಿಗಳನ್ನು ಹದ್ದುಪಾರುಮಾಡಬೇಕು." ಎಂದು ಡಾ. ಸಂಎರ್ಡಿಯವರು ತಿಳಿಸಿದರು.

ಬಳಿಕ ಸರ್ ಜೇಮ್ಸ ಕ್ರೈರಾವರು ಬಂಗಾಲದಲ್ಲಿ ಕಳೆದ ಎಂಟು ವರ್ಷಗಳಲ್ಲಿ ಭಯಂಕರಾಕಾರಗಳು ಸಂಭವಿಸಿವೆಯೆಂದೂ, ರಾಜ್ಯಕ್ರಾಂತಿ ಜಳವಳಿಯು ಕೇವಲ ಬಂಗಾಲದಲ್ಲಷ್ಟೇ ಇದೆ, ಇಡಿಲ ಹಿಂದುಸ್ಥಾನದಲ್ಲೆಲ್ಲ ಹಬ್ಬಿಲ್ಲೆಂದೂ ತಿಳಿಯೆಂದೂ ಹೇಳಿ, ಆ ಮಸೂದೆಯನ್ನು ಪಾಸುಮಾಡಲು ವಿನಂತಿ ಮಾಡಿಕೊಂಡರು.

ನಂತರದಲ್ಲಿ ಮತ ತೆಗೆದುಕೊಳ್ಳಲಾಯಿತು. ೬೪ ಜನರು, ಮುಕಾಧಿಕ್ಯಾಯ ತೆಗೆದು ಕೊಳ್ಳಲು ಅದನ್ನು ಎಲ್ಲ ಸಭಾಸದರ ತಡೆಗೊಳಿಕೆಗಾಗಿ ಮತಕೊಟ್ಟರು. ೬೫ ಜನರು ಇದಕ್ಕೆ ವಿರುದ್ಧ ತೀರ್ಮಾನಿಸಿದರು.

ಕಲಕತ್ತೆಯ ಕಾಂಗ್ರೆಸ್ ಮುಖಂಡರಾದ

ಸುಭಾಶಚಂದ್ರ ಬೋಸರಿಗೆ ೧ ವಾರ ಶಿಕ್ಷೆ

(ತಂತಿಯ ವಾರ್ತೆ)

ಕಲಕತ್ತೆಯ ಮ್ಯಾಜಿಸ್ಟ್ರೇಟರು ೧೪ನೆಯ ಕಲಮಿನವ್ವಯ ಹೊರಡಿಸಿದ ಅಪ್ಪಣೆಯ ವಿರುದ್ಧವಾಗಿ ವರ್ತಿಸಿದ್ದಕ್ಕಾಗಿ, ಬಂಗಾಲ ಪ್ರಾಂತದ ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಸುಭಾಶಚಂದ್ರ ಬೋಸರಿಗೆ ೧ ವಾರದ ಸಾದಾ ಶಿಕ್ಷೆಯಾಯಿತು. ವಿವರವಿಷ್ಟಿದೆ.

ಮದ್ರಣ ಹಾಗು ಕರನಿರಾಕರಣೆಯ ಮಸೂದೆಗಳವಿಚಾರವು ಮುಂದೆಬಿತ್ತು

(ತಂತಿಯ ವಾರ್ತೆ)

ಆವಶ್ಯಪ್ರಧಾನರಾದ ವಿ. ಪ್ಯಾಟೆಲ್ ಹೊನಾರ್ದರು ಇಂದು ಸರಕಾರಿ ಧೋರಣದ ವಿಷಯವಾಗಿ ಬಂಡೀಗಾಲಿಯ ಪರಿಷತ್ತಿನಲ್ಲಿ ಭಾಷಣ ಮಾಡತಕ್ಕವರಿದ್ದಾರೆ. ಈ ಸಮಯದಲ್ಲಿ ಮದ್ರಣ ಹಾಗು ಕರನಿರಾಕರಣೆಯ ಮಸೂದೆಗಳ ವಿಷಯವಾಗಿ ಚರ್ಚೆ ನಡಿಸಿದರೆ ವಾತಾವರಣವು ಕೆಟ್ಟುಹೋಗುವ ಸಂಭವವಿದೆ ಆದ್ದರಿಂದ ಆ ಮಸೂದೆಗಳ ಸಂಬಂಧವಾಗಿ ವಿಚಾರ ಮಾಡುವದನ್ನು ಮುಂದರಿಸಿದೆ" ಯೆಂಬುದಾಗಿ ಸರ್ ಜೇನ್ಸ್‌ಕ್ರೈರಾಕರವರು ಸರಕಾರದ ಪರವಾಗಿ ಅಸೆಂಬ್ಲಿಯಲ್ಲಿ ಹೇಳಿದರು.

ಮುಂಬಯಿಯಲ್ಲಿ ಗೋಳೀಬಾರು.

ಸಾರ್ಜಂಟರು ಗಾಂಧೀ ಟೊಪ್ಪಿಗೆಗಳನ್ನು ಸುಟ್ಟರು

ಗಲ್ಲಿಗೇರಿಸಲ್ಪಟ್ಟ ಸೊಲ್ಲಾಪುರದ ಮುಂದಾಳುಗಳಿಗೆ ಸಹಾನುಭೂತಿ ತೋರಿಸುವದಕ್ಕಾಗಿ ಮುಂಬಯಿಯ ಜಿ. ಕೆ. ಯ ಹುಡುಗರ ಕೆಲಸಗಾರರು ಲಾಲ ಮೈದಾನದಲ್ಲಿ ತಾ ೧೬ ನೆಯ ದಿವಸ ಸಭೆಕರೆದಿದ್ದರು. ಸಭೆಯು ಸರಕಾರವಾಗುವದಕ್ಕಿಂತ ಪೂರ್ವದಲ್ಲಿಯೇ ಜನರು ತಂಡ ತಂಡವಾಗಿ ಅಲ್ಲಿಗೆ ಬಂದು ಕೂಡಿದರು ಲಾರೀ ಪೋಲೀಸರಾದರೂ ಬಂದೋಬಸ್ತಿಗಾಗಿ ಅಲ್ಲಿ ಬಂದು ನಿಂತುಕೊಂಡಿದ್ದರು. ಶ್ರೀ ಗೋನಾಂಡೆ ಹಾಗು ಮಾಳ್ಹಣಕರರು ಭಾಷಣ ಮಾಡಲು ಎದ್ದ ಕೂಡಲೆ ಸ ಪರಿಂಟೆಂಡೆಂಟ ಫರ್ಡ ಸಾಹೇಬರು ಚದುರಿ ಹೋಗಲು ಅವರಿಗೆ ಕೇಳಿಕೊಂಡರು. ಅವರು ಅದಕ್ಕೆ ಸಮ್ಮತಿಸಲಿಲ್ಲ. ಸುಪರಿಂಟೆಂಡೆಂಟರು ಗೋಳೀಬಾರ ಮಾಡಲು ಪೋಲೀಸರಿಗೆ ಅಪ್ಪಣೆ ಕೊಟ್ಟರು. ಪೋಲೀಸರು ಗೋಳೀಬಾರ ಮಾಡಿದರು. ಮೂರು ನಾಲ್ಕು ಸಣ್ಣ ಸಣ್ಣ ಹುಡುಗರಿಗೆ ಗುಂಡಿನ ಪೆಟ್ಟುಗಳು ಬಿದ್ದವು. ಅವರನ್ನು ಆಸ್ಪತ್ರಿಗೆ ಕರೆಸಿಕೊಯ್ಯಲಾಯಿತು.

ಹಾಯಕೋರ್ಟಿನ ಮುಂದೆ ಪಿಕೆಟಿಂಗ ಮಾಡುವದು ಹಾಗೆಯೇ ಸಾಗಿತ್ತು. ಜನರು ಗುಂಪು ಗುಂಪಾಗಿ ಅಲ್ಲಿ ಬಂದು ಸೇರಿದರು. ವಿಶ್ವವಿದ್ಯಾಲಯದ ಗಾರ್ಡನದಲ್ಲಿಯೂ ಜನರು ನೆರೆದಿದ್ದರು. ಅವರು ಜಯಜಯಕಾರ ಮಾಡುತ್ತಿದ್ದರು ಸಾರ್ಜಂಟರು ಕೆಲವ ಲಾರೀಪೋಲೀಸರೊಂದಿಗೆ ಅಲ್ಲಿಗೆ ಬಂದು ಅವರನ್ನೆಲ್ಲ ಹೊರಗೆ ದಬ್ಬಿದರು ವಿಶ್ವ ವಿದ್ಯಾಲಯದ ಮಾರ್ಗದಲ್ಲಿ ಒಬ್ಬ ವನಪಾಲನು ಗಾಂಧಿ ಟೊಪ್ಪಿಗೆ ಹಾಕಿಕೊಂಡು ನಿಂತಿದ್ದನು. ಒಬ್ಬ ಸಾರ್ಜಂಟನು ಅವನಿಗೆ ಹೊರಟುಹೋಗಲು ಕೇಳಿದನು ಅವನು ನಿರಾಕರಿಸಿದರು. ಸಾರ್ಜಂಟನು ಅವನ ಕಾಲಿಗೆ ಹೊಡೆದು ಅವನನ್ನು ನೂಕಿದನು ಅಷ್ಟರಲ್ಲಿಯೇ ಓರ್ವ ಯುರೋಪಿಯನ್ ವಿದ್ಯಾರ್ಥಿಯು ಅಲ್ಲಿಗೆ ಬಂದು ಅವರಿಬ್ಬರ ನಡುವೆ ನಿಂತುಕೊಂಡ, ಸಾರ್ಜಂಟನಿಗೆ ಛೀ ಹಾಕಿದನು. ಪೋಲೀಸ ಕಮೀಶನರಾದ ಮಿ. ವುಯಿಲ ಸನ್ನರು ಅಲ್ಲಿಗೆಬಂದು ದಯಮಾಡಿ ನಿಮ್ಮಹೆಸರು ತಿಳಿಸಿರಿ, ಎಂದು ಕೇಳಿದರು "ಹಿಂದುಸ್ಥಾನವನ್ನು ನಾನು ಪ್ರೀತಿಸುತ್ತೇನೆ" ಎಂದು ಅವರು ಉತ್ತರ ಕೊಟ್ಟರು ತಾವೂ ಹಿಂದುಸ್ಥಾನವನ್ನೆ ಪ್ರೀತಿಸುತ್ತೇವೆ ಎಂಬುದಾಗಿ ಪೋ ಕಮೀಶನರು ಹೇಳಿದರು ಪತ್ರಿಕೆಯ ಪ್ರತಿನಿಧಿಗಳಿಗೂ ಅವರು ತಮ್ಮ ಹೆಸರು ಹೇಳಲಿಲ್ಲ.

ಆಜಾದ ಮೈದಾನದಲ್ಲಿ ಸುಮಾರು ಮಂಡಳದವರು ಸಭೆ ಕರೆದಿದ್ದರು. ಸ್ವಲ್ಪಹೊತ್ತು ಜನರನ್ನು ದಾಯವು ಅಲ್ಲಿ ನೆರೆದಿತ್ತು. ಪೋಲೀಸ ಅಧಿಕಾರಿಗಳು ಅಲ್ಲಿಗೆ ಬಂದು ಅವರನ್ನು ಚದುರಿ ಪರು ೬ ಗಂಟೆಗೆ ಯುದ್ಧವಂಡಳದ ಅಧಿಕಾರಿಗಳು ಅಲ್ಲಿಗೆ ಬಂದರು. ಅಧ್ಯಕ್ಷರು ಭಾಷಣಮಾಡಹತ್ತಿದ ಕೂಡಲೆ ಪೋಲೀಸರು ಅವರನ್ನೂ ಹಾಗು ಇತರ ಅಧಿಕಾರಿಗಳನ್ನೂ ಸೆರೆಹಿಡಿದರು. ಜನರು ಮತ್ತೆ ಅಲ್ಲಿ ನೆರೆದರು. ಪೋಲೀಸರು ಲಾಠೀ ಚಾರ್ಜಮಾಡಿದರು. ನೂರಾರು ಜನರಿಗೆ ಗಾಯುಗಳಾದವು. ಪೋಲೀಸ ಕಮೀಶನರ ಹಾಗು ಹೋಮಮೆಂಬರರು ಅಲ್ಲಿ ಪ್ರತ್ಯಕ್ಷ ಇದ್ದರು. ಜನರು ತಮ್ಮ ಮನೆಗೆ ಕೋಗುವ ವರೆಂಬ ಜಯಕಾರ ಮಾಡುತ್ತ ಹೋದರು ಹಾವಿಯಲ್ಲಿ ನಿಂತಿದ್ದ ಸಾರ್ಜಂಟರು ಅವರ ತಲೆಯುವೇಲಿನ ಗಾಂಧಿ ಟೊಪ್ಪಿಗೆ ಕಸಿದು ಕೊಂಡು ಅವುಗಳನ್ನು ಸುಟ್ಟರು. ಜನರು ಅಲ್ಲಿಯೇ ಅವರ ಸುತ್ತ ನೆರೆದು ನಿಷೇಧ ವ್ಯಕ್ತಪಡಿಸಿದರು. ಸಾರ್ಜಂಟರು ಲಾರಿಪೆಟ್ಟ ಕೊಟ್ಟರು. ಜನರ ಪೊರಟು ಹೋದರು

(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರ ನಿಧನ ವಾರ್ತೆಯು ತಾ॥ ೭ ನೆಯ ದಿವಸ ಇಲ್ಲಿಗೆ ತಲುಪಿದ ಕೂಡಲೆ ಇಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಸಾಯಂಕಾಲಕ್ಕೆ ಪಂಡಿತಜೀಯವರ ಮುಂದೆ ಶ್ರೀ ಗುಂಡೇರಾವ ಜೋಶಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೇರ್ಪಡಿಸಿ ದುಃಖ ಪ್ರದರ್ಶನ ಮಾಡಲಾಯಿತು ಶ್ರೀ ಸಂಪೂರ್ಣ ಸಿಂಗದ ಇವರು ಸಮಯೋಚಿತ ಭಾಷಣ ಮಾಡಿದರು.

ಹುಬ್ಬಳ್ಳಿಯಲ್ಲಿ
ಉಪ್ಪಿನ ಕಾಯಿದೆಭಂಗ.

ತಾ॥ ೫ ನೆಯ ದಿವಸ ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಸರ್ವಾಧಿಕಾರಿಗಳು ಕಾಯಿದೆಗೆ ವಿರುದ್ಧವಾಗಿ ಸಿದ್ಧಪಡಿಸಿದ ಉಪ್ಪನ್ನು ಸಭೆಯಲ್ಲಿ ಮಾರಿದರು. ಅಲ್ಲಿಂದ ಬಾದಮಿಯಲ್ಲಿ ಕೂಡಿದ ವರ್ಕಿಂಗ ಕಮಿಟಿಯಲ್ಲಿ ಪಾಸಾದ ನಿರ್ಣಯಗಳಿಗೆ ಸಂಬಂಧಿಸಿದ ನಿರ್ಣಯವಾದರೂ ಸಭೆಯಲ್ಲಿ ಓದಿ ಹೇಳಲ್ಪಟ್ಟಿತು.

ತಾ॥ ೬ ನೆಯ ದಿವಸ ಪ್ರಥಾತಭೇರಿಗಳು ಸಮ್ಮೇಲನವು ಕೂಡಿತ್ತು. ಡಾ. ಹರ್ಡೀಕರಗರು ಆ ಸಮಯದಲ್ಲಿ ಭಾಷಣ ಮಾಡಿ, ಬಹಿಷ್ಕಾರ ಚಳವಳಿಯನ್ನು ಜೋರಿನಿಂದ ಸಾಗಿಸಲೂ ಅವಶ್ಯಬಿದ್ದಲ್ಲಿ ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಲೂ ತರುಣರಿಗೆ ಉಪದೇಶಿಸಿದರು.

ಇಲ್ಲಿಯ ಪ್ರಮುಖ ಜನರು ವ್ಯಾಪಾರಸ್ಥರ ರಕ್ಷಣೆ ಹೋಗಿ ಪರದೇಶಿ ಬಟ್ಟೆಗಳನ್ನು ಒಕ್ಕೂಟ್ಟಿಗೆ ಕಟ್ಟಿಡಲು ಕೇಳಿಕೊಳ್ಳಹತಿದ್ದಾರೆ.

ಹುಬ್ಬಳ್ಳಿಯಲ್ಲಿ ಹರತಾಳ
(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರು ನಿಧನಹೊಂದಿದ ವಾರ್ತೆಯು ಇಲ್ಲಿಗೆ ತಿಳಿದ ಕೂಡಲೆ ಊರಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು. ಸಂಜೆಯ ೬ ಗಂಟೆಗೆ ಜೊತ್ತಕಲೆಯು ಪ್ರಚಂಡ ಮೆರವಣಿಗೆ ಹೊರಟು, ಊರಲ್ಲೆಲ್ಲ ಹಾಯ್ದು, ಸಭಾಸ್ಥಾನಕ್ಕೆ ಬಂದು ತಲುಪಿತು. ಅಲ್ಲಿ ಶ್ರೀ ಪುರಾಣಿಕರ ಅಧ್ಯಕ್ಷತೆಯ ಕೆಳಗೆ ಸಭೆ ಜರುಗಿ ದುಃಖ ಪ್ರದರ್ಶನ ಮಾಡಲಾಯಿತು ಮತ್ತು ಪಶ್ಚಿಮ ದಿಕ್ಕಿಗೆ ಇರುವ ಬೈಲಿಗೆ ಮೋತೀಲಾಲ ಬೈಲೆಂದು ಹೆಸರು ಇಡಲಾಯಿತು.

ತಾ॥ ೮ನೆಯ ದಿವಸ ಭಗಿನಿ ಮಂಡಳದ ಪರವಾಗಿ ಲೋಕಮಾನ್ಯ ಬೈಲಿನಲ್ಲಿ ಸ್ತ್ರೀಯರ ಸಭೆಸೇರಿ ಮೋತೀಲಾಲರ ಬಗ್ಗೆ ಶೋಕ ಪ್ರದರ್ಶನವಾಯಿತು. ಡಾ॥ ಹರ್ಡೀಕರ ಮೊದಲಾದವರು ಭಾಷಣ ಮಾಡಿದರು

ಕರ್ನಾಟಕದಲ್ಲಿ
ಕರನಿರಾಕರಣ ಚಳವಳಿ

ಅಂಕೋಲೆ ಹಾಗು ಇತರ ೧೫ ಹಳ್ಳಿಗಳ ಜನರು ಸ್ವರಾಜ್ಯ ಸಿಗುವ ವರೆಗೆ ಸರಕಾರಕ್ಕೆ ಯಾವ ಭೂಕಂದಾಯವನ್ನು ಕೊಡಕೆನ್ನುವದಾಗಿ ಘೋಷಣೆಮಾಡಿದ್ದಾರೆ.

ಪಂ. ಮೋತೀಲಾಲರ ನಿಧನದ ಬಗ್ಗೆ
ಶೋಕ ಪ್ರದರ್ಶನ
(ಸ್ವಂತ ಸುದ್ದಿಗಾರರಿಂದ)

ಪಂಡಿತ ಮೋತೀಲಾಲರು ಲಖನೌದಟ್ಟಣದಲ್ಲಿ ಸ್ವರ್ಗವಾಸಿಗಳಾದರೆಂಬ ದುಃಖ ಸಮಾಚಾರವು ಪಟ್ಟಣದಲ್ಲೆಡೆಪೆ ದೊರಕುತ್ತಲೆ ಪೇಟೆಯ ಯಾವತ್ತು ಅಂಗಡಿ ಶೋಕಾಕುಲರಾಗಿ ಬೊಕ್ಕ ತಲೆಯು ಮೆರವಣಿಗೆ ಹೊರಡಿಸಿ ಮಹಾತ್ಮಾ ಗಾಂಧಿ ವೃಂದದಲ್ಲಿ ಸಾರ್ವಜನಿಕ ಸಭೆಯಾಗಿ ಶ್ರೀ ಕಿರ ಮಲರಾವ ಹೊಸಪ್ಯಾಟಿ ಅಧ್ಯಕ್ಷತೆಯಲ್ಲಿ ಮೋತೀಲಾಲರ ನಿಧನಕ್ಕೆ ಶೋಕ ಪ್ರದರ್ಶನ ಮಾಡಲಾಯಿತು. ಎಲ್ಲ ಕಡೆಯೂ ಕಾರ್ಯಕ್ರಮ ಮುಗಿದ ಮೇಲೆ ಸಭೆಯು ವಿಸರ್ಜನೆಯಾಯಿತು.

ಕಾಂಗ್ರೆಸ್ ಸಂಸ್ಥೆಗಳು
ಕಾಯಿದೆಗೆ ವಿರುದ್ಧವಾದವು

ಗುಜರಾತ ಪ್ರಾಂತದ ಪಂಚಮಹಾಲ ಹಾಗು ಅಹಮ್ಮದಾಬಾದ ಜಿಲ್ಲೆಯೆಂಟರಲ್ಲಿಗಿನ ಒಟ್ಟು ೧೬ ಕಾಂಗ್ರೆಸ್ ಸಂಸ್ಥೆಗಳು ಕ್ರಿ ಲಾ. ಅಮೆಂಡಮೆಂಟ ಕಾಯಿದೆಯ ಅನ್ವಯ ಕಾಯಿದೆಗೆ ವಿರುದ್ಧವಾದ ಸಂಸ್ಥೆಗಳಾಗಿವೆಯೆಂದು ಸರಕಾರದವರು ಸಾರಿದ್ದಾರೆ.

ಸಿಂದೀ ಅಂಗಡಿಗಳಿಗೆ
ಯಾರೂ ದಿಕ್ಕಾಗಲಿಲ್ಲ

ರತ್ನಾಗಿರಿಯಲ್ಲಿ ತಾ॥ ೬ ನೆಯ ದಿವಸ ಆ ಜಿಲ್ಲೆಯ ಸಿಂದಿ ಅಂಗಡಿಗಳ ಲಿಲಾವು ನಡೆಯಿತು. ೩೦೦ ಜನರು ಅವುಗಳನ್ನು ಲಿಲಾವಿನಲ್ಲಿ ಬೇಡಲಿಕ್ಕೆ ಬಂದಿದ್ದರು. ಕಾಂಗ್ರೆಸ್ ಅಧಿಕಾರಿಗಳ ಆ ಸಮಯದಲ್ಲಿ ಪಿಕೆಟಿಂಗ ಸುರುವ ಮಾಡಿದ್ದರಿಂದ ಯಾರೂ ಅವುಗಳನ್ನು ಬೇಡಲಿಲ್ಲ - ಒಂದು ತಿಂಗಳದ ವರೆಗೆ ಸಿಂದಿ ಅಂಗಡಿಗಳನ್ನು ಲಿಲಾವಿನಲ್ಲಿ ಬೇಡಬಾರದೆಂದು ಅವರು ಫರ್ಧರಿಸಿಕೊಂಡಿದ್ದಾರೆ.

ಮಾಮುಬೇದಾರರಿಗೆ ಹಿಂಬಡತಿಯಾಯಿತು.

ಬಾಡೋಲಿ ಸತ್ಯಾಗ್ರಹ ಸಮಯದಲ್ಲಿ ಶೈತರಿಗೆ ಹೆಚ್ಚಾಗಿ ಪಿಡೆ ಕೊಟ್ಟು ಪ್ರಖ್ಯಾತಿಯನ್ನು ಪಡೆದ ಶ್ರೀ ಮೋತನಲಾಲಶಹಾ ಇವರನ್ನು ಮಾಮುಬೇದಾರ ಹುದ್ದೆಯಿಂದ ಅಸ್ಪಲ್ ಗ್ರೇಡ್ ಜಾಗೆಗೆ ಹಿಂಬಡತಿ ಮಾಡಿದ್ದಕ್ಕೆಂದು ತಿಳಿಯುತ್ತೆ.

ಕೋರ್ಟಿನಲ್ಲಿ ಭಯಂಕರ ಅಪಾವು

ಕೊಲ್ಲಾಪುರ ಕೋರ್ಟಿನಲ್ಲಿ ತಾ॥ ೫ನೇ ದಿವಸ ರಾತ್ರಿ ಸಾಮಾನ್ಯ ಕೈದಿಗಳು ಕೋರ್ಟಿಗೆ ಹೋಗಿ, ಅಲ್ಲಿಯ ಕಿಡಕಿಯನ್ನು ಬಲವಂತದಿಂದ ತೆಗೆದು ಕೋರ್ಟಿನಲ್ಲಿರುವ ಕೆಲವರ ಮೇಲೆ ಒಳಗಿನಿಂದ ಕಲ್ಲುಗಳನ್ನು ಎಸೆದರು. ಅಲ್ಲಿ ಕೀಲಿ ಕೈಗಳಿಂದ ಸಣ್ಣ ಸಣ್ಣ ಕಿಡಕಿಗಳನ್ನು ತೆಗೆದು ಒಟ್ಟಿಗೆ ೪೦೦ ರೂಪಾಯಿ ಬೆಲೆ ಬಾಳುವ ಮುಕ್ಕಾದ ಸಾಮಾನುಗಳನ್ನು ತೆಗೆದು ಕೊಂಡು ಹೋದರು.

ಸಾಬರಮತಿ ಜೇಲಿನಿಂದ ಕೈದಿಗಳು ಓಡಿ ಹೋದದ್ದು

ಸಾಬರಮತಿ ಜೇಲಿಂದ ಇಬ್ಬರು ಕೈದಿಗಳು ಓಡಿ ಹೋಗಿರುವರೆಂಬುದಾಗಿ ಹಿಂದಲ್ಕೆ ಪ್ರಸಿದ್ಧವಾಗಿದ್ದಷ್ಟೆ. ಆ ಸಂಗ್ಗೆ ಇಗೆ ಸವಿಸ್ತರ ಸಂಗತಿ ಗೊತ್ತಾಗಿದ್ದು ಅದನ್ನು ಇಲ್ಲಿ ತೆಳಗೆ ಕೊಟ್ಟಿದೆ

ದರೋಡೆಯು ಅಪರಾಧಕ್ಕಾಗಿ ಅವರಿಗೆ ಪ್ರತ್ಯೇಕವಾಗಿ ೭ ವರ್ಷದ ಕಠಿಣ ಶಿಕ್ಷೆಯಾಗಿತ್ತು. ಜೇಲಿನಲ್ಲಿ ಉಪಯೋಗಿಸಲು ಕೊಟ್ಟ ಬ್ಲಾಂಕೆಟುಗಳನ್ನು ಹೊಸೆದು ಅವರು ಅದರಿಂದ ಒಂದು ಹಗ್ಗವನ್ನು ಸಿದ್ಧಮಾಡಿದರು. ಅದನ್ನು ತುರಂಗದ ಗೋಡೆಯ ಮೇಲೆ ಒಗೆದರು. ಸರಿರಾತ್ರಿ ಸಮಯದಲ್ಲಿ ತುರಂಗದ ಮತ್ತೊಂದು ಬದಿಗೆ ಹೋಗಿ, ಒಂದು ಉದ್ದವಾದ ಬಿದಿರಿನ ಸಹಾಯದಿಂದ ಗೋಡೆಯನ್ನು ಏರಿ ಆಚೆಗಿನ ಹಗ್ಗವನ್ನು ಹಿಡಿದುಕೊಂಡು ಕೆಳಗಿಳಿದರು. ಅಲ್ಲಿ ಜೇಲಿನ ವೇಷವನ್ನು ತೆಗೆದೊಗೆದು, ಖಾದಿಯ ಬಟ್ಟೆಗಳನ್ನು ಧರಿಸಿಕೊಂಡು ಪರಾರಿಯಾಗಿ ಹೋದರು.

ಇವರು ಓಡಿ ಹೋದ ಮೂರು ತಾಸ್ಸುಗಳ ಮೇಲೆ ಈ ಸುದ್ದಿಯು ಜೇಲ ಅಧಿಕಾರಿಗಳಿಗೆ ಗೊತ್ತಾಯಿತು. ಅಧಿಕಾರಿಗಳು ಸುತ್ತಲೂ ಶೋಧ ಮಾಡಿದರು. ಇನ್ನೂ ಪತ್ತೆಯಾಗಿಲ್ಲ.

ಶ್ರೀ ಸಜ್ಜನಸಿಂಗರಿಗೆ ಗಲ್ಲಿನ ಶಿಕ್ಷೆಯಾಯಿತು.

ಲಾಹೋರದಲ್ಲಿ ಕ್ಯಾಪ್ಟನ್ ಕರ್ಟಿಸರ ಮನೆಯನ್ನು ಹೊಕ್ಕು, ಅವರ ಹೆಂಡತಿ ಹಾಗೂ ಮಕ್ಕಳನ್ನು ತಂತಿಯಿಂದ ಸುತ್ತುಪಡಿಸಿ, ಹೆಂಡತಿಯನ್ನು ಸಾಯಿಸಹೊಡೆದ ಆರೋಪದಿಂದ ಸೆರೆಹಿಡಿಯಲ್ಪಟ್ಟ ಸಜ್ಜನಸಿಂಗ ಎಂಬ ತರುಣನಿಗೆ ಲಾಹೋರದ ಸೆಸೆನ್ಸ್ ಜಡ್ಜರು ತಾ॥ ೬ನೇ ದಿವಸ ಗಲ್ಲಿನ ಶಿಕ್ಷೆಯನ್ನು ವಿಧಿಸಿದರು. ಈ ತೀರ್ಪಿನ ವಿರುದ್ಧವಾಗಿ ತಾವು ಅಪೀಲು ಮಾಡುವದಿಲ್ಲವಾಗಿ ಸಜ್ಜನ ಸಿಂಗರು ಕೋರ್ಟಿಗೆ ನಗೆ ಮೊಗದಿಂದ ತಿಳಿಸಿದರು.

ಭಯಂಕರ ಭೂಕಂಪ

೧೩೦ ಜನರು ಸತ್ತರು

ಪೋರ್ಚುಗೀಲಿನ ನೇಪಿಯರ ಪ್ರದೇಶದಲ್ಲಿ ಭಯಂಕರ ಭೂಕಂಪವಾಗಿದ್ದರಿಂದ ಅಲ್ಲಿಯ ಸಾವಿರಾರು ಕಟ್ಟಡಗಳು ನೆಲಸಮವಾಗಿ ಹೋಗಿದ್ದು, ನೂರಾರು ಜನರು ಕೈಕಾಲು ಮುರಿದಲ್ಲಿ ಬಿದ್ದಿದ್ದಾರೆ. ಹೇಸ್ಟಿಂಗ್ಸ ಎಂಬಲ್ಲಿ ಈ ಮೂಲಕವಾಗಿ ೧೩೦ ಜನರು ಮರಣ ಹೊಂದಿದ್ದಾರೆ.

ಮುದ್ರಣಬಕಾಸುರನಿಗೆ ತರುಣಭಾರತವು ಬಲಿಯಾಯಿತು

ಬೆಳಗಾವಿಯಲ್ಲಿಯ "ತರುಣ ಭಾರತ" ಮುದ್ರಣಾಲಯಕ್ಕೆ ಮುಂಬಯಿ ಸರಕಾರದವರು ಮುದ್ರಣ ಕಾಯದೆಯ ಅನ್ವಯ ೨೦೦೦ ರುಪಾಯಿಗಳನ್ನು ಅಡವು ಇಡಲು ಕೇಳಿಕೊಂಡಿದ್ದರಿಂದ, ಆ ಮುದ್ರಣಾಲಯವು ಮುಚ್ಚಲ್ಪಟ್ಟಿದೆ. ಮುದ್ರಣಾಲಯದಲ್ಲಿ ಪ್ರಸಿದ್ಧವಾಗುತ್ತಿದ್ದ "ತರುಣ ಭಾರತ" ಪತ್ರಿಕೆಯೂ ಸದ್ಯಕ್ಕೆ ತನ್ನ ಕಾರ್ಯವನ್ನು ನಿಲ್ಲಿಸಿ ಬಿಟ್ಟಿದೆ. ಮುದ್ರಣ ಬಕಾಸುರನು ಕರ್ನಾಟಕದಲ್ಲಿಯೂ ಕಾಲಿಟ್ಟಂತಾಯಿತು! ಇನ್ನು ಯಾರ ಸರತಿ ಬರುವದೋ ಏನೋ!

ಶ್ರೀ ಧನಶೆಟ್ಟಿಯವರ ಚಿತ್ರ ಮಾರುವದೂ ಅಪರಾಧವಾಯಿತು

ಯಡೋಡೆಯಲ್ಲಿ ಗಲ್ಲಿಗೇರಿಸಲ್ಪಟ್ಟ ಸೊಲ್ಲಾಪುರದ ವೀರಾಳುಗಳಾದ ಶ್ರೀ ಧನಶೆಟ್ಟಿ ಮೊದಲಾದವರ ಚಿತ್ರಗಳನ್ನು ಶುಕ್ರವಾರ ಪೀರಾಜಿ ಎಂಬುವನೊಬ್ಬನು ಸೊಲ್ಲಾಪುರದಲ್ಲಿ ತಾ॥ ೩ನೇ ದಿವಸ ಬೀದಿಗಳಲ್ಲಿ ಮಾರುತ್ತ ಹೋಗುತ್ತಿದ್ದನು. ಪೋಲೀಸರು ಅವನನ್ನು ಹಾದಿಯಲ್ಲಿ ಸೆರೆಹಿಡಿದು ಪೋಲೀಸ್ ಕಾಯದೆಯ ೬೧ ನೇಯ ಕಲಮಿನ್ವಯ ಅವನ ಮೇಲೆ ಖಟ್ಲೆ ಹಾಕಿದರು. ತಾ॥ ೪ನೇ ದಿವಸ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಡೆದು, ಅವನಿಗೆ ೫ ರೂ ದಂಡ, ಇಲ್ಲವೆ ೧೫ ದಿವಸ ಕಾರಾಗೃಹವಾಸ ಹೀಗೆ ಶಿಕ್ಷೆಯು ವಿಧಿಸಲ್ಪಟ್ಟಿತು.

ಬಹಿಷ್ಕಾರವು ಪರಿಣಾಮವು.

೧೯೨೯ ನೇಯ ಡಿಸೆಂಬರ ತಿಂಗಳದಲ್ಲಿ ಪರದೇಶಗಳಿಂದ ೧೧೦ ಕೋಟಿ ರೂಪಾಯಿ ಬೆಲೆಯ ಅರಿವೆಯು ಈ ದೇಶಕ್ಕೆ ಬಂದಿತ್ತು. ಆದರೆ ಬಹಿಷ್ಕಾರ ಚಳವಳಿಯು ಇಗ ಇಲ್ಲಿ ಬೆಂಬಲಕ್ಕೆ ಸಿಕ್ಕಿದ್ದರಿಂದ ಈ ವರ್ಷದ ಗಿನೆಂಬರ ತಿಂಗಳದಲ್ಲಿ ಕೇವಲ ೨ ಕೋಟಿ ರೂಪಾಯಿ ಬೆಲೆಯ ಅರಿವೆಯಷ್ಟೇ ಪರದೇಶಗಳಿಂದ ಇಲ್ಲಿಗೆ ಬಂದಿರುವದಾಗಿ ತಿಳಿದು ಪರದೇಶಿ ಬಟ್ಟೆಯಿಂದ ವ್ಯಾಪಾರವು ಗಿಂತಿಪ್ಪತ್ತು ಲಕ್ಷ ರೂಪಾಯಿಗಳಷ್ಟು ಕಡಿಮೆಯಾಯಿತೆಂದು ತಿಳಿಯುತ್ತದೆ.

ಶ್ರೀ ಹಿರೇಮಠ ಸಾಹೇಬರಿಗೆ ಕಾರಾಗೃಹವಾಸ.

ಬೆಳಗಾವ ಜಿಲ್ಲೆಯ ಕಾಗವಾಡ ತಾಲೂಕಿನ ಕಳ್ಳರವಾಡ ಶ್ರೀ ಹಿರೇಮಠ ಸಾಹೇಬರು ಮತ್ತು ಗಡ ಶ್ರೀ ರಾಮಚಂದ್ರ ಯಾದವಾಡ ಮೇಶವಾಡೆ ಎಂಬ ಗೃಹಸ್ಥರಿಗೆ ತಾ॥ ೨೯ನೇ ದಿವಸ ಶೋಟೀಸು ಕೊಟ್ಟು, ಪರಗನೆಯ ವಕೀಲವನ್ನು ಯಾತಕ್ಕೆ ಜಪ್ತ ಮಾಡಬಾರದೆಂಬ ಬಗ್ಗೆ ಕಾರಣ ತೋರಿಸಲು ತಾ॥ ೧೬—೨—೩೦ ನೇಯ ದಿವಸ ಕೋರ್ಟಿಗೆ ಬರಲು ಅವರಿಗೆ ತಿಳಿಸಿಯಿದ್ದಾರೆ.

ರತ್ನಾಗಿರಿ ಜಿಲ್ಲೆಯಲ್ಲಿ ಸರಕಾರಕ್ಕೆ ಲಕ್ಷಗಟ್ಟಲೆ ಹಾನಿ

ರತ್ನಾಗಿರಿಯಲ್ಲಿ ತಾ॥ ೬ ನೇಯ ದಿವಸ ಕಲೆಕ್ಟರರ ಎದುರಿನಲ್ಲಿ ಆ ಜಿಲ್ಲೆಯ ಸೆರೆ ಸಿಂದಿ, ಗಾಂಜಾ ಮೊದಲಾದ ಅಂಗಡಿಗಳ ಲಿಲಾವು ನಡೆಯಿತು. ೧೧೩ ಸಿಂದಿಯ ಅಂಗಡಿಗಳಲ್ಲಿ ಮೂರೇ ಅಂಗಡಿಗಳು ಲಿಲಾವಿನಲ್ಲಿ ಜೇಡಲ್ಪಟ್ಟವು. ಮಾದಕ ಪದಾರ್ಥಗಳ ೩೩ ಅಂಗಡಿಗಳಿಗೆ ಕೇವಲ ೧೧ ಜನರೇ ಅರ್ಜಿ ಮಾಡಿದ್ದರಿಂದ ಅವರಿಗೆ ಅವು ಕೊಡಲ್ಪಟ್ಟವು. ಇವುಗಳ ಲಿಲಾವಿನಿಂದ ಹೋದಮಹರದಲ್ಲಿ ಸರಕಾರಕ್ಕೆ ೩೬೫೦೦ ರುಪಾಯಿಗಳು ದೊರೆತಿದ್ದವು. ಆದರೆ ಈ ವರ್ಷ ಬರೇ ೧೦೦೦ ರುಪಾಯಿಗಳ ಮೇಲೆ ಅವರು ಸಂತುಷ್ಟರಾಗಬೇಕಾಯಿತು! ಲಿಲಾವಿನ ಸರದಾರದಲ್ಲಿ ಸ್ವಯಂಸೇವಕರು ಹೆಚ್ಚಿಂಗ ಧರಿಸಿದ್ದರಿಂದಲೆ ಸರಕಾರಕ್ಕೆ ಹೀಗೆ ಹಾನಿಯಾಯಿತು.

ಅಂಕೋಲೆಯು ಕರನಿರಾಕರಣೆಯ ಕೇಂದ್ರವಾಯಿತು.

(ಸ್ವಂತ ಸುದ್ದಿಗಾರರಿಂದ)

ಕರ್ನಾಟಕದೊಳಗಿನ ಬೇರೆ ಬೇರೆ ಭಾಗಗಳಿಂದ ಬಂದ ಸುಮಾರು ೬೦ ಜನ ಕಾಂಗ್ರೆಸ್ ಕಾರ್ಯಕರ್ತರು ತಾ|| ೪ನೆಯ ದಿವಸ ಧಾರವಾಡದಲ್ಲಿ ಒಕ್ಕುಟ್ಟಿಗೆ ಕಲೆತು, ಮುಖ್ಯ ಪ್ರಧಾನರ ಜಾಹೀರು ನಾಮೆಯ ಬಗ್ಗೆ ವಿಚಾರ ಮಾಡಿದರು. ವಿಚಾರಾಂತ್ಯದಲ್ಲಿ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಸ್ವೀಕೃತವಾದವು.

(೪) ಮುಖ್ಯಪ್ರಧಾನರ ಜಾಹೀರು ನಾಮೆಯು ಅತ್ಯಂತ ಅಶಕ್ತಿಕರವಾಗಿದ್ದು ಬಹಳೇ ಸಂದಿಗ್ಧ ಭಾಷೆಯಿಂದಿದೆ ಅದರಿಂದ ಹಿಂದೀ ರಾಷ್ಟ್ರೀಯ ಮಹಾಸಭೆಯ ವ್ಯಕ್ತ ಅಕಾಂಕ್ಷೆಗಳಿಗೆ ಸ್ವಲ್ಪವೂ ಸಮಾಧಾನವಾಗಿಲ್ಲವೆಂತಿದ್ದು.

(೫) ಕೆಳಗಿನ ಕಾರಾರುಗಳನ್ನು ಸರಕಾರದವರು ಪೂರೈಸಿದ ಹೊರತು ಅವಂ ಕೂಡಿ ಸಂಧಾನದ ಮಾತುಗಳನ್ನು ಅಡಕೂಡದೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ. ಆ ಕಾರಾರುಗಳೆಂದರೆ:—

(೧) ರಾಜಕೀಯ ಜಳವಳಿಯು ಮುಕ್ತವಾಗಿ ತಿಳ್ಳಿಗೆ ಗುರಿಯಾಗಿ ಈಗ ಜೇಲಿನಲ್ಲಿರುವ ಎಲ್ಲ ರಾಜಕೀಯ ಖೈದಿಗಳನ್ನು ಕೂಡಲೆ ಬಿಡುಗಡೆ ಮಾಡಬೇಕು. ಎಲ್ಲ ರಾಜಕೀಯ ಖಟ್ಲೆಗಳನ್ನು ಹಿಂತೆಗೆದುಕೊಳ್ಳಬೇಕು. ಈ ಜಳವಳಿಯಲ್ಲಿ ಭಾಗವಹಿಸಿದ ಎಕೇಲಂ ಬಗ್ಗೆ ನಡಿಸಿರುವ ವಿಚಾರಣೆಯನ್ನು ಕದ್ದುಪಡಿಸಬೇಕು.

(೨) ಈ ಜಳವಳಿಯಲ್ಲಿ ಭಂಗಕೆಗಡಾಕೊಂಡು ಸ್ವಾಮ್ಯವಾಗಿ ಯಾವ ಯಾವ ಆಸ್ತಿಗಳನ್ನು ಜಪ್ತು ಮಾಡುವದಾಗಿ ಬಂದಿದೆಯೋ ಆ ಆಸ್ತಿಗಳನ್ನು ಅವುಗಳ ಒಡೆಯರಿಗೆ ತಿರುಗಿ ಕೊಡಬೇಕು. ತಿಳ್ಳಿಗೊಕ್ಕಾಗಿದವರಿಂದ ವಸೂಲ ಮಾಡಿದ ದಂಡದ ಹಣವನ್ನು ೮೮ ಜನರಿಗೆ ತಿರುಗಿ ಒಪ್ಪಿಸಬೇಕು.

(೩) ಯಾವತ್ತೂ ಅರ್ಡಿನನ್ಸುಗಳನ್ನು ಹೊಗು ದಬ್ಬಾಳಿಕೆಯ ಕಾಯದೆಗಳನ್ನು ರದ್ದು ಮಾಡಬೇಕು.

(೪) ಕರನಿರಾಕರಣೆ ಜಳವಳಿಯು ಪ್ರಾರಂಭವಾದ ಭಾಗಗಳಲ್ಲಿ ಎಷ್ಟೆಯಾದರೂ ಈಗಾಗಲೆ ಹಪ್ಪ ಎತ್ತುವದು ಪಡೆದಿದ್ದರೆ, ಒಕ್ಕಂಬ ತಿಳಿಸಿದ ದಾಸಾ ತಕೆಗಳು ಮುಗಿಯುವ ವರೆಗೆ ಅದನ್ನು ಮುಂದಕ್ಕೆ ಹಾಕಬೇಕು.

ಕರನಿರಾಕರಣೆ ಜಳವಳಿ

ಕರನಿರಾಕರಣೆ ಜಳವಳಿಯು ಸಂಬಂಧವಾಗಿ ಸಭೆಯಲ್ಲಿ ಈ ಕೆಳಗಿನ ಠರಾವು ಸ್ವೀಕೃತವಾದದೆ ಯೆಂದು ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ರಾಜಕೀಯ ಕಾರಣಗಳಿಗಾಗಿ ಕರನಿರಾಕರಣೆಯನ್ನು ಕೈಕೊಂಡ ಅಂಕೋಲೆ ತಾಲೂಕನ್ನು ಈ ಚಳವಳಿಯ ಕೇಂದ್ರವನ್ನಾಗಿ ಮಾಡಿಕೊಂಡು, ಸರಸಿ, ಸಿದ್ದಾಪುರ, ಹಿರೇಕೆ ಸಂಗಳಲ್ಲಿ ಆರ್ಥಿಕ ಕಾರಣಗಳಿಗಾಗಿ ನಡೆಯುವ ಇದೇ ಚಳವಳಿಗೆ ಕರ್ನಾಟಕವು ಎಲ್ಲ ತರದಿಂದ ಸಹಾಯ ಮಾಡುತ್ತದೆಂದು ಆಶ್ವಾಸನೆ ಕೊಡುತ್ತದೆ.

ಕರ್ನಾಟಕ ಏಕೀಕರಣ

ಕರ್ನಾಟಕ ಏಕೀಕರಣದ ಸಲುವಾಗಿಯೂ ಮೇಲ್ಕಂಡ ಸಭೆಯಲ್ಲಿ ಮುಂದೆ ತಾಳಿದ ನಿರ್ಣಯವು ಪಾಸಾಗಿದೆ.

ಸ್ವಾತಂತ್ರ್ಯ ಹಕ್ಕು ಭಾಷಾವಾರ್ಯು ಪ್ರಾಂತ ರಚನೆಯು ಸ್ಥಾಪನೆಯು ಒಂದೇ ಕಾಲಕ್ಕೆ ಆಗಬೇಕೆಂದು ಈ ಸಭೆಯು ಅಭಿಪ್ರಾಯವಿದ್ದುದರಿಂದ ಹಿಂದುಸ್ಥಾನದ ಭಾವೀ ರಾಜ್ಯಘಟನೆಯಲ್ಲಿ ಕರ್ನಾಟಕವನ್ನು ಸ್ವತಂತ್ರ ಪ್ರಾಂತವನ್ನಾ ಮಾಡಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ವಂಡಳಿಕ್ಕೆ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ.

ಅಂಕೋಲೆಯಲ್ಲಿ ಅಪರಿಮಿತ ಉತ್ಸಾಹ!

ಮತ್ತೆ ರಾಜೀನಾಮೆಗಳು.

೩೪ ಪಟೇಲರು ರಾಜೀನಾಮೆ ಕೊಟ್ಟಿದ್ದರಿಂದ ಬೇರೆ ಪಟೇಲರಿಗೂ ಉತ್ಸಾಹವುಂಟಾಗಿ ಒಬ್ಬೊಬ್ಬರಾಗಿ ಅವರೂ ರಾಜೀನಾಮೆಗಳನ್ನು ಕಳಿಸುತ್ತಿರುವರು. ಮುಂಡಗುಡಿ, ಹೊನ್ನೇಜೈಲ, ಒಳ್ಳೂರ ಮೊದಲಾದ ಹಳ್ಳಿಗಳ ಪಟೇಲರೂ ತಮ್ಮ ಕೆಲಸಕ್ಕೆ ಶರಣು ಹೊಡೆದರು. ಒಟ್ಟು ರಾಜೀನಾಮೆಗಳ ಸಂಖ್ಯೆ ೪೦ ಆಯಿತು.

ಒಳ್ಳೂರಿನ ಪಟೇಲರ ರಾಜೀನಾಮೆಯ ಇತಿಹಾಸವನ್ನು ನೋಡಿದರೆ ಸಾಮಾಜಿಕ ಬಹಿಷ್ಕಾರದ ಸಾಮರ್ಥ್ಯದ ಕಲ್ಪನೆ ಬರುವದು! ಈ ಪಟೇಲರು ತಮ್ಮ ಊರಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಸಭೆ ಕೂಡಿಸಿ ಹೇಳಿ ತಾವು ಬೇಕೆಂತಲೇ ಆ ಸಭೆಗೆ ಪೋಲೀಸರನ್ನು ಕರೆಯಿಸಿಕೊಂಡು ಬಂದರು! ಇದರಿಂದ ಊರವರೆಲ್ಲ ಸಿಟ್ಟಾಗಿ ಇವರನ್ನು ಬಹಿಷ್ಕರಿಸಿದ್ದರಿಂದ ತಮ್ಮ ಪಟೇಲಕಿಗೆ ರಾಜೀನಾಮೆ ಕೊಟ್ಟರು. ಆದರೆ ಕೆಲವು ದಿವಸಗಳ ತರುವಾಯ ಕಾಂಗ್ರೆಸಿಗೆ ವಿರುದ್ಧವಾಗಿ ಅಚರಣೆಮಾಡಿ ಗೋಚರವಾ ಧೀಯನ್ನು ವಸೂಲ ಮಾಡಿದರು. ಊರವರು ಇದಕ್ಕಾಗಿ ೫ ರೂಪಾಯಿ ದಂಡ ಕಟ್ಟಿದರು. ದಂಡವನ್ನೇನೋ ತುಂಬಿದರು. ಆದರೆ ತಾವು ಕಳಿಸಿದ ರಾಜೀನಾಮೆಯನ್ನು ಮಾತ್ರ ತಿರಿಗಿ ತೆಗೆದುಕೊಂಡರು. ಈಗ ಮತ್ತೆ ಊರವರು ಇವರನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದರಿಂದ, ಇವರು ಅಡಕೆಯ ಬೆಳೆಯನ್ನು ಹೊತ್ತೊಯ್ಯುವದಕ್ಕೆ ಕೊಲಿಕಾರರೂ ಇವರಿಗೆ ಸಿಗದಂತಾಗಿದೆ. ಪುನಃ ರಾಜೀನಾಮೆ ಕಳಿಸುವರು. ಊರವರು ಸಮ್ಮತಿಸುತ್ತಾರೆ ಇನ್ನು ಇಂತಿಂತಹ ಕಾಣುವದಿಲ್ಲ.

ಜನಗಣತಿಯ ಬಹಿಷ್ಕಾರ.

ಈ ತಾಲೂಕಿನಲ್ಲಿ ಜನಗಣತಿಯ ಬಹಿಷ್ಕಾರವು ಅತ್ಯಂತ ಪ್ರಖರವಾಗಿದೆ. ಅಧಿಕಾರಿಗಳಿಗೆ ಯಾವದೇ ತರದ ಸಂಗತಿಯು ದೊರೆಯದಂತಾಗಿದ್ದರಿಂದ ಅವರು ನ್ಯಾಯಸ್ಥರಿಗೆ ಜನಗಣತಿಯ ಫಾರ್ಮಗಳನ್ನು ಜೇಗರದೂ ತುಂಬಿ ಕಳಿಸಲಿಕ್ಕೆ ತಿಳಿಸಿರುವದರಿಂದ ಅವರೂ ಹಾಗೆಯೇ ಮಡಿಸಿದ್ದಾರಂತೆ! ಇದು ನಿಜವಾದ ಜನಗಣತಿಯೋ!

ಸರಕಾರದ ರೊಕ್ಕ ಹೋಯಿತು!

ಬೀಲೀಕೇರಿಯ ಹುಲ್ಲು ಗಾವಲದ ಲಿಲಾವಿನಿಂದ ಪ್ರತಿವರ್ಷ ಸರಕಾರಕ್ಕೆ ೬೦-೪೦ ರೂ. ಗಳ ಪ್ರಾಪ್ತಿಯಾಗುತ್ತಿತ್ತು. ಈ ಸಲ ಊರವರೆಲ್ಲ ಒಕ್ಕಟ್ಟಾಗಿ ಬಹಿಷ್ಕರಿಸಿದ್ದರಿಂದ ಸರಕಾರಕ್ಕೆ ಒಂದು ಪೈ ಸಹ ಹುಟ್ಟಲಿಲ್ಲ!

ಅಧಿಕಾರಿಗಳ ಆಗಮನ!

ಈ ಭಾಗದ ಡೆಪ್ಯುಟಿ ಕಲೆಕ್ಟರರಾದ ಮಿ. ಮುಂಡ ಳವರು ೩ ನೇ ತಾರೀಖಿಗೆ ಅಂಕೋಲೆಗೆ ಬಂದು ಕರನಿರಾಕರಣೆಯನ್ನು ಹೇಗೆ ಕೆಡಿಯಬೇಕೆಂಬ ಬಗ್ಗೆ ಸ್ಥಾನಿಕ ಅಧಿಕಾರಿಗಳು ಹಾಗೂ ಶಾನಭೋಗರೆಕೊಡನೆ ಚರ್ಚಿಸಿದರಂತೆ! ಚರಅಸ್ತಿಯನ್ನು ಜಪ್ತಿಮಾಡಲಿಕ್ಕೆ ಹೊಲಗಳನ್ನು ಫಾರಫೇಟು ಮಾಡಲಿಕ್ಕೆ ಶಾನುಭೋಗರಿಗೆ ಯಾವ ಸಹಾಯವು ಬೇಕೆಂದು ಕೇಳಿದರಂತೆ! ಇನ್ನಿಗೆ ಒಬ್ಬ ಸ್ಪೆಶಲ್ ಪೊಜಿಷನರಂತೆ ೩೦ ಜನ ಪೋಲೀಸರೂ ಬರುವವರೆಂದಿದ್ದಾರೆಂದು ಸುದ್ದಿ.

ವೈ ವಾ ಕೆಶವರ ವಾಸುದೇವಚಾರ್ಯರ ಭಾವಪಟದ ಅನಾವರಣ ಸಮಾರಂಭ

ತಾ|| ೨೬—೧—೩೧ ನೆಯ ದಿವಸ ಸಾಂಗಲಿಯ ವೃಯಿಲಿಂಗಡಿನ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ವೈ. ವಾ. ಕೆಶವರ ವಾಸುದೇವಚಾರ್ಯರ ಭಾವಪಟದ ಅನಾವರಣ ಸಮಾರಂಭವು ಶ್ರೀ ಆಲೂರ ವೆಂಕಟರಾಯರ ಹಸ್ತದಿಂದ ಸಾಂಗವಾಯಿತೆಂದು ತಿಳಿದು ಬರುತ್ತದೆ.

ಕಾಕಾ ಕಾರಖಾನೀಸರಿಗೆ ಕೈದು

ಪೋಲೀಸರ ಉದ್ದಾಮತನ

(ಸ್ವಂತ ಸುದ್ದಿಗಾರರಿಂದ)

ಕರ್ನಾಟಕದ ಪ್ರಸಿದ್ಧ ಕಾರ್ಯಕರ್ತರಾದ ಕಾಕಾ ಕಾರಖಾನೀಸರು ನೆನ್ನೆ ೯ನೆಯ ತಾರಿಖಿನ ದಿವಸ ಅಂಕೋಲೆಯಿಂದ ಹೊರಟಿರುವಾಗ ಹಾದಿಯುಲ್ಲಿ ಸುಂಕಸಾಳದ ಪೋಲೀಸ ಕಚೇರಿಯ ಹತ್ತರ ಒಬ್ಬ ಪೋಲೀಸನು ಬಂದು ಅವರಿಗೆ "ನಿಮ್ಮ ಹೆಸರು ಹೇಳಿರಿ" ಎಂದು ಕೇಳಿದನು. ಅದಕ್ಕೆ ಕಾರಖಾನೀಸರು "ನಿಮಗೆ ನನ್ನ ಪರಿಚಯವಿವೆ. ಹೆಸರು ಹೇಳುವ ಅವಶ್ಯ ವಿಲ್ಲ." ಎಂದು ಉತ್ತರ ಕೊಟ್ಟರು. ಆಗ ಪೋಲೀಸನು ಸಮೀಪದಲ್ಲಿದ್ದ ಸಬ್ ಇನಸ್ಪೆಕ್ಟರನ್ನು ಕರೆದುಕೊಂಡು ಬಂದನು. ಅವರ ಪ್ರಶ್ನೆಗೂ ಕಾರಖಾನೀಸರು ಅದೇ ಉತ್ತರ ಹೇಳಿದರು. ಆಗ ಫೌಜದಾರರ ಪಿತ್ತವು ತಲೆಗೇರಿತು. ಅವರು ಕಾರಖಾನೀಸರನ್ನು ಕೈದು ಮಾಡಿದರು. ಸ್ವಾಭಿಮಾನಿಗಳಾದ ಕಾರಖಾನೀಸರು ಮೊಟಾರಿನಿಂದ ಇಳಿಯಲಿಕ್ಕೆ ಒಪ್ಪಲಿಲ್ಲವಾದ್ದರಿಂದ ಪೋಲೀಸರು ಅವರನ್ನು ಕೆಳಕ್ಕೆಳೆದು ಕೈಗೆ ಬೇಡಿಗಳಕ್ಕನ್ನು ಹಾಕಿ ಅಂಕೋಲೆಗೆ ತಂದರು. ಅವರ ಮೇಲೆ ೧೪೪ನೆಯ ಕಲಮಿನ ಪ್ರಕಾರ ಖಟ್ಲೆ ಹಾಕಿದ್ದಾರೆಂತೆ! ಇಲ್ಲಿಯ ಪೋಲೀಸರ ಪುಂಡಾಟಿಕೆಗೆ ಇದು ಬಿಸಿ ಬಿಸಿ ಉದಾಹರಣೆ!

ಅಂಕೋಲೆಯ ವೀರಪ್ರತಿಜ್ಞೆ

(ಸ್ವಂತ ಸುದ್ದಿಗಾರರಿಂದ)

ಕಳೆದ ೫ನೆಯ ತಾರೀಖಿಗೆ ಈ ತಾಲೂಕಿನಲ್ಲಿ ತೀರ್ವೆ ವಸೂಲ ಮಾಡುವ ಕಾರ್ಯವು ಪ್ರಾರಂಭವಾಗುವದಿದ್ದರಿಂದ ಅಂದೇ ಸಾಯಂಕಾಲಕ್ಕೆ ಈ ತಾಲೂಕಿನ ೧೧ ಕೇಂದ್ರಗಳಲ್ಲಿಯೂ ಉಳಿದ ಕೆಲವು ಹಳ್ಳಿಗಳಲ್ಲಿಯೂ ಸೈಕರ ಸಭೆಗಳು ಕೂಡಿ, ಕಾಂಗ್ರೆಸದವರು ಹೇಳುವ ವರೆಗೆ ಸರಕಾರಕ್ಕೆ ತೀರ್ವೆ ಕೊಡಕೂಡದೆಲ್ಲವೆಂದು ತೀರ್ಮಾನುಗಳಾಯಿತು. ಮೊದಲು ಸಭೆಗಳಲ್ಲಿ ರಾಷ್ಟ್ರಧ್ವಜದ ಪೂಜೆಯಾದ ಬಳಿಕ ಕೂಡಿದ ಎಲ್ಲ ಜನರೂ ಈ ಕೆಳಗಿನ ಪ್ರತಿಜ್ಞೆಯನ್ನು ಗಂಭೀರವಾಗಿ ಉಚ್ಚರಿಸಿದರು.

"ನಾವು ದೇವರನ್ನೂ ಮಹಾತ್ಮಾ ಗಾಂಧಿಯವರನ್ನೂ ಸ್ಮರಿಸಿ ಪ್ರತಿಜ್ಞೆ ಮಾಡುವ ದೇನೆಂದರೆ:— ಕಾಂಗ್ರೆಸಿನ ಆಜ್ಞೆಯ ಪ್ರಕಾರ ನಾವು ಕರನಿರಾಕರಣೆಯನ್ನು ಕೈಕೊಂಡಿದ್ದೇವೆ. ನಾವು ಈ ವರ್ಷ ಸರಕಾರಕ್ಕೆ ಕೈಯೆತ್ತಿ ತೀರ್ವೆ ಕೊಡಲಿಕ್ಕಿಲ್ಲ. ತೀರ್ವೆ ವಸೂಲ ಮಾಡುವ ಕಾಲದಲ್ಲಿ ನಾವು ಸರಕಾರಕ್ಕೆ ಯಾವ ರೀತಿಯಿಂದಲೂ ಸಹಾಯ ಮಾಡಲಿಕ್ಕಿಲ್ಲ ಈ ನಮ್ಮ ಪ್ರತಿಜ್ಞೆಗೆ ನಮ್ಮನ್ನು ಪಾಲಿಸಲು ದೇವರು ನಮಗೆ ಶಕ್ತಿಯನ್ನು ದಯಪಾಲಿಸಲಿ."

ಪ್ರತಿಜ್ಞೆಯಾದ ಬಳಿಕ ಎಲ್ಲರೂ ದೃಢ ನಿಶ್ಚಯ ಮಾಡಿ ತಮ್ಮ ತಮ್ಮ ಮನೆಗಳಿಗೆ ಹೋದರು.

ಶ್ರೀಮತಿ ಕಿಕೀಬೇನರು ಅನ್ನತ್ಯಾಗ ಕೈಕೊಂಡರು

ಕಾಯಿದೆಗೆ ವಿರುದ್ಧವಾದ ಸಂಘದಲ್ಲಿ ಸೇರಿದ ಅಪರಾಧಕ್ಕಾಗಿ ಕರಾಚಿಯಲ್ಲಿ ಶಿಕ್ಷೆಗೊಳಗಾದ ಶ್ರೀಮತಿ ಕೀಕಿಬೇನ ಲಾಲವಾನಿಯವರು, ಜೇಲ ಅಧಿಕಾರಿಗಳು ತಮ್ಮನ್ನು ಕೆಟ್ಟ ರೀತಿಯಿಂದ ನಡಿಸಿಕೊಳ್ಳುತ್ತಿರುವದರ ನಿಷೇಧಾರ್ಥವಾಗಿ, ಕಳೆದ ನಾಲ್ಕು ದಿನಗಳಿಂದ ಅನ್ನತ್ಯಾಗ ವ್ರತವನ್ನು ಕೈಕೊಂಡಿರುವರಾಗಿ ತಿಳಿದು ಬರುತ್ತದೆ.

ಮೋತೀಲಾಲರ ಮರಣದಿಂದ ಮಹಾತ್ಮರಿಗೆ ವೈಧವ್ಯ ಬಂದಂತಾಯಿತು.

ಅಲಹಾಬಾದದ ಲೀಡರ ಪತ್ರದ ಸಂಪಾದಕರ ಮುಂದೆ ಮಹಾತ್ಮಾ ಗಾಂಧಿಯವರು ಕಳಗಿನಂತೆ ದುಃಖೋದ್ಗಾರ ತೆಗೆದಿದ್ದಾರೆ.

ಪಂಡಿತ ಮೋತೀಲಾಲರ ಮರಣದಿಂದ ನನಗೆ ವೈಧವ್ಯ ಬಂದಂತಾಗಿದೆ. ಪತಿಭಕ್ತಿಪರಾಯಣ ಸ್ತ್ರೀಯಂತೆ ಗಂಡನು ಉಳಿಸಿಟ್ಟು ಹೋದಸ್ವರೆಲ್ಲಿಯೇ ತನ್ನ ಚರಿತಾರ್ಥವಾಗಿಸುವಳು. ಆದರೆ ನನ್ನ ಹಾಲಿಗೇನೂ ಉಳಿದಿಲ್ಲ. ಮೋತೀಲಾಲರ ಮರಣದಿಂದ ನಾನು ಕಳಕೊಂಡದ್ದು ಆ ಜನ್ಮ ಕಳಕೊಂಡಂತಾಯಿತು. ಅನಂತ ಕಾಲದಿಂದ ಒಂದೇ ಸ್ಥಳದಲ್ಲಿ ನೆಲಿಸಿರುವ ಪರ್ವತಶ್ರೇಣಿಯು ಯಾವದಾದರೂ ಒಂದು ಕೊರಲಿನಲ್ಲಿ ಕಾಲಹರಣ ಮಾಡಿ, ಪ್ರಲೋಕವನ್ನೆ ಬೈದುವದೇ ನನ್ನ ದೈವದಲ್ಲಿ ಬರೆದಂತಾಗಿದೆ.

ಪೋಲೀಸರದುರಿನಲ್ಲಿ ಉಪ್ಪಿನ ಕಾಯದೆ ಮುರಿದರು

ದಾಂಡಿಯ ನಿವಾಸಿಗಳು ಸ್ವಲ್ಪ ದಿನಗಳ ಹಿಂದೆ ಸಮುದ್ರ ತೀರಕ್ಕೆ ಹೋಗಿ ಅಲ್ಲಿ ಉಪ್ಪನ್ನು ಸಿದ್ಧ ಪಡಿಸಿಕೊಂಡು ಅದನ್ನು ಮನೆಗೆ ತೆಗೆದುಕೊಂಡು ಬಂದರು ಆ ಸಮಯದಲ್ಲಿ ಅಲ್ಲಿ ಇದ್ದ ಪೋಲೀಸರು ಅವರಿಗೆ ಯಾವ ರೀತಿಯಿಂದಲೂ ಅಡ್ಡಿ ಮಾಡಲಿಲ್ಲ.

ಹಿಂದುಸ್ಥಾನಕ್ಕೆ ಅಯರ್ಲಂಡದ ಸಹಾನುಭೂತಿ

ಹಿಂದುಸ್ಥಾನದ ಪರಿಸ್ಥಿತಿಯ ಸಂಬಂಧವಾಗಿ ಡಬ್ಲಿನದಲ್ಲಿ ಭಾಷಣ ಮಾಡುವಾಗ ಮಿ. ಡಿ-ವ್ಹೆಲೇರಾರವರು ಕೆಳಗಿನಂತೆ ನುಡಿದರು "ಭಾರತೀಯರು ಸಾಗಿಸಿದ ಅಹಿಂಸಾತ್ಮಕ ಹೋರಾಟವು ಜಗತ್ತಿನ ಇತಿಹಾಸದಲ್ಲಿಯೇ ಅಭೂತಪೂರ್ವವಾದದ್ದಿದೆ. ಅವರ ಮುಖಂಡನು ಆ ಹಿಂಸಾ ಶಕ್ತಿಗೆ ಗಟ್ಟಿಯಾಗಿ ಅಂಟಿಕೊಂಡು ಅದರಂತೆ ಈ ವರೆಗೆ ಆಚರಿಸಿದ್ದಾನೆ."

ಹಿಂದುಸ್ಥಾನದಲ್ಲಿಯ ಬ್ರಿಟಿಶ ಧೋರಣವನ್ನು ಟೀಕಿಸಿ ಅವರು ಹೀಗೆ ಹೇಳಿದರು.

"ನಾವು ಬ್ರಿಟಿಶ ಸಾಮ್ರಾಜ್ಯದಲ್ಲಿ ಇರುತ್ತಿರುವದೇನೋ ನಿಜ. ಆದರೆ ಅದೆಕ್ಕೆ ನಾವು ಸಂಬಂಧಿಸಿಲ್ಲ ಅದ್ದರಿಂದ ನಾವು ಬ್ರಿಟಿಶರ ಕೈಕ್ಕಗಳಿಗೆ ಎಷ್ಟೂ ಜವಾಬದಾರರಿಲ್ಲ."

ಕಾಂಗ್ರೆಸ್ ಸೆಕ್ರೆಟರಿಯನ್ನು ಗುಂಡು ಹೊಡೆದುಕೊಂದರು

ಫ್ಯಾಸಿಫಿಕ್ ಕೋಸ್ಟದ ಇಂಡಿಯನ್ ನ್ಯಾಶನಲ್ ಕಾಂಗ್ರೆಸದ ಸೆಕ್ರೆಟರಿಯವರಾದ ಶ್ರೀ ಸಾಜನ ರಾಮಧಾಮಿಯವರು ಹಾದಿಯಲ್ಲಿ ಹಾಯ್ದು ಹೋಗುತ್ತಿರುವಾಗ ಯಾವನೋ ಒಬ್ಬನು ಅವರ ಮೇಲೆ ಗುಂಡು ಹಾರಿಸಿ ಅವರನ್ನು ಕೊಂದಿದ್ದಾನೆ. ಒಬ್ಬ ಭಾರತೀಯನು ಅವರ ಮೇಲೆ ಪಿಸ್ತೂಲ ಹಾರಿಸಿದ್ದನ್ನು ನೋಡಿದ್ದೇವೆಂಬುದಾಗಿ ಕೆಲವರು ಹೇಳುತ್ತಿರುವರು. ಅವರು ಮರಣ ಹೊಂದಿ ಬಿದ್ದ ಸ್ಥಳದಲ್ಲಿ ಎರಡು ಪಿಸ್ತೂಲುಗಳು ಸಿಕ್ಕಿವೆ.

ಬಟ್ಟೆಯ ವ್ಯಾಪಾರಿಗೆ ಗುಂಡು ಹೊಡೆದರು.

(ಶತ್ರುತಿಯ ವಾರ್ತೆ ತಾ॥ ೧೩)

ಅಮೃತಸರದಲ್ಲಿಯು ಓರ್ವ ಪರದೇಶಿ ಬಟ್ಟೆಯ ವ್ಯಾಪಾರಿಯು ಗುಂಡಿನಿಂದ ಹೊಡೆಯಲ್ಪಟ್ಟು ಗಾಯಹೊಂದಿ ಬಿದ್ದಿದ್ದಾನೆ.

ಭಯಂಕರ ಭೂಕಂಪ ೨೦೦ ಜನರಿಗೆ ನಾರಜ ೧೫೦ ಜನರಿಗೆ ಗಾಯ

ನ್ಯೂಜೀಲಂಡದ ನೇಪಿಯರ ಪ್ರದೇಶದಲ್ಲಿ ಸ್ವಲ್ಪ ದಿನಗಳ ಹಿಂದೆ ಸಂಭವಿಸಿದ ಭೂಕಂಪದಿಂದ ಮೂಲಕವಾಗಿ ಒಟ್ಟಿಗೆ ೨೧೨ ಜನರು ಮರಣ ಹೊಂದಿದ್ದಲ್ಲದೆ ೧೫೦ ಜನರಿಗೆ ಗಾಯಗಳಾಗಿವೆಯೆಂಬುದಾಗಿ ಅಲ್ಲಿಯ ಗವರ್ನರ ಜನರಲ್ಲರು ಪ್ರಸಿದ್ಧ ಮಾಡಿದ್ದಾರೆ.

ಬೋರಸಾದದಲ್ಲಿ ಪೋಲೀಸರ ಪುಂಡಾಟಿಕೆ

ಬೋರಸಾದದಲ್ಲಿಯ ಪೋಲೀಸರ ಪುಂಡಾಟಿಕೆಯನ್ನು ನಿಷೇಧಿಸುವ ಕುರಿತು ಮುಂಬಯಿಯಲ್ಲಿ ತಾ॥ ೪ನೆಯ ದಿವಸ ನೆರೆದ ಸಭೆಯಲ್ಲಿ ಭಾಷಣ ಮಾಡುವಾಗ ಶ್ರೀಮತಿ ತಿಲಕ್ಷ್ಮೀ ಜೀರಾ ಅವರು ಅಲ್ಲಿಯ ಹೃದಯ ದ್ರಾವಕ ದೃಶ್ಯವನ್ನು ಕೆಳಗಿನಂತೆ ಬಣ್ಣಿಸಿದರು.

ಸ್ತ್ರೀಸಿಕವ್ ದಿವಸದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸುತ್ತು ಮುತ್ತಲಿನ ಹಳ್ಳಿಗಳಿಂದ ಎಷ್ಟೋಜನ ಸ್ತ್ರೀಯರು ಬೋರಸಾದಕ್ಕೆ ಬಂದಿದ್ದರು. ನಾನೂ ಕೆಲವು ಜನ ಸಹಚರರಿಗೆ ಕೊಂದಿಗೆ ಅಂದು ಅಲ್ಲಿಗೆ ಹೋಗಿದ್ದೆ. ನಾವೆಲ್ಲರೂ ಅಲ್ಲಿ ಒಂದು ಧರ್ಮ ಶಾಲೆಯಲ್ಲಿ ಇಳಿದುಕೊಂಡಿದ್ದೆವು. ಬೇರೆ ಬೇರೆ ಹಳ್ಳಿಗಳಿಂದ ಬಂದ ಸ್ತ್ರೀಯರೂ ಬೇರೆ ಬೇರೆ ಧರ್ಮಶಾಲೆಗಳಲ್ಲಿ ಇಳಿದುಕೊಂಡಿದ್ದರು. ಒಂದೇ ಕಾಲಕ್ಕೆ ಅನೇಕ ಮೆರವಣಿಗೆಗಳನ್ನು ಹೊರಡಿಸಿಕೊಂಡು ಹೋಗಬೇಕಾಗಿ- ನವೆಲ್ಲರ ವಿಚಾರವಿತ್ತು.

ನಾವು ಮೆರವಣಿಗೆಯನ್ನು ಹೊರಡಿಸಿಕೊಂಡು ಹೋಗುವದಕ್ಕಿಂತ ಪೂರ್ವದಲ್ಲಿಯೇ ಪೋಲೀಸರು ನಮ್ಮ ಧರ್ಮಶಾಲೆಗೆ ಬಂದು ಅಡಚಣೆ ಮಾಡಿದರು. ಅವರು ಹೊರಗಿನವರನ್ನು ಒಳಗೆ ಬಿಡಲಿಲ್ಲ ಮತ್ತು ಒಳಗಿನವರಿಗೆ ಹೊಂಗೆ ಹೋಗಗೊಡಲಿಲ್ಲ. ಆದ್ದರಿಂದ ಹೊರಗಿನ ಸುದ್ದಿಯು ಏನೂ ತಿಳಿಯದಾಯಿತು. ಮೆರವಣಿಗೆ ಹೊರಡಿಸಿಕೊಂಡು ಹೋಗದೇಕೆಂದು ತಾವಾಗಿ ನಿರ್ಣಯಿಸಿಕೊಂಡು ನಾವು ಹೊರಗೆ ಕಾಲಿಟ್ಟೆವು. ಪೋಲೀಸರು ನಮ್ಮನ್ನು ಮುಂದಕ್ಕೆ ಹೋಗಗೊಡಲಿಲ್ಲ. ನಾವು ಅಲ್ಲೆಯೇ ನಿಂತುಕೊಂಡೆವು. ಪೋಲೀಸರು ಒಬ್ಬಿಂದೊಬ್ಬರು ನಮ್ಮ ಮೇಲೆ ಏರಿ ಬಂದು ನಮ್ಮನ್ನು ಒಳಗಾಗಿ ಧಕ್ಕಿಸಹತ್ತಿದರು. ಕೆಲವರು ನಮಗೆ ಸಿಳ್ಳು ಸಿಳ್ಳು ಹಾಗೆ ಹೊಡೆದು ನಮ್ಮನ್ನು ಅವಮಾನಗೊಳಿಸಿದರು. ಕೆಲವರು ನಮ್ಮ ಕುರುಳು ಹಿಡಿದು ನಮ್ಮನ್ನು ದರ ದರ ಎಳೆದರು. ಪೋಲೀಸರು ಹೊರಟುಹೋದ ಮೇಲೆ ಕೆಲವು ಜನರು ನಮ್ಮಲ್ಲಿಗೆ ಬಂದು ನಮ್ಮನ್ನು ತಮ್ಮ ಮನೆಗೆ ಔಷಧೋಪಚಾರಕ್ಕಾಗಿ ಕರದುಕೊಂಡು ಹೋದರು.

[ಬೋರಸಾದದಲ್ಲಿಯ ಪೋಲೀಸರ ಪುಂಡಾಟಿಕೆಯ ಸಂಬಂಧವಾಗಿ ಸರಕಾರದ ಮುಖ್ಯ ಪಾತೆಯ ಅಧಿಕಾರಿಗಳು ಒಂದು ಉದ್ಧವಾದ ಪ್ರಕಟನೆಯನ್ನು ಹೊರಡಿಸಿದ್ದು, ಅದರಲ್ಲಿ ಅವರು ಅನ್ನುವದೇನಂದರೆ:— ಜಾನೇವರಿ ೨೧ನೆಯ ತಾರೀಖಿನ ದಿವಸ ಬೋರಸಾದದಲ್ಲಿ ಜನ ಸಮುದಾಯವು ಹೆಚ್ಚಿಗೆ ಕೂಡಿತ್ತು. ಕೆಲವರ ಕೈಯಲ್ಲಿ ಲಾಠಿ, ಚಾಕು ಮೊದಲಾದವುಗಳು ಇದ್ದವು. ಸ್ತ್ರೀಯರು ಮಂಟಪಗಿಯಲ್ಲಿ ಕೆಲವು ಗಂಡಸರೂ ಇದ್ದರು. ಅವರು ತಮ್ಮ ಕೈಯಲ್ಲಿ ಲಾಠಿ ಹಿಡಿದಿದ್ದರು. ಅಲ್ಲಿ ಆ ಸಮಯದಲ್ಲಿ ಪೋಲೀಸ ಅಧಿಕಾರಿಗಳನ್ನೊಳಗೊಂಡು ೩೦ ಜನ ಪೋಲೀಸರಿದ್ದರು. ೧೪ ಜನರ ಕೈಯಲ್ಲಿ ಬಂದೂಕುಗಳಿದ್ದವು. ೧೦ ಜನರು ಲಾಠಿ ಹಿಡಿದಿದ್ದರು. ಸಬ್ ಇನಸ್ಪೆಕ್ಟರರ ಅಪ್ಪಣೆ ಗನುಸಾರವಾಗಿ ಮೆರವಣಿಗೆಗೆ ಅಡ್ಡಿ ಮಾಡಲಾಯಿತು. ಸ್ತ್ರೀಯರು ಮುಂದಕ್ಕೆ ಸಾಗಿಹೋಗಲು ಪ್ರಯತ್ನಿಸಿದರು. ಪೋಲೀಸರು ಲಾಠಿ ಮತ್ತು ಒಂದೂಕಗಳನ್ನು ಅಡ್ಡಹಿಡಿದು ಅವರನ್ನು ಹಿಂದಕ್ಕೆ ದಬ್ಬಿದರು ಹೆಂಗಸರ ಹಿಂಬದಿಯಲ್ಲಿದ್ದ ಗಂಡಸರು ಕಲ್ಲು ಒಗೆಯುವಾರಂಭಿಸಿದರು. ಇಬ್ಬರು ಪೋಲೀಸರು ಗಾಯಹೊಂದಿದರು. ಕೆಲವು ಹೆಂಗಸರ ಕೈಯಲ್ಲಾದರೂ ಕಲ್ಲುಗಳಿದ್ದವು. ಅವರು ಅವುಗಳನ್ನು ಒಗೆದರೋ ಇಲ್ಲವೋ ಹೇಳಲು ಬರುವಂತಿಲ್ಲ. ಪೋಲೀಸರ ಸವೀಪದಲ್ಲಿದ್ದವರು ಪೋಲೀಸರ ಮೇಲೆ ಮಣ್ಣೆತ್ತೂರಿದರು. ಈ ಗೊಂದಲವನ್ನು ಕಂಡು ಸಬ್ ಇನಸ್ಪೆಕ್ಟರರು ಗಂಡಸರನ್ನು ಪದುರಿಸಲು ಪೋಲೀಸರಿಗೆ ಅಪ್ಪಣೆಮಾಡಿದರು. ಗಂಡಸರು ಹೆಂಗಸರ ಹಿಂಬದಿಯಲ್ಲಿದ್ದರು. ಪೋಲೀಸರು ಬಂದೂಕ ಹಾಗು ಲಾಠಿಗಳ ಸಹಾಯದಿಂದ ಹೆಂಗಸರನ್ನು ಸರಿಸಿ ಗಂಡಸರಿದ್ದಲ್ಲಿಗೆ ಹೋದರು. ಈ ಸಮಯದಲ್ಲಿ ಗಾಯವಾಗಿರಬಹುದು. ಕೆಲವರು ಗದ್ದಲದಲ್ಲಿ ತುಳಿಯಲ್ಪಟ್ಟಿರಬಹುದು. ಪೋಲೀಸರು ಯಾತಕ್ಕೂ ಬೇಕಂತಲೆ ಒದ್ದಿರುವದಿಲ್ಲ. ಪೋಲೀಸರು ತಡಿದು ಬಂದಿದ್ದರೆಂಬುದಾಗಿ ಕೆಲವರು ಆರೋಪಹೊರಿಸಿದ್ದಾರೆ. ಇದನ್ನು ನಂಬುವಂತಿಲ್ಲ. ಇಂತಹ ಗೊಂದಾಂತರದಲ್ಲಿ ಹೆಂಗಸರನ್ನು ನೂಕಿದವರೇ ಜವಾಬದಾರರಿರುವರು ಹೊರತಾಗಿ ಸಬ್ ಇನಸ್ಪೆಕ್ಟರರು ಇದಕ್ಕೆ ಜವಾಬದಾರರಲ್ಲ ಯಾಕಂದರೆ ಅವರು ತಮ್ಮ ಕರ್ತವ್ಯವನ್ನೆವನ್ನು ಮಾಡಿದರು.]

"ತಾ॥ ೨೧ನೆಯ ಜಾನೇವರಿ ದಿವಸ ಬೋರಸಾದದಲ್ಲಿ ಪೋಲೀಸರು ಸ್ತ್ರೀಯರ ಮೆರವಣಿಗೆಗೆ ಅಡ್ಡೀ ಮಾಡಿ ಅವರನ್ನು ಲಾಠಿಗಳಿಂದ ಥಳಿಸಿದರು, ಈ ಬಗ್ಗೆ ಸರಕಾರದವರು ಏನಾದರೂ ವಿಚಾರಣೆ ನಡಿಸಿರುವರೋ" ಎಂದು ಕಮಾಂಡರ ಕೆನವರ್ದಿಯವರು ಕಾಮನ್ಸ ಸಭೆಯಲ್ಲಿ ಪ್ರಶ್ನೆ ಮಾಡಿದರು.

ಇದಕ್ಕೆ ಭಾರತ ಮಂತ್ರಿಗಳಾದ ಮಿ. ಬೆನ್ನರು "ಮುಂಬಯಿ ಸರಕಾರದವರು ವಿಚಾರಣೆ ಮಾಡಿದ್ದಾರೆ. ಹೆಂಗಸರ ಹಿಂಬದಿಯಲ್ಲಿಯ ಗಂಡಸರು ಪೋಲೀಸರ ಮೇಲೆ ಕಲ್ಲು ಒಗೆದರು. ಇಬ್ಬರು ಪೋಲೀಸರು ಗಾಯ ಹೊಂದಿದರು. ಅಲ್ಲಿ ನೆರೆದ ೨೦೦೦ ಜನರು ಪೋಲೀಸರ ಮೇಲೆ ಹಲ್ಲೆ ಮಾಡುವ ವಿಚಾರದಲ್ಲಿದ್ದರು. ಆಗ ಪೋಲೀಸರು ಲಾಠಿಗಳಿಂದ ಅವರನ್ನು ಪದುರಿಸಿದರು." ಹೀಗೆ ಉತ್ತರ ಕೊಟ್ಟರು.

ಪಾರ್ಲಮೆಂಟಿದಲ್ಲಿ ಸೆಂಧಾನದ ಬಗ್ಗೆ ಪ್ರಶ್ನೆ

ಒಪ್ಪಂದದ ಸಂಬಂಧವಾಗಿ ಮಹಾತ್ಮಾ ಗಾಂಧಿಯವರು ಹಿಂದುಸ್ಥಾನ ಸರಕಾರಕ್ಕೆ ಯಾವ ಯಾವ ಕರಾರುಗಳನ್ನು ಹಾಕಿದ್ದಾರೆ ಮತ್ತು ಹಿಂದುಸ್ಥಾನ ಸರಕಾರದವರು ಆ ಸಂಬಂಧವಾಗಿ ಏನು ಉತ್ತರ ಕೊಟ್ಟಿದ್ದಾರೆ ಇವುಗಳನ್ನು ತಿಳಿಸಲು ಮಿ. ಹೇಟರ ಮ್ಯಾಕ್ಡೋನಾಲ್ಡರು ಕಾಮನ್ಸ ಸಭೆಯಲ್ಲಿ ಕೇಳಿಕೊಂಡರು.

ಮಹಾತ್ಮಾ ಗಾಂಧಿಯವರು ಪತ್ರಿಕಾ ಪ್ರತಿನಿಧಿಗಳ ಮುಂದೆ ವ್ಯಕ್ತಪಡಿಸಿದ ಹಾಗು ಅವರು ಮತ್ತು ಇನ್ನಿತರ ಕಾಂಗ್ರೆಸ್ ಮುಖಂಡರು ತಮ್ಮ ಭಾಷಣಗಳಲ್ಲಿ ಹೊರಗೆಡಹಿದ ಕರಾರುಗಳ ಹೊರತಾಗಿ ಆ ಸಂಬಂಧವಾಗಿ ಹೆಚ್ಚಿಗೆ ಏನೂ ತಿಳಿದಿಲ್ಲವೆಂದೂ, ಸರ್ ಸಪ್ರು ಮೊದಲಾದವರು ಮಹಾತ್ಮಾ ಗಾಂಧಿಯವರೊಡನೆ ಸದ್ಯದ ಸಂಬಂಧವಾಗಿ ಚರ್ಚೆ ಮಾಡುವವರಿದ್ದಾರೆಂದೂ ಮಿ. ಬೆನ್ನರು ಹೇಳಿದರು.

ಇಹಪರೋತ್ತ

ಶ್ರೀ ತಿನಪ್ಪ ಪಲ್ಲೇದ ಇವರ ಅಂಗಿಯವರಾದ ಶ್ರೀ ಬಸಯ್ಯ ಸೂಳೇಭಾವಿಯವರು ಬಟ್ಟೆಯ ವ್ಯಾಪಾರಕ್ಕೆರ ಸಂಘವನ್ನು ನಿರುಮಾಡಿ ವಿರುದ್ಧ ವರ್ತಿಸಿ ಪರದೇಶಿ ವಸ್ತುಗಳು ತರಿಸಿಕ್ಕೆರಿಂದ, ಅವರ ಸಂಗಡ ಯಾವ ರೀತಿಯಿಂದಲೂ ಕೊಡತೆಗೆದುಕೊಳ್ಳುವ ವ್ಯವಹಾರ ಮಾಡಬಾರದೆಂದು ಒಟ್ಟೆಯ ವ್ಯಾಪಾರ ಸಂಘದವರು ತಾ॥ ೧೫—೨—೩೧ ನೆಯ ದಿವಸ ಸ್ವೀಕೃತ ಜನರಲ್ ಮೀಟಿಂಗದಲ್ಲಿ ತೀರ್ಮಾನ ಮಾಡಿದ್ದಾರೆ.

ಗದಗ–ಬೆಟಗೇರಿ ಅಖಿಲ ಭಾರತೀಯ ಸ್ವದೇಶಿ ಸ್ವದರ್ಶನದ ಅಧ್ಯಕ್ಷರಾದ

ಶ್ರೀ ಪಂಡಿತ ತಾರಾನಾಥರವರ ಭಾಷಣವು

(ಹಿಂದಿನಿಂದ ಮುಂದೆ ಸಾಗಿದ್ದು.)

ಜನತೆಯು ಹಿತದ ಚಿನ್ನವು ಅದರ ಕೃಷಿ ಉದ್ಯಮ ವ್ಯಾಪಾರಗಳಲ್ಲಿ ತೋರುತ್ತದೆ. ನೊದಲು ಜೇಸಾಯ ದಿಂದ ಒಬ್ಬೊಬ್ಬರಿಗೆ ಬರುವ ಧಾನ್ಯ ಮುಂತಾದ ಪದಾರ್ಥಗಳನ್ನು ಬೆಲೆಯನ್ನು ಹೋಲಿಸಿ ನೋಡವ.

ಇಂಡಿಯ	೩೬೫೦೦೦೦೦	ಪೌಂ.
ಯು. ಅಮೇರಿಕಾ	೪೨೭೦೦೦೦೦೦	,,
ಜಪಾನ್	೩೦೦೦೦೦೦೦	,,
ಇಂಗ್ಲಂಡ, ವೇಲ್ಸ್	೨೩೯೦೦೦೦೦೦	,,

ಮೇಲೆ ನೋಡಿದರೆ ಇಲ್ಲಿ ನೊರಕ್ಕೆ ೮೦ ರಂತೆ ಜನರು ಹೊಲ-ಗದ್ದೆಗಳನ್ನು ಸಾಗುವಳಿಮಾಡುವರು| ಮೇಲೆ ಕೊಟ್ಟದ್ದು ಯುದ್ಧಕ್ಕೆ ಹಿಂದಿನ ಲೆಕ್ಕಾಚಾರ. ಅದಿನಿಂದ ಆ ದೇಶಗಳು ಭೌತಿಕಶಾಸ್ತ್ರದ ಹೊಸ ಹೊಸ ಶೋಧಗಳಿಂದ ತಮ್ಮ ಕೃಷಿಯನ್ನು ಬೆಳಸಿದೆ. ನಾವು ಇನ್ನು ನಮ್ಮ ಹಳೆಯ ರೀತಿಯಿಂದಲೇ ಕೇಸವನ್ನು ಮಳೆ ಗಾಳಿ ದೇವರ ಮೇಲೆ ಭಾರಹಾಕಿ ನಡೆಸುತ್ತಿದ್ದೇವೆ! ನಮ್ಮಲ್ಲಿಯೂ ಪ್ರಗತಿಯಿಲ್ಲವೆಂದಲ್ಲ ಅದು ಲಿಖ್ಖಕ್ಕೆಮಾತ್ರ ಯೋಗ್ಯವಲ್ಲ.

ಬೇಸಾಯದ ಸಂಪೂರ್ಣ ಉತ್ಪನ್ನವನ್ನು ಹಂಚಿದರೆ ಸರಾಸರಿ ತಲೆ ಒಂದಕ್ಕೆ:—

ಯು. ಅಮೇರಿಕಾ	೪೦ ಪೌಂ. ೬ ಶಿ.
ಕೆನಡಾ	೨೯ ,, ೫ ಶಿ.
ಇಂಡಿಯ	೨೨ ೧/೨ ರೂ. ಗಳು

ಉದ್ಯಮಗಳಿಂದ ತಲೆ ಒಂದರ ಸರಾಸರಿ ಉತ್ಪನ್ನ:—

ಯು. ಅಮೇರಿಕಾ	೬೬ ಪೌಂಡ
ಕೆನಡಾ	೬೨ ,,
ಇಂಡಿಯಾ	೩೬ ರೂಪಾಯಿ

ಜೇಸಾಯದಿಂದ ಬರುವ ಉತ್ಪನ್ನಕ್ಕಿಂತಲೂ ಉದ್ಯಮಗಳಿಂದ ಬರುವದು ಅವರಲ್ಲಿ ಎಷ್ಟೆಷ್ಟೊ ಅಧಿಕವಾಗಿದೆ. ಆದರೆ ನಮ್ಮಲ್ಲಿವಾಸ್ತವ ಅದು ಜೇಸಾಯದ ಉತ್ಪನ್ನದ ಒಂದು ಐದನೆಯ ಭಾಗ ಸುವಾರಾಗಿದೆ!

ಇಷ್ಟುವಾಸ್ತವೇ ಅಲ್ಲ ಉದ್ಯಮಗಳ ವಿಷಯ ಲೆಕ್ಕ ಕೊಡಲು ಸರಕಾರಿ ದಫ್ತರ್‌ಗಳಲ್ಲಿ ಸರಿಯಾಗಿಟ್ಟಿರುವದಿಲ್ಲ ಎಂದು ಸರ್. ವಿಶ್ವೇಶ್ವರಯ್ಯನಂಥವರು ಹೇಳುತ್ತಾರೆ!

ಉದ್ಯಮವು ಬೆಳೆಯಬೇಕಾದರೆ ಅದನ್ನು ಕೆಲಸಿನ ಶಾಲೆಗಳು ಬೇಕು. ಕಾರಖಾನೆಗಳು ಬೇಕು ಸಾಮಾನ್ಯವಾಗಿ—ಒಯ್ಯಲಿಕ್ಕೆ ಕೇಡದ ಬೀದಿಗಳು, ಸೈಲ ಬಂಡಿಗಳು ಬೇಕು. ಟೆಲಿಫೋನ್ ಟೆಲಿಗ್ರಾಫ್‌ಗಳ ಕೊಳ್ಳವವೇಕು. ಅವುಗಳ ಜಾಹೀರಾತುಗಳನ್ನು ಕಪ್ಪಿಸುವವಕ್ಕೆ ವರ್ತಮಾನಪತ್ರಿಕೆಗಳು ಬೇಕು. ಇವೆಲ್ಲವನ್ನು ಸಹ ಸರಿಹೋಲಿಸಿ ನೋಡಬೇಕಾಗುತ್ತದೆ.

ಎಲ್ಲ ವರ್ತಮಾನಪತ್ರಿಕೆಗಳನ್ನು ತಕ್ಕೊಂಡು ಲೆಕ್ಕ ಜನಸಂಖ್ಯೆ, ಪತ್ರಪತ್ರಿಕೆಗಳು ಬೀಳುತ್ತವೆಂದು ಸರಾಸರಿ ನೋಡಿದರೆ:—

ಯು. ಅಮೇರಿಕಾ	೨೨. ೫
ಇಂಗ್ಲಂಡ್, ವೇಲ್	೧೯. ೦
ಜಪಾನ್	೫
ಇಂಡಿಯಾ	೧. ೨

"ಭಾರತೀಯರ ವೈಶ್ಯಗಳು ಬಹಳ ಬಡಕ್ಕಿತಿಯಲ್ಲಿವೆ ಮತ್ತು ಅವು ಸದಾ ಹಿಂಸೆಗೆ ಗುರಿಯಾಗಿವೆ" ಎಂದು ಸರ್ ವಿಶ್ವೇಶ್ವರಯ್ಯರು ಹೇಳುತ್ತಾರೆ. ಈ ಹಿಂಸೆಗಳು ಈಗ ಒರ್ಡಿನೆನ್ಸ್ ಮುಂತಾದ ಭೀಕರ ರೂಪಗಳನ್ನು ತಾಳಿವೆ ಎಂದು ತಮಗೆಲ್ಲರಿಗೂ ಗೊತ್ತು.

ರೈಲುವೇಗಗಳನ್ನು ನೋಡೋಣ. ಲಕ್ಷ ಜನಕ್ಕೆ ಸರಾಸರಿ ಎಷ್ಟು ಮೈಲು ರೇಲ್ವೆ ಇವೆಯೆಂದು ನೋಡುವಃ—

ಯು. ಅಮೇರಿಕಾ	೨೫೩. ೩
ಕೆನಡಾ	೪೮೩. ೫
ಇಂಗ್ಲಂಡ್, ವೇಲ್ಸ್	೫೧. ೫
ಆಸ್ಟ್ರೇಲಿಯಾ	೪೯೫ ೫
ಇಂಡಿಯಾ	೧೧ ೫

ಕೆನಡಾ, ಆಸ್ಟ್ರೇಲಿಯಾಗಳು ಡೊಮಿನಿಯನ್‌ಗಳು ಅಂತ ಡೊಮಿನಿಯನ್ನನ್ನು ಇಂಡಿಯಗೆ ಕೊಡುವ ಇಚ್ಛೆಯು ಸರಕಾರದಲ್ಲಿ ಎಷ್ಟು ಧಾರಾಳವಾಗಿದೆ. ಆದಕ್ಕಾಗಿ ಇಂದಿನವರೆಗೆ ಅದೆಷ್ಟು ಕಷ್ಟಪಟ್ಟಿದೆ ಎಂಬುದನ್ನು ಈ ಸಂಖ್ಯೆಗಳಿಂದಲೇ ತಿಳಿದುಕೊಳ್ಳಬಹುದಲ್ಲವೇ?

ಪೋಸ್ಟ್ (ಕಚೇರಿಯಿಂದ ಕಳಿಸಿದ್ದು) ಟೆಲಿಗ್ರಾಫ್ (ಸಂದೇಶಗಳು)

ಯು ಅಮೇರಿಕಾ	೧೫೬	—
ಜಪಾನ್	೩೪	೭೩
ಕೆನಡಾ	—	೧೫೪
ಇಂಗ್ಲಂಡ್ ವೇಲ್ಸ್	೧೨೩	೧೯೪
ಇಂಡಿಯಾ	೩ ೬	೬. ೩

[ಮುಂದೆಸಾಗುವದು]

ಬರ್ಮಾದಲ್ಲಿ ೧೨೯ ಸಂಸ್ಥೆಗಳು

ಕಾಯಿದೆಗೆ ವಿರುದ್ಧವಾದವು

ರಾಜ್ಯಕ್ರಾಂತಿ ಉಂಟು ಮಾಡಿ ಸಾರ್ವಜನಿಕ ಶಾಂತತೆಗೆ ಧಕ್ಕೆ ತರಲು ಪ್ರಯತ್ನಿಸುತ್ತಿರುವರೆಂಬ ಆರೋಪ ಹೊರಿಸಿ, ಬರ್ಮಾದಲ್ಲಿಯ ಒಟ್ಟಿಗೆ ೧೨೯ ಸಂಸ್ಥೆಗಳನ್ನು ಅಲ್ಲಿಯ ಸರಕಾರದವರು ಕ್ರಿ. ಲಾ. ಅಮೆಂಡಮೆಂಟ್ ಕಾಯಿದೆಯ ಅನ್ವಯ ಕಾಯಿದೆಗೆ ವಿರುದ್ಧ ಮಾಡಿದ್ದಾರೆ.

ಮಹಾತ್ಮರು

ಗುಜರಾಥಿನಲ್ಲಿ ಪ್ರವಾಸಮಾಡುವರು

ಮಹಾತ್ಮಾ ಗಾಂಧಿಯವರು ತಾ|| ೧೫ ನೆಯ ದಿವಸ ಅಲಹಾಬಾದದಿಂದ ಹೊರಟು ಅಹಮದಾಬಾದಿಗೆ ಬಂದು ಅಲ್ಲಿ ಒಂದೆರಡು ದಿನ ಳಿದು ನಂತರ ಪ್ರವಾಸ ಮಾಡುವರು. ಖಲೀಫ ಅವರು ಸರದಾರ ವಲ್ಲಭಭಾಯಿ ಪಾಟೀಲ ಇವರು ಕಾಂಗ್ರೆಸ್ ಮುಖಂಡರೊಡನೆ ಬೋರಸಾದಕ್ಕೆ ಹೋಗಿ ಪೋಲೀಸರ ಪುಂಡಾಟಿಕೆಯ ವಿಷಯವಾಗಿ ನಿಜಸಂಗತಿಗಳನ್ನು ತಿಳಿದುಕೊಳ್ಳುವರು. ಅಂದ ಬಾರ್ಡೋಲಿ, ಜಲಾಲಪುರ ಶಾಂತಿಳಿಗಳೊಳಗಿನ ಕೆಲವು ಸ್ಥಳಗಳಿಗೆ ಭೆಟ್ಟಿಕೊಟ್ಟು ಅವರು ಮುಂಬಯಿಗೆ ತೆರಳುವರು.

(ಕನೆಯ ಪುಟದಿಂದ ಮುಂದೆ)

ಕೊಂಡು ಕೌನ್ಸಿಲುಗಳಿಗೆ ಹಾಕಿದ ಬಹಿಷ್ಕಾರವನ್ನು ಕಿತ್ತುಗೆದು ಕೌನ್ಸಿಲ್ ಪ್ರವೇಶ ಮಾಡಿದರು. ಅಲ್ಲಿ ಸ್ವರಾಜ್ಯ ಪಕ್ಷವೆಂಬ ಪಕ್ಷವನ್ನು ಸ್ಥಾಪಿಸಿ, ಅಲ್ಲಿಂದ ಸಂಗಡ ಹೋರಾಡಿದರು. ಈ ಕೌನ್ಸಿಲಗಳಲ್ಲಿ ಒಣ ವಾಗ್ವಾದದಿಂದ ಏನೂ ಪ್ರಯೋಜನವಿಲ್ಲೆಂದು ಅನುಭವದಿಂದ ತಿಳಿದು ೧೯೨೭ರಲ್ಲಿ ಅಸೆಂಬ್ಲಿಯಿಂದ ಹೊರಬಿದ್ದರು.

ಹಿಂಗೆಸ್ಥಾನದಿಂದು ಘಟನೆಯನ್ನೇ ಪರಿಹರಿಸಲು ಕೂಡಿದ ಸರ್ವಪಕ್ಷೀಯ ಸಮಿತಿಗೆ ನೇತೃತ್ವವನ್ನು ಇವರೇ ವಹಿಸಿ, ಅದನ್ನು ಯಶಸ್ವಿಗೊಳಿಸಿ ಕೊನೆಗಾಣಿಸಿದರು. ಇವರ ಪರಿಶ್ರಮದಿಂದಲೇ ಹೊಸ ಪಾರ್ಟಿಗೆ "ನೆಹರು ಪಾರ್ಟಿ" ಎಂಬ ಹೆಸರು ಬಿನ್ನು ಇವರ ಹೆಸರೆ ಭಾರತದ ಇತಿಹಾಸದಲ್ಲಿ ಚಿರಕಾಲ ಉಳಿಯುವಂತೆ ಆಯಿತು. ಮತ್ತೆ ಈ ವರದಿಯು ಹೊರಬಿದ್ದ ವರ್ಷವೇ (೧೯೨೮) ಕಲಕತ್ತೆಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ಅಧ್ಯಕ್ಷಪದವನ್ನು ಇವರಿಗೇ ಕೊಟ್ಟು ಹಿಂದೀ ರಾಷ್ಟ್ರವು ಪುಡಿಸಣ್ಣ ಹುಬರನ್ನು ಪುನಃ ಸನ್ಮಾನಿಸಿತು.

೧೯೩೦ರಲ್ಲಿ ಮಾ. ಗಾಂಧಿಜಿಯವರು ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಲು, ರಾಷ್ಟ್ರಪತಿ ರಂ|| ಜವಾಹರಲಾಲರೂ, ಮಹಾತ್ಮಜಿಯವರೂ ಕಲ್ಕತ್ತಲ ಕಾಂಗ್ರೆಸ್ಸನ್ನು ಸೇರಲು, ಪುನಃ ರಾಷ್ಟ್ರಧುರೀಣರು ಪಂ|| ಮೋತೀಲಾಲರ ಯವರ ಕೊರಳಿಗೇ ಜಯಮಾಲೆ ವೇ ತಿಂಗಳಲ್ಲಿ ಬಿದ್ದಿತು. ಮತ್ತು ಅದನ್ನು ಇವರು ಬಹು ಧೈರ್ಯದಿಂದಲೂ ದಕ್ಷತೆಯಿಂದಲೂ ವಹಿಸಿದುದು ಸರ್ವಶ್ರುತವಿಷಯ. ಲೇ. ಮ.

ಪರದೇಶಿ ಅರಿವೆಯ ವ್ಯಾಪಾರಿಯಂನ್ನ ಗುಂಡಿನಿಂದ ಹೊಡೆದದ್ದು

ಅವ್ಯತಿಸಂದಲ್ಲಿಯು ಪರದೇಶಿ ಅರಿವೆಯ ವ್ಯಾಪಾರಿಯಂದ ಶ್ರೀ ಸೋಹನಲಾಲರು ತಾ॥ ೧೧ನಯ ದಿನಸ ಮಧ್ಯರಾತ್ರಿಯಲ್ಲಿ ಟೆಂಗ ಯಲ್ಲಿ ಕುಳಿತುಕೊಂಡು ತಮ್ಮ ಅಂಗಡಿಯಂದ ತಮ್ಮ ಮನೆಗೆ ಒಯ್ಯುತ್ತಿದ್ದರು. ಸಾಯಂಕಲ್ ವೇಲ ಕಳ್ಳತನಮಾಡಿ ಓರ್ವ ಶರಣನು ಅ ಸಮಯದಲ್ಲಿ ತಲವಾ ಅಂತರದ ವರೆಗೆ ಅವನನ್ನು ಹಿಂಬಾಲಿಸಿ, ಬೇರ ಬೀಪರನ್ನಹಾ ಲದ ಬಳಿಯಲ್ಲಿ ಅವರ ವೇಲೆ ಪಿಸ್ತೂಲ ಹಾರಿಸಿ ಓಡಿ ಹೋದನು. ಶ್ರೀ ಸೋಹನಲಾ ಲರಿಗೆ ತೊಡೆಯಲ್ಲಿ ಸ್ವಲ್ಪ ಗಾಯವಾಯಿ ತು. ಅವರು ಅದೇ ಟಾಂಗೆಯಲ್ಲಿ ಹಾಗೆಯೆ ಸಿವಿಲ್ ಹಾಸ್ಪಿಟಲ್ಕೆ ಹೋದರು. ಅಲ್ಲಿ ಕರ್ನಲ್ ಪುರ ಯವರು ಶಸ್ತ್ರ ಕ್ರಿಯೆ ಮಾಡಿ ಗುಂಡನ್ನು ಹೊರಗೆ ತೆಗೆದರು. ಪೋಲೀಸರು ಅಪರಾಧಿ ಯನ್ನು ಕಂಡು ಹಿಡಿಯುವ ಒಗ್ಗೆ ಓಡಾಡ ಹತ್ತಿದ್ದಾರೆ.

ಪೋಷ್ಟಮನ್ನನ ಮೇಲೆ ಹಲ್ಲೆ ಮಾಡಿದರು

ಕಾಸೂನಗೋಸಲಾದಿಂದ ಖುರಾಂದೀಪ ಕ್ಕೆ ಟಪಾಲನ್ನ ತೆಗೆದುಕೊಂಡು ಹೋಗುತ್ತಿರು ವಾಗ ಖುರಾ ದೀಪಗ ಬಳಿಯಲ್ಲಿ ಯಾರೋ ಕೈ ಲವರು ಪೋಸ್ಟ ವೆಲೆ ಹಲ್ಲೆ ಮಾಡಿ,ಅವನನ್ನು ಲಂಚಿಸಿ ಪೊಡೆದು,ಟಪಾಲ ಚೀಲವನ್ನು ಎತ್ತಿಕೊಂಡು ಹೋದರು.ಪೊಸ್ಟವನ ಸ್ಥಿತಿ ಯು ಚಿಂತಾಜನಕ ವಾಗಿದೆ.

ಬನಾರಸದಲ್ಲಿ ಭಯಂಕರ ದಂಗೆ.

(ಶಂಕಿಯ ವಾರ್ತೆ ತಾ॥ ೧೩)

ಪರದೇಶಿ ಅರಿವೆಯ ವ್ಯಾಪಾರಿಯಾದ ಖಾನ ಜಾನ ಅಗಾರವಲನ್ನು ಯಾವನೋ ಒಬ್ಬನು ಮೊನ್ನಿನ ದಿವಸ ಗುಂಡಿನಿಂದ ಸಾಯ್ಸಿ ಹೊಡೆದ ಕಾರಣಕ್ಕಾಗಿ ಬನಾರಸದಲ್ಲಿ ಇಂದು ಹಿಂದೂ ಮುಸಲ್ಮಾನರಲ್ಲಿ ದಂಗೆಯಾಯಿತು. ಅನೇಕ ಜನರಿಗೆ ಗಾಯಗಳಾಗಿವೆ. ಯಾವತ್ತು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ ವನಸ್ಪತಿಗಳ ಅದ್ಭುತ ಮಹಿಮೆ.

ಬಾಲಾರ್ಕ ಮಧು.



ಇದನ್ನು ಮಕ್ಕಳು ಆನಂದದಿಂದ ಸೇವಿಸುತ್ತಾರೆ. ಇದು ಸುಧಾರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಉಣಿಸುವ ಹಾಲೂ ಅನ್ನವೂ ವೈದಿಕತ್ತ ಶರೀರದ್ದನ್ನಿ ಪೌಷ್ಟಿಕ ಧಾತುಗಳುಂಟಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಶುದ್ಧ ಮಾಂಸ ಬೆಳೆದು ಮಕ್ಕಳಿಗೆ ಒಳ್ಳೆ ಶಕ್ತಿಯೂ ದೇಹಧಾರ ಢ್ಯವೂ ಹೆಚ್ಚುವುದು ಕೇವಲ ವೈದ್ಯ ಹೊಗಳಿಕೆಯೆಂದು ತಾ ತ್ಸೈಮಾಡದೆ ಒಂದೇಸಂದು ಶೀಸೆ ತರಿಸಿಕೊಂಡಲ್ಲಿ ಇದರ ಅಪಾ ರಗುಣವು ತಾವಾಗಿ ತಿಳಿಯುವದು.

ಬೆಲೆ ಶೀಸೆ ೧ ಕ್ಕೆ ೦—೧೫—೦ ಟಿ. ಖ. ೦—೯—೦.

ಆರ್ಡರ ಜೊತೆಯಲ್ಲಿ ಅಡ್ವಾನ್ಸ ಬೆಲೆಯಲಗು ಕಳುಹಿಸಿಕೊಡತಕ್ಕದ್ದು. ಅಡ್ವಾನ್ಸ ಇಲ್ಲದ ಆರ್ಡರಗಳನ್ನು ಗಮನಿಸುವದಿಲ್ಲ.

V. Prasadika Oushadhalaya, SHIMOGA.
Mysore State.

ಲೋಕದಲ್ಲಿ ಅತ್ಯಂತ ಸುಖಿ

ವೆಂದರೆ ಸಂಪೂರ್ಣವಾದ ಆರೋಗ್ಯವನ್ನು ಹೊಂದ ವದೇ ಸೈ. ಅನೇಕ ಹತ್ತು ವರ್ಷದ ಹುಡುಗರು ಸಹ ವಿವಿಧ ದುಶ್ಚಟಗಳ ಬಲಿಗೆ ಬಿದ್ದು, ತಮ್ಮ ಆರೋಗ್ಯವನ್ನು ಕೆಡಿಸಿಕೊಂಡು, ಹಾಸಿಗೆ ಹಿಡಿದು ಯಾಕಕ್ಕೂ ಬಾರದವರಾಗುವರು.

ಅತಂಕ ನಿಗ್ರಹ ಮಾತ್ರೆಗಳು

ತಾರುಣ್ಯದ ಸ್ವೈರವೃತ್ತಿಯ ಭೀತಿಗದಿಂದಲೂ ಧಾತುವಿನ ಹ್ರಾಸದಿಂದಲೂ ಉಂಟಾದ ಎಲ್ಲ ಬಗೆಯ ದೌರ್ಬಲ್ಯಗಳು ನಿವಾರಣೆಗೆ ಈ ಮಾತ್ರೆಗಳು ರಾಮಬಾಣವಾಗಿವೆ. ದೇಹಕ್ಕೆ ಒಳ್ಳೇ ಬಲ ಕೊಟ್ಟು, ಧಾತುವನ್ನು ಇವು ಪೋಷಿಸುವವು. ೩೨ ಗ್ರಾಣಿಗಳ ಟಿನ್ನಿಗೆ ಬೆಲೆ ಒಂದೇ ರೂಪಾಯಿ ಹೆಚ್ಚಿನ ಸಂಗತಿಗಳನ್ನು ಪುಕ್ಕಟೆ ಯಾಗಿ ದೊರೆಯುವ ನಮ್ಮ ಕ್ಯಾಟಲಾಗಿನಲ್ಲಿ ನೋಡಿಕೊಳ್ಳಿರಿ.

ಅತಂಕನಿಗ್ರಹ ಔಷಧಾಲಯ,
ಸಂ॥ಟಿ, ಬ್ರಾಡ್ವೇ ಮದರಾಸು.

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರತ ನಗರದ ಶ್ರೀಮತಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ. ಕಾದಂಬರಿ)	೨—೮—೦
೩	ನೀತಿಕತೆಗಳು ಭಾಗ ೧.	೧—೪—೦
೪	ಪತಿವಶೀಕರಣ ನಾಟಕ.	೦—೧೨-೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೦೦-೦
೭	ಲಕ್ಷ್ಮೀಬಾಯಿ ರೂಪಾಸಿ ಚರಿತ್ರೆ.	೨—೦—೦
೮	ಕೈವ ಸುಧಾರ್ಣವ (ಸಚಿತ್ರ)	೩—೮—೦

ಕೂಡಲಾಗಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ

ಯಾವ ಕಂಪನಿಗಳೂ ಈ ವರೆಗೂ ಕೊಡದಷ್ಟು ಲಾಭವನ್ನು ಈ ೩ ವರ್ಷಗಳವರಿಗೆ ಒಂದೇಸವನೆ ಹಂಚಿದೆ!

ಜನರಲ್

ಅಶ್ಯೂರನ್ಸ ಸೊಸಾಯಿಟಿ. ಲಿ. ಅಜಮೀರ.

ಈ ಸೊಸಾಯಿಟಿಯ ಆಸ್ತಿಯು ೨೫ ಲಕ್ಷ ರೂ. ಗಳಿಗಿಂತಲೂ ಮಿಕ್ಕಿದೆ.

ಲಾಭ.

ವಿಮೆದಾರರಿಗೆ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ.

ತನ್ನ ೨೨ ನೇ ವರ್ಷದಲ್ಲಿ ಹಿಂದೀ ವಿಮೆ ಕಂಪನಿಯು ಕೊಟ್ಟ ಅತ್ಯಂತ ಹಚ್ಚು

ಲಾಭದ ಹಣಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೩೪ ನೇ ಮಾರ್ಚ ೩೧ಗೆ.	೧೯೩೫ ನೇ ಡಿಸೆಂಬರ ೩೧ಗೆ.	೧೯೩೬ ನೇ ಡಿಸೆಂಬರ ೩೧ಗೆ.
ಇದೇ ಆಯುಷ್ಯದ (ಕಡತನಾಗಿ ದೊರೆಯುತಕ್ಕದ್ದು) ವರ್ಷವೊಂದಕ್ಕೆ ೧೨ ½ ರೂ.	ಇದೇ ಆಯುಷ್ಯದ (ಕಡತವಲ್ಲದೆ ದೊರೆಯುತಕ್ಕದ್ದು) ವರ್ಷವೊಂದಕ್ಕೆ ೨೧ ½ ರೂ.	ಇದೇ ಆಯುಷ್ಯದ (ಕಡವಲ್ಲದೆ ದೊರೆಯುತಕ್ಕದ್ದು) ವರ್ಷವೊಂದಕ್ಕೆ ೨೨॥ ೦/೦ ರೂ.

ವರ್ಷ.	ವಾರ್ಷಿಕ ಉತ್ಪನ್ನ.	ಹೊಸ ವ್ಯವಹಾರ.
೧೯೩೬	೬,೪೮,೪೭೦	೧೯,೭೫,೫೦೦
೧೯೩೭	೭,೧೫,೩೫೪	೩೮,೦೧,೫೦೦
೧೯೩೮	೯,೩೫,೫೦೧	೬೦,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕೊಡುವದರ ಹಾಗು ಅತ್ಯಂತ ಮೋಹಕವಾದ ಗಳಿಕೆ ಇವುಗಳ ಪೂರ್ಣ ಲಾಭವನ್ನು ಹೊಂದಿರಿ.

ಬಗಲಕೋಟೆಯ ಏಜಂಟರು:— ವ್ಹಿ. ಜಿ. ಹೆರ್ಲಗಿಕರ ಮತ್ತು ಮಕ್ಕಳು,

ಚೀಫ ಏಜಂಟ:— ಎಸ್. ಆರ್. ಸಾದೇಸಾಯಿ, ಮುಂಬೈ ನಂ ೬.

THE UNITED KARNATAK INSURANCE COMPANY LTD DHARWAR.

ಸುಸಂಧಿ ಸ್ವಯಮಾಸಿರಿ ಕಳೆದುಕೊಳ್ಳ ಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ.

(೧೯೧೩ ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೬ ಪೆ ಅಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು.

೧ ಬೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ಮತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಜೇರಮನ

೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಜುಗುಳಿ ಎಲ್ ಎಮ್ ಎಂಡ ಎಸ್ ಗದಗ

೩ ಶ್ರೀನಿವಾಸರಾವ ಶೇಷಗಿರಿರಾವ ಮುಕಾಲಿಕದೇಸಾಯಿ ಬಿ ಎ ಆಣ್ಣೀಗೇರಿ

೪ ವಿ. ರಾಮಚಂದ್ರ ರಂಗೋ ಸಾವಕಾರ ವತನದಾರ ಹಳೇಹುಬ್ಬಳ್ಳಿ

೫ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ

೬ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡದಹುಬ್ಬಳ್ಳಿ ವಕೀಲ ಬೈಲಹೊಂಗಲ

೭ ವಿ॥ ಅನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ

೮ ರಾವುರಾವ ವೆ ಧಾರವಾಡ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ

೯ ಅಬ್ದುಲ್‌ಕರೀಮ ಅಬ್ದುಲಸಾಹೇಬ ಹಣಸಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊಸದಾಗಿ ಇನ್‌ಶ್ಯೂರನ್ಸ ಕಂಪನಿಯಿಂದರೆ ಇದೇ ಮೊದಲನೇದು. ಈ ಕಂಪನಿಯು ಡಾಯರೆಕ್ಟರರೂ ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ ಪರದೇಶಿ ಕಂಪನಿಗಳಲ್ಲಿ ವಿಮೆ ಇಳಿಸುವದಕ್ಕಿಂತ ಸ್ವದೇಶದ ಸಂಸ್ಥೆಯ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಇದ್ದು ಹೆಸರು ಪಡೆಯುವದೇ ಈ ಕಂಪನಿಯ ಉದ್ದೇಶವನ್ನು ತಿಳಿದಿರುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯ ಶೇರುಗಳು ಮಾರಾಟಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಪ್ರಾರಂಭವಾಗಿ ರುವದು. ಶೇರುಗಳನ್ನು ವತನದವರಿಗೆ ಮತ್ತು ವಿಮೆಯ ಕೆಲಸವನ್ನು ಕುದುರಿಸುವವರಿಗೆ ಎಲ್ಲಾ ಕಡೆಗೆ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಎಜಂಟರಿಗೆ ಉತ್ತಮ ಪಗಾರಗಳು ಕಮಿಶನ ದರಗಳು ಲಾಭಕರವಾಗಿ ಇವೆ. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಬೇಕು.

K. L Huilgolkar
ಸೆಕ್ರೆಟರಿ
ಯು. ಕ. ಇ. ಕಂ. ಲಿ. ಧಾರವಾಡ.

ಬಾಲಗೃಹ ಚೂರ್ಣ
ಬಾ. ಕಿ, ೧—೪—೦

ಡಾ. ಬೈಲೂರ.

ಥಂಡಿ ಉರಿಯ ಗುಳಿಗೆಗಳು
ಬಾ. ಕಿ. ೦—೮—೦

ಇವರ ಔಷಧಗಳು

ಕಾಫ್ ಸಾಯಿರಪ್ ಕಿ— ನೆಗಡಿ, ಗೊಬ್ಬರ, ಪೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟಿ ಹಾರುವಿಕೆ (ಡಬಾ), ಕೂಡಗರ್ಮು, ಇವುಗಳಮೇಲೆ ಹೊಕಾರ್ಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿವೋಸಿಯಾ ಬೇನೆಯಮೇಲೆ ನಮ್ಮ ಕಾಫ್ ಸಾಯಿರಪ್ ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿಸಿರುತ್ತೇವೆ. ಈ ಕಾಫ್ ಸಾಯಿರಪ್‌ನನ್ನು ಸಣ್ಣಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಆತಂಕವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕಿ. ಸಣ್ಣ ಬಾ. ೦ ೬—೦ ದೊಡ್ಡ ಬಾ. ೦—೧೨—೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.
೫ ರೂ. ಕಂತ ಹೆಚ್ಚಿಗೆ ಔಷಧಗಳನ್ನು ತಕ್ಕೊಳ್ಳುವವರಿಗೆ ೧೨ ಟಕ್ಕೆ ಕಮೀಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಪತ್ತೆ:— ಡಾ॥ ಹರೀ ಮಹಾದೇವ ಬೈಲೂರ. ದ. ಬೆಳಗಾವ.

ವಿಲಿಶವಿಪೆಟ್ ಎಜನ್ಸಿ.

ನಾವು ಶವರಲೆಟ ಮೋಟರ ಕಂಪನ್ಸಿಯ ಬೆಳಗಾಂವ ಮೊಟರ ವರ್ಕ್ಸ ಟ್ರಾನ್ಸ ಪೋರ್ಟ ಕಂಪನಿಯ ಹಾಗೂ ವಿಲಿಶ್ ವಿಪೆಟ್ ಕಂಪನಿಯ ಸ ಎಜಂಟರಿರುತ್ತೆವೆ ಈ ಗಾಡಿಗಳನ್ನು ತರಿಸಿಕೊಳ್ಳುವವರು ನಮ್ಮ ಕಡಿಯಿಂದಲೆ ತರಿಸಿಕೊಳ್ಳಬೇಕು. ಬಹಳ ಸೋವಿಯಾಗುವದು. ಬಾಗಲಕೋಟೆಯಲ್ಲಿಯು ಕುತ್ತುನುತ್ತಲಿನ ಖಾಸಗಿ ವ ಸರ್ವಿಸಿನ ಮೋಟರ ಮಾಲಕರ ಗೈರಸೋವಿ ದೂರವಾಗಬೇಕೆಂದು ಒಂದು ಜನರಲ್ ಮೋಟರಸ್ಟೆರ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲಕೋಟೆಯಿಂದಾ ವಿಜಾಪುರ ಇಲಕಲ್ಲ ನರಗುಂದ ಮುಂತಾದ ಸ್ಥಳಗಳಿಗೆ ಹೋಗುವದು.

ಪ್ರವಾಸಿಕರಿಂ ಗೈರಸೋವಿದೂರಾಬೇಕೆಂದು. ತಾ. ೩೧-೩-೩೦ ನೇ ದಿವ್ಸ (ಚೈತ್ರ ಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ.)

ಇಲಕಲ್ಲದಿಂದಾ ೯॥ಘಂಟಿಗೆ ಹೊರಟು ಹುನಗುಂದ, ಅಮಿನಗಡ, ಕಮತಗಿ, ಗುಳೇದಗುಡ್ಡ, ಬದಾಮಿ, ಶ್ರೀ ಬನಶಂಕರಿದೇವಸ್ಥಾನ, ಹೊಳಚಗುಡ್ಡ ಹಿಟಿ, ಜಾಲಿಹಾಳ, ಹೀರೆಹಾಳ, ಕೊಕಬಾಳ, ರೋಣ, ಅಬ್ಬಿಗೇರಿ, ನರೇಗಲ್ಲ, ಕೊಟುಮಚಗಿ, ನಾಂವಾಣಾಪುರ, ಮಾರ್ಗವಾಗಿ ಗದಿಗ್ಗೆ ದಿನಾಲ ಸಂಜೆಯ ೫ ಘಂಟಿಗೆ ಹೊಗುತ್ತದೆ. ಅಂತದೆವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟಿಗೆ ಹೊರಟು ಸಂಜೆ ೫ ಘಂಟಿಗೆ ಇಲಕಲ್ಲಿಗೆ ಬಂದು ಮುಟ್ಟುತ್ತದೆ. ಶರಾಸಿದ ವೇಳೆಗಿಂತಾ ೧೫ ನಿನಿಟ ಮುಂಚಿತವಾಗಿ ಪ್ಯಾಸಿಂಜರರು ಸ್ಟ್ಯಾಂಡಿನ ಮೇಲೆ ಹಾಜರ ಇರಬೇಕ್ಕದ್ದು ಡ್ರಾಯವರನಕಡಿಯಿಂದಾ ಮೋಟರಿನಲ್ಲಿ ಸ್ಥಳವಿದ್ದಬಗ್ಗೆ ಖಾತ್ರಿಮಾಡಿಕೊಂಡು ಟಿಕೀಟು ತೆಗೆದು ಕೊಳ್ಳಬೇಕ್ಕದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರೀಪೆರಿ ವರ್ಕಶಾಪ್ ಇರುತ್ತದೆ ಮತ್ತು ಹೊಸದಾಗಿ ಎಲ್ಲ ನಮುನೇಯ ಗಾಡಿಗಳಿಗೆ ಬಾಡಿಗಳನ್ನು ತಯಾರಿಸಿ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವೀಸ—
ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ವಿಲಿಶವಿಪೆಟ್ ಸೋಲ ಎಜಂಟ್ಸ ಆಂಡ ಬಾಡಿಬಿಲ್ಡರ್ಸ ಬಾಗಲಕೋಟ

THE POONA SCHOOL OF COMMERCE

Reopens on 16 th- June. Students coached for London Chamber of Commerce and other commercial examinations in banking, Accountancy Shorthand Type-writing etc. Apply for prospectus to:—

Secretary, Budhawar Chowk; Poona-city.

ಈ ಪತ್ರಿಕೆಯು ವಿಶ್ವಭಾರತ ಶೀಘ್ರಲಿಪಿಮಾಲಿಕಾರ್ಯಾಲಯ ಬಾಗಲಕೋಟೆ ವಿದ್ಯಾರ್ಥಿಗಳ ಮುದ್ರಣ ಯಂತ್ರದಿಂದ ಮುದ್ರಿಸಲ್ಪಟ್ಟು ಅವರಿಂದ ಲೋಕಕ್ಕೆ ಪ್ರಸಿದ್ಧಿಪಡಿಸಲ್ಪಟ್ಟಿತು.

ಪ. ನಂ. ಬಿ ೧೯೪೭೭ ವಾ. ಚಂ. ಅಂಚೆವೆಚ್ಚ ಸೇರಿ ೪ ರೂಪಾಯಿಗಳು ಮಾತ್ರ.

ಕನ್ನಡಿಗ

ಪ್ರತಿ ರವಿವಾರ ಪ ಕಟಿಸಲ್ಪಡುವದು.

ಯಥಾ ಪರವಶಃ ದುಃಖಂ । ತಥಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ವೆಂಕಟೇಶ ಶೇತುರಾವಾಚಾರ್ಯ ಕೆರೂರ

ವರ್ಷ ೬ | ಬಾಗಲಕೋಟೆ ರವಿವಾರ ವಿಭವ ಫಾಲ್ಗುಣ ಶುದ್ಧ ೫ ಶಕೆ ೧೮೫೩ ಕಾ. ೨೨-೨-೧೯೩೧ Kannadiga Date 22—2—1931. | ೪೬

ದಿ. ಬಾಗಲಕೋಟ ಕೊ., ಅಪೆರೆಟಿವ್ಸ ಬೆರ್ಕನ್ ಬ್ಯಾಂಕ ಲಿ. ಬಾಗಲಕೋಟ.

ಠೇವುದಾರರಿಗೆ ಅಖುಡವಾದ ಭದ್ರತೆ.

ಸ್ವಲ್ಪೇ ಹೆಚ್ಚಿನ ಬಡ್ಡಿಯ ಆಶೆಗಾಗಿ ಅನಿಶ್ಚಿತವಾದ ಬೇರೆ ಕಡೆಗೆ ಠೇವು ಇಟ್ಟು ಗಂಟು ಬಡ್ಡಿಯನ್ನು ಕೂಡಿಯೇ ಕಳೆದುಕೊಳ್ಳಬೇಡಿ ರಿ. ಪ್ರತಿವರ್ಷವು ನಮ್ಮ ಬ್ಯಾಂಕವನ್ನು ಸರಕಾರಿ ಆಫೀಸರ ತಪಾಸಣೆ ಮಾಡಿಸುತ್ತಿರೆ. ಠೇವುದಾರರಿಗೆ ೧೦೦ ಕ್ಕೆ ೪ ರಂತೆ ದಂಡ ಹಿಡಿದು ಕೊಡಲು ಹೇಳಿದ್ದಾರೆ. ಇದಕ್ಕೆ ಇನ್ಶೂರೆನ್ಸ ಮಾಡಿಸಿದ್ದಿಲ್ಲ.

ಠೇವುಗಳ ಬಡ್ಡೀದರವು ಕೆಳಗಿನಂತಿರುತ್ತದೆ.

ಚಾಲತೀ ಠೇವು.	ನೂರಕ್ಕೆ ವರ್ಷಕ್ಕೆ	೩॥
ಸೇವ್ವಿಂಗ್ಸ ಬ್ಯಾಂಕ ಠೇವು	,,	೪ ರಂತೆ
ವರ್ಷದ ಮುದ್ದತ ಠೇವು	,,	೬ ರಂತೆ

ಹೆಚ್ಚಿನ ವಾಯ್ದದ ಠೇವಿನ ಮೇಲಿನ ಬಡ್ಡಿಯದಂದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಸಮಕ್ಷಮಾ ವಿಚಾರ ಮಾಡಬೇಕು.
ಹೋಮ ಸೇವ್ವಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೂಡುತ್ತೇವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

ಬಾಗಲಕೋಟ. ಶಾ॥ ೨೨-೨-೧೯೩೧ | Sd/ D. R. Huddar ಸೆಕ್ರೇಟರಿ | Sd/ M. S. Mangalwedhekar ಚೇರಮನ್

ಕಿರ್ಲೋಸ್ಕರ ನೇಗಿಲಗಳು



ಇವುಗಳ ವೈಶಿಷ್ಟ್ಯವು.

೧ ತಿರುಗುವ ಕುಳವುಳ್ಳದ್ದು.

೨ ಲಕ್ಷಾವಧಿಜನರು ಹೊಡಿ ಅನುಭವಪೊಂದಿರು ಇರುವ ಕಾರಣ ಈ ನೇಗಿಲುಗಳಿಗೆ ಈ ಹಂಗಾಮಿನಲ್ಲಿ ಯಾವಿಲ್ಲದ ಮಾಗಣಿ ಯುಂಟು. ಸರ್ಕಾರಕ್ಕೆ ಹಂಗಾಮವು ಪ್ರಾಯಂಭವಾಗಿರುವದು. ಇವತ್ತೇ ಆರ್ಡರ ಕೊಟ್ಟು ತರಿಸಿಕೊಂಡಲ್ಲಿ ಲಾಭವುಂಟು

ಕಿರ್ಲೋಸ್ಕರ ಬ್ರದರ್ಸ ಲಿಮಿಟೆಡ್
ಕಿರ್ಲೋಸ್ಕರವಾಡಿ. ಜಿ. ಸಾತಾರಾ

ದಿ. ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟ.

೧೯೩೧ ನೇ ಇಸ್ವಿಯ ಇಂಡಿಯನ್ ಕಂಪನೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಬ್ಯಾಂಕಿನ ಠೇವಿನ ದಂವು ಕೆಳಗೆ ತೋರಿಸಿದ ಪ್ರಕಾರ ಇರುತ್ತದೆ.

ಚಾಲತೀ ಠೇವಿಗೆ	ಹೊರಕ್ಕೆ ವರ್ಷಕ್ಕೆ	೩॥ ರೂ
ಸೇವ್ವಿಂಗ್ಸ ಬ್ಯಾಂಕ	೨ ,,	೪ ರೂ.
ಮುದ್ದತೀ ಠೇವಿಗೆ	೨ ,,	೬॥ ರೂ.

ಇದಲ್ಲದೆ ೩-೬ ಮತ್ತು ೯ ತಿಂಗಳ ಠೇವು ಇಡುವದಾದಲ್ಲಿ ಸಮಕ್ಷವಬಂದು ದಂವನ್ನು ಗೊತ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಇಂದರೆ ಬೆಳ್ಳಿ. ಧಂಗಾರ ಕಾಳುಕಡಿ ಸರಕಾರೀ ತಾಗದ ಮತ್ತು ವಿಮೆಯ ಪಾಲಿಸಿಗಳಮೇಲೆ ಸಹಿತ ಸಾಲವು ದೊರೆಯುವದು.

ಇನ್ನೊಂದು ಹೆಚ್ಚಿನ ಸವಲತ್ತು! ವರ್ತಕರು ತಮ್ಮ ಮಾಲನ್ನು ವ್ಹಿ. ಪಿ. ದ್ವಾರಾ ಕಳಿಸುವದಾದಲ್ಲಿ ನಮ್ಮ ಬ್ಯಾಂಕಿನ ಮುಖಾಂತರ ತರಿಸಿಕೊಂಡರೆ ನೂರಕ್ಕೆ ೨ ರಂತೆ ಅಡೆಯಂತೆ ಉಳಿಸಿ ಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಿಕೊಳ್ಳಬೇಕು.

V R Torvi
Managing Director

ಹೊಸ ಲೇಟ ಗಾಡಿಗಳ ಎಜನ್ಸಿ

ನಾವಿ ಹೊಸದಾಗಿ ಇನಲೇಟು ಗಾಡಿಗಳ ಎಜನ್ಸಿಯನ್ನು ಹಿಡಿದಿರುತ್ತೇವೆ. ಕೊಳ್ಳುವವರು ನಮ್ಮ ಕಡೆಯಿಂದಲೇ ತರಿಸಿಕೊಳ್ಳಬೇಕು. ಅಂತರ ಬಹಳ ಸೋವಿಯಾಗುವದು,

ವಿಜಾಪೂರ ಚಿಪ್ಪಿಯಲ್ಲಿಯ ಮತ್ತು ಸುತ್ತು ಮುತ್ತಲಿನ ಜನರಿಗೆ ಪ ಸರ್ವೀಸ
ಡಾಕ್ಟರ ಮಾಲಕರ ಗೈರಸೊಯ ದೂರವಾಗಬೇಕೆಂದು
ಆರ್. ಜಿ. ಚವ್ಹಾಣ ಎಂಡ ಸನ, ಬೆಳಗಾವ. ಇವರು ಮ

ಜನರಲ ಮೋಟಾರ ಅಕ್ಸೆಸರಿ ಸ್ಟೋರ್ಸ್‌ದ ಶಾಖೆಯನ್ನು
ದಿ॥ ೧೦ ಸೆಪ್ಟೆಂಬರ ೧೯೨೬ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ.

ಗ್ರಾಹಕರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಮಾನು ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಜಿ. ಎಂ. ಸಿ., ಒಪ್ಪರಲೆಂಜ ಮುಂತಾದ ಮೋಟಾರಗಳಿಗೆ ಬೇಕಾದ ಸಾಮಾನು, ಟಾಯರ್ಸ, ಟ್ಯೂಬ್ಸ, ಗ್ರೀಸ, ಮೋಬಿಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಗುವವು ನಮ್ಮಲ್ಲಿ ಕೇಂಡ ಪ್ಯಾಂಪಡಾಲ್ ಲ್ಯಾಂಪೋಚೇಟ ಮತ್ತು ಇಂಟರ ನ್ಯಾಸನಲ್ ಗಾಡಿಗಳು ಜಾಸ್ತಿಯಲ್ಲಿ ಇರುವವು. ಯೋಗ್ಯ ರದಿಂದ ಮಾರಲಿಕ್ಕೆ ತಿಗ ತ್ವ ಲಾಂಕ -- ಟಾಯೋ ಜೆ ಚವ್ಹಾಣ.

ನಮ್ಮಲ್ಲಿ ಟಾಮರ್ಸ ಮುತ್ತು ಟ್ಯೂಬ್ಸ ಇವು ಪ್ರಕಾರದಿಂದ ಮತ್ತು ಯೋಗ್ಯ ದ ದಿಂದ ವ್ಹಲ್ಕನಾಯಿಸ್ಡಿಂಗ ಮಾಡಿ ಕೊಡುವೆವು

ಬಾಗಲಕೋಟೆ—ಬಳಗಾವಿ ಬಾಗಲಕೋಟೆ ಆರಿಕಲ್ಲ, ಸರ್ವೀಸ ಎಂಜಿನಾಪ್ರಕಾರಸಡೆದಿದೆ.

ಶುಲಭರ್ಯಯ! ಡಾಕ್ಟರ ಬೆನೆ ಬೀ.ಯವರ ಸುಗಂಧ ನಶ್ಯದಪುಡಿ. ಶುಲಭರ್ಯಯ!!

ಪ್ರಸಿದ್ಧವಾದ ಈ ಸುಗಂಧ ನಶ್ಯಪುಡಿ ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ಪ್ರಶಂಸಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ ಪಿನಸಿ ಒಂಟಿ ತಲೆ ನೋವು ತಲೆಯಲ್ಲಿನ ಸೋಗುಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸಮವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರುಬೊಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಮಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳುಹಿಸಬಹುದು. ಬುಡ್ಡಿ ಒಂದಕ್ಕೆ ಕೈಯಿಳ ಆಣೆ ವ್ಹಿ. ಪಿ. ಳ ಆಣೆ. ಡಜನ್ ೧ ಕ್ಕೆ ಕೈಯಿ ರೂ ೩—೯—೦ ವ್ಹಿ ಪಿ ಚಾರ್ಜು ೯ ಆಣೆ.

ವಿಳಾಸ—ಗುರುಬಸವ ಆಂಡ್ ಕಂಪೆನಿ,ಲಿಮಿಟೆಡ್ ಪೊ ಬಾ ಗಾ ಬಾರ್ಕಟ್ಟಾಪ ಮದರಾಸು.

ಪ್ರಿಯ ಯಮಾಡಿ ನಮ್ಮ ಪೆಸರನ್ನು ಅಡ್ರೆಸ್ಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ಭೂಲೋಕದ ಕಾಮಧೇನು

ದೇವಲೋಕದ ಕಾಮಧೇನು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಸಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷದಿಗಳನು ಕೊಡುವ —

ಕ್ರಯವು ಇಷ್ಟಾಂ!!! ಅ. ಹಾಸಲು ಇಲ್ಲದೆ

ಸರ್ವಸ್ವ ಉಪಕಾರವಾಗಿ ತಿಳಿಸಿಕೊಡುವ ಪತ್ರ.

ವೈದ್ಯವಿದ್ಯೆ

ಯೆಂಬ ಆರೋಗ್ಯ ಮಾರ್ಗದರ್ಶನ, ಅನೇಕ ರಹಸ್ಯವಾದ ವಿಷಯಗಳಿವೆ.

ವಿಜಂಟರುಃ—ಜಂಬುಲಿಂಗಪ್ಪಾ ಹಾಲವಾಡಿ.
ಸ್ಪೇಶಲಸರ್ ಬಾಗಲಕೋಟೆ.

ರಾಜವೈದ್ಯ ಸಾರಾಯುಷಾಶ್ರಿ ಕೇಶವಜಿ,
ಗಿರ್ಗಾಂ, ಜೇಸಾಬಜಾರ್, ಮುದರಾಸು

ಕೋಡಿದರೆ ಬಿಡದಿರುವ ಕಾದಂಬರಿಗಳು.

೧ ಮಹಾತ್ಮಾ ತುಲಸೀದಾಸ	೧-೮-೦
೨ ಜಲಂಧರ ನಾಟಕ	೦-೧೦-೦
೩ ವಡಗಾವದ ವಿಜಯ	೧-೪-೦
೪ ಅಂದಿಕೆ	೧-೪-೦
೫ ಸೌಭಾಗ್ಯ ತಿಲಕ	೧-೦-೦
೬ ನರವೀರ ಶಾತೀದು	೧-೪-೦
೭ ಭಗವಾದಾಸ	೧-೦-೦
೮ ಗ್ರಹಲೀಲೆ	೦-೧೪-೦
೯ ಕಂಕಣಜೋಡ	೧-೪-೦
೧೦ ಭಯಂಕರ ಕೊಲೆ	೦-೧೩-೦
೧೧ ಅಂಜುಮುಖಿ	೦-೧೦-೦
೧೨ ಪದ್ಮಜೆ ಕಮಲಾ	೧-೦—೦

ಇನ್ನೂ ನಮಾಲು ಬಗೆಯ ಪುಸ್ತಕಗಳು ಪ
ಮ್ಮಲ್ಲಿಸಿಗುವವು. ಕ್ಯಾಟಲಾಗಿಗೆ ಬರೆಯಿರಿ. ಬು
ಕ್ಸೆಲರರಿಗೆ ಧಾರಾಳವಾಷ ಕಮಿಶನ್

ವಿಳಾಸಃ— ಪಿ. ಜೆ. ಕಾಳೆ
ಪೋ. ಅಕ್ಕಿಹೊಂಡ, (ಜಿ. ಧಾರವಾಡ)

ಕ ನ್ನ ಡಿ ಗ.

ಕನ್ನಡಿಗ ಮಾಘ ಬಹುಳ ೧೩ ಶಕೆ ೧೮೫೨

ಕನ್ನ ಮನಸಿನ ಮೇಣಾದಮಾಡಿ ಕಟ್ಟುವೆನಾನು
ಕನ್ನ ಬೆಸನದ ಪೂಡಿದಂಥ ಮುಳ್ಳಕಡೊಮ್ಮೆ
ಚನ್ನ ಪಾಪರು ಚನ್ನ ಮೇಣಬಸ್ತಿಯನೊಂದು
ಚನ್ನಯಾಕಾಶದಲ್ಲಿ ।

ಲೇಖನ ಸ್ವಾತಂತ್ರ್ಯಕ್ಕೆ ತಡೆಹಾಕುವ

ಕರಾಳ ಶಾಸನವಾದ ಪ್ರೆಸ್‌ಆರ್ಡಿನನ್ಸ

ಜೀವಿಸಿರುವಷ್ಟು ಕಾಲ
ನಾವು
ಅದರ ನಿಷೇಧಾರ್ಥವಾಗಿ

ಅಗ್ರಲೇಖ ಬರೆಯುವದೇ ಇಲ್ಲ.

ನನಗೆ ಹೊಳೆದಂತೆ.

ಬಾಗಲಕೋಟೆಯು ಅಚ್ಚ ಕೆಚ್ಚ ಕನ್ನಡಿಗರ ಗಂಡು ಮೆಟ್ಟಿನ ಸ್ಥಳ. ಕನ್ನಡ ನಾಡು ಮತ್ತು ನುಡಿಗಾಗಿ ಹಗಲಿರುಳು ಹೆಣಗಾಡುತ್ತಿರುವ "ಕನ್ನಡಿಗ"ನ ಹುಟ್ಟಿದ ಊರು. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು ದೊರೆತಲ್ಲಿ, ಆ ಅಖಿಲ ಕರ್ನಾಟಕದ ರಾಜಧಾನಿಯಾಗಲು ಯಾವತ್ತೂ ಅನುಕೂಲತೆಗಳುಳ್ಳ ಸ್ಥಾನ.

ಇಂತಹ ಊರಲ್ಲಿ ಎಲ್ಲೆಲ್ಲಿಯೂ ಕನ್ನಡಕ್ಕೇನೆ ಪ್ರಾಧಾನ್ಯವಿರಬೇಕಾದದ್ದು ಸ್ವಯಂಸಿದ್ಧವಾದ ಮಾತು. ಅದು ಸರಕಾರಿ ಕಚೇರಿಯಲ್ಲಿ, ಮ್ಯುನಿಸಿಪಾಲಿಟಿಯಲ್ಲಿ, ಪೋಸ್ಟ ಆಫೀಸಿನಲ್ಲಿ, ಇಲ್ಲವೆ ಒಂದು ಸ್ವತಂತ್ರ ಸಂಸ್ಥೆಯಿರಲಿ, ಯಾವದೇ ಇರಲೊಲ್ಲದೇಕೆ ಅಲ್ಲಿ ಈ ನಿಯಮಕ್ಕೆ ಬಾಧೆ ಬರಕೂಡದು. ಇದು ಎಲ್ಲರೂ ಒಪ್ಪತಕ್ಕ ವಿಷಯ.

ಆದರೆ ನೋಡಿರಿ! ಇಲ್ಲಿಯ ಪೋಸ್ಟ ಆಫೀಸದಲ್ಲಿ ಏನು ನಡೆದಿದೆ! ಕನ್ನಡ ಮನಿಆರ್ಡರ ಫಾರ್ಮು ಇದ್ದರೂ ಸಹ ಜನರಿಗೆ ಅಲ್ಲಿ ಸಿಗುವವು ಮರಾಠಿ ಇಲ್ಲವೆ ಇಂಗ್ಲೀಷ ಮನಿ ಆರ್ಡರ ಫಾರ್ಮು ಯಾಕಂದರೆ, ಜನರು "ಕನ್ನಡ ಫಾರ್ಮುಗಳನ್ನು ಕೊಡಿರಿ" ಎಂದು ಕೇಳುವದಿಲ್ಲವಂತೆ! ಜನರೇಕೆ ಕೇಳದೇಕೋ ಏನೋ! ಇದು ಕನ್ನಡ ನಾಡು. ಇಲ್ಲಿಯ ಜನರ ಭಾಷೆಯು ಕನ್ನಡ. ಆದ್ದರಿಂದ ಇಲ್ಲಿ ಕನ್ನಡ ಫಾರ್ಮುಗಳನ್ನೇ ಕೊಡಬೇಕು. ಬೇರೆ ಭಾಷೆಯ ಫಾರ್ಮುಗಳನ್ನು ಯಾರಾದರೂ ಬೇಡಿದಲ್ಲಿ, ಅವರಿಗೆ ಆ ಆ ಫಾರ್ಮುಗಳನ್ನು ಕೊಡಬೇಕು" ಈ ಸಾಮಾನ್ಯ ತತ್ವದಂತೆ ಅವರು ತಾವೇ ಯಾಕೆ ವರ್ತಿಸಬಾರದೆ?

ನಾವು ಅವರಿಗೆ ಹೇಳುವದು ಇಷ್ಟೆ. ಕನ್ನಡಿಗರ ಗಂಡು ಮೆಟ್ಟಿನ ಸ್ಥಳದಲ್ಲಿ ನಿಂತು ಕೊಂಡು ದೇಶೊಂದು ಭಾಷೆಯ ಪ್ರಶ್ನೆಯನ್ನು ಇಲ್ಲಿ ಬೆಳೆಸಲು ನೀವು ಪ್ರಯತ್ನಿಸಿದಲ್ಲಿ, ನಿಮ್ಮ ಬೇಳೆಯು ಬೇಯದು. ನಿಮ್ಮ ಆಟವು ಸಾಗದು. ಕನ್ನಡ ನಾಡು ಈಗ ಎಚ್ಚತ್ತಿದೆ. ಕನ್ನಡಿಗರು ಇಂತಹ ಕೃತಿಗಳನ್ನು ವಿರೋಧಿಸತಕ್ಕವರೇ. ವಿರೋಧಿಸಿ ಶಮ್ಯಹಕ್ಕನ್ನು ಪ್ರಸ್ಥಾಪಿಸಿಕೊಳ್ಳತಕ್ಕವರೇ. ಆದ್ದರಿಂದ ಕನ್ನಡಿಗರೊಡನೆ ಕೂಡಿಕೊಂಡು ನಡೆಯಿರಿ.

ಕರಾಚಿ ಕಾಂಗ್ರೆಸದಲ್ಲಿ ಸಂಯುಕ್ತ ಮೈಸೂರ ಸ್ಥೆಯನ್ನು ಮುಂದುವದಕ್ಕಾಗಿ ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ೫೦೦ ಜನ ಸ್ವಯಂಸೇವಕರನ್ನು ಅಲ್ಲಿಗೆ ಕಳಿಸುವವರಿದ್ದಾರೆಂದು ತಿಳಿಯುತ್ತದೆ.

ಬಹಿಷ್ಕಾರದ ಪರಿಣಾಮ

೧೯೩೦ ನೆಯ ಇಸ್ವಿಯಲ್ಲಿ ಪರದೇಶಗಳಿಂದ ಈ ದೇಶಕ್ಕೆ ಬಂದ ಜವಳಿಯ ಸಂಬಂಧವಾಗಿ ಮುಂಬಯಿಯ ಗಿರಣಿಗಳ ಸಂಘದವರು ಒಂದು ಪತ್ರಿಕೆಯನ್ನು ಪ್ರಸಿದ್ಧ ಪಡಿಸಿದ್ದು, ಅದರಿಂದ ತಿಳಿದು ಬರುವದೇನಂದರೆ:—

೧೯೩೪ ನೆಯ ಇಸ್ವಿಯಲ್ಲಿ ಪರದೇಶಗಳಿಂದ ಈ ದೇಶಕ್ಕೆ ೫೯೫ ಲಕ್ಷ ಯಾರ್ಡ ಜವಳಿಯು ಬಂದಿತ್ತು. ಈ ವರ್ಷ ಕೇವಲ ೨೬೭ ಲಕ್ಷ ಯಾರ್ಡ ಜವಳಿಯಿಷ್ಟೇ ಬಂದಿದೆ. ಅಂದರೆ ಪರದೇಶಿ ಜವಳಿಯು ಹೋದ ವರ್ಷದಕಿಂತಲೂ ೨೨೮ ಲಕ್ಷ ಯಾರ್ಡ ಕಡಿಮೆಯಾಗಿ, ಪರದೇಶವರ ವ್ಯಾಪಾರವು ೧೦೦ ಕ್ಕೆ ೪೮ ರಂತೆ ಇಳಿದುಹೋಯಿತು. ಈ ವರ್ಷ ಬಂದ ೨೬೭ ಲಕ್ಷ ಯಾರ್ಡುಗಳಲ್ಲಿ ೧೪೨ ಲಕ್ಷ ಯಾರ್ಡ ಅಮೇರಿಕೆಯದೂ, ೧೨೧ ಲಕ್ಷ ಯಾರ್ಡ ಜಪಾನದ್ದೂ ಇರುತ್ತದೆ. ಹೋದ ವರ್ಷ ಅಮೇರಿಕಾ ಹಾಗು ಜಪಾನ ಗಳಿಂದ ಕ್ರಮವಾಗಿ ೨೮೨ ಹಾಗು ೨೯೯ ಲಕ್ಷ ಯಾರ್ಡ ಜವಳಿಯು ಬಂದಿತ್ತು.

೧೯೩೫ ನೆಯ ಇಸ್ವಿಯಲ್ಲಿ ೨೮೨ ಲಕ್ಷ ಪೌಂಡು ನೂಲು ಇಲ್ಲಿಗೆ ಬಂದಿತ್ತು. ೧೯೩೦ ರಲ್ಲಿ ಕೇವಲ ೧೯ ಲಕ್ಷ ಪೌಂಡು ನೂಲು ಇಷ್ಟೆ ಇಲ್ಲಿಗೆ ಬಂದಿದೆ. ಪ್ರತಿ ತಿಂಗಳದಲ್ಲಿ ಸರಾಸರಿ ೪೬ ಲಕ್ಷ ಯಾರ್ಡು ಜವಳಿಯು ಬರುತ್ತಿತ್ತು. ಆದರೆ ಡಿಸೆಂಬರ ತಿಂಗಳಲ್ಲಿ ಆ ಅಂಕಿಯು ೬೫ ಲಕ್ಷ ಯಾರ್ಡಿಗೆ ಇಳಿಯಿತು.

ಮೈಸೂರಲ್ಲಿ ಮುಖಿಂಡರಿಗೆ ಶಿಕ್ಷೆ

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹೊಂಡಿಸಿದ ಅಪ್ಪಣೆಯನ್ನು ಅವಮಾನ ಮಾಡಿ ಮೆರವಣಿಗೆ ಸಭೆ, ಮೊದಲಾದವುಗಳನ್ನು ಜರುಗಿಸಿದ್ದಕ್ಕಾಗಿ ಮೈಸೂರಿನಲ್ಲಿ ಶ್ರೀಆಗರಂ ರಂಗಯ್ಯ (ಕಾರ್ಯದರ್ಶಿ ಮೈಸೂರ ಜಿಲ್ಲಾ ಕಾಂಗ್ರೆಸ್ ಕಮೀಟಿ) ಎಸ್. ರಂಗರಾವಯ್ಯ (ಅಧ್ಯಕ್ಷರು ಮೈಸೂರ ಯುವಕ ಸಂಘ), ಶ್ರೀ ರಂಗಾಚಾರಿ ಈ ಮೂವರಿಗೆ ಮೈಸೂರ ಪೋಲೀಸ ರಿಗ್ಯುಲೇಶನ್ ೭೦ ನೆಯ ಕಲಮಿನ ಪ್ರಕಾರ, ಪ್ರತ್ಯೇಕವಾಗಿ ೩೦ ರು ದಂಡ ಇಲ್ಲವೆ ೧ ತಿಂಗಳ ಕಾಲಾಗೃಹವಾಸ ಹೀಗೆ ಶಿಕ್ಷೆ ಯಾಗಿದೆ. ಮೊದಲಿನವರಿಗೆ ದೇಶದ್ರೋಹಿ ಅಪರಾಧಕ್ಕಾಗಿ ೨೦ ರೂ. ದಂಡ ಇಲ್ಲವೆ ೧೫ ದಿವಸ ಕಾಲಾಗೃಹವಾಸ ಹೀಗೆ ಹೆಚ್ಚಿನ ಶಿಕ್ಷೆಯು ವಿಧಿಸಲ್ಪಟ್ಟಿದ್ದು, ದಂಡವನ್ನು ತುಂಬಲು ತಾ೨೫ ರವರೆಗೆ ಅವಧಿಯನ್ನು ಕೊಡಲ್ಪಟ್ಟಿದೆ

ಮಹಾತ್ಮಾಗಾಂಧಿಯವರು

ದೇವರ ಮೇಲೆ ಭಾರಹಾಕಿದರು

(ಶಂತಿಯ ವಾರ್ತೆ ತಾ| ೨೧)

ನಿನ್ನಿನ ದಿವಸ ಸಂಜೆಯಲ್ಲಿ ದಿಲ್ಲಿಯಲ್ಲಿ ಪ್ರಚಂಡ ಜನ ಸಮುದಾಯದ ಮುಂದೆ ಸಾರ್ವಜನಿಕವಾಗಿ ಭಾಷಣ ಮಾಡುವಾಗ ಮಹಾತ್ಮಾಗಾಂಧಿಯವರು ಹಿಂಸಾತ್ಮಕವಾದ ಪಿಕಟಿಂಗದ ಬಗ್ಗೆ ತಮ್ಮ ಅಸಂತೋಷವನ್ನು ವ್ಯಕ್ತ ಪಡಿಸಿ, ಸೆಂಧಾನದ ಭವಿತವ್ಯತೆಯ ಬಗ್ಗೆ ಕೇಳಿದಂತೆ ಹೇಳಿದರು.

ವ್ಹಾಯಿಸರಾಯರು ಹಾಗು ನಾನು, ಇಬ್ಬರೂ ಪರಸ್ಪರವಾಗಿ ಒಳ್ಳೇ ಸ್ನೇಹಭಾವದಿಂದ ಹಾಗೂ ಅಂತಃಕರಣ ಪೂರ್ವಕವಾಗಿ ಮಾತುಕತೆಯಾಡಿದೆವು. ಚರ್ಚೆಯ ಫಲಿತಾಂಶವು ದೇವರನ್ನೇ ಕೂಡಿದೆ. ನನಗೆ ಸಂಪೂರ್ಣ ಸ್ವರಾಜ್ಯವು ಬೇಕೂ ಒಪ್ಪಂದವು ಸಾಧ್ಯವಾಗಬೇಕೆಂಬುದಾಗಿ ನಾನು ಶಕ್ತಿ ಮೀರಿ ಪ್ರಯತ್ನ ಮಾಡಿರುತ್ತೇನೆ ಆದರೆ ಒಂದು ವೇಳೆ ಅದು ಸಾಧ್ಯವಾಗದಿದ್ದಲ್ಲಿ, ಇದಕ್ಕೂ ಹೆಚ್ಚಿನ ಕಷ್ಟನಷ್ಟಗಳನ್ನು ಸಹಿಸಲು ಜನರು ಸಿದ್ಧರಾಗಬೇಕು.

ಸರ್ ಹೊಟಸನ್ನ ಸಾಹೇಬರು ದಿಲ್ಲಿಗೆ ಹೊರಟರು

(ಶಂತಿಯವಾರ್ತೆ ತಾ||೨೧)

ಮುಂಬಯಿ ಗವರ್ನರರಾದ ಸರ್ ಫ್ರೆಡರಿಕ್ ಸಾಯಿಕ್ಸರು, ದಿಲ್ಲಿಗೆ ಕೂಡಲೆ ಹೊರಟು ಬರಲು ತಿಳಿಸಿಕೊಂಡಿದ್ದರಿಂದ, ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಸರ್ ಅರ್ನೆಸ್ಟ ಹೋಟ್‌ಸನ್ ಸಾಹೇಬರು ನಿನ್ನಿನ ದಿವಸ ಸಂಜೆಗೆ ದಿಲ್ಲಿಗೆ ಪ್ರಯಾಣ ಬೆಳಿಸಿದರು.

(ಶಂತಿಯ ವಾರ್ತೆ ತಾ|| ೨೧)

ಶ್ರೀಮತಿ ಸರೋಜಿನಿ ದೇವಿ ಹಾಗು ಶ್ರೀ ಆಣೆಯವರಿಗೆ ದಿಲ್ಲಿಗೆ ಹೋಟು ಬರಲು ಪಂಡಿತ ಜವಾಹಿರಲಾಲರು ತಂತಿ ಕೊಟ್ಟಿದ್ದರಿಂದ, ಅವರು ಬೇಗನೆ ದಿಲ್ಲಿಗೆ ಹೋಡಕಳ್ಳವರಿದ್ದಾರೆ.

(ಶಂತಿಯ ವಾರ್ತೆ ತಾ|| ೨೦)

ಗುರುವಾರ ದಿವಸ ವ್ಹಾಯಿಸರಾಯರು ಮತ್ತೆ ಮಹಾತ್ಮಾಗಾಂಧಿಯವರನ್ನು ಭೆಟ್ಟಿಗೆ ಕರೆಕಳುಹಿದ್ದರಿಂದ, ಅವರು ಅಂದು ಮಧ್ಯಾಹ್ನ ದಲ್ಲಿ ೨ ಘಂಟೆಗೆ ವ್ಹಾಯಿಸರಾಯರನ್ನು ಕಂಡು ಕೊಂಡರು. ಅವರಿಬ್ಬರಿಯೂ ಸುಮಾರು ಅರ್ಧ ತಾಸಿನ ವರೆಗೆ ಚರ್ಚೆ ನಡೆಯಿತು. ಈಗ ಚರ್ಚೆಯಲ್ಲಿ ವಿಚಾರ ಮಾಡಲ್ಪಟ್ಟ ಬೇರೆ ಬೇರೆ ವಿಷಯಗಳ ಸಂಬಂಧವಾಗಿ ಸಂಧಾನವಾಗುವದು ಸಂಭವವಿದೆಯೆಂದೂ,ಆದರೆ ಅದು ಆಗಬೇಕಾದರೆ ಇನ್ನೂ ಕೆಲವೊಂದು ದಿನಗಳು ಹೋಗಬೇಕಾಗುವದಾಗಿಯೂ ತಿಳಿದು ಬರುತ್ತದೆ

ಮುಂದಿನ ವಾರದಲ್ಲಿ ಒಂದು ಪರಿಷತ್ತು ಕರೆಯಲ್ಪಟ್ಟಿದ್ದು, ಈ ಪರಿಷತ್ತಿನಲ್ಲಿ ವ್ಹಾಯಿಸರಾಯರು, ಅವರ ಕಾರ್ಯಕಾರಿ ಮಂಡಳದವರು, ನಾ.ಶಾಸ್ತ್ರಿ, ಶ್ರೀ ಜಯಕರ, ಸರ್.ಸಪ್ರು ಶಾಫಿ, ಬಿಕಾನೇರ ಮಹಾರಾಜರು, ಭೋಪಾಳದ ನವಾಬರು, ಇವರು ತಮ್ಮದೊಂದು ಪಕ್ಷ ಮಾಡಿಕೊಂಡು, ಬೇರೊಂದು ಪಕ್ಷದವರಾದ ಮಹಾತ್ಮಾ ಗಾಂಧಿ,ಪಂಡಿತ ಜವಾಹೀರಲಾಲ, ಪಂಡಿತ ಮಾಲವಿಯಾ, ಡಾ. ಅನ್ಸಾರಿ ಮೊದಲಾದವರೊಂದಿಗೆ ವಿಚಾರ ವಿನಿಮಯ ಮಾಡುವದೆಂದು ತಿಳಿದು ಬರುತ್ತದೆ. ಈ ಪರಿಷತ್ತು ಬಹುಶಃ ಗುರುವಾರ ದಿವಸ ನೇರಬಹುದಾಗಿ ತೋರುತ್ತದೆ.

ಶ್ರೀ ಸೇನಗುಪ್ತರು ದಿಲ್ಲಿಗೆ ಹೊರಟರು.

(ಶಂತಿಯ ವಾರ್ತೆ ತಾ|| ೨೦)

ಬಂಗಾಲದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರೂ ವರ್ಕಿಂಗ ಕಮೀಟಿಯ ಸಭಾಸದರೂ ಆಗಿರುವ ಶ್ರೀ ಜೆ. ಎಂ. ಸೇನಗುಪ್ತರು, ಇವತ್ತಿನ ದಿವಸ ಅಲೀಪೂರ ಜೇಲಿನಲ್ಲಿ ಶ್ರೀ ಸುಭಾಶಚಂದ್ರ ಬೋಸರೆಂಡನೆ ೨ ತಾಸುಗಳ ವರೆಗೆ ಮಾತುಕತೆಯಾಡಿ, ದಿಲ್ಲಿಗೆ ಹೊರಟು ಹೋದರು.

ಶ್ರೀ ಸುಭಾಶ ಬೋಸರ ಮುಂಗೈಲುಬು ಮುರಿದಿದೆ.

ಅಲೀಪೂರ ಸೆಂಟ್ರಲ್ ಜೇಲಿನಲ್ಲಿ ತಮ್ಮ ತಿಕ್ಕೆಯ ಅವಧಿಯನ್ನು ಅನುಭವಿಸುತ್ತಿರುವ ಕಲಕತ್ತೆಯ ವೈದ್ಯರಾದ ಶ್ರೀ ಸುಭ್ಯಾಶ ಚಂದ್ರ ಬೋಸರಿಗೆ ಸ್ವಾತಂತ್ರ್ಯ ದಿನದ ದಿವಸ ಲಾಠಿ ಪೆಟ್ಟುಗಳು ಬಿದ್ದವಷ್ಟೆ. ಈ ಲಾಠಿ ಪೆಟ್ಟುಗಳ ಮೂಲಕವಾಗಿ ಅವರ ಬಲಗೈಯು ಈಗ ಒಂದೇ ಸವನೆ ಬಾಯಹತ್ತಿದ್ದು, ಅದು ಯಾತಕ್ಕೂ ಉಪಯೋಗಕ್ಕೆ ಬಾರದಂತಾಗಿದೆ. ಮುಂಗೈ ಎಲುಬು ಮುರಿದಿದೆಯೋ ಏನೆಂಬುದನ್ನು ಕಂಡು ಹಿಡಿಯುವ ಶಕ್ತಿಯು ಅಧಿಕಾರಿಗಳು ಅವರ ಕೈಯನ್ನು 'ಕ್ಷ' ಕಿರಣದಿಂದ ಬೇಗನೆ ಪರೀಕ್ಷಿಸಬಕ್ಕವರೆಂದ್ದಾರೆ.

(ದಿಲ್ಲಿ. ತಾ||೨೧)

ಪಂಡಿತ ಜವಾಹರಲಾಲ, ಪಂಡಿತ ಮಾಲವಿಯಾ,ಸರದಾರ ವಲ್ಲಭಭಾಯಿ, ಜಮುನಾಲಾಲ ಬಜಾಜ, ಇವರು ಈಗ ದಿಲ್ಲಿಗೆ ಬಂದಿರುವ್ಹಾಯಿಸರಾಯರು ಹಾಗು ತಮ್ಮ ಪಡೆಯ ನಡುವೆ ನಡುವೆ ನಡೆದ ಚರ್ಚೆಯ ಸಂಬಂಧವಾಗಿ ಮಹಾತ್ಮರು ಅವರೊಡನೆ ವಿಚಾರ ಮಾತಕತ್ಯವರಿದ್ದಾರೆ.

ಭೋಪಾಲದ ನವಾಬರು ಹಾಗು ಬಿಕಾನೇರ ಮಹಾರಾಜರಿಗೆ ಕೂಡಲೆ ದಿಲ್ಲಿಗೆ ಹೊರಟಿಬರಲು ತಿಳಿಕೊಳ್ಳವದರಲ್ಲಿ ಬಂದಿದ್ದು ಅವರು ಬೇಗನೆ ಇಲ್ಲಿಗೆ ಬಂದು ಸರ್ ಸಪ್ರು ಮೊದಲಾದವರೊಂದಿಗೆ ಸೇರಿಕೊಂಡು ಒಪ್ಪಂದದ ವಿಷಯವಾಗಿ ಪ್ರಯತ್ನಿಸಕ್ಕವರಿದ್ದಾರೆ.

ಹರಪನಹಳ್ಳಿಯಲ್ಲಿ

ಪಂ.ಮೋತೀಲಾಲರಿರ ಶ್ರಾದ್ಧ ದಿನ

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಅಜ್ಞೆಯು ಮೇರಿಗೆ ಪಂಡಿತ ಮೋತೀಲಾಲರ ಶ್ರಾದ್ಧ ದಿನವು ಇಲ್ಲಿ ಜನ್ನಾಗಿ ನಡೆಯಿತು. ಬಳ್ಳಾರಿಯ ಡಾ.ಸರಾಫರು ಇಲ್ಲಿಗೆ ಈ ಕಾರಸಕ್ಕೊಕ್ಕರವೇ ದಯಮಾಡಿಸಿದ್ದರು. ಮಧ್ಯಾನದಲ್ಲಿ ಡಾ. ಸರಾಫರ ಮುಖಾಂತರ್ವದಲ್ಲಿ ಬೆಳ್ಳಿ ತಲೆಯ ಮೆರವಣಿಗೆಯು ಭವ್ಯವಾಗಿ ಊರಲ್ಲಿ ಹಾದಿ ಗಾಂಧಿ ಮೈದಾನಕ್ಕೆ ತಲುಪಿತು. ಅಲ್ಲಿ ಮಹಾತ್ಮರ ತತ್ವಗಳು ಓದಲ್ಪಟ್ಟವು. ಎಲ್ಲರಿಂದಲೂ ಉಚ್ಚರಿಸಲ್ಪಟ್ಟವು. ಮೋತೀಲಾಲರ ಜೀವನ ಚರಿತ್ರೆಯ ವಿಷಯವಾಗಿ ಕೆಲವರಲ್ಲಿ ಭಾಷಣವಾಯಿತು.

ಒಪ್ಪಂದದ ಮಾತುಕತೆಗಳು

(ಅಲಹಾಬಾದ ತಾ ॥೧೪)

ಸಾ. ಶಾಸ್ತ್ರಿ, ಸರ್ ಸಪ್ರೂ, ಶ್ರೀ ಜಯಕರ ಇವರು ಇವತ್ತಿನ ದಿವಸ ಮತ್ತೆ ಆನಂದ ಭವನಕ್ಕೆ ಭೆಟ್ಟಿ ಕೊಟ್ಟರು. ಅಲ್ಲಿ ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರಿಗೆ ಪತ್ರ ಬರೆಯುವದರಲ್ಲಿ ತೊಡಗಿದ್ದರು. ಪತ್ರ ಬರೆಯುವ ಕಾರ್ಯವು ತೀರಿದ ಬಳಿಕ ಅವರು ಅದನ್ನು ನೋಡಿಕೊಂಡು ಹೊರಟು ಹೋದರು. ಈ ಪತ್ರದಲ್ಲಿ ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರಿಗೆ "ನಿವಗೆ ಭೆಟ್ಟಿಯಾಗಿ ನಿಮ್ಮೊಡನೆ ಸದ್ಯದ ಪರಿಸ್ಥಿತಿಯ ಬಗ್ಗೆ ಏಕಾಂತ ಮಾಡಬೇಕೆನ್ನುತ್ತೇನೆ" ಎಂಬುದಾಗಿ ತಿಳಿಸಿದ್ದಾರೆ. ವ್ಹಾಯಿಸರಾಯರಿಂದ ಉತ್ತರ ಬಂದ ಬಳಿಕ ಮಹಾತ್ಮರು ದಿಲ್ಲಿಗೆ ಹೋಗುವರು. ಕಾಂಗ್ರೆಸ್ಸಿನ ಶವ್ಮ ಪತ್ರವನ್ನು ರಫಿ ಅಹಮ್ಮದ ಕಿದ್ವಾಯಿಯವರು ಕೈಯ್ಯಲ್ಲಿ ಕೊಟ್ಟಿದ್ದು ಅವರು ಇವತ್ತಿನ ದಿವಸ ದಿಲ್ಲಿಗೆ ಹೋಗಿ, ಅವನ್ನು ವ್ಹಾಯಿಸರಾಯರಿಗೆ ಮುಟ್ಟಿಸಲಿಕ್ಕವರಿದ್ದಾರೆ. ಶವ್ಮನ್ನು ಭೆಟ್ಟಿಯಾಗಲು ವ್ಹಾಯಿಸರಾಯರು ಅಪ್ಪಣೆ ಕೊಟ್ಟಿಲ್ಲ. ಮಹಾತ್ಮರು ಅವರನ್ನು ಬಹುಃ ಮಂಗಳವಾರ ಇಲ್ಲವೆ ಬುಧವಾರ ಕಾಣುಕೊಳ್ಳಬಹುದು.

ಪೋಲೇಸರ ಅತ್ಯಾಚಾರದ ಸಂಬಂಧವಾಗಿ ವಿಚಾರಣೆ ಮಾಡಲು ಒಂದು ಅಂತರ ರಾಷ್ಟ್ರೀಯ ಮೆಂಡಳವನ್ನು ನಿಯಮಿಸಬೇಕಾಗಿಯೂ, ಆ ಮಂಡಳದಲ್ಲಿ ಭಾರತೀಯ ರಾಗಲಿ ಇಲ್ಲವೆ ಬ್ರಿಟಿಶರಾಗಲಿ ಯಾರೂ ಇರಕೂಡದಾ ನಿಸಿಯೂ ಅಮೇರಿಕೆಯ ಪತ್ರಿಕಾಕರ್ತರಾದ ಮಿ. ಎಡ್ವರ್ಡ ಹಾಲಟನ್ ಬೇಮ್ಸ್‌ರವರು ಸೂಚಿಸಿದ್ದಾರೆ. ಇವರ ಸೂಚನೆಗೆ ಕೆಲವು ಜನ ಕಾಂಗ್ರೆಸ್ ಮುಖಂಡರೂ ತಮ್ಮ ಸಮ್ಮತಿ ತೋರಿಸಿದ್ದಾರೆ.

ಸ್ವರಾಜ್ಯ ಭವನದ ಸಂಬಂಧವಾಗಿ ವಿಚಾರಮಾಡಲು ವರ್ಕಿಂಗ ಕಮಿಟಿಯವರಿಂದ ನೇಮಿಸಲ್ಪಟ್ಟ ಸದಾರ ವಲ್ಲಭಭಾಯಿ ಶ್ರೀ ಸಿ. ರಾಜಗೋಪಾಲಾಚಾರ್ಯ, ಹಾಗು ಸೇಟ ಜಮನಾಲಾಲ ಬಜಾಜರು ಆ ಬಗ್ಗೆ ವಿಚಾರ ಮಾಡಿ ಕೆಳಗಿನಂತೆ ಶಿಫಾರಸು ಮಾಡಿದ್ದಾರೆ.

ಶ್ರೀ ಸಿ. ರಾಜಗೋಪಾಲಾಚಾರ್ಯ, ಡಾ. ಅನಸಾರಿ, ಸೇಟ ಜಮನಾಲಾಲ ಬಜಾಜ ಹಾಗು ಪಂಡಿತ ಜವಾಹರಲಾಲ ನೆಹರು ಈ ನಾಲ್ವರನ್ನು ಟ್ರಸ್ಟಿಗಳನ್ನಾಗಿ ಮಾಡಿ, ಸ್ವರಾಜ್ಯ ಭವನದ ಆಡಳಿತೆಯನ್ನು ಆವರ ಕಡೆಗೆ ಒಪ್ಪಿಸಬೇಕು.

ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿಯ ಜನರಲ್ ಸೆಕ್ರೆಟರಿಯವರು ತಾ॥ ೧೪ ನೆಯ ದಿವಸ ಕೆಳಗಿನಂತೆ ಪ್ರಸಿದ್ಧಪಡಿಸಿದ್ದಾರೆ,

ಕಾಂಗ್ರೆಸ್ ವರ್ಕಿಂಗ ಕಮೀಟಿಯವರು ಇಂದು ಮಂಜಾನೆ ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಸೇರಿ ಕೆಳಗಿನ ಠರಾವನ್ನು ಸರ್ವಾನುಮತದಿಂದ ಪಾಸು ಮಾಡಿದರು.

"ಮಹಾತ್ಮಾ ಗಾಂಧಿಯವರ ವಿನಂತಿಯ ಮೇರೆಗೆ ವರ್ಕಿಂಗ ಕಮೀಟಿಯು ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ತನ್ನ ದೊಡ್ಡ ನಿರ್ಣಯವನ್ನು ಈಗಲೆ ಕೊಡದೆ, ವರ್ಕಿಂಗ ಕಮೀಟಿಯ ಸಭೆಯನ್ನು ಪುನಃ ದಿನಾಂಕ ೧೭ ನೆಯ ಫೆಬ್ರುವರಿ ದಿವಸ ಕೂಡಿದ ವರ್ಕಿಂಗ ಕಮೀಟಿಯಲ್ಲಿ ಗೊತ್ತಾದ ನಿರ್ಣಯಗಳ ಪ್ರಕಾರ ಜಳವಳಿಯು ಅತ್ಯಾವಶ್ಯಕವಾಗಿ ಸಾಗಬೇಕೆಂದು ಗೊತ್ತುಪಡಿಸುತ್ತದೆ."

(ಶಂತಿಯ ವಾರ್ತೆ ತಾ ॥ ೧೬)

ಮಂಗಳವಾರ ಇಲ್ಲವೆ ಬುಧವಾರ ದಿವಸ ಬಂದು ತಮಗೆ ಭೆಟ್ಟಿಯಾಗಬೇಕೆಂದು ವ್ಹಾಯಿಸರಾಯರು ಮಹಾತ್ಮಾ ಗಾಂಧಿಯವರಿಗೆ ತಿಳಿಸಿದ್ದರಿಂದ, ಮಹಾತ್ಮಾ ಗಾಂಧಿಯವರು ಈ ದಿವಸ ರಾತ್ರಿಯಾಗಲಿ ಇಲ್ಲವೆ ನಾಳೆಗಾಗಲಿ ದಿಲ್ಲಿಗೆ ಹೋಗಲಕ್ಕವರಿದ್ದಾರೆ.

ಸರ್ ಸಪ್ರೂ, ನಾ. ಶಾಸ್ತ್ರಿ, ಶ್ರೀ ಜಯಕರ ಇವರು ಇವತ್ತಿನ ದಿವಸ ಮಧ್ಯಾನ್ಹದಲ್ಲಿ ವ್ಹಾಯಿಸರಾಯರನ್ನು ಕಂಡುಕೊಳ್ಳುವವರಿದ್ದರು.

ಮಹಾತ್ಮಾ ಗಾಂಧಿಯವರು ತಮ್ಮ ಪತ್ರದಲ್ಲಿ, ಭೆಟ್ಟಿಯ ಸಂಬಂಧವಾಗಿ ಯಾವ ಕರಾರುಗಳನ್ನು ಹಾಕದೆ, ಪ್ರಾಂಜಲ ಮನಸಿನಿಂದ ಚರ್ಚೆ ಮಾಡಬೇಕೆಂಬುದಾಗಿ ವ್ಹಾಯಿಸರಾಯರಿಗೆ ಕೇಳಿಕೊಂಡಿರುವರಾಗಿ ತಿಳಿದು ಬರುತ್ತದೆ.

(ಶಂತಿಯ ವಾರ್ತೆ ತಾ॥ ೧೭)

ಮಹಾತ್ಮಾ ಗಾಂಧಿಯವರು ಇವತ್ತಿನ ದಿವಸ ಮುಂಜಾನೆ ದಿಲ್ಲಿಗೆ ತಲುಪಿದ್ದು, ಮಧ್ಯಾನ್ಹ ೨—೩೦ ಗಂಟೆಗೆ ವ್ಹಾಯಿಸರಾಯರನ್ನು ಕಂಡುಕೊಳ್ಳುವವರಿದ್ದಾರೆ. ಸರ್ ಸಪ್ರೂ, ನಾ. ಶಾಸ್ತ್ರಿ, ಮೊದಲಾದವರು ಮಹಾತ್ಮರನ್ನು ಇಂದು ಮುಂಜಾನೆ ಕಂಡುಕೊಂಡರು.

(ಶಂತಿಯ ವಾರ್ತೆ ತಾ॥ ೧೮)

ಮಹಾತ್ಮಾಗಾಂಧಿಯವರು ನಿನ್ನೆ ದಿವಸ ೨—೩೦ ಗಂಟೆಗೆ ವ್ಹಾಯಿಸರಾಯರ ವಸತಿ ಗೃಹಕ್ಕೆ ವ್ಹಾಯಿಸರಾಯರನ್ನು ಕಂಡು ಕೊಂಡರು. ಅವರ್ಬ್ಬರಲ್ಲಿಯೂ ಸುಮಾರು ೨ ತಾಸು ೪೦ ನಿಮಿಟುಗಳ ವರೆಗೆ ಚರ್ಚೆಯು ನಡೆದು, ಚರ್ಚೆಯು ಮುಂದಿನ ದಿವಸಕ್ಕೆ ಮುಂದರಿಸಲ್ಪಟ್ಟಿತು. ಚರ್ಚೆಯು ಸಮಯದಲ್ಲಿ ಮತ್ತೂ ಯಾರೂ ಇನ್ನಿರಿಲ್ಲ ಮುಂದಿನ ಬುಧವಾರ ಗಾಂಧಿಯು ಕಾರ್ಯ ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷದವರ ಸೆರೆಮನೆ, ಪೋಲೀಸರ ಅತ್ಯಾಚಾರ ಈ ಸಂಬಂಧವಾಗಿ ಇಬ್ಬರೂ ಪ್ರಾಂಜಲ ಮನಸಿನಿಂದ ಚರ್ಚೆ ಮಾಡಿದರಂತಿಯೂ, ಮಹಾತ್ಮಾ ಗಾಂಧಿಯವರು ಈ ವರೆಗೆ ಆದ ಚರ್ಚೆಯ ಸಂಪೂರ್ಣ ವಿವರಗಳನ್ನು ಹೊಂದಿದವರಾಗಿಯೂ ತಿಳಿದು ಬರುತ್ತದೆ ಒಪ್ಪಂದವು ಸಾಧ್ಯವಾಗಬಹುದು, ಮಹಾತ್ಮರು ಈ ದಿನ ಮತ್ತೆ ವ್ಹಾಯಿಸರಾಯರನ್ನು ಕಂಡು ಚರ್ಚೆ ಮಾಡಲಕ್ಕವರಿದ್ದಾರೆ.

(ಶಂತಿಯ ವಾರ್ತೆ ತಾ॥ ೧೯)

ಮಹಾತ್ಮಾ ಗಾಂಧಿಯವರು ನಿನ್ನೆ ದಿವಸ ವ್ಹಾಯಿಸರಾಯರೊಡನೆ ಚರ್ಚೆ ಮಾಡಿ ಬಂದ ಕೂಡಲೆ, ಸರ್ ಸಪ್ರೂ, ನಾ. ಶಾಸ್ತ್ರಿ, ಶ್ರೀ ಜಯಕರ, ಜವಾಹರಲಾಲ ಬಜಾಜ, ಡಾ. ಅನಸಾರಿ ಇವರು ಅವರನ್ನು ಕಂಡುಕೊಂಡರು. ಆಗ ಮಹಾತ್ಮರು ಅವರಿಗೆ ಚರ್ಚೆಯ ಸಂಗತಿಗಳನ್ನು ತಿಳಿಸಿ, ಒಪ್ಪಂದದ ಸಂಬಂಧವಾಗಿ ಈಗ ಏನೂ ಹೇಳಲು ಬರುವಂತಿಲ್ಲವೆಂಬುದಾಗಿ ತಮ್ಮ ವಿಚಾರವನ್ನು ವ್ಯಕ್ತ ಪಡಿಸಿದರು.

ಎಡನೆಯ ಬಂಡೀಗಾಲಿಯ ಪರಿಷತ್ತಿನಲ್ಲಿ ನಡೆಯ ಬಹುದಾದ ರಾಜಕೀಯ ಪ್ರಶ್ನೆಗಳ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದವರೂ ಭಾಗ ತೆಗೆದುಕೊಳ್ಳಬೇಕೆಂಬ ಇಚ್ಛೆಯಿದ್ದಲ್ಲಿ, ಆ ಪರಿಷತ್ತಿನಲ್ಲಿ ಅವರಿಗೆ ಮುಳ್ಳದ್ವಾರ ವಿಠಲ ಬೇಕೆಂದು ಮಹಾತ್ಮರು ಕೇಳಿಕೊಂಡರೆಂದೂ, ವ್ಹಾಯಿಸಂತಾಯರು ಆ ಬಗ್ಗೆ ತಮ್ಮ ಮತವನ್ನು ವ್ಯಕ್ತ ಪಡಿಸಿ, ಸರಕಾರಿ ಧೋರಣವನ್ನು ಹಿಂದು ಗಡೆಯಲ್ಲಿ ತಿಳಿಸುವೆನೆಂದು ಉತ್ತರಕೊಟ್ಟರೆಂದೂ ತಿಳಿದು ಬರುತ್ತದೆ.

ವಿಜಾಪುರ ಜಿಲ್ಲೆಯ ರೈತರ ಪರಿಷತ್ತು
ಅಧ್ಯಕ್ಷರಾದ
ರಾ. ಬ. ಎಸ್. ಎನ್. ಅಂಗಡಿ ಇವರ ಭಾಷಣವು

ವಿಜಾಪುರ ಜಿಲ್ಲೆಯ ರೈತರ ಪರಿಷತ್ತು ತಾ॥ ೧೮ ನೆಯ ದಿವಸ ಅಲ್ಲಿಯ ಶಿವಡಾಹಾಲನಲ್ಲಿ ಕೂಡಿತ್ತು. ಪರಿಷತ್ತಿನ ಅಧ್ಯಕ್ಷರಾದ ರಾ. ಬ. ಎಸ್. ಎನ್. ಅಂಗಡಿಯವರು ತಮ್ಮ ಭಾಷಣದಲ್ಲಿ ಮೊದಲು ಪಂಡಿತ ಮೋತೀಲಾಲ ನೆಹರೂ, ವೆಂಕಣ್ಣ ಹೊಸಪ ನಾಯಿಕ ಇವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಿ, "ರೈತರ ಸ್ಥಿತಿಗತಿ"ಗಳನ್ನು ಕುರಿತು ಈಗಿನಂತೆ ಹೇಳಿದರು.

ರೈತರ ದೀನ ದಾರಿದ್ರ್ಯವಸ್ಥೆಯು ವಿಷಯವಾಗಿ ಮಾತಾಡಿದವೇ ಇಲ್ಲ. ಭಾರತೀಯರ ಒಡಕನ್ನು ಜೋಡಿಸಲಾರದ ಒಡಕನ್ನು ಇಡೀ ಜಗತ್ತಿನಲ್ಲಿಯೇ ಇಲ್ಲವೆಂದ ಸೈಮನ್ ಕಮಿಶನರಾದರೂ ಒಪ್ಪಿಕೊಳ್ಳಬೇಕಾಯಿತು. ವಿಧಿನಿಷ್ಠೇಪ ವಿಚಾರಣಾ ಸಮಿತಿಯವರು (ಬ್ಯಾಂಕಿಂಗ್ ಎನ್ ಕ್ವಾಯರಿ ಕಮಿಟಿಯವರ) ಈಗ ಲಿರುಳು ದುಡಿದು ಹೊರಡಿಸಿದ ವರದಿಯಿಂದ ನಮ್ಮೀ ಪ್ರಾಂತದಲ್ಲಿ ಒಕ್ಕಲಿಗರಿಗೆ ಎಷ್ಟು ಕೋಟಿ ರೂಪಾಯಿಗಳ ಸಾಲವಿದೆಯೆಂಬದನ್ನು ನೀವು ಅರಿತಿರಬಹುದು. ನೀವು ದಾರಿದ್ರ್ಯ ಹಳ್ಳದಲ್ಲಿ ಬಿದ್ದು ಹೇಗೆ ಒದ್ದಾಡುತ್ತಿರುವೆಂಬದನ್ನು ತೋರಿಸಲು ನಿಮ್ಮ ಮುಂದೆ ಈ ಸಂಗತಿಯನ್ನು ಇಡುತ್ತೇನೆ. ಸರಾಸರಿ ೧೦೦ ಕ್ಕೆ ೧೫ ರಂತೆ ಕಿಸ್ತಿಯ ದರವಿದೆಯೆಂದು ಇಟ್ಟುಕೊಂಡರೂ ಹತ್ತು ಕೋಟಿ ರೂಪಾಯಿಗಳು ನಿಮ್ಮ ಕೈ ಬಿಡುತ್ತವೆ. ಆದುದರಿಂದ ಇಂಥಹ ನಿಕೃಷ್ಟ ಸ್ಥಿತಿಗೆ ಬಂದಿಡಿದ ಒಕ್ಕಲಿಗರು ಸಂತೋಷದಿಂದ ಇರುವದು ಸಾಧ್ಯವೆಂತ? ನಿಮ್ಮೆಚ್ಚಿನ ಒಬ್ಬ ಪ್ರತಿಯೊಬ್ಬನು ಅವನ ಯಾವುದೇ ಪ್ರಶ್ನೆವನ್ನು ಬಗೆಹರಿಸಲು ನಿಮ್ಮ ಹಿತಚಿಂತಕನೆಂಬ ಪುಮಾ ವಿಶ್ವಾಸಂಯ ಇಂದು ಬಡಿಸುವನು. ಹೀಗಿದ್ದರೂ ನಿಮ್ಮ ಸ್ಥಿತಿಯು ಅಷ್ಟೊಂದು ನಿರ್ಭಾಗ್ಯವಾಗಿದೆ. ನಿಮ್ಮಿಂದಲೇ ಜನಾಂಗದ ಉಜ್ಜೀವನ. ನಿಮ್ಮಿಂದಲೇ ಜನಾಂಗದ ಜೀವಾಳ. ನಿಮ್ಮಿಂದಲೇ ರಾಜ್ಯದ ಉಪಜೀವನವೆಂದು ನಾವೆಲ್ಲ ಪ್ರತಿಯೊಬ್ಬರೂ ಹೇಳುವರು. ಹೀಗಿದ್ದರೂ ನಿಜವಾದ ಪಕ್ಷದಲ್ಲಿ ಒಕ್ಕಲಿಗರೇ ರಾಷ್ಟ್ರದ ಭಾಗ್ಯವಿಧಾತರಂತಾಗಲೂಡದೇಕೆ? ಅವರೇ ಅಳತಕ್ಕೆ ಕೈನೋಟ ಬರಿ. ಆದರೆ ನೀವೆಲ್ಲರೂ ಅಜ್ಞಾನಾಂಧಕಾರದಿಂದ ಅನೈಕ್ಯರಾಗಿರುವದರಿಂದ ನಿಮ್ಮ ಸಾಮರ್ಥ್ಯವನ್ನು ನಿಮ್ಮ ಶಕ್ತಿಯನ್ನೂ, ನಿಮ್ಮ ಗುಪ್ತ ಬಲವನ್ನೂ ನೀವು ಅರಿತುಕೊಂಡಿಲ್ಲ. ಹೀಗೆ ಹೇಳುತ್ತ ಒತ್ತಾಯದ ಪ್ರಾರ್ಥಿಮಿಕ ಶಿಕ್ಷಣದ ವಿಷಯವನ್ನು ಉದ್ಭವಿಸುವದು. ಕೆಲವರು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ವಿಷಯದಲ್ಲಿ ಬಹಳೇ ಅತ್ಸರರಾಗಿರುವರು. ಮತ್ತು ಇಂತಹ ವಾಲಕರು ವಿಷಯದಲ್ಲಿ ಒತ್ತಾಯವು ಅನಾವಶ್ಯಕವಾಗಿದೆ. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಮೇಲಿನ ವರ್ಗಗಳಲ್ಲಿಯ ಹುಡುಗರ ಸಂಖ್ಯೆಯು ಶೂನ್ಯಕ ಕಡಿಮೆಯಾಗುತ್ತಿರುವದೆಂದು ನಿಮ್ಮಲ್ಲಿ ತಿಳಿವಳಿಕೆ ಇರಬಹುದು. ಇದಕ್ಕೆ ಕಾರಣಗಳನ್ನು ಹುಡುಕಿದರೆ ಅವುಗಳಲ್ಲಿಂದ ಒಂದು ಕಾರಣವು ಮಕ್ಕಳಿಂದ ಕೆಲಸ ತೆಗೆದುಕೊಳ್ಳುವದು. ಇದರಿಂದ ಬರುತ್ತಿರುವ ಪನ್ನತಿಗೆ ನಾವೆಲ್ಲ ಹೊರೆ ಹೋಗಬೇಕಾಗಿದೆ. ಮುಂಬಯಿ ಸರಕಾರದ ಸಂಪತ್ತಿಕ ಸ್ಥಿತಿಯು ದಿನೇ ದಿನೇ ಹೀನವಾಗಹತ್ತಿದೆ. ಆದುದರಿಂದ ಸರಕಾರದವರಿಂದ ಶೀಘ್ರದಲ್ಲಿಯೇ ನಿಮಗೆ ಸಹಾಯ ಬಾರದೆಂದು ನಾನಂತೂ ಹೇಳಲಾರೆ.

ರೈತರ ಸಾಲಗಾರಿಕೆ

ನಿಮ್ಮ ಹೆಡ್ಡದ ಸಾಲಗಾರಿಕೆಗಿಂತ ನಿಮ್ಮ ಭವಿಷ್ಯದದೃಷ್ಟಿದ ವಿಷಯವಾಗಿಯೇ ಹೆಚ್ಚು ಹೇಳಿದೆನು. ಈ ಸಮಸ್ಯೆಯನ್ನು ಎದುರಿಸುವದೆಂತೆಂಬುದು ಈಗಿನ ಪ್ರಶ್ನೆ. ಇದನ್ನು ಬಿಡಿಸಲು ಸರಕಾರದವರು ಅನೇಕ ಯತ್ನಗಳನ್ನು ಮಾಡಿರುವರು. ಶೇಕಡೇ ಕಾನೂನನ್ನು ಜಾರಿಯಲ್ಲಿ ತಂದಿರುವರು; ಸರಕಾರೀ ಸಂಘಗಳನ್ನು ಸ್ಥಾಪಿಸಿರುವರು. ಮಗಯಿಯನ್ನು ಕೊಡಿಸುತ್ತಲಿರುವರು ಇವೆಲ್ಲ ಯತ್ನಗಳ. ಎಷ್ಟೇ ಸ್ತೋತ್ರಾರ್ಹವಿರೂ ನಿಮ್ಮನ್ನು ದಾರಿದ್ರ್ಯರಾಕ್ಷಸನ ಹಿಡಿತದಿಂದ ಮುಕ್ತ ಮಾಡಿಲ್ಲ. ಅದೇಕೆ? ಈ ರಾಷ್ಟ್ರನಶಕ್ತಿಗೆ ಅವರು ಸರಿದೂಗುವದಿಲ್ಲ. ಸಹಕಾರೀ ಸಂಘಗಳಿಂದ ಆಳವಿಸಲ್ಪಟ್ಟ ಮುಷ ಭಾವವಾದ ಬಡ್ಡಿಯು ದರವೂ, ಕಾಲಕ್ಕೆ ಸರಿಯಾಗಿ ಕೊಡದಿದ್ದರೆ ಕೂಡಿಸಲ್ಪಡುವ ದಂಡದ ಬಡ್ಡಿಯೂ, ಕಗ್ಗಾಯಿ ಸಾಲದ ಮೇಲೆ ಹೇರುವ ಬಡ್ಡಿಯ ಪ್ರಮಾಣವೂ ಸಾಲದ ಅರ್ಜಿಯು ಮಂಜೂರಾಗಲು ಬೇಕಾಗುವ ವಿಳಂಬವೂ ಒಕ್ಕಲಿಗನ ಸಾಲಗಾರಿಕೆಯನ್ನು ಕಡಿಮೆಯಾಗದೆ ಹಾಗೆಯೇ ಉಳಿಯುವಂತೆ ಮಾಡಲು ಕಾರಣಗಳಾಗಿವೆ. (ಮುಂದೆಹಾಗುವದು

ಕನ್ನಡಿಗರ
ಗೌರವದ ಗುರುತು.

ವಿದ್ಯಾಕಾಶಿ ಇಲಾಖೆಯುಳ್ಳ ತಂಜೀವರಂ ಎಂಬ ಪಟ್ಟಣದಲ್ಲಿ ಏಳನೇ ಶತಮಾನದಲ್ಲಿಯೂ ಪಲ್ಲವ ವಂಶದ ರಾಜರ ಕಾಲದಲ್ಲಿಯೂ ಶಿಲ್ಪ ಕಲಾ ವೈಭವವನ್ನು ಮೂರ್ತಿ ಮತ್ತಾಗಿ ಕಣ್ಣಿದುರಿಗೆ ನಿಲ್ಲಿಸುವಂಥ ಕಲವು ಹೊಸ ಕಟ್ಟಡಗಳು ಕೊಂಡಿದ್ದಾಪ್ಪಟ್ಟಿವೆ. ಈ ಶಿಲಾಮಯವಾದ ಒಂದು ಕೈಲಾಸನಾಥ (ಶಿವ)ನ ಮೂರ್ತಿಯು ಒಳಗಿನ ಪುರಾತನವಾದದ್ದಾಗಿದೆ. ಕೆಲವು ಕಟ್ಟಡಗಳ ಗೋಡೆಗಳ ಮೇಲೆ ಕೊರೆದ ಚಿತ್ರಗಳು ಭಗ್ನಖಂಡದ ಅವಶೇಷಗಳೂ ವಿಶೇಷವಾಗಿ ಕರ್ನಾಟಕದ ಶಿಲ್ಪಕಲಾಕೋವಿದರ ಕಲಾಕೌಶಲ್ಯವನ್ನು ಜಗತ್ತಿನಲ್ಲಿಯೇ ಸಾರಿ ಹೇಳುವಂತೆ ಇರುತ್ತವೆ ಈಗ ಕಂಡು ಹಿಡಿಯುಲ್ಪಟ್ಟ ಈ ಕೈಲಾಸನಾಥನ ಗುಡಿಯು ಪಲ್ಲವ ವಂಶದ ಎರಡನೇ ನೃಸಿಂಹವರ್ಮನೆಂಬ ರಾಜನ ಆಳಿಕೆಯುಲ್ಲಿ ಕಟ್ಟಿಸಲ್ಪಟ್ಟಿತೆಂದು ಆ ಗುಡಿಯ ಒಳಭಾಗದಲ್ಲಿ ಕೊರೆದ ಚಿತ್ರಗಳ ಮೇಲಿಂದ ತಜ್ಞರು ಗೊತ್ತುಮಾಡಿರುವರು. ಕನ್ನಡಿಗರೇ ಕರ್ನಾಟಕದ ಗತ ವೈಭವವನ್ನು ನಿಮ್ಮ ವಸ್ತುಸ್ಥಿತಿಯ ಮೇಲೆ ಚನ್ನಾಗಿ ಮೂಡಿಸಿಕೊಳ್ಳಿರಿ!

"ಪ್ರಭುತ್ವನಿರ್ಣಯ, ಪತ್ರಿಕೆಯು ಆಡಿನಿಸ್ಟ್ರೇಷನ್ನಿಗೆ ಅಹಿತಕರವಾಯಿತು"

ಮುಂಬಯಿಯಲ್ಲಿ ಹೊರಡುತ್ತಿದ್ದ "ಪ್ರಭುತ್ವ ನಿರ್ಣಯ" ಪತ್ರಿಕೆಗೆ ಮುಂಬಯಿ ಸರಕಾರದ ವರು ಪ್ರೆಸ್ ಆಡಿನಿಸ್ಟ್ರೇಷನ್ನಿನ ಅಧಿಕಾರವನ್ವಯ ೪೦೦೦ ರೂಪಾಯಿ ಹೊಣೆ ಬೇಡಿದ್ದಾರೆ.

ಕನ್ನಾನೂರ ಜೇಲಿನಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿದ್ದ ತಥ್ಯ ದೇಶದ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀ ಕೊಂಡಾ ವೆಂಕಟಪ್ಪನಯ್ಯನವರು ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ॥ ೧೭ ರಂದು ದಿವಸ ಬಿಡುಗಡೆ ಹೊಂದಿದರು.

ಬೆಳಗಾವಿಯಲ್ಲಿ ೧೦ ಜನ ಹೆಂಗಸರಿಗೆ ಶಿಕ್ಷೆ

ಬೆಳಗಾವಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹೊರಡಿಸಿದ ಅಪ್ಪಣೆಯನ್ನು ಅಮಾನ್ಯಮಾಡಿ ಮೆರವಣಿಗೆಯನ್ನು ಹೊರಡಿಸಿದ್ದಕ್ಕಾಗಿ ಬೆಳಗಾವಿಯಲ್ಲಿ ವಿಚಾರಣೆಗೆ ಗುರಿ ಮಾಡಲ್ಪಟ್ಟ ೧೮ ಜನ ಸ್ತ್ರೀಯರ ಖಟ್ಲೆಯ ವಿಚಾರಣೆಯು ತಾ॥ ೧೪ ನೆಯ ದಿವಸ ಮುಗಿದು ಅಂದು ತೀರ್ಪು ಹೇಳಲ್ಪಟ್ಟಿತು. ಮ್ಯಾಜಿಸ್ಟ್ರೇಟರು ೧೦ ಜನರಿಗೆ ಪ್ರತ್ಯೇಕವಾಗಿ ೧೦೦ ರೂ. ದಂಡ, ಇಲ್ಲವೆ ೪ ತಿಂಗಳ ಕಠಿಣ ಕಾವಾಗೃಹವಾಸ ಹೀಗೆ ಶಿಕ್ಷೆ ವಿಧಿಸಿ, ಉಳಿದ ೮ ಜನರನ್ನು ಎಚ್ಚರಿಕೆ ಕೊಟ್ಟು ಬಿಟ್ಟು ಬಿಟ್ಟರು. ಶಿಕ್ಷೆಗೊಳಗಾದವರನ್ನೆಲ್ಲ "ಕ" ವರ್ಗದಲ್ಲಿ ಇರಿಸಿದ್ದಾರೆ. ದಂಡದ ಹಣ ತುಂಬಲು ೪ ದಿನಗಳ ಅವಧಿಯು ಕೊಡಲ್ಪಟ್ಟಿದೆ.

ಹುಬ್ಬಳ್ಳಿಯ
ಶ್ರೀ ಯಾದವರಿಗೆ ಶಿಕ್ಷೆ

ಕಾರವಾರದಲ್ಲಿರುವ ಹುಬ್ಬಳ್ಳಿಯ ಶ್ರೀ ವೆಂಕಟೇಶ ಹಣಮಂತ ಯಾದವ ಎಂಬ ಮರಾಠಾ ತರುಣರಿಗೆ ಕಾರವಾರದ ಅಧಿಕಾರಿಗಳು ನೋಟೀಸು ಕೊಟ್ಟು, ಮುನಸಿಪಲ್ ಹದ್ದು ಬಿಟ್ಟು ಹೋಗಲು ತಿಳಿಸಿಕೊಂಡಿದ್ದರು. ಅವರು ಅಧಿಕಾರಿಗಳ ಅಪ್ಪಣೆ ವಿರುದ್ಧ ಆಜ್ಞೆಯೇ ತಳವೂರಿ ದಾಷ್ಟರ ಸೇನೆಯ ಸಂಘಟನೆಯನ್ನು ಮಾಡಿದರು. ಅಧಿಕಾರಿಗಳು ಅವರನ್ನು ಈ ಬಗ್ಗೆ ವಿಚಾರಣೆಗೆ ಗುರಿಮಾಡಿ ಅವರಿಗೆ ೧೫ ತಿಂಗಳ ಶಿಕ್ಷೆ ವಿಧಿಸಿದರು.

ಹುಬ್ಬಳ್ಳಿಯಲ್ಲಿ
ಪಂ. ಮೋತೀಲಾಲರ ಶ್ರಾದ್ಧದಿನ.

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಗನುಸರಿಸಿ ತಾ॥ ೧೫ ನೆಯ ದಿವಸ ಇಲ್ಲಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವನ್ನು ಆಚರಿಸಲ್ಪಟ್ಟಿತು. ಸರಾಫರು, ಕಂಚುಗಾರರು ಹಾಗು ಕೆಲವು ವ್ಯಾಪಾರಿಗಳು ತಮ್ಮ ತಮ್ಮ ಅಂಗಡಿ ಮುಚ್ಚಿ ಹರತಾಳ ಪಾಲಿಸಿದರು. ಮಧ್ಯಾನ್ನ ೪ ಗಂಟೆಗೆ ಕೋಟೆಯ ಜೋಳಮಾಳ್ಕ ಬೈಲಿನಿಂದ ಬೊಳ್ಳನೆತ್ತಿಯು ಪ್ರಚಂಡ ಮೆರವಣಿಗೆಯು ಹೊರಟು, ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು, ಗುಳಕವ್ವನ ಬೈಲಿಗೆ ತಲುಪಿತು. ಅಲ್ಲಿ ಶ್ರೀ ಎಲ್. ಎಸ್. ಪಾಟೀಲರ ಅಧ್ಯಕ್ಷತೆ ರಲ್ಲಿ ಸಭೆಯಾಗಿ, ಶ್ರೀ ಪುರಾಣಿಕ, ಶ್ರೀ ಗೂಡ ಗುಂಟಿ ಇವರ ಭಾಷಣಗಳಾದವು. ಅಧ್ಯಕ್ಷರು ಪ್ರತಿಜ್ಞೆಯು ಒಂದೊಂದೇ ವಾಕ್ಯವನ್ನು ಓದಿ ಹೇಳಿ, ಸಭೆಯಿಂದ ಅದನ್ನು ಉಚ್ಚರಿಸಿಸಿದರು. "ವಂದೇ ಮಾತರಂ" ಪದವಾದ ಬಳಿಕ ಸಭೆಯು ಮುಕ್ತಾಯವಾಯಿತು.

ಅಂಕೋಲೆಯಲ್ಲಿ
ಪೋಲೀಸನ ಫಜೀತಿ.

ಅಂಕೋಲೆಯ ಓರ್ವ ಪೋಲೀಸನು ಅಲ್ಲಿಯ ಒಬ್ಬ ಸ್ವಯಂಸೇವಕನನ್ನು ಹಾವಿಯಲ್ಲಿ ತರುಬಿ, ಕೈಯೊಳಗಿನ ಗಂಟು ಕೊಡಲು ಅವನಿಗೆ ತಿಳಿಸಿಕೊಂಡನು. ಸ್ವಯಂಸೇವಕನು ಅದನ್ನು ಕೊಡಲು ನಿರಾಕರಿಸಿದನು. ಪೋಲೀಸನು ಅವನನ್ನು ಸೆರೆಹಿಡಿದು, ಗಂಟನ್ನು ತನ್ನ ವಶಕ್ಕೆ ತೆಗೆದುಕೊಂಡು, ಅದನ್ನು ಬಿಚ್ಚಿ ನೋಡಿದನು. ಗಂಟಿನಲ್ಲಿ ಜೋಡಿಗಳಿದ್ದವು, ಪಶ್ಚಾತ್ತಾಪಪಟ್ಟು ಸ್ವಯಂಸೇವಕನನ್ನು ಬಿಟ್ಟು ಬಿಟ್ಟನು.

ಗದಗ—ಬೆಟಗೇರಿಯ ಸುದ್ದಿ
(ಸ್ವಂತ ಸುದ್ದಿಗಾರರಿಂದ)

ಪಂ. ಮೋತಿಲಾಲರ ಶ್ರಾದ್ಧ ದಿನ

ತಾ॥ ೧೫ ನೆಯ ದಿವಸ ಮಹಾತ್ಮಾ ಗಾಂಧಿಯವರ ಆಜ್ಞಾನುಸಾರವಾಗಿ ಪಂಡಿತ ಮೋತೀಲಾಲರ ಶ್ರಾದ್ಧ ದಿನವನ್ನು ಆಚರಿಸಲಾಯಿತು. ಯಾವತ್ತೂ ವ್ಯಾಪಾರಸ್ಥರು ಸಂಪೂರ್ಣ ಹರತಾಳ ಮಾಡಿದರು. ಸಂಜೆಯ ೫ ಗಂಟೆಗೆ ಗಾಂಧಿ ಚೌಕಿನಿಂದ ಮೆರವಣಿಗೆ ಹೊರಟು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೭ ಗಂಟೆಗೆ ಗಾಂಧಿ ಚೌಕಿಗೆ ಮರಳಿ ಬಂತು. ಅಲ್ಲಿ ಶ್ರೀ ತಿಪ್ಪಣ್ಣಶಾಸ್ತ್ರಿ ಕಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ, ಶ್ರೀ ಜಾಲಿಹಾಳ ವಕೀಲರ ಭಾಷಣವಾಯಿತು. ಅವರು ತಮ್ಮ ಭಾಷಣದಲ್ಲಿ, ಪಂಡೀತಿ ಅರಿವೆ, ಸೆರೆಸಿಂದಿ ಮೊದಲಾದವುಗಳಿಂದ ದೂರವಿರುವ ಬಗ್ಗೆ ಪ್ರತಿಜ್ಞೆ ಮಾಡಲು ಸಭಿಕರಿಗೆ ತಿಳಿಸಿಕೊಂಡರು. ಬಳಿಕ ಶ್ರೀ ಗೋಖಲೆ ಭಾಷ್ಯರಕಾರರು ಪಂಡಿತ ಮೋತೀಲಾಲರ ಜೀವನ ಚರಿತ್ರೆಯನ್ನು ಹೇಳಿದರು. ಅಧ್ಯಕ್ಷರು ಸಮಾರೋಪಭಾಷಣ ಮಾಡಿ ಮಹಾತ್ಮರು ಹಾಕಿಕೊಟ್ಟ ಪ್ರತಿಜ್ಞೆಯನ್ನು ಎಲ್ಲರಿಂದಲೂ ಉಚ್ಚಾರ ಮಾಡಿಸಿಕೊಂಡರು.

ಪಿಕೆಟಿಂಗಕ್ಕೆ ಜಯ ದೊರೆಯಿತು

ನೂಲಿನ ವ್ಯಾಪಾರಿಗಳಾದ ಶ್ರೀ ಖಟವಟೆ ಮತ್ತು ಜನ್ನಾಣ ಇವರ ಅಂಗಡಿಗಳ ಮೇಲೆ ಪಿಕೆಟಿಂಗ ಸುರುವಾದ ೬ ದಿನಗಳ ಮೇಲೆ ಅವರೀರ್ವರೂ ಸ್ವದೇಶಿ ಮಂಡಲದವರ ಕರಾರುಪತ್ರಕ್ಕೆ ಒಪ್ಪಿಕೊಂಡು ಇನ್ನು ಮೇಲೆ ಒಂದು ಎಳೆಯಾದರೂ ಪರದೇಶಿ ನೂಲು ತರಿಸುವದಿಲ್ಲವೆಂದು ಬರೆದುಕೊಟ್ಟಿದ್ದರಿಂದ ಪಿಕೆಟಿಂಗ ತೆಗೆಯಲ್ಪಟ್ಟಿದೆ.

ಈ ವಾರದಲ್ಲಿ ಪಂದೇಶಿ ಸಕ್ಕರೆ ಮಾರುವವರ ಮೇಲೆ ಕಾರ್ಯಕ್ರಮ ಕೈಕೊಳ್ಳುವವರಿದ್ದಾರೆಂ

ಗುಳೇದಗುಡ್ಡದಲ್ಲಿ
ಪಂ. ಮೋತೀಲಾಲರ ಶ್ರಾದ್ಧದಿನ

(ಸ್ವಂತ ಸುದ್ದಿಗಾರರಿಂದ)

ಮಹಾತ್ಮಾ ಗಾಂಧಿಯವರ ಆಜ್ಞೆಯ ಮೇರೆಗೆ ತಾ॥ ೧೫ ನೆಯ ದಿವಸ ಇಲ್ಲಿ ಪಂ. ಮೋತೀಲಾಲರ ಶ್ರಾದ್ಧ ದಿನವನ್ನು ಪಾಲಿಸಲಾಯಿತು. ಸಾಯಂಕಾಲ ಶ್ರೀ ಬಸವಣ್ಣದೇವರ ಗುಡಿಯ ಮುಂದೆ ಸಾರ್ವಜನಿಕ ಸಭೆ ಸೇರಿ ಮಹಾತ್ಮರು ಹಾಕಿಕೊಟ್ಟ ಪ್ರತಿಜ್ಞೆ ಮಾಡಲಾಯಿತು. ಶ್ರೀ ಜೋಶಿ ಗುಂಡೇರಾಯರು ಸಭೆಗೆ ಅಧ್ಯಕ್ಷರಾಗಿದ್ದರು.

ವಿಜಾಪುರ ಜಿಲ್ಲೆಯ
ರಾಜಕೀಯ ಸೆರೆಯಾಳುಗಳ
ಪರಿಷತ್ತು.

ತಾ॥ ೨೭ ಕ್ಕೆ ವಿಜಾಪುರದಲ್ಲಿ ಕೂಡುವದು.

(ತಂತಿಯ ವಾರ್ತೆ ವಿಜಾಪುರ ತಾ॥ ೧೭)

ವಿಜಾಪುರ ಜಿಲ್ಲೆಯ ರಾಜಕೀಯ ಸೆರೆಯಾಳುಗಳ ಪರಿಷತ್ತನ್ನು ಇದೇ ೨೭ ನೆಯ ತಾರೀಖಿಗೆ ವಿಜಾಪುರದಲ್ಲಿ ಕೂಡಿಸುವದಾಗಿ ನಿರ್ಧರಿಸಲ್ಪಟ್ಟಿದೆ. ಈಗಾಗಲೆ ಜೇಲಿನಿಂದ ಬಿಡುಗಡೆ ಹೊಂದಿ ಬಂದ ಯಾವತ್ತೂ ರಾಜಕೀಯ ಸೆರೆಯಾಳುಗಳೂ, ದೇಶಸೇವೆಗಾಗಿ ಕಷ್ಟ ಸಹಿಸುವ ಇತರರೂ ಈ ಪರಿಷತ್ತಿಗೆ ಬಂದು ಪರಿಷತ್ತನ್ನು ಯಶಸ್ವಿ ಮಾಡಬೇಕು. ಬೇರೆ ಬೇರೆ ಜೇಲುಗಳಲ್ಲಿ ಅಧಿಕಾರಿಗಳು ಸೆರೆಯಾಳುಗಳನ್ನು ಹೇಗೆ ನಡಿಸಿಕೊಂಡಿರುವರೆಂಬುದನ್ನು ತಿಳಿಸುಕೊಳ್ಳುವದಕ್ಕೋಸ್ಕರ ಒಂದು ಪ್ರಶ್ನೆ ಪತ್ರಿಕೆಯನ್ನು ಹೊರಡಿಸುವದರಲ್ಲಿ ಬಂದಿದೆ.

ಅಮೇರಿಕೆಯ ಪತ್ರಿಕಾ ಪ್ರತಿನಿಧಿಗೆ

ಪಂ ಜವಾಹಿರಲಾಲರ ನಿಷ್ಠುರ ಮಾತು

"ನಮಗೆ ಇಂಗ್ಲೀಷರ ಔದಾರ್ಯ ಬೇಕಾಗಿಲ್ಲ'

"ರಾಜ್ಯವನ್ನಪಹರಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟುಗೊಟ್ಟಿಲ್ಲ"

ಅಮೇರಿಕೆಯ " ಹಾರ್ಟಫೋರ್ಡ ಟಾಯಿಮ್ಸ " ಪತ್ರಿಕೆಯ ಪ್ರತಿನಿಧಿಯು ಪಂಡಿತ ಜವಾಹಿರಲಾಲರನ್ನು ಕಂಡುಕೊಂಡು, ಸದ್ಯದ ಸ್ಥಿತಿಯ ಸಂಬಂಧವಾಗಿ ಅವರಿಗೆ ಅವರ ಅಭಿಪ್ರಾಯ ಕೇಳಿದರು ಆಗ ಪಂಡಿತ ಜವಾಹಿರಲಾಲರು ಕೆಳಗಿನಂತೆ ತಿಳಿಸಿದರು.

ಇನ್ನೂ ನಿನ್ನೆ ದಿವಸವೇ ನಾವು ಗೆದಿಯಲಿ ಇಲ್ಲವೆ ನಾಳೆಗೆ ನಮಗೆ ಗೆಲವು ಸಿಗಲಿ, ಎಂದಾದರೂ ಒಮ್ಮೆ ಹಿಂದುಸ್ಥಾನವು ಬ್ರಿಟಿಶರ ಕೈ ಬಿಟ್ಟು ಹೋಗತಕ್ಕದ್ದೇ. ಸ್ವತಂತ್ರತೆಯನ್ನು ಸಂಪಾದಿಸಿಕೊಳ್ಳಲು ಹಿಂದುಸ್ಥಾನವು ಟೊಂಕ ಕಟ್ಟಿದೆ. ಇನ್ನು ಮೇಲೆ ತಮ್ಮ ವ್ಯಾಪಾರದನ್ನು ಇಲ್ಲಿ ಪುನರುಜ್ಜೀವನಗೆಳಿಸುವದು ಬ್ರಿಟಿಶರಿಗೆ ಶಕ್ಯವಿಲ್ಲ. ಅವರು ಹೆಚ್ಚು ಹೆಚ್ಚು ಹಣ ವೆಚ್ಚ ಮಾಡಿ, ಹಾನಿಗೊಳಗಾಗಿ ಬರಬರುತ್ತ ದಿವಾಳಿ ತೆಗೆಯುವರು.

ಇಷ್ಟಾದ ಬಳಿಕ ಆ ಪ್ರತಿನಿಧಿಯು ಕಾಯದೆಗಳನ್ನು ರದ್ದಿ ಮಾಡಿದಲ್ಲಿ ನಿಮ್ಮ ಇಷ್ಟಾರ್ಥವು ಸಫಲವಾಗಲಿಕ್ಕಿಲ್ಲವೇ ಎಂಬುದಾಗಿ ಜವಾಹಿರಲಾಲರಿಗೆ ಪ್ರಶ್ನೆ ಮಾಡಿದನು. ಅದಕ್ಕೆ ಪಂಡಿತರು 'ಹಿಂದುಸ್ಥಾನದಲ್ಲಿ ಕಾಯದೆ ಎಂಬುವದು ಇಲ್ಲವೇ ಇಲ್ಲ. ಕಾಯದೆಯೇ ಇಲ್ಲದಿರುವಾಗ ಕಾಯದೆಶೀರ ಪದ್ಧತಿಯು ವಿಷಯುವಾಗಿ ಮಾತಾಡುವದೂ ಅಸಂಬದ್ಧವಾಗಿದೆ' ಎಂದು ಉತ್ತರ ಕೊಟ್ಟರು.

ಇಂಗ್ಲಂಡದೊಡನೆ ಸಹಕರಿಸಿದಲ್ಲಿ, ಬರಬರುತ್ತ ಎಲ್ಲವೂ ಸರಿಹೋಗುವದಾಗಿ ಪ್ರತಿನಿಧಿಯು ಅಭಿಪ್ರಾಯ ವ್ಯಕ್ತಪಡಿಸಿದನು. " ಇದಕ್ಕೇಳೆ ಕಾಲಾವಧಿ ಆಗುವದೆಲ್ಲ ಆಗಲೇ ಆಗಬೇಕು' ಎಂದು ಹೇಳಿ. ಪಂಡಿತರು "ರಾಜ್ಯವನ್ನು ಸಂಪಾದಿಸಿದವರಾರೂ ಅದನ್ನು ವಿವೇಕದಿಂದ ಬಿಟ್ಟು ಗೊಟ್ಟಿಲ್ಲ'ವೆಂದು ಅವರಿಗೆ ತಿಳಿಸಿದರು.

"ಇಂಗ್ಲೀಷರ ಔದಾರ್ಯದಲ್ಲಿ ನಿಮಗೆ ವಿಶ್ವಾಸವಿಲ್ಲವೇ" ಎಂದು ಪ್ರತಿನಿಧಿಯು ಕೇಳಿದನು. ಅದಕ್ಕೆ ಪಂಡಿತರು "ನಾನು ಇಂಗ್ಲೀಷರ ಇತಿಹಾಸವನ್ನು ಸಂಪೂರ್ಣವಾಗಿ ಅರಿತಿದ್ದೇನೆ-ಇಂಗ್ಲೀಷರ ಔದಾರ್ಯದ ವಿಷಯವಾಗಿ ಅದರಲ್ಲಿ ಒಂದಾದರೂ ಉದಾಹರಣೆಯು ಕಂಡುಬಂದಿಲ್ಲ. ಇಂಗ್ಲೀಷರ ಔದಾರ್ಯವು ನಮಗೆ ಬೇಕಾಗಿಲ್ಲ'ವೆಂಬುದಾಗಿ ಹೇಳಿದರು.

ಮುಖ್ಯ ಪ್ರಧಾನರ ಜಾಹೀರನಾಮೆಯ ಸಂಬಂಧವಾಗಿ ಕಾಂಗ್ರೆಸ್‌ದವರ ಅಭಿಪ್ರಾಯವನ್ನು ತಿಳಿಸಲು ಪ್ರತಿನಿಧಿಯು ಕೇಳಲಾಗಿ "ವರ್ಕಿಂಗ ಕಮೀಟಿಯು ಇನ್ನು ಸ್ವಲ್ಪ ದಿನಗಳಲ್ಲಿಯೇ ಅದನ್ನು ನಿರ್ಧರಿಸುವದಾಗಿ" ಪಂಡಿತರು ಅವರಿಗೆ ತಿಳಿಸಿದರು.

ಮಹಾತ್ಮರು
ಕಾಯರಾಕ್ಕೆ ಬರುವರು

ಕಾಯರಾ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಹಿರ್ವ ಸಭಾಸದರಿಗೆ ಮಹಾತ್ಮಾ ಗಾಂಧಿಯವರು ಕೆಳಗಿನಂತೆ ಪತ್ರ ಬರೆದಿದ್ದಾರೆ:—

ನಾನು ಬೇಗನೆ ಕಾಯರಾ ಜಿಲ್ಲೆಗೆ ಬರುವವನಿದ್ದೇನೆ. ಒಪ್ಪಂದವೆಂತೂ ಆಗುವ ಆಶೆಯಿಲ್ಲ. ಒಪ್ಪಂದವು ಒಂದು ವೇಳೆ ಸಾಧ್ಯವಾದಲ್ಲಿ ಈ ಸತ್ಯಾಗ್ರಹ ಚಳವಳಿಯಲ್ಲಿ ನಷ್ಟಕ್ಕೆ ಗುರಿಯಾದ ರೈತರ ನಷ್ಟ ತುಂಬಿಕೊಡುವ ಬಗ್ಗೆ ನಿಸ್ಸಂದೇಹವಿಲ್ಲವಾಗಿ ಪ್ರಯತ್ನಿಸುವೆನು.

ಸರಕಾರಕ್ಕೆ
೫ ಕೋಟಿ ರುಪಾಯಿ ಹಾನಿ.

(ಶಂತಿಯು ವಾರ್ತೆ ತಾ|| ೧೭)

ರೇಲ್ವೆ ಇಲಾಖೆಯು ಜನಪ್ರಿಯ ಪತ್ರಿಕೆಯನ್ನು ಬಾಯಿಮುಚ್ಚಿಸುವದಕ್ಕಾಗಿ ಸರಕಾರಕ್ಕೆ ೫ ಕೋಟಿ ರುಪಾಯಿಗಳು ಕಡಿಮೆ ಬಿದ್ದಿವೆಯಾಗಿ ರೇಲ್ವೆಯ ಆಯವ್ಯಯ ಪತ್ರಿಕೆಯಿಂದ ತಿಳಿದು ಬರುತ್ತದೆ.

೫೦ ವಿಕ್ಕಲಭಾಯಿಯವರು
ಯುರೋಪಕ್ಕೆ ಹೋಗುವರು

ಮುಂಬಯಿಯ 'ಫ್ರೀಲಿಕ್ಷಿನಿಕ ನರ್ಸಿಂಗ ಹೋಮ"ನಲ್ಲಿ ಈಗ ಔಷಧೋಪಚಾರ ಹೊಂದುತ್ತಿರುವ ಶ್ರೀ ವಿಠ್ಠಲಭಾಯಿ ಪಟೇಲರವರು ಔಷಧೋಪಚಾರ ಪಡೆಯುವದಕ್ಕಾಗಿ ತಾ|| ೨೪ ನೆಯ ದಿನದ ಯುರೋಪಖಂಡಕ್ಕೆ ಹೊರಡುವರಿದ್ದಾರೆ.

ಮದುಮಗನ
ಫಜೀತಿಯಾಯಿತು

ಪೋರಬಂದರದ ಸ್ವಯಂಸೇವಕರು ಒಂದು ದಿವಸ ಅಲ್ಲಿಯ ಕುಡುಕರ ಹಾಗು ಗಾಂಜಾಸೇವಕರ ಹೆಸರುಗಳನ್ನು ಕಾಗದದಲ್ಲಿ ಬರೆದು, ಅವುಗಳನ್ನು ಅಲ್ಲಲ್ಲಿ ಗೋಡೆಗೆ ಅಂಟಿಸಿದ್ದರು. ಕುಡುಕರ ಪಟ್ಟಿಯಲ್ಲಿ ಬೇಗನೆ ಮದುವೆಯಾಗತಕ್ಕ ಓರ್ವ ಮೀಕಗಾರನವರ ಹೆಸರು ಇತ್ತು. ವಧುವಿನ ಪಕ್ಷದವರು ಅದನ್ನು ನೋಡಿಕೊಂಡು ಆ ಮೀನಗಾರನಿಗೆ ಹೆಣ್ಣನ್ನು ಕೊಡಲು ನಿರಾಕರಿಸಿದರು. ಮದುಮಗನ ಕೈಕಾಲೇ ಹೋದವು. ಅವನು ಸ್ವಯಂಸೇವಕರಲ್ಲಿಗೆ ಹೋಗಿ ಇನ್ನು ಮುಂದೆ ಕುಡಿಯುವದಿಲ್ಲವಾಗಿ ವಚನಕೊಟ್ಟನು. ಸ್ವಯಂಸೇವಕರು ವಧುವಿನ ಪಕ್ಷದವರಲ್ಲಿಗೆ ಹೋಗಿ " ಕುಡಿಯುವದಿಲ್ಲವಾಗಿ ವಚನಕೊಟ್ಟಿದ್ದಾನೆ. ಕಾರಣ ಲಗ್ನಕಾರ್ಯವನ್ನು ನೆರವೇರಿಸಿರಿ " ಎಂದು ತಿಳಿಸಿದರು. ಅವರು ಒಪ್ಪಿ ಆ ಮೇಲೆ ಕೆಲವು ದಿನಗಳಲ್ಲಿ ಲಗ್ನ ಸಮಾರಂಭವನ್ನು ನೆರವೇರಿಸಿದರು.

ದೊಡ್ಡ ಅಕಾರದ
ವಿಷ್ಣುವಿನ ಮೂರ್ತಿಯು ಸಿಕ್ಕಿತು

ಬಂಗಾಲ ಇಶಾಖೆಯ ಸುಂದರಬಾನದ ಜವೀನದಾರರಾಗಿದ್ದ ವರದಾಪ್ರಸಾದರಾಯ ಚೌಧರಿಯವರ ಜವಿನಿನಲ್ಲಿ ಒಂದು ದೊಡ್ಡ ಅಕಾರದ ವಿಷ್ಣುವಿನ ಮೂರ್ತಿಯು ಸಿಕ್ಕಿತ್ತು. ಅದರಂತಹ ಅದ್ಭುತವಾದ ಮೂರ್ತಿಯು ಈವರೆಗೆ ಎಲ್ಲಿಯೂ ಕಂಡು ಬಂದಿಲ್ಲ. ಮೂರ್ತಿಯು ಶರೀರದಲ್ಲಿನವಿದ್ದು, ಅದರ ಮೂಗು ಮಾತ್ರ ಸ್ವಲ್ಪ ಒಡೆದು ಹೋಗಿದೆ.

ಕರ್ನಾಟಕ ವ್ಯಾಪಾರಿ ಸಂಘದ ೨ನೇ ವಾರ್ಷಿಕ ಸಾಧಾರಣ ಸಭೆಯು

ಕರ್ನಾಟಕ ವ್ಯಾಪಾರ ಸಂಘದ ೩ನೇವಾರ್ಷಿಕ ಸಾಧಾರಣ ಸಭೆಯು ೧೦ನವಂಬರ ೧೯೪೨ ನೇ ಮಂಗಳವಾರ ಸಂಜೆ ೬ ಘಂಟೆಗೆ ಸೇರಿತು. ಈ ಸಭೆಗೆ ಸಂಘದ ಅಧ್ಯಕ್ಷರು ಬಾರದೇ ಇದ್ದುದರಿಂದ, ಈ ಸಭೆಯು ಖಾಯಂ ಕಾರ್ಯದರ್ಶಿಗಳಾದ ಬೆಳಗಾವಿಯ ರಾ.ಬ. ಎಸ್.ಎನ್. ಅಂಗಡಿ ಬಿ.ಎ.ಎಲ್ ಎಲ್.ಬಿ ಎಮ್.ಎಲ್.ಸಿ. ಇವರು ಅಧ್ಯಕ್ಷರಾಗಬೇಕೆಂದು ರಾ. ರಾ ಶಿವಪ್ಪಣ್ಣಾ ಮಾನವಿಯವರು ಸೂಚನೆ ತಂದಂತೆ, ಶ್ರೀ ವೀರಪ್ಪಣ್ಣಾ ಕೊಗರಿಯವರು ಅನುಮೋದನ ಕೊಟ್ಟ ಮೇರೆಗೆ ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಕಾರ್ಯಕ್ರಮ

(೧) ಅಧ್ಯಕ್ಷರಾದ ರಾ. ಬ. ಅಂಗಡಿಯವರು ತಮ್ಮ ಭಾಷಣವನ್ನು ಸದ್ಯದ ಕರ್ನಾಟಕದ ವ್ಯಾಪಾರ ಸ್ಥಿತಿಗತಿ, ಕರ್ನಾಟಕ ಪ್ರಾಂತರಚನೆ, ಕರ್ನಾಟಕಕ್ಕೆ ಅವಶ್ಯವಾದ ಬಂದರ ಈ ಮೊದಲಾದ ವಿಷಯಗಳ ಬಗ್ಗೆ ಚರ್ಚಿಸಿ ಅರ್ಧಘಂಟೆಯವರೆಗೆ ಮಾತಾಡಿದರು. ಆ ಮೇಲೆ ನಿಯೋಜಿತ ಅಧ್ಯಕ್ಷರಾದ ಶ್ರೀ. ಫಾರ್ಬಣ್ಣಾ ಅಬ್ದುಲ್‌ಪುರ ಇವರು ಬರೆದು ತಂದಿರುವ ಭಾಷಣವನ್ನು ಶ್ರೀ. ಮುರಿಗೆಯ್ಯ ಜಂಗಿನ ಇವರು ಸಭೆಯಲ್ಲಿ ಓದಿದರು.

(೨) ಸಂಘದ ಕೋಶಾಧ್ಯಕ್ಷರಾಗಿದ್ದ ಶ್ರೀ. ತುಳಿಪಣ್ಣಾ ಸಕ್ರಿ; ಮತ್ತು ಸಭಾಸದರಾಗಿದ್ದ ಶ್ರೀ. ವಿರುಪಾಕ್ಷಪ್ಪಣ್ಣಾ ಬೆಂಬಳಗಿ, ಇವರೀರ್ವರ ಅಕಾಲಿಕ ನಿಧನದ ಬಗ್ಗೆಯೂ ರಾಷ್ಟ್ರದ ಧುರೀಣ ಮುಂದಾಳುಗಳಾದ ಮೌ. ಮಹಮ್ಮದ್‌ಅಲಿಯವರು ಮುಂಬಯಿನ ಪರಿಷತ್ತಿಗೆ ಹೋದಾಗ್ಗೆ, ಇಂಗ್ಲೆಂಡದಲ್ಲಿ ಮರಣ ಹೊಂದಿದ ಬಗ್ಗೆಯೂ, ಮತ್ತು ಸೊಲ್ಲಾಪುರದ ಸುಪ್ರಸಿದ್ಧ ಮುಂದಾಳುಗಳೂ ಮತ್ತು ವ್ಯಾಪಾರಸ್ಥರೂ ಆಗಿದ್ದ ಶ್ರೀ. ರಾದ ಧನಶಿಟ್ಟಿ, ಸಾರ್ದಾ, ಶಿಂಧೆ ಮತ್ತು ಕುರ್ಮಾನ ಹುಕೇಣ ಈ ನಾಲ್ವರನ್ನು ಸರಕಾರದವರು ಇನಾಮ್ಯ ಬೇಡಿಕೆಯನ್ನು ಧಿಕ್ಕರಿಸಿ ಗಲ್ಲಿಗೇರಿಸಿದ್ದರಿಂದಲೂ ಈ ಸಭೆಯು ತೀವ್ರವಾದ ದುಃಖವನ್ನು ವ್ಯಕ್ತಪಡಿಸುತ್ತದೆ.

(೩) ಕಳೆದ ವರ್ಷದ ಸಂಘದ ಕಾರ್ಯದ ವರದಿಯನ್ನು ಮತ್ತು ಲೆಕ್ಕಪತ್ರವನ್ನು ಶ್ರೀ ಜಂಗಿನ ಇವರು ಓದಿ ತೋರಿಸಿದ ನಂತರ ದಾಸುಮಾಡಲ್ಪಟ್ಟಿತು ಮತ್ತು ಗದಗ ಕಾಟನ್ ಕಮೀಟಿಯ ವರದಿಯನ್ನು ಶ್ರೀ ಕೆ. ಪಿ. ಗದಗ ಇವರು ಓದಿ ತೋರಿಸಿದನಂತರ ಅದಾವರೂ ಮಾಸುಮಾಡಲ್ಪಟ್ಟಿತು.

(೪) ಮುಂದಿನ ವರ್ಷಕ್ಕೆ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕಾರ್ಯಕಾರೀ ಸಭಾಸದರು ಆರಿಸಲ್ಪಟ್ಟರು.

(೫) (ಅ) ಕರ್ನಾಟಕದ ವ್ಯಾಪಾರಸ್ಥರಲ್ಲರೂ ಕೈನೂಲಿನ ಖಾದೀ ಬಟ್ಟೆಗಳನ್ನೇ ಪ್ರೋತ್ಸಾಹಿಸಬೇಕಾಗಿಯೂ, ಮತ್ತು ದೇಶೀ ಗಿರಣಿಗಳಿಂದ ಹೊರಟ ನೂಲಿನಿಂದಲೇ ತಯಾರಿಸಿದ ಬಟ್ಟೆಗಳನ್ನು ಮತ್ತು ಸ್ವದೇಶಿ ಒಡವೆಗಳನ್ನು ವಾಪಾರ ಮಾಡಬೇಕಾಗಿಯೂ ಈ ಸಭೆಯು ಅವರಿಗೆ ವಿನಂತಿ ಮಾಡಿಕೊಳ್ಳುತ್ತದೆ

(ಬ) ಹಿಂದುಸ್ಥಾನದ ಎಲ್ಲ ದೇಶೀ ಗಿರಣಿಗಳ ಒಡೆಯರು, ಇಜಿಪ್ತ, ಅಮೇರಿಕಾ ಮುಂತಾದ ಪರದೇಶಗಳ ಅರಳಿ ಮತ್ತು ನೂಲು ತರಿಸಬಾರದೆಂತಲೂ ಮತ್ತು ಹೆಚ್ಚಿನ ಲಾಭದುದ್ದಿಶ್ಯವಾಗಿ ಮೂಲಿನ ಕ್ವಾಲಿಟಿ ಕೆಡಿಸಬಾರದಾಗಿಯೂ ಈ ಸಭೆಯು ಹಿಂದುಸ್ಥಾನದ ಎಲ್ಲ ಗಿರಣಿಗಳ ಒಡೆಯರಿಗೆ ವಿನಂತಿ ಮಾಡಿಕೊಳ್ಳುತ್ತದೆ.

(೬) ಹಿಂದುಸ್ಥಾನದ ಭಾವೀರಾಜ್ಯಭೆಟೆನೆಯನ್ನು ಕುರಿತು ವಿಚಾರಮಾಡಲು, ಸರಿಯಾದ ವಾತಾವರಣವು ಇಲ್ಲಿ ನಿರ್ಮಾಣವಾಗುವದು ಅವಶ್ಯವಿರುವದರಿಂದ ಎಲ್ಲ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕಾಗಿ, ಮುಖ್ಯಪ್ರಧಾನರಿಗೂ, ಹಿಂದುಸ್ತಾನ, ಮುಂಬಯಿ ಮತ್ತು ಮದ್ರಾಸ ಸರಕಾರಗಳಿಗೂ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ

(೭) ಕರ್ನಾಟಕ ಪ್ರಾಂತರಚನೆಯಬಗ್ಗೆ ಬಂಡೀಗಾಲಿಯ ಪರಿಷತ್ತಿನಲ್ಲಿ ಏನೂ ವಿಚಾರವಾಗದ್ದನ್ನು ಕಂಡು ಈ ಸಭೆಗೆ ಅತ್ಯಂತ ವಿಷಾದವಾಗುತ್ತದೆ. ಸಿಂಧ ಪ್ರಾಂತವನ್ನು ಬೇರೆ ಮಾಡುವ ಸಂಬಂಧವಾಗಿ ವಿಚಾರ ಮಾಡಲು ನಿಯಮಿಸಲ್ಪಡುವ ತಜ್ಞ ಮಂಡಲದವರಿಗೆ ಕರ್ನಾಟಕ ಪ್ರಾಂತ ನಿರ್ಮಾಣದ ಬಗ್ಗೆಯೂ, ವಿಚಾರ ಮಾಡಲು ಮುಖ್ಯ ಪ್ರಧಾನರು, ಹಿಂದುಸ್ತಾನ, ಮುಂಬಯಿ ಮತ್ತು ಮದ್ರಾಸ ಸರಕಾರದವರು ಕೇಳಿಕೊಳ್ಳಬೇಕಾಗಿ ಈ ಸಭೆಯು ಇಚ್ಛಿಸುತ್ತದೆ ನೆಹರು ಮಂಡಲದವರಿಗೆ ಒಪ್ಪಿತವಾದ ಕರ್ನಾಟಕ ಪ್ರಾಂತ ನಿರ್ಮಾಣ ಪ್ರಶ್ನೆಯು ಸಿಂಧಪ್ರಾಂತಕ್ಕಿಂತಲೂ ಸಾಕಷ್ಟು ಬಲವಾದದ್ದಿರುವದಾಗಿ ಈ ಸಭೆಯು ಅಭಿಪ್ರಾಯಪಡುತ್ತದೆ.

(೮) ಪೋಸ್ಟ ಖಾತೆದವರು ಈಗಿದ್ದ ಕಾರ್ಡು ಪಾತೀದುಗಳ ದರಗಳನ್ನು ಮೊದಲಿದ್ದಂತೆ ೧ ದುಡ್ಡು ಮತ್ತು ೨ ದುಡ್ಡು ಇದಬೇಕಾಗಿಯೂ, ತಾರಿನ ದರವನ್ನು ೧೨ ಆಣೆ ಇದ್ದದ್ದು ಅರ್ಧಕ್ಕೆ ಇಳಿಸುವದೂ ಮತ್ತು ಮುಂದೆ ಪ್ರತಿ ಶಬ್ದಕ್ಕೆ ಅರ್ಧ ಆಣೆ ಇಡಬೇಕಾಗಿಯೂ ಮತ್ತು ಪಿ. ಪಿ. ಗಳು ಪೋಸ್ಟದಲ್ಲಿ ಹೊಸ ತಿಯಮದಂತೆ ೩ ದಿವಸ ಇಡುವದನ್ನು ರದ್ದು ಪಡಿಸಿ ಮೊದಲಿದ್ದಂತೆ ೧೦ ದಿವಸ ಇಡಬೇಕಾಗಿಯೂ ಈ ಸಭೆಯು ಸರಕಾರಕ್ಕೆ ಕೇಳಿಕೊಳ್ಳುತ್ತದೆ.

(೯) (ಅ) ವಿಜಾಪುರ ಮತ್ತು ಇನ್ನಿತರ ಎಮ್. ಎಸ್. ಎಮ್. ರೇಲ್ವೆಯ ದೊಡ್ಡ ಸ್ಟೇಶನಗಳ ಮೇಲೆ ತೀರಿನ ವ್ಯವಸ್ಥೆ ಮಾಡುವಲ್ಲಿರುವ, ರೇಲ್ವೆ ಅಧಿಕಾರಿಗಳಿಗೆ ಕೇಳಿಕೊಳ್ಳಬೇಕಾಗಿ ಈ ಸಭೆಯು ನಿರ್ಧರಿಸುತ್ತದೆ.

(ಬ) ಸದ್ಯದ ಪರಿಸ್ಥಿತಿಯಲ್ಲಿ ಕಾಳುಕಡಿ ಧಾರಣೆಯು ಅತಿಶಯ ಇಳಿದಿದ್ದರಿಂದ, ರೇಲ್ವೆಯವರು ಗುದ್ದು ಹಾಗು ಡಮರೇಜ ಚಾರ್ಜಗಳನ್ನು ಮಹಾಯುದ್ಧಕ್ಕಿಂತ ಪೂರ್ವದಲ್ಲಿದ್ದ ದರಕ್ಕೆ ಇಳಿಸಬೇಕಾಗಿ ಆಯಾ ರೇಲ್ವೆಗಳಿಗೆ ಈ ಸಭೆಯು ಕೇಳಿಕೊಳ್ಳುತ್ತದೆ.

(ಕ) ಸೊಲ್ಲಾಪುರದ ಎಮ್. ಎಸ್. ಎಮ್. ಮತ್ತು ಜಿ. ಆರ್ ಪಿ. ರೇಲ್ವೆ ಸ್ಟೇಶನ್ನುಗಳು ಬೇರೆ ಬೇರೆ ಇರುವದರಿಂದ ಪ್ರವಾಸಿಕರಿಗೆ ಒಂದು ಸ್ಟೇಶನದ ಗಾಡಿಯಿಂದ ಮತ್ತೊಂದು ಸ್ಟೇಶನದ ಗಾಡಿಗೆ ಹೋಗಲು ವಿಶೇಷ ತೊಂದರೆಯಾಗುವದರಿಂದ ಅಲ್ಲಲ್ಲಿ ಅವುಗಳ ನಡುವೆ ಸೂಲು ಹಾಕಬೇಕೆಂದೂ, ಮತ್ತು ಹುಬ್ಬಳ್ಳಿ-ಬೆಂಗಳೂರು, ವಾಯಾ ಗುಂತಕಲ್ಲು, ಹುಬ್ಬಳ್ಳಿ-ಸೊಲ್ಲಾಪುರ ಇವುಗಳ ನಡುವೆ ಅಡ್ಡಾಡುವ ಗಾಡಿಗಳಿಗೆ ಇಂಟರ ಡಬ್ಬಿಗಳ ಯೋಜನೆ ಮಾಡಬೇಕೆಂದೂ ಎಮ್. ಎಸ್. ಎಮ್. ರೇಲ್ವೆ ಕಂಪೂಯನಿಯವರಿಗೆ ಈ ಸಭೆಯು ಕೇಳಿಕೊಳ್ಳುತ್ತದೆ.

(ಡ) ಎಮ್. ಎಸ್. ಎಮ್. ರೇಲ್ವೇಯ ಎಲ್ಲ ದೊಡ್ಡ ಸ್ಟೇಶನುಗಳಿಗೆ ಹೋಗಿಬರುವ ಪ್ರವಾಸಿಕರಿಗೆ ಸವಲತ್ತಿನ ರಿಟರ್ನ ಟಿಕೇಟು ಕೊಡಬೇಕಾಗಿಯೂ ಮತ್ತು ಪ್ಯಾಸೆಂಜರು ರೇಲ್ವೆ ದರಗಳನ್ನು ಸದ್ಯದ ಕಠಿಣ ಪರಿಸ್ಥಿತಿಯ ಮೂಲಕ ಮಹಾಯುದ್ಧಕ್ಕಿಂತ ಪೂರ್ವದಲ್ಲಿದ್ದ ದರಕ್ಕೆ ಇಳಿಸಬೇಕಾಗಿಯೂ ಆಯಾ ರೇಲ್ವೇಯವರಿಗೆ ಕೇಳಿಕೊಳ್ಳುತ್ತದೆ.

(೧೦) (ಅ) ಇನ್‌ಕಮ್ ಟ್ಯಾಕ್ಸವನ್ನು ತಾಂಬಿರಕಮಿನ ಇದ್ದದ್ದನ್ನು ಸದ್ಯದ ವ್ಯಾಪಾರದ ಮಂಡಿತೆಯ ಮೂಲಕ ತೆಗೆದು, ೩೦೦ ರಕಮಿನಮೇಲೆ ಟ್ಯಾಕ್ಸ ಇಡಬೇಕಾಗಿಯೂ, ಮತ್ತು ದರವನ್ನು ಮೊದಲಿದ್ದಕ್ಕಿಂತ ೧ ಪೈ ಕಡಿಮೆ ಮಾಡಬೇಕಾಗಿಯೂ, ಮಾರಾಟದ ಮೇಲೆ ಇನ್‌ಕಮ್ಸ್‌ಟ್ಯಾಕ್ಸ ಆಕರಣೆ ಮಾಡುವ ಅಧಾವೆ ಮೇಲೆ ಧೂಡಬೇಕಾಗಿಯೂ ಮತ್ತು ಇನ್‌ಕಮ್ಸ್‌ಟ್ಯಾಕ್ಸ ಖಾತೆಯನ್ನು ಮೊದಲಿದ್ದಂತೆ ರೆವಿನ್ಯೂ ಖಾತೆಗೆ ಸಮಾವೇಶ ಮಾಡಬೇಕಾಗಿಯೂ, ಈ ಸಭೆಯು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ.

(ಬ) ಸರಕಾರದವರು ಬಟ್ಟೆಪತ್ತನ್ನು ಸರಿ ಮಾಡಲೋಸುಗ ಹೆಚ್ಚಿಗೆ ಕೆರವನ್ನು ಜನತೆಯಮೇಲೆ ಹೇರುವ ವಿಚಾರ ಪಡಿಸಿದ್ದು, ಸರಕಾರದವರು ಈಗಿನ್ನೂ ಇರುವದೇ ಕೆರವನ್ನು ಹೆಚ್ಚಿಸಕೂಡದೆಂದೂ, ಸ್ವಾಮ್ಯಂಶ್ ಡ್ಯೂಟಿ ಕಡಿಮೆಮಾಡಬೇಕೆಂದೂ, ಲಕ್ಷ್ಮೀ ಖರ್ಚನ್ನು ಈಗಿದ್ದದ್ದರ ಅರ್ಧಕ್ಕೆ ಇಳಿಸಬೇಕಾಗಿಯೂ, ತಾಳು ಕಡಿ ಧಾರಣೆಯು ತೀರ ಇಳಿದದ್ದರಿಂದ ಹೆಚ್ಚಾಗಿಸಿ

ಎಲ್ಲ ಖಾತೇದಲ್ಲಿಯ ಎಲ್ಲ ನೌಕರದಾರರ ಪಗಾರವನ್ನು ಕಡಿಮೆ ಮಾಡಬೇಕಾಗಿಯೂ ಹಿಂದುಸ್ತಾನ ಸರಕಾರಕ್ಕೆ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ.

(೧೧) ಸಾಕಷ್ಟು ಮಳೆಯಾಗದ ಮೂಲಕವಾಗಿ ಹಣ್ಣಾಗಿ ಬೆಳೆದಾರರ ಮಳೆಯಾಗದ್ದು ಕೆಟ್ಟಗೆಯು ಹಾಯ್ದಿದೆ. ಬೆಳೆಕಟ್ಟು ಹೋದ ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಹಪ್ಪೆ ತಹಕೂವ ಇಡಬೇಕೆಂದೂ, ಮತ್ತು ಭೂಕಂದಾಯ ಎತ್ತುವದನ್ನು ಮುಂದೆಹಾಕಬೇಕೆಂದೂ ಈ ಸಭೆಯು ಮುಂಬಯಿ ಮತ್ತು ಮದ್ರಾಸ ಸರಕಾರಗಳಿಗೆ ಕೇಳಿಕೊಳ್ಳುತ್ತದೆ

(೧೨) ಬೆಳಗಾವಿ, ಕೊಲ್ಹಾಪುರ, ಸಾಂಗಲಿ ಈ ಸ್ಥಳಗಳಿಗೆ ವಿಜಾಪುರದಿಂದ ವಿಶೇಷ ವ್ಯಾಪಾರವು ಸಾಗುತ್ತಿದ್ದು, ಅಲ್ಲಿ ನಡೆಯುವ ಪತ್ರವ್ಯವಹಾರವು ಬಹಳ ಕಡಮೆಯಾಗಿ ಅಂದರೆ ೩ ದಿವಸಗಳಾನಂತರ ರೇಲ್ವೆ ಮುಂದುವುತ್ತದೆ. ಆದರೆ ಈ ಎಲ್ಲ ಸ್ಥಳಗಳಿಗೆ ಬರೋಬ್ಬರಿ ರೀತಿಯಿಂದ ಮೋಟಾರ ಹೋಗುತ್ತಿದ್ದು, ಅವುಗಳ ದ್ವಾರ ಈ ಎಲ್ಲ ಸ್ಥಳಗಳಿಗೆ ದಪಾಲ ಯೋಜನೆ ಆಗಬೇಕಾಗಿ ಪೋಸ್ಟಖಾತೆದವರಿಗೆ ಈ ಸಭೆಯು ಕೇಳಿಕೊಳ್ಳುತ್ತದೆ.

(೧೩) (ಅ) ಇತ್ತಿತ್ತಲಾಗಿ ಗೆದಗ ಮಾರ್ಕೇಟಿಗೆ ಲಾಯಸೆನ್ಸದಿಂದ ಗದಗಿನ ಹಡ್ಡಿಯಿಂದ ಹತ್ತಿ, ಅರಳಿ ಬರುವ ಪ್ರಾಂತಗಳಾದ ಮೊಗಲಾಯಿ ಮತ್ತು ಇತರ ಸ್ಥಳಗಳಲ್ಲಿ ಕೇವಕರು ಖರೀದಿ ಮಾಡಿಕೊಡುವ ಉತ್ತಮವಾದ ಹತ್ತಿ ಕಾಳನ್ನು ಬಿಟ್ಟುವದರಿಂದ ಗದಗ ಮಾರ್ಕೇಟಿಗೆ ಬರುವ ಹತ್ತಿ—ಅರಳಿಯ ಬಗ್ಗೆ, ಗದಗಿನ ಹಡ್ಡಿಯವರಿಗೆ ಈಗಿನ ಲಾಯಸೆನ್ಸ ಪದ್ಧತಿಯು ಅವಶ್ಯವಿದ್ದುದರಿಂದ ಈ ಲಾಯಸೆನ್ಸ ಪದ್ಧತಿಯನ್ನು ತೆಗೆದುಹಾಕಿ ಯಾವ ತರದ ಸರ್ಬಂಧವಿಲ್ಲದೇ ಗದಗ ಮಾರ್ಕೇಟಿಗೆ ಹತ್ತಿ—ಅರಳಿ ಬರುವಂತೆ ಇಂಡಿಯನ್ ಸೆಂಟ್ರಲ್ ಕಾಟನ್ ಕಮೀಟಿಯವರು ಈ ಬಗ್ಗೆ ಪರವಾನಗಿ ಕೊಡಬೇಕೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ.

(ಬ) ಕಾಟನ್ ಕಾಂಟ್ರಾಕ್ಟ ಆ್ಯಕ್ಟ ಕಮೀಟಿಯವರು ಹೆಜ್ಜೆ ಕೆಟ್ಟಾಕ್ಟದ ಸಲುವಾಗಿ ೫೦ ಗಂಟಿನ ಯುನಿಟ್ ಇಡಬೇಕೆಂದು ನಿರ್ಣಯಿಸಿದ್ದು ರೈತರಿಗೆ ಇದರ ಲಾಭವಾಗುವದಿಲ್ಲವಾದ್ದರಿಂದ ೫೦ ಗಂಟಿನ ಯುನಿಟ್ ಮಾಡಬೇಕೆಂದು ಈ ಸಭೆಯ ಮತವಿದೆ.

(೧೪) ಈಗಿದ್ದ ಅಜೀವ ಸಭಾಸದರ ವರ್ಗಣಿ ಹಣವು ೧೦೦ ರುಪಾಯಿ ಇಡಬೇಕೆಂದು ಈ ಸಭೆಯು ನಿರ್ಧರಿಸುತ್ತದೆ.

(೧೫) ಈಗಿದ್ದ ಕರ್ನಾಟಕ ವ್ಯಾಪಾರ ಸಂಘದ ಮುಖ್ಯ ಕಚೇರಿಯನ್ನು ಗದಗಿಗೆ ತರಬೇಕೆಂದೂ ಮತ್ತು ಬಾಗಲಕೋಟೆಯಲ್ಲಿ ಅದರ ಶಾಖೆ ಇರಬೇಕೆಂದೂ ಈ ಸಭೆಯು ಮತವಿದೆ.

(೧೬) ಅಧ್ಯಕ್ಷರ ಸೂಚನೆಯಮೇರೆಗೆ ಪ್ರಾಂತಿಕ ಕಾಂಗ್ರೆಸ ಬೋರ್ಡಿನಲ್ಲಿ ಶ್ರೀ ತೋದಪ್ಪಜ್ಜಾ ಕೋಟ ವಕೀಲರು ಗದಗ, ಇವರು ಸಂಘದವತಿಯಿಂದ ಪ್ರತಿನಿಧಿಗಳಾಗಿರಬೇಕಾಗಿಯೂ ಮತ್ತು ಅವರ ಹೆಸರು ಒಕ್ಕಲತನ ಖಾತೆಯ ಮಂತ್ರಿಗಳಿಗೆ ತಿಳಿಸಬೇಕಾಗಿಯೂ ಈ ಸಭೆಯು ನಿರ್ಧರಿಸುತ್ತದೆ.

ವಿಜಾಪುರ ಜಿಲ್ಲೆಯಲ್ಲಿ
ಶ್ರೀ ಕರಮರಕರರ ಸಂಚಾರ

(ಶಾಂತಿಯು ವಾರ್ತೆ, ವಿಜಾಪುರ, ತಾ॥ ೧೬)

ಧಾರವಾಡದ "ಕರ್ಮವೀರ" ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಕರಮರಕರರ ದಕ್ಷಾತ್ರಯರಾಯರು ಈ ಜಿಲ್ಲೆಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಉದ್ದಿಶ್ಯವಾಗಿ ಈಗ ಈ ಜಿಲ್ಲೆಯಲ್ಲಿ ಸಂಚರಿಸುತ್ತಿರುವರು.

ಬನಾರಸದಲ್ಲಿ
ಶಾಂತತೆಯುಂಟಾಯಿತು.

(ಶಾಂತಿಯವಾರ್ತೆ ತಾ॥೧೬)

ಪಂಡಿತ ಮಾಲವೀಯರು ಇವತ್ತಿನ ದಿವಸ ಬನಾರಸಕ್ಕೆ ತಲುಪಿ, ಪಟ್ಟಣದಲ್ಲಿ ಶಾಂತತೆಯನ್ನು ನೆಲೆಗೊಳಿಸಲು ಪ್ರಯತ್ನಿಸಿದರು. ಅವರ ಈ ಪ್ರಯತ್ನದ ಮೂಲಕವಾಗಿ ಈಗ ಬಹುತರವಾಗಿ ಎಲ್ಲೆಡೆಯಲ್ಲಿಯೂ ಶಾಂತತೆಯುಂಟಾಗಿದೆ. ಮತ್ತೆ ಎಲ್ಲಿಯೂ ದಂಗೆಯಂ ಸಂಭವಿಸಿಲ್ಲ

ಕರನಿರಾಕರಣೆಯು
ಕಾಯಿದೆಗೆ ವಿರುದ್ಧವಾಗಿರುವದಿಲ್ಲ.

ಸರ್ ಜಾನ್ ಫೌರ್ಟಿಸ್ಕ್ಯೂ ಎಂಬುವವನು ಮುಂಬಯಿಯ "ಕ್ರಾನಿಕಲ್" ಪತ್ರಿಕೆಯಲ್ಲಿ "ಕರನಿರಾಕರಣೆಯು ಕಾಯಿದೆಗೆ ವಿರುದ್ಧವಾಗಿರುವದಿಲ್ಲ" ಎಂಬುದರ ವಿಷಯವಾಗಿ ಒಂದು ವಿಸ್ತಾರವಾದ ಲೇಖನವನ್ನು ಬರೆದಿದ್ದು, ಅದರ ಮತಿತಾರ್ಥವೆಂದರೆ:—

ಸಂಪು ವಿಸರ್ಜಿಸುವದು ಕಾಯಿದೆಗೆ ವಿರುದ್ಧವಾಗಿರದಿದ್ದರೆ, ಸರಕಾರಕ್ಕೆ ಸಲ್ಲಕ್ಕೆ ಕಂದಾಯವನ್ನು ನಿಲ್ಲಿಸುವದೂ ಕಾಯಿದೆಗೆ ವಿರುದ್ಧವಾಗಿರುವದಿಲ್ಲ. ನನ್ನನ್ನು ಮತ್ತು ನನ್ನ ಸಹವಾಸಿಗಳನ್ನು ವಿನಾಕಾರಣವಾಗಿ ನಷ್ಟಕ್ಕೆ ಗುರಿಪಡಿಸುತ್ತಿರುವ ಸರಕಾರಕ್ಕೆ ತನ್ನ ಕಾರಭಾರವನ್ನು ಸಾಗಿಸಿಕೊಂಡು ಹೋಗಲು, ನನ್ನ ಪರಿಶ್ರಮಪೂರ್ವಕ ಗಳಿಕೆಯನ್ನು ನಾನೇಕೆ ಸಲ್ಲಿಸಬೇಕು?

ಭಗತಸಿಂಗರ ಜೀವವುಳಿಸಲು
ಪಂ. ಮಾಲವೀಯರು ಕೇಳಿಕೊಂಡರು.

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಪಾತ್ರರಾದ ಶ್ರೀ ಭಗತಸಿಂಗ ಹಾಗು ರಾಜಗುರು ಇವರ ಗಲ್ಲಿನ ಶಿಕ್ಷೆಯನ್ನು ಕರನೀರಿನ ಶಿಕ್ಷೆಗೆ ಕಡಿಮೆ ಮಾಡಲು, ಪಂಡಿತ ಮಾಲವಿಯವರು ವ್ಹಾಯಿಸರಾಯರಿಗೆ ತಾರನಾದ ಬಿನ್ನವಿಸಿಕೊಂಡಿದ್ದಾರಾಗಿ ತಿಳಿಯುತ್ತದೆ.

ಭಗತಸಿಂಗ ಮೊದಲಾದವನು
ಗಲ್ಲಿಗೇರಿಸಬೇಡಿರಿ

"ಅಸೋಸಿಯೇಟಿಡ್ ಪ್ರೆಸ್" ದ ಪ್ರತಿನಿಧಿಯು ಜೇಂ ಎಂ. ಸೇನಗುಪ್ತರವನ್ನು ಅಲಹಾಬಾದದಲ್ಲಿ ಕಂಡುಕೊಂಡು, ಸಂಧಾನದ ಸಂಬಂಧವಾಗಿ ಅವರಿಗೆ ಅವರ ಅಭಿಪ್ರಾಯ ಕೇಳಿದನು. ಆಗ ಶ್ರೀ ಸೇನಗುಪ್ತರು ಅವನಿಗೆ ಕಳಗಿನಂತೆ ತಿಳಿಸಿದರು.

"ಒಪ್ಪಂದವು ಸಾಧ್ಯವಾಗುವದು ಇಲ್ಲವೆ ಆಗದಿರುವದು ಗಾಂಧಿ-ಇರ್ವಿನರ ಚರ್ಚೆಯನ್ನೇ ಅವಲಂಬಿಸಿದೆ. ಪಂಡಾಬ ಹಾಗು ಬಂಗಾಲಗಳಲ್ಲಿ ಗಲ್ಲಿನ ಶಿಕ್ಷೆಗೊಳಗಾದ ರಾಜ್ಯ ಕ್ರಾಂತಿಕಾರರನ್ನು ಗಲ್ಲಿಗೇರಿಸಿದರೆ ಒಪ್ಪಂದ ದಿಂದುಂಟಾದ ಪರಿಸ್ಥಿತಿಯು ತೀರ ಕೆಟ್ಟುಹೋಗದು. ಕಾಂಗ್ರೆಸದವರಿಗೆ ಅವರ ವರ್ತನೆಯೇನೂ ಸರಿ ಬಂದಿರದಿಲ್ಲ. ಶಾಂತತೆಯ ವಾತಾವರಣವನ್ನು ಪ್ರಸ್ಥಾಪಿಸುವದಿದ್ದರೆ, ಅವರನ್ನು ಗಲ್ಲಿಗೇರಿಸದಿರುವದೇ ವಿಹಿತವಾಗಿರುವದಾಗಿ ನನಗೆ ತೋರುತ್ತದೆ"

ಟಪಾಲ ಚೀಲವನ್ನು ಅಪಹರಿಸಿದರು

ಪೋಸ್ಟಲ್ ಓವ್ಹರ್‌ಸೀಯರರಾದ ಬೈರಾತ ಅಲ್ಲಿಯವರು ಅಲೀಪುರದ ಖಜದ್ವಾನ ಬೀದಿಯಲ್ಲಿ ಟಪಾಲ ಚೀಲದೊಂದಿಗೆ ಹೋಗುತ್ತಿರುವಾಗ ಮೂವರು ಅವರ ಮೇಲೆ ಹಲ್ಲೆ ಮಾಡಿ ಟಪಾಲ ಚೀಲವನ್ನು ಅಪಹರಿಸಿಕೊಂಡು ಹೋದರು. ಆ ಚೀಲದಲ್ಲಿ ೧೫೦೦ ರೂಪಾಯಿಗಳು ಇದ್ದವು. ಅವರು ಬರದ್ವಾನ ಬೀದಿಗೆ ಬಂದಕೂಡಲೆ ಒಬ್ಬನು ಹಿಂದಿನಿಂದ ಬಂದು ಅವರ ಕುತ್ತಿಗೆಯನ್ನು ಹಿಡಿದನು. ಮತ್ತು ಇಬ್ಬರು ಅವನನ್ನು ನೆಲದ ಮೇಲೆ ಕಡವಿ ಟಪಾಲ ಚೀಲವನ್ನು ಅಪಹರಿಸಿದರು. ಬಳಿಕ ಆ ಮೂವರೂ ಒಂದು ಟ್ಯಾಕ್ಸಿ ಗಾಡಿಯಲ್ಲಿ ಕುಳಿತು ಪರಾರಿ ಹೋದರು. ಪೋಲೀಸರು ಈಗ ಟ್ಯಾಕ್ಸಿಗಾಡಿಯವನನ್ನು ಸೆರೆ ಹಿಡಿದಿದ್ದು, ಅಪರಾಧಿಗಳ ಬಗ್ಗೆ ತೀವ್ರ ತನಿಖೆ ನಡಿಸಿದ್ದಾರೆ.

ಹುಕ್ಕೇರಿಯಲ್ಲಿ
ಸೆರೆಗುಡಕಸಿ ಪಾಯಿಯ ಭಂಡಾಟಿ

ಹುಕ್ಕೇರಿಯು ಸ್ಟೇಶನ್ ಇದು ಆರೋಗ್ಯ ಕರವಾದ ಸ್ಥಳವೆಂದು ಇತ್ತೀಚಿಗೆ ಪ್ರಸಿದ್ಧ ಹೊಂದಿದ್ದರಿಂದ,ಸಂಗ್ರಹಣೀ ರೋಗದಿಂದ ಬ ಳಲುತ್ತಿರುವ ವಾಯಿಯಾ ಶ್ರೀ ದಿವೇಕರ ಶಾಸ್ತ್ರಿ ಯವರು ತಮ್ಮ ಪ್ರಕೃತಿ ಯನ್ನು ಸುಧಾರಿಸಿ ಕೊಳ್ಳುವದಕ್ಕಾಗಿ ಕಳೆದ ೩॥ ತಿಂಗಳಿಂದ ಅಲ್ಲಿ ನೆಲಿಸಿದ್ದಾಂಟು, ಒಂದು ದಿವಸ ಅಲ್ಲಿ ಅವರ ಮನೆಯಲ್ಲಿ ಕಳವಾಯಿತು. ಶಾಸ್ತ್ರಿಗಳು ಆ ಸುದ್ದಿಯನ್ನು ಫೌಜದಾರರಿಗೆ ತಿಳಿಸಿದರು ಫೌ ಜದಾರರಿಗೆ ಅಂದು ಆಲ್ಲಿಗೆ ಬರಲಿಕ್ಕೆ ಆಗದ್ದ ರಿಂದ ಅವರು ಒಬ್ಬ ಶಿಪಾಯಿಯನ್ನು ಕೊಟ್ಟು ಕಳಿಸಿದರು. ಅವನು ಸ್ಟೇಶನದಲ್ಲಿ ಒಂದ ಅಂಗ ಡಿಯಲ್ಲಿ ಕೂಲಿತ.ಕೊಂಡು ಶಾಸ್ತ್ರಿಗಳಿಗೆ ಜೋಕಿತ ಳಿಸಿದನು. ಶಾಸ್ತ್ರಿಗಳು ಬಂದಕೂಡಲೆ ಅವರಲ್ಲಿ ಕೆಳಗಿನಂತೆ ಪ್ರಶ್ನೆ ಹ್ಯತ್ತರಗಳು ಘಟಿಸಿದವು.

ಶಿಪಾಯಿ:— ನಿನ್ನ ವ.ನೆಯಲ್ಲಿ ಕಳವಾ ಗಿಲ್ಲವೇ? ಫೌಜದಾರರು ನಿನ್ನನ್ನು ಕರೆದು ಕೊಂಡು ಬರಲು ಮೋಟಾರ ಕೊಟ್ಟು ಕಳಿಸಿ ದ್ದಾರೆ. ಈಗಿಂದಿಗ್ಗೆ ಹೊರಡು.

ಶಾಸ್ತ್ರಿಗಳು:— ಈಗಲಿ ಹೊಡಿಯಲಿಕ್ಕೆ ಬಂದಿರುತ್ತದೆ. ಇನ್ನೂ ಉಟವಾಗಿಲ್ಲ ಆದ್ದರಿಂದ ಈಗ ಬರುವದು ಕಳ್ಳವಿಲ್ಲ- ನೀವು ಹೋಗಿರಿ. ಹಿಂದುಗಡೆಯಲ್ಲಿ ಬರುವೆನು ಇಲ್ಲವೇ ಫೌಜದಾ ರರು ಇಲ್ಲಿಗೆ ಬಂದಾಗ್ಗೆ ಅವರಿಗೆ ಎಲ್ಲ ಸಂಗತಿ ತಿಳಿಸುವೆನು.

ಶಿಪಾಯಿ:— ಫೌಜದಾರರು ನಿಮ್ಮ ಅ ಪ್ಪನ ನೌಕರರೇನು? ಅರ್ಜಿಯ ಸ್ವೀಕೆ ಮಾಡಿದಿರಿ ಊಟವಾಗಿರದಿದ್ದರೇನು ಸಲ್ಪ ಹೋಗುವಿಯಾ? ಇದೇನು ವಾಯಿ ಎಂದು ತಿಳಿದು ಕೊಂಡಿರುವಿ ಯೋ ಹೇಗೆ?

ಶಾಸ್ತ್ರಿಗಳು:— ಜನಾದಾರೇ ಹಿಗೆಕೆ ಮಾತಾಡುತ್ತಿರುವಿ? ನಿನ್ನಲ್ಲಿ ಲೇಖಿ ಹಕ್ಕು ಮು ಇದೆಯೇ? ನೀವು ಯುನಿಫಾರ್ಮದಲ್ಲಿರು ವಿರ್ತ್ತೀನೆಂತೆ ಹೀಗೆ ಕೆಹುಜ್ಜನಂತೆ ಮಾತಾಡು ತ್ತಿರುವಿರಿ.

ಶಿಪಾಯಿ:—ಹಿಂದುಗಡೆಯಲ್ಲಿ ಬೇಕಾದ ಕೆ ಫಿರ್ಯಾದ ಮಾಡು ನೀನೆನು ಗವ್ನರ್ನರನೇ? ಇಲ್ಲವೆ ನ್ಯಾಯಾಧೀಶನೇ? ನಿನ್ನನ್ನು ಕರೆದು ಕೊಂಡು ಹೋಗೇಬಿಡ.ವೆನು.

ಶಾಸ್ತ್ರಿಗಳು:— ನಿಮ್ಮಕೂಡ ನಾನು ಹೆ ಚ್ಚಿಗೆ ಒಂದು ಶಬ್ದವನ್ನಾದರೂ ಮಾತಾಡಲಾ ರೆನು ನಾನು ಇಲ್ಲಿ ಇಷ್ಟು ಕೂಡುವದಿಲ್ಲ

ಶಿಪಾಯಿ:— ನಿನ್ನನ್ನು ಇಲ್ಲಿ ನೆರೆ ಹಿಡ ದಿದ್ದೇನೆ. ಕವಳಲಿಕ್ಕೇ ಬೇಕು,

ಲೇವೀ ಕುಳುಮು ಇಲ್ಲದ ಹೊರತು ಬಾಯಿ ಮಾತನ್ನು ಮನ್ನಿಸುವದಿಲ್ಲವೆಂದು ಹೇಳಿ ಶಾಸ್ತ್ರಿಗಳು ಆಲ್ಲಿಂದ ಹೊರಬಿದ್ದರು. ಶಿಪಾಯಿಯಾದರೂ ಅವರ ಹಿಂದಿಂದೆಯೆ ಬಂದು ಅವರಿಗೆ ಗುದಿಕೆಗಳನ್ನು ಕೊಟ್ಟು ಅವನ್ನು ಮೋಟಾರದಲ್ಲಿ ದಬ್ಬಿ ಕೂಡಿಸುವ ಪ್ರಯತ್ನ ಮಾಡಿದನು. "ಜೀವ ತೆಗೆದುಕೊಂಡರೂ ಅಲ್ಲಿಗೆ ಬರುವದಿಲ್ಲ" ಎಂದು ದಿವೇಕರ ಶಾಸ್ತ್ರಿಗಳು ಗಟ್ಟಿ ಯಾಗಿ ಕೂಗಿದರು. ಅಷ್ಟರಲ್ಲಿಯೇ ಎಷ್ಟೋ ಜನರು ಅಲ್ಲಿ ಬಂದು ನೆರೆದರು. ಪೋಲೀಸ ಪಾಟೀಲನು ಆ ಶಿಪಾಯಿಗೆ ಬುದ್ಧಿ ಹೇಳಿದನು, ಆದರೆ ಆ ಶಿಪಾಯಿಯು ತಿರುಗಿ ಅವನಿಗೇನೆ ಯಧೇಚ್ಛ ಬೈದನು. ಅಷ್ಟರಲ್ಲಿ ಸ್ಟೇಶನ ಮಾಸ್ತ ರರಾದ ಶ್ರೀ ಜೋಗರವರು ಅಲ್ಲಿಗೆ ಒಂದರೆ. ಶಿಪಾಯಿಯು ಅವರಿಗೂ ಬೈದು, ಪುನಃ ದಿವೇ ಕರರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದ ಉಚ್ಚರಿಸಿದನು.

ಶ್ರೀ ದಿವೇಕರರು ಊಟ ಮೊದಲಾದವು ಗಳನ್ನು ತೀರಿಸಿಕೊಂಡು, ಸ್ಟೇಶನ ಮಾಸ್ತರ ರನ್ನು ಸಂಗಡ ಕರೆದುಕೊಂಡು ಗೋಕಾಕಕ್ಕೆ ಹೋದರು, ಅಲ್ಲಿ ಫೌಜದಾರ ಸಾಹೇಬರಿಗೆ ಭೆಟ್ಟಿಯಾಗಿ ಕಳವಿನ ಹಾಗು ಪೋಲೀಸರ ಸ್ವೈರ ವರ್ತನವನ್ನ ಅವರಿಗೆ ತಿಳಿಸಿದರು. 'ಆ ಶಿಪಾಯಿಯು ಕುಡುಕ ಹಾಗು ಹಲಕಟ್ಟ ಕಾರು ವನು" ಎಂದು ಫೌಜದಾರರು ಹೇಳಿದರು. "ಇಂತಹವನನ್ನ ಯಾಕೆ ಕಳಿಸಿದಿರಿ ನಿಮ್ಮ ವೇಲಿನ ಸ್ಪಸಂಗಡ ಎಂದು ತಿಳಿದುಕೊಂಡು ಅವನಿಗೆ ತಕ್ಕ ಶಾಸನ ಮಾಡಿರಿ" ಎಂದು ಶಾಸ್ತ್ರಿಗಳು ಫೌಜದಾರರಿಗೆ ಕೇಳಿಕೊಂಡು ಹೊರಟು ಬಂದರು. ನೋಡಬೇಕು ಶಿಪಾಯಿಗೆ ಏನು ಶಾಸನ ಮಾಡುವರೆಂಬುದನ್ನ!

ಮುಂಬಯಿಯಲ್ಲಿ
ಮುದಿವಾಸುರನ ಪೀಕಲಾಟ

ಮುಂಬಯಿ.ಯಲ್ಲಿ ಕಲೆಕ್ಟರ ಕಚೇರಿಯಲ್ಲಿ ಕಾ ೧೭ ನೆಯ ದಿವಸ ಸೆರೆ ಹಿಂದಿ ಅಂಗಡಿಗಳ ಲಿಲಾವು ನಡೆಯುತಕ್ಕದ್ದಿದ್ದರಿಂದ, ಸುಮಾರು ೧೦೦ ಜನ ಸೇವಿಕೆಯರು ಹಾಗು ೫೦೦ ಜನ ಸ್ವಯಂಸೇವಕರು ಪಿಕೆಟಿಂಗ ಮಾಡುವ ಉದ್ದೇ ಶದಿಂದ ಮುಂಜಾನೆ ೯ ಗಂಟೆಗೆ ಅಲ್ಲಿಗೆ ಕ್ಷೋಭಾ ಕಶ್ಯಮ್ ಹಾಸ ಹಾಗು ಕಲೆಕ್ಟರ ಕಚೇರಿಯ ಮುಂದೆ ನಿಂತರು. ೧೦-೩೦ ಕ್ಕೆ ಕಚೇರಿಯ ಕಾರಕೂನರು ಅಲ್ಲಿಗೆ ಬಂದು ಕಚೇರಿಯೊಳಗೆ ಹೋಗಲು ಪ್ರಯತ್ನಿಸಿದರು. ಸ್ವಯಂಸೇವಕರು ದಾರಿ ಕಟ್ಟಿದ್ದರಿಂದ ಸಾಧ್ಯವಾಗಲಿಲ್ಲ. ೧೧ ಗಂ ಟೆಯ ಸುಮಾರಿಕ್ಕೆ ಕಲೆಕ್ಟರರು ಬಂದರು. 'ನೀವು ಹೀಗೆ ಪಿಕೆಟಿಂಗ ಮಾಡಿದಲ್ಲಿ ಮಕ್ತೆದಾ ರರು ಅಂಚಿಯ ಮುಖಾಂತರವಾಗಿ ಮಕ್ತೆ ಹಿಡಿ ದುವರು' ಎಂಬುದಾಗಿ ತಿಳಿಸಿದರು. ಒಬ್ಬಳು 'ಪೋಸ್ಟಮನ್ನರಂತೇ ಪಿಕೆಟಿಂಗ ಮಾಡುವೆವು' ಎಂದು ಉತ್ತರ ಕೊಟ್ಟಳು. ಕಲೆಕ್ಟರರು ಕಚೇ ರಿಯೊಳಗೆ ಹೋದರು.

ಇಷ್ಟರಲ್ಲಿ ಸಾರ್ಜಂಟ ರಿಮರರು ಪೊಜನೆ ಪೋಲಿಂಸರೊಂದಿಗೆ ಅಲ್ಲಿಗೆ ಬಂದು ಸ್ವಯಂಸೇ ವಿಕೆಯರನ್ನ ದಬ್ಬಿ, ಜೋರಾಗಿ ನಿಂತುಕೊಂಡ ವ್ಯಾಪಾರಸ್ಥರನ್ನ ಒಳಗೆ ಕಳಿಸಿದರು. ಈ ಗೊಂದಲದಲ್ಲಿ ಕೆಲವ ಸ್ವಯಂಸೇವಿಕೆಯರ ಬಳೆಗಳು ಜೆಜ್ಜಿ ಹೋದದ್ದಲ್ಲದೆ ಕೆಲವರ ಕೈಗೆ ಗಾಯವೂ ಆಯಿತು. ಸೇವಿಕೆಯರು ಮತ್ತೆ ಬಂದು ನಿಂತುಕೊಂಡರು. ಪೋಲೀಸರು ಜಡು ರಿಸಲು ಪ್ರಯತ್ನಿಸಿದರು. ಹೊರಗಿನ ಗೊಂದ ಲಕ್ಕೆ ದೇವಸ್ಥಾನ ಕಲೆಕ್ಟರರು ಹೊರಗೆ ಬಂದು ಪೋಲೀಸರಿಗೆ ಹೊರಟು ಹೋಗಲು ಕೇಳಿ ಕೊಂಡರು. ಪೋಲೀಸರು ಅವನತವುಖರಾಗಿ ಹೊರಟು ಹೋದರು.

ಕೆಲವ ಮಳ್ಳೆದಾರರು ಹಾಗು ಅಧಿಕಾ ರಿಗಳು ಶ್ರೀ ಮುನಶಿ, ಪುರುಷೋತ್ತಮದಾಸ ರಾಧಾಕಾಂತ ಮಾಲವೀಯಾ ಮೊದಲಾದವ ರನ್ನು ಕಂಡುಕೊಂಡು ಪಿಕೆಟಿಂಗ ನಿಲ್ಲಿಸಲು ಕೇಳಿಕೊಂಡರು. ಮಳ್ಳೆದಾರರು ತಿರುಗಿ ಹೋ ಗದ ಹೊರತು ಪಿಕೆಟಿಂಗ ನಿಲ್ಲಿಸಲಾಗುವದಿಲ್ಲ ವೆಂದು ಶ್ರೀ ಮುನಶಿ ಮೊದಲಾದವರು ಉತ್ತರ ಕೊಟ್ಟರು. ಮಳ್ಳೆದಾರರು ಆದಕ್ಕೆ ಒಪ್ಪಿ ಕೊಂಡು ಅಲ್ಲಿಂದ ಎದ್ದು ಹೋಗಿ ಬಿಟ್ಟರು. ೧೨-೩೦ ಕ್ಕೆ ಸುಪರಿಂಟೆಂಡೆಂಟ ಹೊಮ್ಸ್‌ರು ಬಂದು ಶ್ರೀ ಮುನಶಿಯ ವರಿಗೆ 'ಏನು ನಡೆದಿದೆ' ಎಂದು ಪ್ರಶ್ನೆ ಮಾಡಿದರು. "ಕೆಲವ ಜನರು ಸೆರೆಯಿಂದಿಂದ ಹಣ ಗಳಿಸಬೇಕೆನ್ನುತ್ತಾರೆ. ಅವರ ಮನವೊಲಿಕಲು ಈ ಪ್ರಯತ್ನ ನಡಿಸಿ ದ್ದಾಗಿದೆ' ಎಂದು ಮುನಶಿಯವರು ಉತ್ತರ ಕೊಟ್ಟರು. ಸಾಹೇಬರು ಹೊರಟು ಹೋದರು. ಸಂಜೀ ಅಂಗಡಿಗಳ ಲಿಲಾವು "ಓಂ ಫತ್ತಾ" ಯಿತು.

ಅಸಿಸ್ಟಂಟ ಕಮೀಶನರರ ಮೇಲೆ ಗುಂಡುಗಳು ಹಾರಿದವು.

ತಾ॥ ೧೭ ನೆಯ ದಿವಸ ಒಬ್ಬ ಮುಸಲ್ಮಾನ ತರುಣನು ಚರಸಾದದಲ್ಲಿಯ ಅಸಿಸ್ಟಂಟ ಕಮೀಶನರಾದ ಕ್ಯಾಪ್ಟನ್ ಬಾರ್ನೆಸ್ ಇವರ ಬ್ಲಂಗಲೆಗೆ ಹೋಗಿ, 'ಆರ್ಜಿ ಕೊಡುವ ದಿದೆ' ಎಂದು ಕಾವಲುಗಾರರಿಗೆ ತಿಳಿಸಿದನು. ಕಾವಲುಗಾರರು ಆ ಸಂಗತಿಯನ್ನು ಸಾಹೇಬರಿಗೆ ತಿಳಿಸಿದರು. ಸಾಹೇಬರು ಕೂಡಲೆ ಹೊರಗೆ ಬಂದು ಅರ್ಜಿಯನ್ನು ಸ್ವೀಕರಿಸಿ, ಅದನ್ನು ಅಕ್ಷರಶಃ ಓದುತ್ತಿ ನಿಂತಿರುವಾಗ ಆ ವ್ಯಕ್ತಿಯು ಸಾಹೇಬರ ಮೇಲೆ ಪಿಸ್ತೂಲು ಹಾರಿಸಿದನು. ಆದರೆ ಗುರಿತಪ್ಪಿದ್ದರಿಂದ ಅವರಿಗೆ ಅವು ಶರೀರಕ್ಕೆ ತಾಗದೆ ಒಂದೆರಡು ಅಡಿ ದೂರದಲ್ಲಿ ಬಿದ್ದವು. ಆ ಮುಸಲ್ಮಾನನ ಮೇಲೆ ಏಟು ಹೊಡೆದು, ಅವನನ್ನು ನೆಲಕ್ಕೆ ಕೆಡವಿ ಅವನ ಕೈಯೊಳಗಿನ ಪಿಸ್ತೂಲು ಕಸಿದುಕೊಂಡರು. ಪೋಲೀಸರು ಅವನನ್ನು ಸೆರೆಹಿಡಿದೊಯ್ದರು. ಈ ಸಂಬಂಧವಾಗಿ ತನಿಖೆ ನಡೆಯುತ್ತಿದೆ.

ಸಂಯುಕ್ತ ಪ್ರಾಂತದಲ್ಲಿ ಗೋಳೀಬಾರು

ಇಬ್ಬರಿಗೆ ಮರಣ ೩೨ ಜನರಿಗೆ ಗಾಯ

ಸಂಯುಕ್ತ ಪ್ರಾಂತದ ಪ್ರತಾಪಗಡ ಜಿಲ್ಲೆಯ ಕೆಲವು ಕಮಾಶರರು ಒಂದು ನೋಟೀಸು ಹೊರಡಿಸಿ, ತಮ್ಮ ಜಿಲ್ಲೆಯಲ್ಲಿ ಕರನಿರಾಕರಣೆಯ ಚಳವಳಿಯು ಸಂಬಂಧವಾಗಿ ಸಭೆಗಳು ಜರುಗಿ ಕೂಡದೆಂದು ಅಪ್ಪಣೆ ಪಡಿಸಿದರು. ಆ ಜಿಲ್ಲೆಯಲ್ಲಿಯ ಕಟ್ಟಲಾ ಎಂಬಲ್ಲಿ ಆಜ್ಞೆಯನ್ನು ಅಮಾನ್ಯವಾಡಿ ಸಭೆಯೊಂದು ನಡೆಯುವದರಲ್ಲಿ ಬಂದಿತ್ತು. ಪೋಲೀಸರು ಅಲ್ಲಿಗೆ ಬಂದು ಜನರಿಗೆ ಚದುರಿಹೋಗಲು ಕೇಳಿಕೊಂಡರು. ಜನರು ನಿರಾಕರಿಸಿದರು. ಜನರು ಹಾಗೂ ಪೋಲೀಸರಲ್ಲಿ ಲಗ್ಗೆ ಹತ್ತಿ ಪರಿಸ್ಥಿತಿಯು ವಿಕೋಪಕ್ಕೆ ಹೋಯಿತು. ಪೋಲೀಸರು ಗೋಳೀಬಾರ ಮಾಡಿದರು. ಇಬ್ಬರು ಮರಣ ಹೊಂದಿದ್ದು, ಒಟ್ಟಿಗೆ ೩೨ ಜನರಿಗೆ ಗಾಯಗಳಾಗಿನೆ ಗಾಯ ಹೊಂದಿದವರಲ್ಲಿ ೬ ಜನ ಪೋಲೀಸರೂ, ಇಬ್ಬರು ಅಧಿಕಾರಿಗಳೂ ಇದ್ದಾರೆ.

ಒಪ್ಪಂದದ ಬಗ್ಗೆ ಭವಿಷ್ಯ.

ಮುಲಾಡದ ಶ್ರೀ ಬಜೋರ್ಜಿ. ಕೆ. ಪಂಕಿಯವರು ಈಗ ನಡೆದ ಸಂಧಾನದ ಮಾತುಕತೆಗಳ ಸಂಬಂಧವಾಗಿ, ಒಪ್ಪಂದವಾಗುವ ಸಂಭವನಿಲ್ಲವೆಂದೂ, ಮೇ ತಿಂಗಳದ ಕೊನೆಯ ವರಗೆ ದಬ್ಬಳಕೆಯು ಜೋರಿನಿಂದ ಸಾಗಿಬಿಟ್ಟಿರುವದೆಂದೂ ಭವಿಷ್ಯ ಹೇಳಿದ್ದಾರೆ.

ಮುಂಬಯಿ ಸರಕಾರಕ್ಕೆ ೧೫ ಕೋಟಿ ರುಪಾಯಿ ಹಾನಿ

(ತಂತಿಯಮಾರ್ಫ ತಾ॥ ೧೭)

ಕಾಯಿದೆ ಭಂಗ ಚಳವಳಿಯು ಮೂಲಕ ವಾಗಿ ಪೋಲೀಸ ಖರ್ಚು ಹಾಗು ಸೆಕ್ರೇಟರಿಯೇಟು ಇವುಗಳಿಗಾಗಿ ಹೆಚ್ಚಿಹಣ ವೆಚ್ಚ ಮಾಡಬೇಕಾದ ಪ್ರಸಂಗ ಬಿದ್ದಿದ್ದರಿಂದಲೂ, ಸೆರೆ ಸಿಂದಿ ಖಾತೆ ಹಾಗು ಜಂಗಲ್ ಖಾತೆ ಇವುಗಳಿಂದ ಶ್ರವಣವಾಗಿ ೭೬ ಹಾಗು ೧೯ ಲಕ್ಷ ರುಪಾಯಿ ಉತ್ಪನ್ನ ಕಡಿಮೆ ಬಂದಿದ್ದರಿಂದಲೂ ಕನಿಷ್ಠಾಂಕಣೆಯು ಚಳವಳಿಯು ಮೂಲಕ ವಾಗಿ ಭೂಕಂದಾಯವು ವಸೂಲಾಗದ್ದರಿಂದಲೂ ಮುಂಬಯಿ ಸರಕಾರಕ್ಕೆ ಜಮಾಖರ್ಚ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಈ ವರ್ಷ ೧೫ ಕೋಟಿ ರುಪಾಯಿ ಹಣವು ಕಡಿಮೆ ಬಿದ್ದಿದೆ. ಅದ್ದರಿಂದ ಹೆಚ್ಚಿಗೆ ಕರವನ್ನು ಕೂಡಿಸಬೇಕಾಗಿ ಸೂಚಿಸುವದರಲ್ಲಿ ಬಂದಿದೆ. ಪ್ರಾಥಮಿಕ ಶಿಕ್ಷಣದ ಗ್ರಾಂಟುಗಳಲ್ಲಿಯೂ ಕಡಿತ ಕಡಿಮೆ ಮಾಡಲ್ಪಟ್ಟಿದೆ.

ಲಖನೌದಲ್ಲಿ ಪಂ. ಮೋತೀಲಾಲರ ಸ್ಮಾರಕ

(ತಂತಿಯ ವಾರ್ತೆ, ವಿಜಾಪುರ, ತಾ॥ ೧೭)

ಲಖನೌದಲ್ಲಿ ತಾ॥೬ ನೆಯ ದಿವಸ ಪಂಡಿತ ಮೋತೀಲಾಲರ ಶ್ರಾದ್ಧ ದಿನದ ನಿಮಿತ್ತವಾಗಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಮಧ್ಯಾನದಲ್ಲಿ ಬೊಳ್ಳ ನೆತ್ತಿಯ ಪ್ರಚಂಡ ಮೆರವಣಿಗೆಯು ಶ್ರೀಮತಿ ವಿಜಯಾಲಕರ ನೇತೃತ್ವದಲ್ಲಿ ಸಾಗಿ ಪಟ್ಟಣದಲ್ಲೆಲ್ಲ ಸಂಚರಿಸಿ ಸಭಾಸ್ಥಾನಕ್ಕೆ ತಲುಪಿತು. ಶ್ರೀ ಮೊಹನಲಾಲ ಸೆಕ್ಸನಾರವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಮಹಾತ್ಮರು ಹಾಕಿ ಕೊಟ್ಟ ಪ್ರತಿಜ್ಞೆಯು ಉಚ್ಚರಿಸಲ್ಪಟ್ಟಿತು. ಬಾಧರಿ ಖಲಿಲ ಖುಜಮಾನರು ದಿವಂಗತ ಪಂಡಿತ ಮೋತೀಲಾಲರ ಸ್ಮರಣಾರ್ಥವಾಗಿ ಲಖನೌದಲ್ಲಿ ೧೫ ಲಕ್ಷ ರೂಪಾಯಿ ಖರ್ಚು ಬಾಳುವ ಸ್ಮಾರಕವನ್ನೇರ್ಪಡಿಸಲು ಬೇಕಾಗಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದರು. ಸೂಚನೆಯು ಸರ್ವಾನುಮತದಿಂದ ಸ್ವೀಕೃತವಾಯಿತು. ಒಬ್ಬರು ಸ್ಮಾರಕಕ್ಕಾಗಿ ೨೨೦೦ ರೂ ಪಾಯಿಗಳನ್ನು ತೊಡುವೆಪಾಗಿ ಸಭೆಯಲ್ಲಿಯೇ ವಚನ ಕೊಟ್ಟರು.

ಸೊಲ್ಲಾಪುರ ಸತ್ಯಾಗ್ರಹಿಗಳು ಬಿಡುಗಡೆ ಹೊಂದಿದರು

ಸೊಲ್ಲಾಪುರ ದಂಡಿಯಾತ್ರೆಯ ಸಮಯದಲ್ಲಿ ಅಲ್ಲಿ ರಾಷ್ಟ್ರಧ್ವಜ ಸತ್ಯಾಗ್ರಹ ಮಾಡಿ ಶಿಕ್ಷೆಗೆ ಪಾತ್ರರಾದ ಶ್ರೀ ರಾಮಚಂದ್ರ ದಾಂಡೇಕರ (ಪುಣೆ), ರಕ್ಷಪಾಂಡ ಅಮೋಣಕರ (ಅಕಲೂಜ) ಬಾಬು ಜವ್ವಾಜಿ (ಸೊಲ್ಲಾಪುರ) ಪ್ರಲ್ಹಾದ ಪಾಳೆ (ಸೊಲ್ಲಾಪುರ) ಶ್ರೀ ಕೃಷ್ಣ ಸ್ವಾಮಿ (ದೆಂಗಳೂರು) ನಾರಾಯಣಮೂರ್ತಿ (ದೆಂಗಳೂರು) ಈ ಐವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ॥ ೧೫ ನೆಯ ದಿವಸ ವೀರಾವೇಶದಿಂದ ಬಿಡುಗಡೆ ಹೊಂದಿದರು.

ಶ್ರೀ ಕರಮರೆಕರರ ಮೇಲೆ ವಾರಂಟು

ಈಗ ವಿಜಾಪುರ ಜಿಲ್ಲೆಯಲ್ಲಿ ಗ್ರಾಮ ಸಂಘಟನೆಯ ಕಾರ್ಯಕ್ರಮವನ್ನು ಕೈಕೊಂಡಿರುವ ಧಾರವಾಡದ "ಕರ್ಮವೀರ" ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಕರವೀರಪ್ಪ ಬಸ್ಸಾಪ್ಪ ಯರಗಾಯಿ ಮೇಲೆ, ರಾಜದ್ರೋಹಾತ್ಮಕ ಲೇಖನ ಬರೆದುದಕ್ಕಾಗಿ ೧೫೪ ಎ ಕಲಮಿನ ಸ್ವಯ ವಾರಂಟು ಹೊರಟಿರುವದಾಗಿ ತಿಳಿದು ಬಂದಿದೆ.

ಅಂಕೋಲೆಯ ಮಾಮಲೇದಾರರ ಅನುಭವ!!

ಮೊನ್ನೆ ೧೩ ನೇ ತಾರೀಖಿನ ದಿವಸ ಮಾಮಲೇದಾರರ ಸವಾರಿಯು ತಿಂಗಣಮಕ್ಕಿ ಖಂಡಿತ, ಉಗ್ರಾಣಿ, ತಾನಭೋಗರು, ೬ ಜನ ಸಶಸ್ತ್ರ ಪೋಲೀಸರು ಇಷ್ಟೆಲ್ಲ ಸಂಜಾವನ್ನು ತಮಗೆ ಹಿಂಬಾಲಿಸಿತ್ತು. ಆದರೇನು? ಉಳದುಕೊಳ್ಳಲಿಕ್ಕೆ ಸ್ಥಳವೇ ಸಿಕ್ಕದೆ ಹೋಯಿತು. ಶಾಲಾಮಾಸ್ತರರನ್ನು ಕರೆಯಿಸಿ ಶಾಲೆಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರು. ಉಗ್ರಾಣಿಯು ಸಂಗಡ ಪೋಲೀಸರನ್ನು ಕೊಟ್ಟು ಖಾಕಿದಾರನನ್ನು ಕರೆಯು ಕಳಿಸಿದರೂ ಯಾರೂ ಹತ್ತರ ಸುಳಿಯಲಿಲ್ಲ. ತಾನಭೋಗನು ಚಹ ಮಾಡುವದಕ್ಕಾಗಿ ಪಾಲ್ರೆಯನ್ನೂ, ಹಾಲನ್ನೂ, ತರುವದಕ್ಕೆಂದು. ಊರಲ್ಲಿ ಹೋದರು ಯಾರೂ ಕೊಡಲಿಲ್ಲ ವಾಸುದೇವ ನೆಂಬ ಹುಡುಗನು "ಮಾಮಲೇದಾರನೇ ಆಗಲಿ, ಯಾವನೇ ಆಗಲಿ, ಸರಕಾರೀ ಜನರಿಗೆ ಪಾತ್ರೆ ಕೊಡುವಹಿಲ್ಲ. ಕೂಡ್ಲಲಿಕ್ಕೆ ಸ್ಥಳವನ್ನು ಕೊಡುವದಿಲ್ಲ.. ನಿಮ್ಮ ಮಾಮಲೇದಾರರಿಗೆ ಹೀಗೆಯೇ ಹೇಳು ಹೋಗ," ಎಂದನು. ಸಕ್ಕರೆ ತರಲಿಕ್ಕೆಂದು ಪೋಲೀಸನನ್ನು ಅಂಗಡಿಗೆ ಕಳುಹಿಸಲು ಅಂಗಡಿಯಾನು ಸಕ್ಕರೆ ಕೊಡುವದಿಲ್ಲೆಂದನು. ಪೋಲೀಸರು ಉಬ್ಬು ಮಾಡುತ್ತಿದ್ದ ಒಬ್ಬ ಹೆಣ್ಣಾಳುಗಳ ಹತ್ತರ ಉಬ್ಬು ಕೊಡೆಂದು ಕೇಳಲು ಅವಳು ಏಮ್ಮಂಥವರಿಗೆ ಉಬ್ಬು ಮಾರುವದಿಲ್ಲ ಹೋಗಿ ಹೇಳ್ರಿ ಇದೆಲ್ಲ ಆಗಬೇಕಾದರೆ ಒಂದು ತಾಸು ಹೊತ್ತಾಯಿತು. ಇಷ್ಟು ಹೊತ್ತಿನವರೆಗೆ ಮಾಮಲೇದಾರರು ರಸ್ತೆಯ ಬಳಿಯಲ್ಲಿಯೇ ಕಾಯುತ್ತಿದ್ದರು. ಬಳಿಕ ಸ್ವತಃ ಹಳ್ಳಿಯಲ್ಲಿ ಹೋದರು. ಊರಿನ ಅಡ್ಯಾತಿಕರೂ ಇವರಿಗೆ ಭೆಟ್ಟಿಯಾದವರು ಅಲ್ಲಿಯೇ ಖಾತೆಗಾರರು. ಅವರಿಗೆ ತೀರ್ಪೇ ಕೊಡುವಂತು ಕೇಳಲು ಅವರು ಖಲ್ಲನೆಂದರೆ. ಮಾಮಲೇದಾರರು "ಹೀಗೆ ಸುಳ್ಳರಂತೆ ಮಾತಾಡಬೇಡಿ ಅಂಕೋಲೆಯವರು ಕೊಟ್ಟರು. ನೀವೂ ಕೊಟ್ಟುಬಿಡಿರಿ. ನಿಮ್ಮ ಮೇಲೆ ಬಹಿಷ್ಕಾರ ಹಾಕುವದಿಲ್ಲೆಂದು ಡಾ. ಹರೀಶರು ನನಗೆ ಹೇಳಿದ್ದಾರೆ. ಪತ್ರಗಳ ಸ್ವೀಕಾರ್ಯ ಬೇಕಾಗಿದೆ." ಎಂದು ಉಪದೇಶ ಮಾಡಿದ್ದಕ್ಕೆ ರೈತರು "ಕಾಂಗ್ರೆಸಿನ ಅಪ್ಪನೆ ಯಾರಾಗುವವರಿಗೆ ಕಾಳು ತೀರ್ಪೇ ಕೊಡುವದಿಲ್ಲ." ಎಂದು ರೈತರು ಖಂಡಿತವಾಗಿ ಹೇಳಿಬಿಟ್ಟರು.

ತಾನಭೋಗನಿಗೆ ಬಂದ ಅಪಾಧವಶ ಊಟವೂ ಮಾಮಲೆದಾರರಿಗೂ ಗೊತ್ತಾಯಿತು ಈಂಟಿಗಣಿ, ತೊಂಬೆಕೊಳ್ಳಿ, ಗುಡಿಹಾವಳಿ, ಮಾಣೇಗದ್ದೆ, ಸೂಳೇಬೈಲು, ಆಡಳೆ, ರಬಗಾಲ, ಬ್ರಹ್ಮೂರ, ಹಿಲ್ಲೂರ, ಉಳುವರೆ, ದೇವೀಗದ್ದೆ, ತಿರಗುಂಜಿ, ಮತ್ತು ಅಂಬುಗೋಣಗಳಿಗೆ ತಾನ ಭೋಗರು ಹೋಗಿ ಬರಿಗೈಯಿಂದ ಹೊರಟು ಬಂದರು.

ವಿಜಾಪುರ ಜಿಲ್ಲೆಯ ರಾಜಕೀಯ ಕೈದಿಗಳ ಪರಿಷತ್ತು

(ಪ್ರಕಟಣೆ ೧)

ವಿಜಾಪುರ ಜಿಲ್ಲೆಯ ರಾಜಕೀಯ ಕೈದಿಗಳ ಪರಿಷತ್ತನ್ನು ಇದೇ ತಿಂಗಳ ೨೭ ನೆಯ ತಾರೀಖಿನ ದಿವಸ ವಿಜಾಪುರದಲ್ಲಿ ಕೂಡಿಸುವದು ಗೊತ್ತುಮಾಡಿದೆ. ರಾಜಕೀಯ ಕೈದಿಗಳಿಗಾಗುವ ಕಷ್ಟಗಳನ್ನು, ಜೈಲ್‌ನಿಯಮಗಳ ನಿವಾರಣೆಯ ಉಪಾಯವನ್ನು ಯೋಚಿಸುವದು ಮುಖ್ಯ ಉದ್ದೇಶವಾಗಿದೆ. ಮತ್ತು ಪ್ರಸ್ತುತ ಚಳವಳಿಯಲ್ಲಿ, ಚಳವಳಿಗೆ ಸಹಾಯಮಾಡುವವರ ಆಸ್ತಿಯನ್ನು ಜಪ್ತ ಮಾಡುವದು, ದಂಡ ಮಾಡುವದು, ಇತ್ಯಾದಿ ಮೊದಲಾದ ಕಷ್ಟಗಳಿಗೆ ಪರಕಾರದವರು ಅನೇಕರನ್ನು ಗುರಿ ಮಾಡಿದ್ದಾರೆ ಅಂತಹವರ ಕಷ್ಟಗಳನ್ನು ಪರಿಹರಿಸಲ್ಲಿ ಜರ್ತಿಮಾಡುವದು ಅವಶ್ಯವಿದೆ. ಅದು ದರಿಂದ ಸರಕಾರಕ್ಕೆ ಜುಲುಮೆಗೆ ಗುರಿಯಾದ ಪರಿಷ್ಟರೂ ಪರಿಷತ್ತಿಗೆ ಆಗಮಿಸಿ, ತಮ್ಮ ಅಪಾಧಗಳನ್ನು ಹೇಳಿ, ಪರಿಷತ್ತಿನ ಉದ್ದೇಶವನ್ನು ಸಫಲಗೊಳಿಸಬೇಕಾಗಿ ಪ್ರಾರ್ಥನೆ.

ವಿಜಾಪುರ.
ತಾ|| ೨೬-೨-೩೧

ಬಸಪ್ಪ ಅಂಬಲಿ.
ಶಾಮರಾವ ಗೆಜ್ಜೆ
ಕಾರ್ಯದರ್ಶಿಗಳು

ಹಬೀಬ ನೂರರನ್ನು ಗಲ್ಲಿಗೇರಿಸಿದರು.

ಪಂಜಾಬದ ಅಸಿಸ್ಟಂಟ ಕಮೀಶನರ ಆ್ಯಷ್ಟನ್ ಬಾರ್ಡರದ ಮೇಲೆ ಪಿಸ್ತೂಲು ಹಾರಿಸಿ ಅವನ್ನು ಕೊಲ್ಲಲು ಪ್ರಯತ್ನಿಸಿದ ಅಪರಾಧದ ಬಗ್ಗೆ ಹದಿಬು ನೂರಮಹಮ್ಮದರಿಗೆ ಗಲ್ಲಿನ ಶಿಕ್ಷೆಯು ವಿಧಿಸಲ್ಪಟ್ಟಿದ್ದರಿಂದ ಅವರು ತಾ|| ೧೯ ನೆಯ ದಿವಸ ಬೇಕಾದರ ಜೇಲಿನಲ್ಲಿ ಗಲ್ಲಿಗೇರಿಸಲ್ಪಟ್ಟರು.

ಇಹವೃತ್ತ

ದೋರನಾಡದಲ್ಲಿಯು ಸ್ತ್ರೀಯರು ಮೇಲಿನ ಪೋಲೀಸರ ಅತ್ಯಾಚಾರವನ್ನು ನಿಷೇಧಿಸುವ ಕುರಿತು ತಾ|| ೧೯ ನೆಯ ದಿವಸ ಸ್ತ್ರೀಯರ ಮೆರವಣಿಗೆ ಹಾಗು ಸಭೆಗಳು ಜರುಗಿದವು. ದೋರನಾಡದ ಅತ್ಯಾಚಾರದ ವಿಷಯುಳ್ಳವಾದ ಪಟಗಳೊಂದಿಗೆ ಸ್ತ್ರೀಯರು ಕಂಡೆಯಲ್ಲಿ ಊರಲ್ಲೆಲ್ಲ ತಿರುಗಿ, ಮಾರುತಿ ದೇವಾಲಯಕ್ಕೆ ಬಂದಿದ್ದ ಜಳಕ ಅಲ್ಲಿ ಸಭೆ ನೆರೆತು, ಶ್ರೀಮತಿ ಪಾರ್ವತಿಬಾಯಿ ಗುಜ್ಜರ, ಪದ್ಮಾಬಾಯಿ ತಿಪ್ಪನೆಗೌಡ ಇವರ ಭಾಷಣಗಳಾದವು ನಂತರ ಸ್ತ್ರೀಯರು ಸ್ವಯಂಪ್ರೇರಣೆಯಿಂದ ಈ ಕಾರ್ಯಕ್ಕೆ ಮೆಗಳಲ್ಲಿ ಭಾಗ ವಹಿಸಿದರು.

"ಅನಲಾಧರ್ಮ ಅರ್ಜಿನಪ್ಪ ಪಕ್ಕೆಯ ಇಳ್ಳಿಯ ಸೇವಾಶಲ ಹಾಗು ಸ್ವಯಂಸೇವಕರ ಶಿಬಿರಗಳನ್ನು ಸಪ್ಟೆಂಬರ ತಿಂಗಳದಲ್ಲಿ ಅಧಿಕಾರಿಗಳು ರುಜುತ ಮಾಡಿ, ಕೆಲವು ಜಾತಿಮಾನಗಳನ್ನು ತೆಗೆಸುಕೊಂಡು ಹೋಗಿದ್ದರಿಂದ ಈ ಸಾಮಾನುಗಳಲ್ಲಿ ಕೆಲವನ್ನು, ಅವರು ೩—೪ ದಿವಸಗಳ ಹಿಂದೆ ಪರಾರಿಯವರಾಗಿ ತಿಳಿಸಿ ಬರುತ್ತಿದೆ. ಕೊಂಡವರನ್ನು ಕೊಂಡಾಡಬೇಳು!!

ಪೋಲೀಸರ ವಿಷಯುಳ್ಳ ಅಸಂತೋಷವನ್ನು ಹುಟ್ಟಿಸಲು ಪ್ರಯತ್ನ ಮಾಡಿದರೆಂಬ ಆರೋಪಕ್ಕಿಂದ ಇಳ್ಳಿಯ ಶ್ರೀ ಎಚ್. ಆರ್. ಪುರೋಹಿತ, ಎಂ. ಎ ಹಾಗು ಶ್ರೀ ಸುಗುಣೇಂದ್ರ ಕೆರೂರ ಇವರ ಮೇಲೆ ಕಮಿಸ್ಸನ್ನರಲ್ಲಿ ಜೋರಬಿದ್ದು, ವಿಚಾರಣೆಯು ತಾ|| ೨೮ ಕ್ಕೆ ನಡೆಯುವದಾಗಿ ತಿಳಿದು ಬರುತ್ತದೆ.

ಸ್ವಲ್ಪ ದಿನಗಳ ಹಿಂದೆ ವಿಜಾಪುರ ಜೇಲಿನಿಂದ ಬಿಡುಗಡೆ ಕೊಂಡಿ ಬಂದವರಾದ ಚಳವಳೀ ವಿಷಯ ಶ್ರೀಮತಿ ಪಾರ್ವತಿಬಾಯಿ ಗುಜ್ಜರವರಿಗೆ ತಾ|| ೧೭ ನೆಯ ದಿವಸ ಕಂಡೆಯಲ್ಲಿ ಇಳ್ಳಿಯ ಲಾಲಾಷ ಜೌತಿಸಲ್ಲಿ ಸದ್ಯದ ಸ್ಥಿತಿಯು ಏನೆಂದು ವಾಗಿ ಭಾಷಣ ಮಾಡಿದರು.

ಅಂಕೋಲಾ ತಾಲೂಕಿನಲ್ಲಿಗೆ ಖಾದೀ ಕೆಲಸ, ಅವರ್ಸಾ ಹಾಗು ಬೆಳ್ಕೆಯ ಈ ಜಿಲ್ಲೆಗಳಲ್ಲಿ ಅಗತ್ಯ ಕಾಂಗ್ರೆಸ್ ಪಂಚಾಯತ ಸಭೆಗಳನ್ನು ಮುಂಬಯಿ ಸರಕಾರದವರು ಶ್ರೀ. ಆ. ಅಸೋಂಡೆ ಮೇಟ ಕಾಯದೆಯು ಅನ್ವಯ ಕಾಯದೆಗೆ ವಿರುದ್ಧ ಮಾಡಿದ್ದಾರೆ,

ಗೋಕರ್ಣದ ರಥೋತ್ಸವದಲ್ಲಿ ಗೊಂದಲ

ಗೋಕರ್ಣದಲ್ಲಿರುವ ಮಹಾಶಿವರಾತ್ರಿಯ ಉತ್ಸವವು ಕೊನೆಯ ವರೆಗೆ ಯಥಾಸಾಂಗವಾಗಿ ಜರುಗದೆ, ಪೋಲೀಸರು ಗೊಂದಲಹಾಕಿದ ಮೂಲಕವಾಗಿ, ಶಾ॥ ೧೪ ನೆಯ ದಿವಸ ಒಮ್ಮಿಂದೊಮ್ಮೆ ಮುಕ್ತಾಯ ಹೊಂದಿತು. ರಥವನ್ನು ಎಳೆಯುವ ಕಾಲಕ್ಕೆ ಸ್ವಯಂಸೇವಕರು ಅದರ ಸುತ್ತಲೂ ತಮ್ಮ ಕಾವಲನ್ನು ರಚಿಸಿಕೊಂಡು ಸಾಗಿರುವಾಗ ಪೋಲೀಸರು ಅಲ್ಲಿಗೆ ಬಂದು, ಅವರ ಕೈಯೊಳಗಿನ ಲಂಗಿಗಳನ್ನು ತೆಸೆದುಕೊಂಡು ಎಲ್ಲವನ್ನು ಕೈದು ಮಾಡಿಕೊಂಡು ಹೋದರು. ಸ್ವಯಂಸೇವಕರನ್ನು ಕೈದು ಮಾಡಿಕೊಂಡ ಹೋದ ಕೂಡಲೆ ಉಳಿದ ಎಲ್ಲ ಸ್ವಯಂಸೇವಕರೂ ಹಾಗೂ ಅಲ್ಲಿ ಸೇರಿದ ಜನರು ಅಲ್ಲಿಂದ ಹೊಟ್ಟು ಹೋದರು. ಪರತಾಕವು ಅಚರಿಸಲ್ಪಟ್ಟಿತು. ಅಂಗಡಿಗಳೆಲ್ಲ ಮುಚ್ಚಿ ಹೋದವು. ರಥ ಎಳೆಯುವವರು ಅದನ್ನು ಅಲ್ಲಿಯೇ ಹಾದಿಯಲ್ಲಿ ಬಿಟ್ಟು ಹೊಂಟು ಹೋದರು. ಇಷ್ಟರಲ್ಲಿ ಪೋಲೀಸರು ಸ್ವಯಂಸೇವಕರನ್ನು ಒಂಧ ಮುಂಜಿ ಮಾಡಿದರು. ಆದುದರಿಂದ ಜನರು ರಥ ಎಳೆದುಕೊಂಡು ಹೋಗಲು ಒಪ್ಪಲಿಲ್ಲ. ಪೋಲೀಸರು ಇಷ್ಟಿಂದ ಹೊರಟು ಹೋಗದ ವಿನಾ ರಥವನ್ನೆಳೆಯುವದಿಲ್ಲವೆಂದು ಅವರು ಅನ್ನುತ್ತಿರುವರು.

ಲಾಹೋರದಲ್ಲಿ ಬಾಂಬು ಹಾರಿತು.

"ಅಸೋಸಿಯೇಟೆಡ್ ಪ್ರೆಸ್" ಕಛೇರಿಯ ಸೇವಕನಾದ ಮದನಸಿಂಗನಬ್ಬನು ಮೊನ್ನಿನ ದಿವಸ ತನ್ನ ಮನೆಗೆ ಹೋಗುತ್ತಿರುವಾಗ ಅವನಿಗೆ ಪೋಸ್ಟ ಆಫೀಸಿನ ಬಳಿಯಲ್ಲಿ ಒಂದು ಪದಾರ್ಥವು ಬಿದ್ದುಕೊಂಡಿದ್ದುದು ಕಂಡು ಬಂದು ಅವನು ಅದನ್ನು ತನ್ನ ಮನೆಗೆ ತೆಗೆದುಕೊಂಡು ಹೋದನು. ಊಟವಾದ ಒಳಿಕ ಅದನ್ನು ಪರೀಕ್ಷಿಸಿದನು. ಆಗ ಅದು ಒಮ್ಮಿಂದೊಮ್ಮೆ ಹುಡಿ ಆಗಿ ಅವನ ಬೆರಳುಗಳನ್ನು ಕತ್ತರಿಸಿ ಬಿಟ್ಟಿತು. ಪೋಲೀಸರು ಅಲ್ಲಿಗೆ ಬಂದು ಅವನ ಮನೆಯನ್ನು ಝಡ್ತಿ ಮಾಡಿದರು. ಅಷ್ಟೇನೂ ಹಾನಿಯಾದವುಗಳೇನೂ ಸಿಗಲಿಲ್ಲ. ಮದನಸಿಂಗನು ಈಗ ಮೇಯೋ ಹಾಸ್ಪಿಟಲ್ಲಿದ್ದಾನೆ. ಈ ಪ್ರಕಾರದ

ಇವ ಕಂಪನಿಗಳೂ ಈ ವರೆಗೂ ಕೊಡವಷ್ಟು ಲಾಭವನ್ನು ಈ ೩ ವರ್ಷಗಳವರಿಗೆ ಒಂದೇಸವನೆ ಹಂಚಿದೆ!

ಸಿವಿಗಲ್ಸ್

ಅಶ್ಯೂರನ್ಸ್ ಸೊಸಾಯಿಟಿ. ಲಿ. ಅಜಮೀರ.

ಈ ಸೊಸಾಯಿಟಿಯ ಆಸ್ತಿಯು ೫೫ ಲಕ್ಷ ರೂ. ಗಳಿಗಿಂತಲೂ ವಿಸ್ತಾರವಿದೆ

ಲಾಭಸ್.

ಏಜೆಂಟರಾಗಿ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೨ ನೇ ವರ್ಷವನ್ನು ಮುಗಿಸಿ ೨೩ ನೇ ವರ್ಷವನ್ನು ಕೊಟ್ಟು ಅತ್ಯಂತ ಹಿಂದು
ಲಾಭದ ಪಟಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೩೪ ನೇ ಮಾರ್ಚ ೩೧ ಗೆ	೧೯೩೫ ನೇ ಡಿಸೆಂಬರ ೩೧ ಗೆ	೧೯೩೬ ನೇ ಡಿಸೆಂಬರ ೩೧ ಗೆ
ಇದ್ದ ಆಯುಷ್ಯದ (ತತ್ಕಾಲಿನ ವಿಮೆಯುತ್ಕೃಷ್ಟ)	ಇದ್ದ ಆಯುಷ್ಯದ ವಿಮೆಯುತ್ಕೃಷ್ಟ	ಇದ್ದ ಆಯುಷ್ಯದ (ತತ್ಕಾಲಿನ ವಿಮೆಯುತ್ಕೃಷ್ಟ
ವರ್ಷವೊಂದಕ್ಕೆ ೧೨೨ ರೂ.	ವರ್ಷ ಸ್ಥೊಂದಕ್ಕೆ ೨೧೨ ರೂ	ವರ್ಷವೊಂದಕ್ಕೆ ೨೩೫ ರೂ
ವರ್ಷ.	ವಾರ್ಷಿಕ ಶಾಖೆಗಳು.	ಹೊಸ ಸದಸ್ಯರಾಗಿ.
೧೯೩೩	೬,೪೮,೬೭೨	೧೯,೩೫,೫೦೦
೧೯೩೪	೭,೧೧ ೧೫೪	೩೮,೦೧,೫೦೦
೧೯೩೫	೯,೬೫, ೦೧	೬೦,೦೦,೦೦೦

ಬಹು ಅಚ್ಚುಕಟ್ಟಾದ ಪದ್ಧತಿಯಿಂದ ನಡಿಗೆ ಹೊಂದುತ್ತಿರುವ ಈ ವಿಮೆ ಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರ ಮತ್ತು ಅತ್ಯಂತ ಸೋಪಯೋಗವಾದ ಗಳಿಕೆ ಇವುಗಳ ಪೂರ್ಣ ಲಾಭವನ್ನು ಹೊಂದಿರಿ.

ಜನರಲ್ ಏಜೆಂಟರು:— ಪ್ರಿ. ಜೆ. ಪರ್ವತಿಕರ ಮತ್ತು ಮಕ್ಕಳು.
ಜೋಪ ವಿಜಾಪುರ— ಎಸ್. ಆರ್. ಸರದೇಸಾಯಿ, ಮುಂಬೈ ಕಂ ೪.

ಲಕ್ಷಗಟ್ಟಿ ಮಕ್ಕಳ ಪ್ರಾಣವನ್ನು ಕಾಪಾಡಿದ
ವನಸ್ಪತಿಗಳ ಅದ್ಭುತ ಮಹಿಮೆ.

* ಬಾಲಾರ್ಕಮಧು. *



ಇದನ್ನು ಮಕ್ಕಳು ಆನಂದದಿಂದ ಸೇವಿಸುತ್ತಾರೆ. ಇದು ಸಿದ್ಧರಸವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಜಿಮಿಸುವ ಜಾಲಾ ಅನ್ನವೂ ಮೈಗೆಹತ್ತಿ, ಕರೀರದಲ್ಲಿ ಪೌಷ್ಟಿಕ ಸಗಣಿಯಾಗಿ ಗೊಬ್ಬು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ನಾಂಸ ಬೆಳೆದು ಮಕ್ಕಳಿಗೆ ಬಹು ಶಕ್ತಿಯೂ ದೇಹಧಾರ ಢ್ಯವೂ ಹೆಚ್ಚುವದು ಕೇವಲ ವೈದ್ಯ ಹೊಗಳಿಕೆಯೆಂದು ತಾ ತ್ಸಾರ ಮಾಡದೆ ಒಂದೇಒಂದು ಶೀಸೆ ತರಿಸಿಕೊಂಡಲ್ಲಿ ಇದರ ಅಪಾ ರ ಗುಣವು ತಾವಾಗಿ ತಿಳಿಯುವದು.

ಬೆಲೆ ಶೀಸೆ ೧ ಕ್ಕೆ ೦—೮—೦ ಟಪಾ. ಖ. ೦—೪—೦.

ಆರ್ಡರ ಬೆಂತೆಯುಳ್ಳ ಅಡ್ರಾಸ್ಸು ವೆಕಬಲಿನಲ್ಲಿ ಕಳುಹಿಸಿಕೊಡತಕ್ಕ ಅಡ್ರಾಸ್ಸು ಇಲ್ಲದ ಆರ್ಡರುಗಳನ್ನು ಗಮನಿಸುವದಿಲ್ಲ.

M. V. Prasadika Oushadhalaya, SHIMOGA.
Mysore State.

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರತ ನಗರದ ಶ್ರೀಮಂತ ಸಾಹುಕಾರ.	೧—೪—೦
೨	ಇಂದಿರೆ (ಸಚಿತ್ರ ಸಾ. ಸಾಮಂಜರಿ)	೨—೪—೦
೩	ನೀತಿಕತೆಗಳು ಭಾಗ ೧.	೧—೪—೦
೪	ಪತಿವಿಚರಣ ನಾಟಕ.	೦—೧೨—೦
೫	ಅಬ್ರಹಾಂಲಿಂಕನ್ ಜೀವಿತ್ರ.	೧—೮—೦
೬	ಮಾಧವಕರುಣಾ ವಿಲಾಸ.	೩—೧೨—೦
೭	ಲಕ್ಷ್ಮೀಬಾಯಿ ರಾಣಿಯ ಜೀವಿತ್ರ.	೨—೦—೦
೮	ಶೈವ ಸುಧಾರ್ಣವ (ಸಚಿತ್ರ)	೩—೮—೦

ಕಳಹಾಗಿಗೆ ಬರೆಯಿರಿ.

ಸ್ವಾಮಿ. ರಾ. ಕೆರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ದಾಲಗೃಹ ಚೂರ್ಣ
ಬಾ. ಕಿ. ೧—೪—೦

ಡಾ. ಬೈಲೂರ.

ಥಂಡಿ ಉರಿಯ ಗುಳಿಗೆಗಳು
ಬಾ. ಕಿ. ೦—೪—೦

ಇವರ ಔಷಧಗಳು

ಕಾಫ್ ಸಾಯಿರಪ್ :—ನೆಗಡಿ, ಗೊಬ್ಬಸ, ವೈಲಿ, ಹವೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟಿ ಹಾರುವಿಕೆ (ಡಬಾ), ಕೋಡಗಗೆಮ್ಮು, ಇವುಗಳಮೇಲೆ ಹೊಕಾರ್ಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿಮೋನಿಯಾ ಬೇನೆಯಮೇಲೆ ನಮ್ಮ ಕಾಫ್ ಸಾಯಿರಪ್ ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿಸಿರುತ್ತೇವೆ. ಈ ಕಾಫ್ ಸಾಯಿರಪ್ ವನ್ನು ಸಣ್ಣ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಅತಂಕವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕಿ. ಸಣ್ಣ ಬಾ. ೦-೬-೦ ದೊಡ್ಡ ಬಾ. ೦-೧೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳ ಬಹುದು.
೩ ರೂ. ಕಿಂತ ಹೆಚ್ಚಿಗೆ ಔಷಧಗಳನ್ನು ತಕ್ಕೊಳ್ಳುವವರಿಗೆ ೧೨ ಟಕ್ಕೆ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಪತ್ತೆ:— ಡಾ॥ ಹರೀ ಮಹಾದೇವ ಬೈಲೂರ. ದ. ಬೆಳಗಾವ.

ವಿಲಿಜವಿಪೆಟ್ ಎಜನ್ಸಿ.

ನಾವು ಶನವರಲೇಟ ಮೋಟರ ಕಂಪನ್ಸಿಯ ಬೆಳಗಾಂವ ಮೋಟರ ವರ್ಕ್ಸ ಟ್ರಾನ್ಸ್ಪೋರ್ಟ ಕಂಪನಿಯ ಹಾಗೂ ವಿಲಿಜ್ ವಿಪೆಟ್ ಕಂಪನಿಯ ಸಬ ಎಜಂಟರಿರುತ್ತೇವೆ ಈ ಗಾಡಿಗಳನ್ನು ತರಿಸಿಕೊಳ್ಳುವವರು ನಮ್ಮ ಕಡಿಯಿಂದಲೆ ತರಿಸಿಕೊಳ್ಳಬೇಕು. ಬಹಳ ಸೋವಿಯಾಗುವದು. ಬಾಗಲಕೋಟೆ ಜಿಲ್ಲೆಯ ಸುತ್ತುಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟರ ಮಾಲಕರ ಗೈಡಸೋವಿ ದೂರವಾಗಬೇಕೆಂದು ಒಂದು ಇಷ್ಟಿ ಪೈಸ್ಸಾ ಖರ್ಚು ಮಾಡಿ ತ್ರೀವೀಲ್ ನಮ್ಮ ಸರ್ವಿಸ ಬಾಗಲಕೋಟೆಯಿಂದಾ ವಿಜಾಪುರ ಇಲಕಲ್ಲ ನರಗುಂದ ಮುಂತಾದ ಸ್ಥಳಗಳಿಗೆ ಹೋಗುತದೆ.

ಪ್ರವಾಸಿಕರ ಗೈಡಸೋವಿದೂರಾಬೇಕೆಂದು. ತಾ. ೩೧-೩-೩೦ ನೇ ದಿವ್ಸ (ಪೌತ್ರ ಶುದ್ಧ-ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ.)

ಇಲಕಲ್ಲದಿಂದಾ ೯॥ಘಂಟೆಗೆ ಹೊರಟು ಹುನಗುಂದ, ಅಮಿನಗಡ, ಕಮತಗಿ, ಗುಳೇದಗಡ್ಡ, ಬದಾಮಿ, ಕ್ರೀ ಬನಶಂಕರಿದೇವಸ್ಥಾನ, ಹೊಳಆಗುಳ ಛಬಡಿ, ಜಾಲಿಹಾಳ, ಹೀರೇಹಾಳ, ಕೊಟಬಾಗಿ, ರೋಣ, ಅಬ್ಬಿಗೇರಿ, ನರೇಗಲ್ಲ, ಕೊಡುವಳ್ಳಿ, ನಾರಾಣಾಪುರ, ಮೂಗರ್ವಾಗಿ ಗದಿಗೆ ದಿವಸ ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ ಹೊರಟು ಸಂಜೆ ೫ ಘಂಟೆಗೆ ಇಲಕಲ್ಲಿಗೆ ಬಂದು ಮುಟ್ಟುತ್ತದೆ. ತರಾಸಿದ ವೇಳೆಗಿಂತಾ ೧೫ ಮಿನಿಟ ಮುಂಚಿತವಾಗಿ ಪ್ಯಾಸಿಂಜರರು ಸ್ಪ್ಯಾಂಡಿನ ಮೇಲೆ ಹಾಜರ ಇರಬೇಕ್ಕದ್ದು ಡ್ರಾಯವರನಕಡಿಯಿಂದಾ ಮೋಟರಿನಲ್ಲಿ ಸ್ಥಳವಿದ್ದಬಗ್ಗೆ ಖಾತ್ರಿಮಾಡಿಕೊಂಡು ಟಕೀಟು ತೆಗೆದು ಕೊಳ್ಳಬೇಕ್ಕದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರೀಪೆರಿ ವರ್ಕಶಾಪ್ ಇರುತ್ತದೆ ಮತ್ತು ಹೊಸದಾಗಿ ಎಲ್ಲ ಪ್ರಮುಖೇಯ ಗಾಡಿಗಳಿಗೆ ಬಾಡಿಗಳನ್ನು ತಯಾರಿಸಿ ಕೊಡುತ್ತೇವೆ.

ಎಸ್. ಜಿ. ಮೋಟರ ಸರ್ವೀಸ—
ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ವಿಲಿಜವಿಪೆಟ್ ಸೋಲ ಎಜಂಟ್ಸ ಅಂಡ ಬಾಡಿಬಿಲ್ಡರ್ಸ ಬಾಗಲಕೋಟೆ

THE POONA SCHOOL OF COMMERCE

Reopens on 16 th- June. Students coached for London Chamber of Commerce and other commercial examinations in banking, Accountancy Shorthand Type-writing etc. Apply for prospectus to:—

Secretary, Budkawar Chowk: Poona-city.

ಈ ವೈದ್ಯಖಾನೆಯ ಔಷಧಿಗಳಿಂದ ಅನೇಕ ಜನರಿಂದ ಬಹಳಷ್ಟು ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ.
ಮುದ್ರಕ ಪ್ರಕಾಶಕ ಅವರಿಂದ ಅತ್ಯಧಿಕ ಪ್ರಸಿದ್ಧಿಪಡೆದಿದೆ.

ರ. ನಂ. ಬಿ ೧೯೪೬೭ ವಾ. ಚಂ. ಅಂಚೇವೆಚ್ಚ ಸೇರಿ ೪ ರೂಪಾಯಿಗಳು ಮಾತ್ರ.

ಪ್ರತಿ ರವಿವಾರ ಪ ಕಟಿಸಲ್ಪಡುವದು.

ಧರ್ಮೋ ರಕ್ಷತಿ ರಕ್ಷಿತಃ । ಧರ್ಮದಾನಾಧಿಕಂ ಕ್ಷೇತ್ರಂ ॥ — ಶಾಸ್ತ್ರ

ಸಂಪಾದಕರು— ವೆಂಕಟೇಶ ಶೇಷರಾವ್ ಜಾಜಗಾರ್ ಕೆಗೂರ

ಪುಟ ೬ | ಬಾಗಲಕೋಟೆ ರವಿವಾರ ದಿನಾಂಕ ಫಾಲ್ಗುಣ ಶುದ್ಧ ೧೫ ಶಕ ೧೮೫೩ ಕಲಿ ೫೦-೪-೧೯೩೧ | Kannadiga Date 1—3—1931. | ೪೭

ದಿ. ಬಾಗಲಕೋಟ ಕೋ, ಆಪರೇಟಿವ್ಹ ಅರ್ಬನ್ ಬ್ಯಾಂಕ ಲಿ. ಬಾಗಲಕೋಟ

ಠೇವುದಾರರಿಗೆ ಅಖಂಡವಾದ ಭದ್ರತೆ.

ಸ್ವಲ್ಪೇ ಹೆಚ್ಚಿನ ಬಡ್ಡಿಯ ಆಶೆಗಾಗಿ ಅಪರಿಚಯದವರ ಕಡೆಗೆ ಠೇವು ಇಟ್ಟು ಗಂಟು ಬಡ್ಡಿಯನ್ನು ಕೂಡಿಯೇ ಕಳೆದುಕೊಳ್ಳಬೇಡಿ ೭. ಪ್ರತಿವರ್ಷವು ನಮ್ಮ ಬ್ಯಾಂಕವನ್ನು ಸರಕಾರಿ ಆಡಿಟರು ತಪಾಸ ಮಾಡುತ್ತಾರೆ. ಠೇವುದಾರರಿಗೆ ೧೦೦ ಕ್ಕೆ ೪ ರಂತೆ ಬಡ್ಡಿ ಕೊಡಲಾಗುವದೆಂದು ಹೆಮ ಪಂಚಲ್ಪಟ್ಟಿದೆ. ಇದಕ್ಕೆ ಇನ್ಶೂರೆನ್ಸ್ ಬೀಳುವದಿಲ್ಲ.

ಠೇವುಗಳ ಬಡ್ಡೀದರವು ಕೆಳಗಿನಂತಿರುತ್ತದೆ.

ಚಾಲತೀ ಠೇವು.	ನೂರಕ್ಕೆ ವರ್ಷಕ್ಕೆ	೩½
ಸೇವ್ವಿಂಗ್ಸ ಬ್ಯಾಂಕ ಠೇವು	"	೪ ರಂತೆ
ವರ್ಷದ ಮುದ್ದತ ಠೇವು	"	೬½ ರಂತೆ

ಹೆಚ್ಚಿನ ವಾಯ್ದೆದ ಠೇವಿನ ಮೇಲಿನ ಬಡ್ಡಿಯದರದ ಬಗ್ಗೆ ಕೆಳಗೆ ಸಹಿ ಮಾಡಿದವರ ಕಡೆಗೆ ಸಮಜಾಯಿಷಿನ ವಿಚಾರ ಮಾಡಬೇಕು.
ಹೊಸ ಠೇವ್ವಿಂಗ್ಸ ಬ್ಯಾಂಕ ಪೆಟ್ಟಿಗೆಗಳನ್ನು ಕೊಡುತ್ತೇವೆ. ಇದರ ಲಾಭವನ್ನು ಜನರು ತೆಗೆದುಕೊಳ್ಳುವರೆಂದು ಆಶಿಸುತ್ತೇವೆ.

ಬಾಗಲಕೋಟ. ತಾ|| ೨೨-೨-೧೯೩೧ | Sd/ D. R. Huddar ಸೆಕ್ರೇಟರಿ | Sd/ M. S. Mangalwedhekar ಜೇರಮನ್

ಕಿರ್ಲೋಸ್ಕರ ನೇಗಿಲಗಳು



ಇವುಗಳ ವೈಶಿಷ್ಟ್ಯವು

೧ ತಿರುಗುವ ಕಾಳವುಳ್ಳದ್ದು.
೨ ಬೆಲೆಯಲ್ಲಿ ವಿದೇಶೀ ರೆಂಟಿಗಿಂತ ಅಗ್ಗ.
೩ ಲಕ್ಷಾವಧಿಜನರು ಹೂಡಿ ಅನುಭವಹೊಂದಿದು ಇರುವ ಕಾರಣ ಈ ನೇಗಿಲುಗಳಲ್ಲಿ ಈ ಹಂಗಾಮಿನಲ್ಲಿ ರಕ್ತಿಪಿಲ್ಲದೆ ಮಾಗಡಿಯುಂಟು. ಸದ್ಯಕ್ಕೆ ಹಂಗಾಮವು ಪ್ರಾರಂಭವಾಗಿರುವದು. ಇವತ್ತೇ ಆರ್ಡರಕೊಟ್ಟು ತರಿಸಿಕೊಂಡಲ್ಲಿ ಲಾಭವುಂಟು.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ. ಜಿ. ಸಾತಾರಾ

ದಿ. ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ.

ಆರ್ಯನ್ ನೇಷನಲ್ ಇಂಡಿಯನ್ ಕಂಪನೀಜ ಆ್ಯಕ್ಟ ಪ್ರಕಾರ ರಜಿಷ್ಟರ ಮಾಡಲ್ಪಟ್ಟಿದೆ.

ಬ್ಯಾಂಕಿನ ಠೇವಿನ ದರವು ಕೆಳಗೆ ತೋರಿಸಿದ ಪ್ರಕಾರ ಇರುತ್ತದೆ.

ಚಾಲತೀ ಠೇವಿಗೆ	ನೂರಕ್ಕೆ	ವರ್ಷಕ್ಕೆ	೩½ ರೂ
ಸೇವ್ವಿಂಗ್ಸ ಬ್ಯಾಂಕ	"	"	೪ ರೂ.
ಮುದ್ದತೀ ಠೇವಿಗೆ	"	"	೬½ ರೂ.

ಇದಲ್ಲದೆ ೩-೬ ಮತ್ತು ೯ ತಿಂಗಳ ಠೇವು ಇಡುವದಾದಲ್ಲಿ ಸಮಜಾಯಿಷಿಯಿಂದು ದರವನ್ನು ಗೊತ್ತುಮಾಡಿಕೊಳ್ಳಬಹುದು.

ಮತ್ತು ಬ್ಯಾಂಕಿಗೆ ಸಮ್ಮತವಾದ ಅಂದರೆ ಬೆಳ್ಳಿ, ಧಂಗಾಸ ಕಾಳುಕಡಿ ಸರಕಾರೀ ತಾಗದ ಮತ್ತು ವಿಮೆಯ ಪಾಲಿಸಿಗಳಮೇಲೆ ಸಹಾ ಸಾಲವು ದೊರೆಯುವದು.

ಇನ್ನೆಂದು ಹೆಚ್ಚಿನ ಸವಲತ್ತು! ವರ್ಷಕ್ಕದು ತಮ್ಮ ಮೂಲವನ್ನು ದ್ವಿ. ಪಿ. ದ್ವಾರಾ ತರಿಸುವದಲಾಗಿ ನಮ್ಮ ಬ್ಯಾಂಕಿನ ಮುಖಾಂತರ ತರಿಸಿಕೊಂಡರೆ ನೂರಕ್ಕೆ ೧೫ ರೀತಿಯಂತೆ ಉಳಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿ ಕೆಳಗೆ ಸಹಿಮಾಡಿದವರ ಕಡೆಯಿಂದ ತಿಳಿದುಕೊಳ್ಳಬೇಕು.

V R Tervi
Managing Director

ಶವರಲೇಟ್ ಗಾಡಿಗಳ ಎಜನ್ಸಿ

ನಾವು ಹೊಸದಾಗಿ ಶವರಲೇಟ ಗಾಡಿಗಳ ಎಜನ್ಸಿಯನ್ನು ಮಾಡಿಕೊಂಡಿರುತ್ತೇವೆ ಕೊಳ್ಳುವವರು ನಮ್ಮ ಕಡೆಯಿಂದಲೇ ತರಿಸಿಕೊಳ್ಳಬೇಕು. ಅಂದರೆ ಬಹಳ ಸೋವಿಯಾಗುವದು,

ವಿಜಯಪುರ ಜಿಲ್ಲೆಯಲ್ಲಿಯು ಮತ್ತು ಸುತ್ತು ಮುತ್ತಲಿನ ಜಾಸಗಿ ವ ಸರ್ವೀಸ
ಮೋಟಾರ ಮಾಲಕರ ಗೈರಸೋಯ ದೂರವಾಗಬೇಕೆಂದು
ಆರ್. ಜಿ. ಚವ್ಹಾಣ ಎಂಡ ಸನ, ಬೆಳಗಾವ. ಇವರು ಮ್ಮ
ಜನರಲ ಮೋಟಾರ ಅ ಕ್ಸೆಸರಿ ಸ್ಟೋರ್ಸ ಶಾಖೆಯನ್ನು
ಶಾ॥ ೧೦ ಸೆಪ್ಟೆಂಬರ ೧೯೨೬ನೇ ಇಸ್ವಿಯಿಂದ ಬಾಗಲಕೋಟೆಯಲ್ಲಿ

ಸುರು ಮಾಡಿರುವರು.

ನಮ್ಮಲ್ಲಿ ಎಲ್ಲ ತರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋರ್ಡ, ಜಿ. ಎಂ. ಸಿ, ಓವ್ಹರಲೆಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟೂಬ್ಸ, ಗ್ರೀಸ, ಪೆಟ್ರೋಲ ಆಯಿಲ್, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು ನಮ್ಮಲ್ಲಿ ಶೇಕಂಡ ಹ್ಯಾಂಡ ಡಾಜ್ ಶೇವ್ರರೋಲೇಟ ಮತ್ತು ಇಂಟರ ನ್ಯಾಸನಲ್ ಗಾಡಿಗಳು ಜಾಸ್ತಿಯಾಗಿ ಇರುವವು. ಯೋಗ್ಯ ದರದಿಂದ ಮಾರಲಿಕ್ಕೆ ಶಿಗತ್ತವೆ. ಜಾಲಖಃ— ವಾಯ್. ಜಿ ಚವ್ಹಾಣ.

ನಮ್ಮಲ್ಲಿ ಟಾಯರ್ಸ ಮತ್ತು ಟ್ಯೂಬ್ಸ, ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವಲ್ಕನಾಯಿಝಿಂಗ ಮಾಡಿ ಕೊಡುವೆವು
ಬಾಗಲಕೋಟೆ—ಬೆಳಗಾವಿ ಬಾಗಲಕೋಟೆ ಇಳಕಲ್ಲ, ಸರ್ವೀಸ ಎಂಜಿನಿಯರನಡವಿಡಿ.

ಶುಲಭಕ್ರಯ! **ಡಾಕ್ಟರ ಜಿ ಬೀ. ಯವರ ಸುಗಂಧ ನಸ್ಯದಪುಡಿ.** ಶುಲಭಕ್ರಯ!!

ಪ್ರಸಿದ್ಧವಾದ ಈ ಸುಗಂಧ ನಸ್ಯಪುಡಿ ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ತಂತಗಳಾಗಿ, ಯೋಗ್ಯತಾಪತ್ರಗಳನ್ನ ಕೊಟ್ಟಿರುವರು ಪ್ರಸಿದವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸ ಜಂಟಿ ತಲೆ ನೋವು ತಲೆಯಲ್ಲಿನ ಝೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸಮವ್ಯಾಧಿಗಳು, ಜಲದೋಷ, ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ತಂದರಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚುಮಾಡುತ್ತದೆ. ಮೂರ ಬೊಟ್ಟು ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಮಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆಯಾಗಿ ಕಳಿಸಿಸಬಹುದು. ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ ವ್ಹಿ. ಪಿ. ೪ ಆಣೆ. ಡಜನ್ ೧ ರು ಕ್ರಯ ರೂ ೨—೪—೦ ವ್ಹಿ.ಪಿ ಚಾರ್ಜು ೪ ಆಣೆ.

ವಿಳಾಸಃ —ಗುರುಬಸವ ಅಂಡ್ ಕಂಪೆನಿ,ಲಿಮಿಟೆಡ್ ಪೊ ಬಾ ಬಾಗಾ ಪಾರ್ಕಟೌನ ಮದರಾಸು.

ಪೆಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷದಿಗಳನು ಕೊಡುವ —

ಕ್ರಮುವು ಇನಾಂ!!! ಅ. ಹಾಸಲು ಇಲ್ಲದೆ

ಸರ್ವಸ್ವ ಉಚಿತವಾಗಿ ಕೊಡಲ್ಪಡುವ ಗ್ರಂ

ವೈದ್ಯವಿದ್ಯೆ

ಯೆಂಬ ಆರೋಗ್ಯ ಮಾರ್ಗದರ್ಶನ. ಅನೇಕ ರಹಸ್ಯವಾದ ವಿಷಯಗಳಿವೆ.

ವಿಜಂಟರುಃ—ಜಂಬುಲಿಂಗಪ್ಪ ಜಾಲವಾದಿ.
ಸ್ಟೇಶನಸರ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇತನಜಿ,
೧೯೪, ಜೀತಾಬಜಾರ್, ಮುದರಾಸು

ನೋಡಿದರೆ ಬಿಡದಿರುವ ಕಾದಂಬರಿಗಳು.

೧	ಮಹಾತ್ಮಾ ತುಲಸೀದಾಸ	೧-೮-೦
೨	ಜಲಂಧರ ನಾಟಕ	೧-೧-೦
೩	ವಡಗಾವದ ವಿಜಯ	೧-೪-೦
೪	ಅಂಜಿಕೆ	೧-೪-೦
೫	ಸೌಭಾಗ್ಯ ತಿಲಕ	೧-೦-೦
೬	ನರವೀರ ಕಾತೀನು	೧-೪-೦
೭	ಭಗವಾದಾಸ	೧-೦-೦
೮	ಗ್ರಾಸಲೀಲೆ	೦-೧೨-೦
೯	ಕಂಕಣಾಜೋರ	೧-೪-೦
೧೦	ಭಯಂಕರ ಕೊಲೆ	೦-೧೨-೦
೧೧	ಇಂದುಮುಖಿ	೦-೧೨-೦
೧೨	ಸದ್ಗುಣಿ ತಮಲಾ	೧-೦-೦

ಇನ್ನೂ ನೂರಾರು ಬಗೆಯ ಪುಸ್ತಕಗಳು ಸಮ್ಮಲ್ಲಿಸಿಗುವವು. ಕ್ಯಾಟಲಾಗಿಗೆ ಬರೆಯಿರಿ. ಬುಕ್‌ಸೆಲ್ಲರಿಗೆ ಧಾರಾಳವಾದ ಕಮಿಶನ್

ವಿಳಾಸಃ— ಭಿ. ಪೆ. ಕಾಳೆ
ಪೋ॥ಅಳಂದವನ, (ಜಿ. ಧಾರವಾ

ಕ ನ್ನ ಡಿ ಗ.

ಕನ್ನಡಿಗ ಫಾಲ್ಗುಣ ಶುದ್ಧ ೧೨ ಶಕೆ ೧೮೪೫

ತನ್ನ ಮನಸಿನ ಮೋಹಮಾಡಿ ಕಟ್ಟುವೆನಂತನು
ನಿನ್ನ ದಿಸನವ ಮಾಡಿದಂಥ ಮುಕ್ಯಳದೊಮ್ಮೆ
ಕಿಸ್ನಿದಾದರು ಚನ್ನ ಮೋಹಬಸ್ತಿಯನೊಂದು
ಚನ್ನಯಾಸಾಶದಲ್ಲಿ ।

ಲೇಖನ ಸ್ವಾತಂತ್ರ್ಯಕ್ಕೆ ಕೊಡಲಿಹಾಕುವ

ಕರಾಳ ಶಾಸನವಾದ

ಪ್ರೆಸ್ ಆರ್ಡಿನನ್ಸ

ಜೀವಿಸಿರುವಷ್ಟು ಕಾಲ
ನಾವು
ಅದರ ನಿಷೇಧಾರ್ಥವಾಗಿ ;

ಅಗ್ರಲೇಖ

ಬರೆಯುವದೇ ಇಲ್ಲ;

ವೈ. ವಾಸುದೇವಾಚಾರ್ಯರ ಗುಣಗೌರವ

ಬೆಂಗಳೂರಿ "ಇಂಟರಮೀಡಿಯೇಟ್ ಕಾಲೇಜ್" ದ ಕರ್ನಾಟಕ ಸಂಘದ ಗಣನೆಯ ವಾರ್ಷಿಕೋತ್ಸವದ ಸಮಾರಂಭದಲ್ಲಿ ವೈ. ವಾ ಕೆರೂರ ವಾಸುದೇವಾಚಾರ್ಯರು ಹೊಗಳು ಶಂಕರವಿಗಳು ಇವರ ಚಿತ್ರಪಟ ಅನಾವರಣ ಸಮಾರಂಭದ ಶ್ರೀ. ಬಸವನಾಳರ ಕಸ್ತೂರಿ ಸಾಂಗವಾಯಿತು. ಆ ಸಮಯದಲ್ಲಿ ಶ್ರೀ ಬಸವನಾಳರು ವೈ. ವಾ ಕೆರೂರ ವಾಸುದೇವಾಚಾರ್ಯರ-ನಾಹಿತ್ಯ ಸೇವೆಯನ್ನು ಕುರಿತು ಕೆಳಗಿನಂತೆ ಭಾಷಣ ಮಾಡಿದರು.

ಕೆರೂರ ವಾಸುದೇವಾಚಾರ್ಯರೂ ಶಾಂತಕವಿಗಳ ಕಾಲದಲ್ಲಿಯೇ ಇದ್ದವರು ಇವರು ಬಾಗಲಕೋಟೆಯವರು. ಆಗ್ಲ ಭಾಷೆಯನ್ನು ಬಲ್ಲವರು ವಕೀಲಿಯ ಉದ್ಯೋಗದಲ್ಲಿದ್ದರು. ಆದು ಅವರಿಗೆ ಅಷ್ಟೊಂದು ರುಚಿಸದ್ದರಿಂದ ಅದನ್ನು ಬಿಟ್ಟು ಸಾಹಿತ್ಯದ ಕಡೆಗೆ ಒಲೆದರು. ಮೊದಲು ಹುಬ್ಬಳ್ಳಿಯಲ್ಲಿ ಹೊರಡುತ್ತಿದ್ದ ಜಯಕರ್ನಾಟಕದ ಆಕಾರದ ಸಚಿತ್ರ ಭಾರತ ಎಂಬ ಮಾಸ ಪತ್ರಿಕೆಯ ಸಂಪಾದಕರಾಗಿದ್ದರು. ಕೊನೆಗೆ ಧಾರವಾಡದಲ್ಲಿ ಪ್ರಕಟವಾಗುತ್ತಿದ್ದ "ಶುಭೋದಯ" ಎಂಬ ವಾರ ಪತ್ರಿಕೆಯ ಸಂಪಾದಕರಾಗಿದ್ದರು. ಸಂಪಾದಕೀಯ ಟಿಪ್ಪಣಿ ಗಳನ್ನು ಬರೆಯುವದರಲ್ಲಿ ಪ್ರವೀಣರಾಗಿದ್ದರು. ತಾತ್ಕಾಲಿಕ ವಿಷಯಗಳ ವಿಮರ್ಶೆ ಮಾಡುವದರಲ್ಲಿ ಚತುರರಾಗಿದ್ದರು ಇವರು ಬಲ್ಲಿದರಾದ ಕಾದಂಬರೀಕಾರರಾಗಿದ್ದರು. ಇವರು ರಚಿಸಿದ 'ಇಂದಿರಾ' ಎಂಬುದು ಸುಂದರವಾದ ವೈಸೂರು ಪ್ರಾಂತದ ಚಿತ್ರವೇ ಆಗಿದೆ. ಇವರು ಬರೆದ 'ಯಾದವಾಕಾರಾಜ' ಎಂಬ ನೂತನ ಮಾದರಿಯ ಗ್ರಂಥವು, ವೈಸೂರು ಅರಸರ ಪೂರ್ವಜರ ಇತಿಹಾಸವನ್ನೊಳಗೊಂಡ ಕಾದಂಬರಿಯಾಗಿದೆ. ಕನ್ನಡದಲ್ಲಿ ಸ್ವತಂತ್ರವಾಗಿ ರಚಿತವಾದ ಕಾದಂಬರಿಗಳಲ್ಲಿ ಇಂತಹ ಮನೋಹರವಾದ ಗ್ರಂಥವು ಇನ್ನೊಂದಿಲ್ಲ. ವಾಸುದೇವಾಚಾರ್ಯರು ಕೆಲವು ಭಾಷಾಂತರಕಾರರಾಗಿದ್ದರು. ಶೆಕ್ಸ್‌ಪಿಯರನ ಕೆಲವು ನಾಟಕಗಳನ್ನು ಕನ್ನಡಕ್ಕೆ ಪರಿವರ್ತಿಸಿದುವರು. ಗೋಲ್ಡಸ್ಮಿತ್ ರ 'ವಿಕ್ಷಿ ಸ್ಮೂವ್‌ಡ್ ಟು ಕೊಂಕ್ಲ' ಎಂಬುದರ ಭಾಷಾಂತರವನ್ನೂ ಮಾಡಿರುತ್ತಾರೆ. "ವ್ಯಸಂತ ಆಯಿನೀ ಸ್ವಪ್ನ ಚಮತ್ಕಾರ" "ಸುರಕ ನಗರದ ಶ್ರೀಷ್ಠಿ" ಇವು ಪ್ರಸಿದ್ಧವಾಗಿವೆ. ಇವು ಗನ್ನ ಅಕ್ಷರಶಃ ಕನಡಕ್ಕೆ ಭಾಷಾಂತರಿಸದೆ ಕನ್ನಡಿಗರಿಗೆ ರುಚಿಸ ವಂತೆ ಕರ್ನಾಟಕ ಪರಿಸ್ಥಿತಿಗೆ ಒಪ್ಪವಂತೆ ಸನ್ನಿವೇಶಗಳನ್ನು ಏರ್ಪಡಿಸಿ ಪಾತ್ರಗಳನ್ನು ಒದಲಿಸಿ ರೂಪಾಂತರಿಸಿರುವದು ಅವರಿಂದಲೆ ಓದುವಂತೆ ಇವು ಭಾಷಾಂತರಗಳಂತೂ ಹೋದೆ ಸ್ವತಂತ್ರ ಗ್ರಂಥಗಳೆಂದು ತಿಳಿಯುವಷ್ಟು ಕೌಶಲ್ಯತೆ ಚಿತ್ರಣವನ್ನೂ ಇವರು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಭಾಷಾಂತರಗಳೂ ಕೆಲವು ಸ್ವತಂತ್ರವಾಗಿ ರಚಿಸಿದವುಗಳೂ ಆಗಿರುತ್ತವೆ. ಇವರು ತಕ್ಕ ಮಟ್ಟಿಗೆ ಒಳ್ಳೆಯ ಕವಿಗಳೂ ಆಗಿದ್ದರು. ಇವರ ಗ್ರಂಥಗಳಲ್ಲಿ ಅಲ್ಲಲ್ಲಿ ಹಾಕಿದ ಹಾಡುಗಳೂ ಪದ್ಯಗಳೂ ಬಹು ಸರಸವಾಗಿವೆ, ಅವುಗಳಲ್ಲಿ ಎಷ್ಟೋ ಉತ್ತಮ ಕನ್ನಡಿಗರ ಬಾಯಲ್ಲಿ ಇವೆ. ಆಗ್ಲ ಕವಿಗಳ ಕೆಲವು ಕವನಗಳನ್ನು ಇವರು ಕನ್ನಡದಲ್ಲಿ ಭಾಷಾಂತರಿಸಿರುವರು. ಟೆನಿಸನ್ ಕವಿಯ 'ದಿ ದೆರ್ ವೇಡ್' ಎಂಬುವದರ ಕನ್ನಡ ಅನುವಾದವು ಬಹು ಮನೋಹರವಾಗಿದೆ. ವಾಸುದೇವಾಚಾರ್ಯರ ಗದ್ಯ ಶೈಲಿಯು ಸರಳವಾಗಿದ್ದು ಅದುಳ್ಳಿ ಸೊಗಸು, ಇಂಪು, ಸದಾ ಸೂಸುತ್ತಲಿರುವದು. ವಿಷಯಕ್ಕೆ ತಕ್ಕಂತೆ ಬೇಕಾದಾಗ ಗಂಭೀರವಾಗುವ ಬೇಕಾದಾಗ ಸೌಮ್ಯವಾಗುವ ಅಪೂರ್ವ ಶಕ್ತಿಯು ಇವರ ಭಾಷೆಯಲ್ಲಿ ತುಂಬಿ ಬರುವದು. ಒಟ್ಟಿನ ಮೇಲೆ ಸಾಹಿತ್ಯದ ಪ್ರತಿಯೊಂದು ಶಾಖದಲ್ಲಿಯೂ ಇವರು ಗಣ್ಯರಾದ ಲೇಖಕರೇ ಆಗಿದ್ದರಿಂದ ಇವರು ಕನ್ನಡ ಸಾಹಿತ್ಯಕ್ಕೆ ಮಾಡಿದ ಸೇವೆಯು ಅಪೂರ್ವವಾದದ್ದು. ಕನ್ನಡಿಗರಿಗೆ ಮಾಡಿದ ಉಪಕಾರವು ಅತ್ಯಂತವಾದದ್ದು ಎಂದು ಸ್ಮರಿಸಬಹುದು. ಅಂತು ಕೆರೂರ ವಾಸುದೇವಾಚಾರ್ಯರು ಪ್ರಭುಲ್ಲವಾದ ಕಲ್ಪನಾ ಶಕ್ತಿಯಿಂದಲೂ, ಹೋಹೋಪಾದಿಯಾದ ಭಾಷಾ ಶೈಲಿಯಿಂದಲೂ, ವಿನೋದ ಪರವಾದ ಸ್ವಭಾವದಿಂದಲೂ, ಶ್ರೇಷ್ಠ ಗ್ರಂಥಕಾರರೆಂದೆನಿಸಿಕೊಳ್ಳುವ ಯೋಗ್ಯತೆಯುಳ್ಳವರಾಗಿದ್ದರೆನ್ನಬಹುದು.

"ಕನ್ನಡಿಗನಿಗೆ ರಜೆ"

ಹೊಸ್ಕೇರಿ ಪೇಟೆಯ ಮೋಹವಾಗಿ ಮುಖ್ಯ ಶಾಲೆಯುಳ್ಳಿ ರಜೆಯಿರುವದರಿಂದ "ಕನ್ನಡಿಗ" ನು ಮುಂದಿನವಾರ ಹೊರಡುವದಿಲ್ಲ.

ಒಪ್ಪಂದವು ಬಗೆಹರಿಯಲಿಲ್ಲ?

ಮಹಾತ್ಮರಿಗೂ ವ್ಹಾಯಿಸರಾಯರಿಗೂ ಮತಭೇದ!

ಗವ್ಹರ್ನರರ ರಾಜೀನಾಮೆಯು ಬೆದರಿಕೆ!!

(ಶಂತಿಯು ವಾರ್ತೆ ತಾ॥ ೨೮)

ನಿನ್ನೆ ದಿವಸ ಮಹಾತ್ಮಾ ಗಾಂಧಿಯವರು ವ್ಹಾಯಿಸರಾಯರನ್ನು ಕಂಡುಕೊಂಡು ಅವರೊಡನೆ ೩॥ ಗಂಟೆಗಳ ವರೆಗೆ ಚರ್ಚೆ ಮಾಡಿದರು. ಚರ್ಚೆಯ ಫಲಿತಾಂಶವೆಂದರೆ— ಇಪ್ಪತ್ತಕ್ಕಿಯೂ ಬಹಳೇ ಮತಭೇದವು ತೋರಿಬಂತು. ಮಹಾತ್ಮರ ಯಾವತ್ತು ಕರಾರುಗಳಿಗೆ ವ್ಹಾಯಿಸರಾಯರು ಒಪ್ಪಿಕೊಳ್ಳಲಿಲ್ಲ. ಅವರು ತಮ್ಮ ಕರಾರುಗಳನ್ನು ಮಹಾತ್ಮರ ಮುಂದೆ ಇಟ್ಟರು. ಆ ಕರಾರುಗಳು ಇನ್ನೂ ಇನ್ನೂ ಮುಂದೆ ಕೂಡಿಕೆ ಕೈದ್ದಾಗಿರುವ ಬಂಡೀಗಾಲಿಯು ಪರಿಷತ್ತಿನ ಕಾರ್ಯಕಾರಿಣಿಸಭೆಗಳಿಗೆ ಸಂಬಂಧಿಸಿದವುಗಳಾಗಿವೆ. ಇಬ್ಬರಲ್ಲಿಯೂ ಉಂಟಾದ ಮತಭೇದದ ವಿಷಯವಾಗಿ ಹೀಗೆ ತಿಳಿಯುತ್ತದೆ. ಪೋಲೀಸ ಅತ್ಯಾಚಾರ, ಪಿಕೆಟಿಂಗ್ ಉಪ್ಪಿನ ಕಾಯಿದೆ ಇಂಗ ಈ ಸಂಬಂಧವಾಗಿ ಮತಭೇದವುಂಟಾಯಿತು. ಪೋಲೀಸ ಅತ್ಯಾಚಾರ ಸಂಬಂಧವಾಗಿ ಸರಕಾರಿ ರೀತಿಯಿಂದ ವಿಚಾರಣೆ ನಡಿಸುವದಲ್ಲಿ ಬರುವದಾಗಿ ವ್ಹಾಯಿಸರಾಯರು ಹೇಳಿದರು, ಮಹಾತ್ಮಾ ಗಾಂಧಿಯವರು ಅವಕ್ಕೆ ಒಪ್ಪಿಕೊಳ್ಳಲಿಲ್ಲ ಇಬ್ಬರು ಗವ್ಹರ್ನರರು ರಾಜೀನಾಮೆ ಕೊಡುತ್ತೇವೆಂಬುದಾಗಿ ಹೇಳಿರುವರಾಗಿ ತಿಳಿಯುತ್ತದೆ. ಮಹಾತ್ಮಾ ಗಾಂಧಿ ಹಾಗು ವ್ಹಾಯಿಸರಾಯರು ಇವರ ನಡುವೆ ಇನ್ನು ಮುಂದೆ ಚರ್ಚೆಯಾಗಲಿಕ್ಕಿಲ್ಲ. ಮಹಾತ್ಮಾ ಗಾಂಧಿಯವರು ತಾವೇ ಸ್ವತಃ ವ್ಹಾಯಿಸರಾಯರಲ್ಲಿಗೆ ಹೋಗಿ ಕಾಂಗ್ರೆಸದ ಉದ್ದೇಶವನ್ನು ಅವರ ಕೈಯಲ್ಲಿ ಕೊಟ್ಟು ಬರಬಹುದು.

ವ್ಹಾಯಿಸರಾಯರ ಕಾರ್ಯಕಾರಿ ಮಂಡಳದವರೂ ಹಾಗು ವರ್ಕಿಂಗ ಕಮೀಟಿಯವರೂ ನಿನ್ನೆ ದಿವಸ ಸಂಜೆಯಲ್ಲಿ ತಮ್ಮ ತಮ್ಮ ಸಭೆಗಳನ್ನು ಕೂಡಿಸಿದ್ದರು. ವರ್ಕಿಂಗ ಕಮೀಟಿಯವರು ಈ ಸಂಬಂಧವಾಗಿ ಚರ್ಚೆಮಾಡಿ ಸಭೆಯನ್ನು ಇಂದು ದಿವಸ ಮುಂಜಾನೆಗೆ ಮುಂದರಿಸಿದರು. ಮುಂಜಾನೆ ಕೂಡಿದ ಸಭೆಯಲ್ಲಿ ವ್ಹಾಯಿಸರಾಯರು ಹಾಕಿದ ಕರಾರುಗಳ ಸಂಬಂಧವಾಗಿ ಚರ್ಚೆಯಾಯಿತು. ವ್ಹಾಯಿಸರಾಯರ ಕರಾರುಗಳು ಯಾರಿಗೂ ಸಮ್ಮತವಾಗಲಿಲ್ಲ. ಒಪ್ಪಂದವು ಬೇಗನೆ ಮುರಿಯುವದೆಂದೂ ಪರಿಸ್ಥಿತಿಯು ಅಷ್ಟೇನೂ ಆಶಾಜನಕವಿಲ್ಲವೆಂದೂ ಕೆಲಕೆಲವರು ಅಭಿಪ್ರಾಯಪಟ್ಟರು. ಏನೊಂದೂ ನಿರ್ಣಯವಾಗದೆ ಸಭೆಯು ಸಂಜೆಗೆ ಮುಂದುವರಿಸಲ್ಪಟ್ಟಿತು. ಸಂಜೆಗೆ ಕೂಡುವ ಸಭೆಯಲ್ಲಿ ಮತ್ತೆ ಚರ್ಚೆಯಾಗಿ ನಿಶ್ಚಿತವಾದ ಅಭಿಪ್ರಾಯವು ಹೊರಬೀಳುವದು.

ವಿಜಾಪುರದಲ್ಲಿ
ಶ್ರೀ ಜೋಶಿಯವರ ಭಾಷಣ
(ಶಂತಿಯುವಾರ್ತೆ ವಿಶೇಷ ತಾ॥ ೨೮)

ತಾ॥೨೬ ನೆಯ ಇವತ್ತ ಕಂಚಿಗೆ ಕೂಡಿದ ಸಾರ್ವಜನಿಕ ಸಭೆಯಲ್ಲಿ ಬೆಳಗಾವಿಯ ಶ್ರೀ. ಜೋಶಿ ನಾರಾಯಣರಾಯರೂ, ಶ್ರೀ. ದಾತಾರ ಬಲವಂತರಾಯರೂ ಪದ್ಮದ ಸ್ಥಿತಿಯ ಸಂಬಂಧವಾಗಿ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ, ರಾಜಕೀಯ ಜಾಗಲಂಚನ್ನು ಸಾರ್ವಂಶವಾಗಿ ವಿವೇಚಿಸಿ, ಇತ್ತಾರ್ಥವು ಕೈಗೂಡುವವರೆಗೂ ಹೋರಾಡಲು ಸಿದ್ಧರಾಗಿರಲು ಜನರಿಗೆ ಕೇಳಿಕೊಂಡರು.

ವಿಜಾಪುರ ಜಿಲ್ಲೆಯ
ರಾ. ಕೈದಿಗಳ ಪರಿಷತ್ತು
ಕೈದಿಗಳ ವರ್ಗೀಕರಣಕ್ಕೆ ವಿರೋಧ.
(ಶಂತಿಯ ವಾರ್ತೆ. ವಿಜಾಪುರ, ತಾ ೨೮)

ವಿಜಾಪುರ ಜಿಲ್ಲೆಯ ರಾಜಕೀಯ ಕೈದಿಗಳ ಪರಿಷತ್ತು ತಾ॥ ೨೬ ನೇ ದಿನ ಜೋಶಿಯವರ ಕಾಂಗ್ರೆಸ್ ಮುಖಂಡರಾದ ಶ್ರೀ. ಜೋಶಿ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜೇಲಿನಲ್ಲಿಯು ಸ್ವಸ್ಥರಾಗಿ ನಡೆಯುವಂತೆ ಕೈದಿಗಳಿಗೆ ಹೇಳಿದರು. ಸ್ವಾತಂತ್ರ್ಯ ಸಮರಂಗಳಲ್ಲಿ ಧುಮುಕಿ ಕಷ್ಟ ನಷ್ಟಗಳನ್ನು ಸಹಿಸಲಿಕ್ಕೆ ಸಿದ್ಧರಾಗಿ ಮುಂದೆ ಬರಲು ಪ್ರತಿನಿಧಿಗಳಿಗೆ ಕೇಳಿಕೊಂಡರು. ರಾಜಕೀಯ ಕೈದಿಗಳ ಸಂಬಂಧವಾಗಿ ಸೆರೆಮನೆ ಅಧಿಕಾರಿಗಳ ವರ್ತನೆ ಪೋಲೀಸ ಅತ್ಯಾಚಾರ, ಮ್ಯಾಜಿಸ್ಟ್ರೇಟರ ಅನ್ಯಾಯದ ಪರಮಾವಧಿ ಇವುಗಳ ನಿಷೇಧಾರ್ಥವಾಗಿ ಸಭೆಯಲ್ಲಿ ಎಷ್ಟೋ ಗೊತ್ತುವಳಿಗಳು ಸ್ವೀಕೃತವಾದವು. ಅವುಗಳಲ್ಲಿ ಮುಖ್ಯವಾದ ವಿಷಯಗಳೆಂದರೆ— ಜೇಲ ಅಧಿಕಾರಿಗಳು ರಾಜಕೀಯ ಕೈದಿಗಳೊಡನೆ ನೀಡು ಕೀಳಾಗಿ ನಡೆಯುವ ಬುದ್ಧಿಯಿಂದಲೂ ಹಾಗು ಕಠೋರತನದಿಂದಲೂ ವರ್ತಿಸುತ್ತಿರುವದರಿಂದ ಅವರ ವರ್ತನೆಯನ್ನು ಈ ಸಭೆಯು ನಿಷೇಧಿಸುತ್ತಿದೆ ರಾಜಕೀಯ ಕೈದಿಗಳ ವರ್ಗೀಕರಣವು ವಸ್ತುಸ್ಥಿತಿಯಿಂದ ಮಾಡಲ್ಪಡುತ್ತಿರುವ ಕಾರಣ ಈ ಸಭೆಯು ಅದನ್ನು ನಿಷೇಧಿಸುವ ಹಾಗು ವರ್ಗೀಕರಣತನ್ನು ರದ್ದುಪಡಿಸಬೇಕಾಗಿ ಕೇಳಿಕೊಳ್ಳುತ್ತಿದೆ.

ವಿಜಾಪುರದಲ್ಲಿ
ಸಿಂದಿ ಅಂಗಡಿ ಲಿಲಾವು
ಪಾರ್ಸಿ ಗೃಹಸ್ಥನ ಉದ್ದಟತನ
(ಶಂತಿಯ ವಾರ್ತೆ, ವಿಜಾಪುರ ತಾ ೨೮)

ವಿಜಾಪುರ ಜಿಲ್ಲೆಯ ಸಿಂದಿ ಅಂಗಡಿಗಳ ಲಿಲಾವು ಇವತ್ತಿನ ದಿವಸ ತೀರ ನಸುಕಿನಲ್ಲಿ ಪಬರ್ಜರ ಹಾಲಿನಲ್ಲಿ ಪ್ರಾರಂಭವಾಯಿತು. ಸ್ವಯಂಸೇವಕರು ವಂಜನೆಯಲ್ಲಿಗೆ ಹೋಗಿ ಪಿಕೆಟಿಂಗ ಮಾಡಿದರು. ಅಂಗಡಿಗಳನ್ನು ಮುಚ್ಚಿಹಿಡಿಯಲು ಬಂದವರಲ್ಲಿ ಕೆಲವನ್ನು ಮುನ್ಸಿಪಾಲಿಟಿಯವರ ಅಧಿಕಾರಿಗಳು ಕರೆದುಕೊಂಡಿದ್ದರಿಂದ, ಸ್ವಯಂಸೇವಕರು ಅಧಿಕಾರಿಗಳ ಕೃತಿಯನ್ನು ನೋಡಿ ಆಶ್ಚರ್ಯಪಟ್ಟರು. ಮಿಚ್ಚಿಕ್ಕಪಡೆಯಂಟೊಂಬತ್ತು ಹಾಗು ಕಾರ್ಪೊರೇಶನ್ ಕೆಲವು ಪಾರ್ಸಿ ಕೈದಾನ್ನ ತಮ್ಮ ಸಂಗಡ ಕರೆದುಕೊಂಡು ಪಬರ್ಜರ ಹಾಲಿನಲ್ಲಿ ಹೋದರು. ಸ್ವಯಂಸೇವಕರು ಅಡ್ಡಲಾಗಿ ಬೇಡಿಕೊಂಡರೂ ಪಾರ್ಸಿಗಳು ಅತ್ತ ಲಕ್ಷ್ಯಕೊಡಲಿಲ್ಲ. ಒಬ್ಬ ಪಾರ್ಸಿ ಗೃಹಸ್ಥರೆ. ಸ್ವಯಂಸೇವಕರನ್ನು ತಳ್ಳಿಯತ್ತಿ ಕೆಳಗೆ ಹಾಕಿದರು. ಸ್ವಯಂಸೇವಕರು ಶಾಂತರಾದ ಮೇಲೆ ಅವರ ಪಾವನ ಗುರುತುಗಳು ಮೂಡಿದ್ದು, ಅವು ಇನ್ನೂ ಕಾಣಿಸುತ್ತವೆ. ಪಾರ್ಸಿ ಗೃಹಸ್ಥನ ಈ ಉದ್ದಟ ವರ್ತನೆಯನ್ನು ಕಂಡು ಜನರು ಕೋಪಗೊಂಡರು.

ಹಿಂದುಸ್ಥಾನ ಸರಕಾರಕ್ಕೆ

೧೮ ಕೋಟಿ ರುಪಾಯಿಗಳ ಹಾನಿ

(ಕಂತಿಯು ವಾರ್ತೆ ತಾ॥ ೨೫)

ಈ ವರ್ಷದ ಜನಾಖರ್ಚಿನ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಹಿಂದುಸ್ಥಾನ ಸರಕಾರಕ್ಕೆ ಒಟ್ಟಿಗೆ ೧೮ ಕೋಟಿ ರೂಪಾಯಿಗಳು ಕಡಿಮೆ ಬಿದ್ದಿವೆಯಾಗಿ ತೋರುತ್ತದೆ.

ಬಂಗಾಲ ಸರಕಾರಕ್ಕೆ
೧೩ ಲಕ್ಷ ರೂಪಾಯಿ ಹಾನಿ

ಈ ವರ್ಷದ ಜನಾ ಖರ್ಚಿನ ಪತ್ರಿಕೆಯನ್ನು ಬಾಯಿಗೂಡಿಸುವದಕ್ಕಾಗಿ ಬಂಗಾಲ ಸರಕಾರಕ್ಕೆ ೧೩ ಲಕ್ಷ ರೂಪಾಯಿಗಳು ಕಡಿಮೆ ಬಿದ್ದಿವೆಯಾಗಿದ್ದರೂ, ಕಾಯದೆ ಭಂಗ ಜರಗದಿರುವದನ್ನು ಎದುರಿಸಲು ಹೆಚ್ಚಿನ ಹಣ ವೆಚ್ಚ ಮಾಡುವ ಪ್ರಸಂಗ ಬಿದ್ದದ್ದೇ ಇದಕ್ಕೆ ಕಲ ಮಟ್ಟಿಗೆ ಕಾರಣ ವಾಗಿದ್ದುದಾಗಿಯೂ ತಿಳಿದು ಬರುತ್ತದೆ.

ಹೊಸದಿಲ್ಲಿ ನಿರ್ಮಾಣಕ್ಕಾಗಿ
೧೪॥ ಕೋಟಿ ರೂಪಾಯಿಗಳು ಹಾಳಾದವು

ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಶ್ರೀ ಎಸ್. ಸಿ. ಘೋಸಮಲಿಕರವರ ಪ್ರಶ್ನೆಗೆ ಸರ್ ಜೊಸೆಫ್ ಬೋರರವರು, "ಹೊಸ ದಿಲ್ಲಿಯ ಕಟ್ಟಡ, ಬೀದಿ ಮೊದಲಾದವುಗಳಿಗಾಗಿ ಡಿಸೆಂಬರ ತಿಂಗಳದ ಕೊನೆಯ ವರೆಗೆ ಒಟ್ಟಿಗೆ ೧೪ ಕೋಟಿ ೫೦ ಲಕ್ಷ ರುಪಾಯಿಗಳು ಖರ್ಚಾಗಿವೆ" ಯೆಂಬುದಾಗಿ ಉತ್ತರ ಕೊಟ್ಟರು. ಹಿಂದೀಯರು ಆರ್ಥಿಕ ಸ್ವಾಯತ್ತತೆಯನ್ನು ಬೇಡುತ್ತಿರುವದು ಇದಕ್ಕಾಗಿಯೇ.

ಬಾಡೋಲಿ ರೈತರ
ಹೊಲಗಳ ಲಿಲಾವು.

(ಕಂತಿಯು ವಾರ್ತೆ ತಾ॥ ೨೬)

ಭೂಕಂದಾಯವನ್ನು ಕೊಡದ ಮೂಲಕವಾಗಿ ಜಪ್ತು ಮಾಡಲ್ಪಟ್ಟ ಬಾಡೋಲಿ ರೈತರ ಹೊಲಗಳನ್ನು ಅಧಿಕಾರಿಗಳು ಲಿಲಾವ ಮಾಡಹತ್ತಿದ್ದಾರೆ. ಅವುಗಳನ್ನು ಲಿಲಾವಿನಲ್ಲಿ ಕೇಡಲು ಸಾಕಷ್ಟು ಜನರು ಮುಂದೆ ಬಂದ್ದರಿಂದ ಆವು ೫೦ ಎಕರೆಯಷ್ಟು ಬೆಲೆಗೆ ಲಿಲಾವು ಆಗಹತ್ತಿ

ಪ್ರೊ. ಕುಮಾರಸ್ವಾಮಿಗೆ
೧ ವರ್ಷ ಶಿಕ್ಷೆ

"ಯಂಗ ಇಂಡಿಯಾ" ಪತ್ರಿಕೆಯಲ್ಲಿ ಆಕ್ಷೇಪಾರ್ಹ ಲೇಖನಗಳನ್ನು ಒರೆದ ಸಂಬಂಧವಾಗಿ ಗುಜರಾತ ವಿದ್ಯಾಪೀಠದ ಪ್ರೊ. ಕುಮಾರಸ್ವಾಮಿ ಇವರಿಗೆ ಕ್ರಿ ಪ್ರೊ ಕೋಡಿದ ೧೫ ನೆಯ ಕಲಮಿನನ್ವಯ ಸರ್ವೋದಯದ ಬಗ್ಗೆ ೧೫೦ ರು. ಹೊಣೆ ಕೇಳಲಾಗಿತ್ತು. ಪ್ರೊ ಕುಮಾರಸ್ವಾಮಿ ಹೊಣೆ ಕೊಡಲು ನಿರಾಕರಿಸಿದ್ದರು. ಅಪ್ರಮಾದಾಬಾದ ಮ್ಯಾಜಿಸ್ಟ್ರೇಟರು ಅವರಿಗೆ ೧ ವರ್ಷ ಸಾದಾ ಶಿಕ್ಷೆ ವಿಧಿಸಿ ಅವರನ್ನು ಕಾರಾಗೃಹಕ್ಕೆ ಒಟ್ಟಿದರು.

ರಥೋತ್ಸವಕ್ಕೆ
೧೪೪೪ ನೆ ಕಲಮು ಹಚ್ಚಿದರು.

ಗುಂಟೂರ ಜಿಲ್ಲೆಯ ತೆನ್ನಲಿ ಎಂಬಲ್ಲಿ ತಾ॥ ೧೩ ನೆಯ ದಿವಸ ಶಿವರಾತ್ರಿಯ ನಿಮಿತ್ತವಾಗಿ ರಥೋತ್ಸವವು ನಡೆಯಿತ್ತು. ರಥೋತ್ಸವವು ನಡೆಯ ಕಾಲಕ್ಕೆ ರಥದ ವೇಳಿನ ಮಹಾತ್ಮಾ ಗಾಂಧಿಯವರ ಭಾವ ಚಿತ್ರವನ್ನು ಕಂಡು ಅಧಿಕಾರಿಗಳು ಕಣ್ಣು ಕೆಂಪಗೆ ಮಾಡಿದರು. ೧೫೪ ನೆಯ ಕಲಮಿನ ನೋಟೀಸು ಹೊರಡಿಸಿ, ರಥೋತ್ಸವವನ್ನು ಅಷ್ಟಕ್ಕೆ ನಿಲ್ಲಿಸಿದರು. ಪೂಜಾರಿಗಳು ಮಹಾತ್ಮರ ಚಿತ್ರವನ್ನು ತೆಗೆದೊಗೆದು ರಥವನ್ನು ಎಳೆಯುವಂತೆ ಆರಂಭಿಸಿದರು. ಒಬ್ಬ ಸ್ವಯಂಸೇವಕನು ರಥದ ಮುಂದೆ ಅಡ್ಡ ಬಿದ್ದು ಅದಕ್ಕೆ ಪ್ರತಿಬಂಧವನ್ನುಂಟು ಮಾಡಿದನು. ಪೂಜಾರಿಗಳು ಹೀಗೆ ಪೇಚಿನಲ್ಲಿ ಸಿಕ್ಕಿ ಮತ್ತೆ ಮಹಾತ್ಮರ ಚಿತ್ರವನ್ನು ರಥಕ್ಕೆ ಅಂಟಿಸಿದರು. ಪೋಲೀಸರು ಅದರ ಸುತ್ತಲು ಕಾವಲು ರಚಿಸಿ ನಿಂತುಕೊಂಡು ರಥವನ್ನು ಮುಂದಕ್ಕೆ ಹೋಗಗೊಡಲಿಲ್ಲ.

ಶ್ರೀ ವಿಠ್ಠಲಭಾಯಿಯವರು
ಯುರೋಪಕ್ಕೆ ಪ್ರಯಾಣ ಬೆಳಿಸಿದರು.

ಮುಂಬಯಿಯ ಪೋಲೆಕ್ಸಿನರ್ ನರ್ಸಿಂಗ ಹೋಮ"ದಲ್ಲಿ ಔಷಧೋಪಚಾರ ಹೊಂದುತ್ತಿದ್ದ ಶ್ರೀ ವಿಠ್ಠಲಭಾಯಿ ಪಟೇಲರವರು [illegible] ಹೊರಟು ಹೋದರು. ಅಲ್ಲಿ ಅವರು ೨-೩ ತಿಂಗಳ ವರೆಗೆ ಇದ್ದು ತಮ್ಮ ಕೃಶಕೃತಿಯನ್ನು ಸುಧಾರಿಸಿಕೊಳ್ಳುವರು.

ಗಂಗಾವತಿಯವರ ಮೇಲೆ
ಹೊಲೀಸರ ಕಡಿಗಣ್ಣು.

ಪಂಡ್ಯೇಬಿಹಾಳದಲ್ಲಿ ಕ್ರಿ. ಲಾ. ಅಮೆಂಡಮೆಂಟ್ ಕಾಯದೆಯು ಅನ್ವಯ ಶಿಕ್ಷೆಗೆ ಗುರಿಯಾಗಿ ಹಾಗಿ ಕೊಟ್ಟಿನ ಪುನರ್ವಿಚಾರಣೆಯಲ್ಲಿ ನಿರ್ದೋಷಿಯಾಗಿ ನಿರ್ಣಯಿಸಲ್ಪಟ್ಟು ವಿಸಾಪುರ ಜೇಲಿನಿಂದ ಬಿಡುಗಡೆ ಹೊಂದಿದ ಶ್ರೀ. ಜಿ. ಬಿ. ಗಂಗಾವತಿಯವರು, ನಮಗೆ ತಾ॥ ೨೩ ನೆಯ ದಿವಸ ರಾಯಚೂರಿನಿಂದ ಒಂದು ಪತ್ರ ಬರೆದಿದ್ದು, ಅದನ್ನು ಇದ್ದಕ್ಕಿದ್ದಂತೆ ಕೆಳಗೆ ಕೊಟ್ಟಿದೆ ವಿಜಾಪುರ ಜಿಲ್ಲೆಯ ರಾಜಕೀಯ ಸೆರೆಯಾಳುಗಳ ಪರಿಸ್ಥಿತಿಯವರು ಇತ್ತ ಇದಕ್ಕೆ ಲಕ್ಷ್ಯಕೊಡಬೇಕು. ನಾನು ತಾ॥ ೨೦-೨-೩೨ ನೆಯ ದಿವಸ ವಿಸಾಪೂರ ಜೈಲಿನಿಂದ ಬಿಡುಗಡೆ ಹೊಂದಿದೆನು. ದಿವಸ ಮಂಜಾನೆ ೬ ಗಂಟೆಗೆ ಇಲ್ಲಿಗೆ ಬಂದು ತಲುಪಿದೆನು. ನನ್ನನ್ನು ಇಲ್ಲಿಗೆ 'ಡಿಪೋರ್ಟ್' (ಹದ್ದುವಾರು) ಮಾಡಿರುವರು. ನನ್ನ ಸಂಗಡ ಒಬ್ಬ ರೇಲ್ವೆ ಪೋಲೀಸನು ಇಲ್ಲಿಯ ವರೆಗೂ ಬಂದು ಇಲ್ಲಿಯ ಸಿಟಿ ಪೋಲೀಸರ ಚಾರ್ಜಿನಲ್ಲಿ (ವಶದಲ್ಲಿ) ನನ್ನನ್ನು ಕೊಟ್ಟು ಹೋದನು. ಬ್ರಿಟಿಶ ಹಿಂದುಸ್ಥಾನದಿಂದ ಹೋಗಿ ಹಾಕಿರುವ ಆರ್ಡರ ಪತ್ರಿಕೆಯನ್ನು (ಅಜ್ಞಾಪತ್ರ) ನನಗೆ ಕೊಟ್ಟಿದ್ದಾರೆ. ಇಲ್ಲಿರುವ ಪೋಲೀಸ ಫೌಜದಾರರು ನನ್ನ ಹಿಂದೆ ಒಬ್ಬ ಜಾಸಾನನನು ಹಚ್ಚಿದ್ದಾರೆ. ಆದರೆ ಒಬ್ಬ ಪೋಲೀಸನನ್ನು ದಿನಾಲು ನಾನು ಇರುವ ಸ್ಥಳಕ್ಕೆ ಎಡು ಮೂರು ಸಾರೆ ಬಂದು ಹೋಗುತ್ತಾನೆ "ಎಲ್ಲಿಗಾದರೂ ಹೋಗಬೇಕಾದರೆ ನಮಗೆ ತಿಳಿಸಿರಿ; ನಾವು ನಿಮ್ಮನ್ನು ಕಳಿಸಿಕೊಡುವೆವು; ಇಲ್ಲದಿದ್ದರೆ ನಟ್ಟಗಾಗಲಿಕ್ಕಿಲ್ಲ" ಎಂದು ಫೌಜದಾರರು ಹೇಳಿದ್ದಾರೆ. ಇನ್ನು ಎರಡು ಮೂರು ದಿವಸದಲ್ಲಿ ಗುಲಬರ್ಗಾಕ್ಕೆ ಹೋಗುವೆನು. ವಿಜಾಪುರದಲ್ಲಿ ಪ್ರಿಜನರ್ಸ ಕಾನ್ಫರನ್ಸಿ (ಸೆರೆಯಾಳುಗಳ ಪರಿಷತ್ತು) ಕೂಡುವದು ಗೊತ್ತಾಗಿದೆ. ಬರಬೇಕೆಂದು ಅಪೇಕ್ಷೆಯಿದೆ, ಆದರೆ ವಿಚಾರಮಾಡಿ ಬರಬೇಕಾಗುವದು"

ಅಂಕೋಲಾ ತಾಲೂಕಿನಲ್ಲಿ ದಬ್ಬಾಳಿಕೆಯು ಮತ್ತೆ ಪ್ರಾರಂಭವಾಯಿತು.

(ಸುದ್ದಿಗಾರರಿಂದ)

ಆರ್ಡಿನನ್ಸಿದ ಅವತಾರ!

ಕಳೆದ ೩೦ ನೇ ಕಾರ್ತಿಕಕ್ಕೆ ಅಂಕೋಲೆಯಲ್ಲಿ ೧೧ ನೇ ಆರ್ಡಿನನ್ಸಿನ ಅವತಾರವಾಯಿತು. ಈ ಆರ್ಡಿನನ್ಸಿನಿಂದ ಎಲ್ಲಕ್ಕೂ ಮೊದಲು ಅವಮಾನಕ್ಕೆ ತುತ್ತಾಗುವ ಬಹು ಮಾನವು ಇಲ್ಲಿಯ ತರುಣ ಸ್ವಯಂಸೇವಕರಾದ ಶ್ರೀ ಕೆ. ಕೆ. ಪೈಯವರ ಪಾಲಿಗೆ ಹೋಯಿತು. ಇವರು ೧೫ ವರ್ಷದ ಎಳೆ ತರುಣರಾಗಿದ್ದರೂ ಸರ್ಕಾರ್ಯ ಗ್ರಹವು ಪ್ರಾರಂಭವಾದಂದಿನಿಂದ ಒಳ್ಳೇ ಹುರುಪಿನಿಂದ ರಿಫ್ಲೇಯು ಕಾರ್ಯವನ್ನು ಮಾಡುತ್ತಿದ್ದರು. ೫ ನೇ ಕಾರ್ತಿಕದ ದಿನ ಅಂಕೋಲೆಯಲ್ಲಿ ಕೂಡಿದ ಗುಂಪಿನಲ್ಲಿ ಕರನಿರಾಕರಣೆಯು ವೀರಪ್ರತಿಜ್ಞೆಯನ್ನು ಓದಿ ಹೇಳಿದ ಬಗ್ಗೆ ಅವರ ಮೇಲೆ ಆರೋಪವು ಇಡಲಾಗಿದೆ. ಇವರನ್ನು ಕೈದು ಮಾಡಿದ ಬಳಿಕ ಫೌಜದಾರರು "ನೀವು ಮಾಫೀ ಬೇಡಿಕೊಂಡರೆ ನಿಮ್ಮನ್ನು ಈಗಲೇ ಬಿಟ್ಟು ಬಿಡುತ್ತೇನೆ ಎಂದು ಪೈಯವರಿಗೆ ಹೇಳಲು ಆ ವೀರರು "ಮಾಫೀ ಬೇಡಲಿಕ್ಕೆ ನಾನೇನು ಅಪರಾಧಿಯಲ್ಲ ನಾನು ಮಾಫೀ ಬೇಡುವದು ಶಕ್ಯವೇ ಇಲ್ಲ. ಈಗ್ಲೆ ನೀವು ನನ್ನನ್ನು ಬಿಟ್ಟರೂ ನಾನು ಮತ್ತೆ ಆ ಪ್ರತಿಜ್ಞೆಯನ್ನು ಓದುವವನೇ" ಎಂದು ಖೊಕ್ಕವಾಗಿ ಹೇಳಿದರು! ಅವರ ಖಟ್ಲೆಯು ವಿಚಾರಣೆಯು ಇನ್ನೆರಡು ದಿನಗಳಲ್ಲಿಯೇ ನಡೆಯಬಹುದು.

ಭಾವೀಕೇರಿ ಬೇಲೀಕೇರಿ

೨೧ ನೇ ಕಾರ್ತಿಕದ ಮಧ್ಯಾನ್ಹಕ್ಕೆ ಪೋಲೀಸರು ಭಾವೀಕೇರಿ, ಬೇಲೀಕೇರಿಗಳಿಗೆ ಹೋಗಿ ಪಂಚಾಯತಿಗಳು ಬೇಕಾಯದೇತೀರ ಸಂಸ್ಥೆಗಳೆಂದು ಹಂಗುರ ಹೊಡೆದು ಅದೇ ಅರ್ಥದ ಕೆಲವು ಜಾಹೀರ ಪತ್ರಿಕೆಗಳನ್ನು ಊರೊಳಗೆ ಅಲ್ಲಲ್ಲಿ ಅಂಟಿಸಿ ಬಂದರು. ಮರು ದಿನ ಮುಂಜಾವಿನಲ್ಲಿ ಸು. ೩೦೦ ಜನ ಪೋಲೀಸರು ಈ ಹಳ್ಳಿಗಳಿಗೆ ಹೋಗಿ ಕಟ್ಟಳೆಗಟ್ಟಿದ ಸಂಸ್ಥೆಗಳ ಸಭಾಸದರೆಂಬ ಆರೋಪದಿಂದ ೧೧ ಜನರನ್ನು ಪಾಲೇಲಕರರನ್ನೂ ಕೈವಸಮಾಡಿ ಅಂಕೋಲೆಗೆ ತಂದರು. ಕೈದು ಮಾಡಲ್ಪಟ್ಟವರ ಹೆಸರುಗಳು.

ಭಾವೀಕೇರಿ:— ನಾರಾಯಣ ವೀರಣ್ಣ ನಾಯಿಕ. ೨ ರಾಮಕೃಷ್ಣ ನಾರಾಯಣ ನಾಯಕ, ೩ ತಿಮ್ಮಣ್ಣ ವೀರಣ್ಣ ನಾಯಿಕ.

ಬೇಲೀಕೇರಿ:— ನಾರಾಯಣ ವೆಂಕಯ್ಯ ನಾಯಿಕ, ೨ ತಿಮ್ಮಣ್ಣ ಕರಿಯಣ್ಣ ನಾಯಿಕ ೩ ತಿಮ್ಮಣ್ಣ ಹಮ್ಮಣ್ಣ ನಾಯ್ಕ. ೪ ನಾಗಪ್ಪ ಗಿರಿಯಣ್ಣ ನಾಯ್ಕ. ೫ ದೊಮ್ಮಯ್ಯ ತಿಮ್ಮಣ್ಣ ನಾಯ್ಕ ೬ ಭಾಂಡಾರಿ. ೭ ವಿಠೋಬಾ ದಾ ೮ ಭಾ ಭಂಡಾರಿ ೯ ವೀರಣ್ಣ ಕೋವಣ್ಣ ನಾಯ್ಕ.

ಬೇಲೀಕೇರಿಯ ವೀರಣ್ಣನಾಯ್ಕರು ೧೫ ವರ್ಷದ ಮುದುಕರು ಪೋಲೀಸರು ಅವರನ್ನು ಅಂಕೋಲೆಗೆ ತರುತ್ತಿರುವಾಗ ಅವರು "ನಾವು ಮಾಫಿ ಕೇಳಿದರೆ ನಮ್ಮನ್ನು ಬಿಟ್ಟು ಬಿಡುತ್ತೀರಿ ಎಂದು ಹೇಳಿದ್ದಕ್ಕಾಗಿ ಸರಕಾರದವರು ನನ್ನನ್ನು ಜೇಲಿಗೆ ಒಯ್ಯುತ್ತಿರುವರು. ಎಂದು ಹಾಸ್ಯಯುಕ್ತರಾಗಿ ಹೇಳುತ್ತ ನಡೆದಿದ್ದರು. ಬೇಲೀಕೇರಿಯ ನಾಗಪ್ಪನಾಯ್ಕರೂ ಭಾವೀಕೇರಿಯ ನಾರಾಯಣ ನಾಯ್ಕರೂ ಅನುಕ್ರಮವಾಗಿ ೬೦ ಹಾಗೂ ೬೫ ವರ್ಷಗಳ ವಯಸ್ಸುಳ್ಳವರಾಗಿದ್ದಾರೆ.

ಕೈದು ಮಾಡಲ್ಪಟ್ಟ ಆರು ಜನರಿಗೆ ನಿನ್ನೆ ಸಂಗುರ ಹೊಡೆದ ಬಳಿಕ ನೀವು ಪಂಚಾಯತಿಯ ಕೆಲಸ ಮಾಡಿದ್ದಿರೇನು? ಎಂದು ಕೇಳಲಾಗಿ ಅವರು ಕಾವು ಮಾಡಿಲ್ಲವಾಗಿ ಹೇಳಿದ್ದರಿಂದ ಅವರನ್ನು ಬಿಟ್ಟು ಬಿಟ್ಟರು. ಉಳಿದವರು ಅಂಕೋಲೆಯ ಲಾಕಪ್ಪಿನಲ್ಲಿರುವರು.

ಪೋಲೀಸರ ಅತ್ಯಾಚಾರ!

ಮೇಲೆ ಹೇಳಿದ ಶ್ರೀ ಪಾಲೇಕರ ಎಂಬ ಸ್ವಯಂಸೇವಕರನ್ನು ಕೈದು ಮಾಡುವಾಗ ಸಬ್ ಇನಸ್ಪೆಕ್ಟರರು ಅವರನ್ನು ಜೋರಿನಿಂದ ದಬ್ಬಿ ಕಾಲಿನಿಂದ ಒದ್ದರಂತೆ. ಎದುರಿದ್ದ ಕಂಬಕ್ಕೆ ಪಾಲೇಕರ ತಲೆಯು ಅಪ್ಪಳಿಸಿ ಅನರ್ಥವೇ ಆಗುವ ಪ್ರಸಂಗವು ಸ್ವಲ್ಪದರಲ್ಲಿಯೇ ತಪ್ಪಿತು. ಇವರನ್ನು ಕೈದು ಮಾಡುವ ಮುನ್ನಾ ದಿನವೇ ಇವರಿಗೂ ಪೋಲೀಸರಿಗೂ ಬಾಯಿಗೆ ಬಾಯಿ ಹೆತ್ತಿದ ಸಂಗತಿಯನ್ನು ನಾಳಿನ ಪತ್ರಿಕೆಯಲ್ಲಿ ಕಾಣಬಹುದು. ಕೈದು ಮಾಡಿದ ಬಳಿಕ ಪೋಲೀಸರು ಪಾಲೇಕರರ ಕೈಯೊಳಗಿನ ಶುಶೂರೆಯನ್ನು ಕಸಿದು ಕೊಳ್ಳುವದಕ್ಕೆಂದು ಬೇಕಾದಷ್ಟು ಹೆಣಗಾಡಿದರೂ ಅವರ ಕೈಯೊಳಗಿನ ಶುಶೂರೆಯನ್ನು ಬಿಡಲಿಲ್ಲ. ಈ ಗುದ್ದು ಮುಸುಗೆಯಲ್ಲಿ ಪಾಲೇಕರರು ತೀರ ಜರ್ಜರಿತರಾಗಿದ್ದಾರೆ. ಇವರ ಮೇಲೆಯೂ ಆರ್ಡಿನನ್ಸಿನ ಗದೆಯೇ ಎತ್ತಲಾಗಿದೆಯಂತೆ.

ಇವರಲ್ಲದೆ ಸೆರೆ ಮಾಡಿ ಅಂಕೋಲೆಗೆ ತಂದ ಕೂಡಲೆ ಅಂಕೋಲೆಯಲ್ಲಿ ಸಂಪೂರ್ಣವಾದ ಹರತಾಳವಾಯಿತು. ಭಾವೀಕೇರಿ ಬೇಲೀಕೇರಿಗಳಲ್ಲಿ ಈ ದಬ್ಬಾಳಿಕೆಯಿಂದ ಚಳವಳಿಯು ವಿರುದ್ಧವಾಗಿ ಏನೂ ಪರಿಣಾಮವಾಗಿಲ್ಲ. ಯಾವದೊಂದು ರೀತಿಯಲ್ಲಿ ಪಂಚಾಯತಗಳನ್ನು ಅಸ್ತಿತ್ವದಲ್ಲಿಡಬೇಕೆಂದು ಅಲ್ಲಿಯ ಜನರು ಪಣ ತೊಟ್ಟಿದ್ದಾರೆ.

ಮೈಸೂರ ಸಂಸ್ಥಾನದಲ್ಲಿ
ಮುಖಂಡರಿಗೆ ಮುಂಗದಾಣ ಯಾಕಿದರು.

ಕಾರವಾರ ಜೇಲಿನಿಂದ ಬೆನ್ನೆ ಬೆನ್ನೆ ಬಿಡುಗಡೆ ಹೊಂದಿದ ಡಾ. ವಾಧ್ವ ನಾರಾಯಣ ಹಾಗು ಶ್ರೀ ರಾಜಗೋಪಾಲ ಅಯ್ಯಂಗಾರ ಇವರು ತ ॥ ೨೩ ನೆಯ ದಿವಸ ಮೈಸೂರಲ್ಲಿ ಸುಬ್ಬರಾಯನ್ ಪಾರ್ಕ್'ನಲ್ಲಿ ಭಾಷಣಮಾಡಲಿಕ್ಕಾಗಿ ನೆರೆದಿದ್ದರು ಮೈಸೂರಿನ ಅಧಿಕಾರಿಗಳು ಅಂದು ಸಂಜೆಯಲ್ಲಿ ಪೋಲೀಸ ಕಾಯಿದೆಯ ೧೪೪ ನೆಯ ಕಲಮಿನ ಪ್ರಕಾರ ಅವರ ಮೇಲೆ ನೋಟೀಸು ಹೊರಡಿಸಿ, ೬ ತಿಂಗಳ ವರೆಗೆ ಭಾಷಣಮಾಡಕೂಡದೆಂದು ತಕ್ಕದ್ದಲ್ಲವಾಗಿ ಅವರಿಗೆ ಅಪ್ಪಣೆ ವಿಧಿಸಿದರು.

೨೦೦ ಕಾಂಗ್ರೆಸ್ ಮುಖಂಡರಿಗೆ
ಹದ್ದುಹೂರು?

ಕಾಂಗ್ರೆಸ್ ಹಾಗು ಸರಕಾರದವರ ನಡುವೆ ಒಪ್ಪಂದವಾಗದಿದ್ದಲ್ಲಿ ೨೦೦ ಜನ ಕಾಂಗ್ರೆಸ್ ಮುಖಂಡರನ್ನು ಸರಕಾರವು ಹದ್ದುಪಾರ ಮಾಡುವ ಆಲೋಚನೆಯಲ್ಲಿದೆಯಂತೆಯೂ, ಈ ಸಂಬಂಧವಾಗಿ ಸರಕಾರವು ಪ್ರಮುಖ ರಪಟ್ಟಿಯನ್ನು ತಯಾರಿಸುತ್ತಿರುವದಂತೆಯೂ "ವೀಕಲಿ ಹೆರಾಲ್ಡ್" ಪತ್ರಿಕೆಯ ಸಂಪಾದಕರಾದ ಏ. ಹಾರ್ನಿಮನ್ ರವರು ಪ್ರಕಟಿಸಿರುವರು.

ಸಂಯುಕ್ತ ಪ್ರಾಂತದ ಇಬ್ಬಾ ಹಾಗು ವೈನಪರಿಜ್ಞೆಯಲಿನ ಕಾಂಗ್ರೆಸ್ ಸಂಸ್ಥೆಗಳು ಶ್ರೀ ಲಾ. ಅಸಿಂಡಮೆಂಟ್ ಕಾಯಿದೆಯ ಅನ್ವಯ ಕಾಯಿದೆಗೆ ವಿರುದ್ಧವಾಗಿವೆಯೆಂದು ಅಲ್ಲಿಯ ಸರಕಾರದವರಿಂದ ಸಾರುವದನ್ನು ಬಂದಿದೆ.

ಮುಂಬಯಿಯಲ್ಲಿ ೨೦ ಜನರಿಗೆ ಳತಿ. ಶಿಕ್ಷೆ

(ಶಂತಿಯವಾರ್ತೆ ತಾ॥ ೨೪)

ಮುಂಬಯಿಯಲ್ಲಿ ತಾ॥ ೨೨ ನೆಯ ದಿವಸ ರಾಷ್ಟ್ರಧ್ವಜವಂದನೆಯ ಸಮಾರಂಭದ ಕಾಲಕ್ಕೆ ಸೆರೆಹಿಡಿಯಲ್ಪಟ್ಟ ೩೬೫ ಜನ ಸ್ವಯಂಸೇವಕರ ಖಟ್ಲೆಯ ವಿಚಾರಣೆಯು ಇವತ್ತಿನ ದಿವಸ ನಡೆದು, ಅವರಲ್ಲಿ ೨೦೦ ಜನರಿಗೆ ಪ್ರತ್ಯೇಕವಾಗಿ ೪ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ಉಳಿದವರು ನಿರ್ದೋಷಿಗಳಾಗಿ ಬಿಡುಗಡೆ ಹೊಂದಿದರು.

ದಿಲ್ಲಿಯಲ್ಲಿ ವರ್ಕಿಂಗ ಕಮಿಟಿಯ ಸಭೆ

ಅಖಿಲ ಭಾರತ ರಾಷ್ಟ್ರಸಭೆಯ ವರ್ಕಿಂಗ ಕಮಿಟಿಯು ಕಾರ್ಯದರ್ಶಿಗಳಾದ ಡಾ. ಸಯ್ಯದ ಮಹಮ್ಮದರು ತಾ॥ ೨೧ ನೆಯ ದಿವಸ ಕಳಿಸಿರುವಂತೆ ಪ್ರಸಿದ್ಧಿಸಿವೆ.

ವರ್ಕಿಂಗ ಕಮಿಟಿಯ ಸಭೆಯು ಇವತ್ತಿನ ದಿವಸ ಎರಡು ಗಂಟೆಗೆ ಡಾ. ಅನಸಾರಿಯವರ ಮನೆಯಲ್ಲಿ ಸೇರಿತ್ತು. ಪಂಡಿತ ಜವಾಹರಲಾಲರು ಅಧ್ಯಕ್ಷರಾಗಿದ್ದರು. ಮಹಾತ್ಮಾ ಗಾಂಧಿ, ಸರದಾರ ವಲ್ಲಭಭಾಯಿ, ಸಿ. ರಾಜಗೊ ಪಾಲಾಚಾರ್ಯರು, ಸೇನಗುಪ್ತ, ಡಾ. ಪಟ್ಟಾಭಿಸೀತಾರಾಮಯ್ಯ, ಸರದಾರ ಶಾರ್ದೂಲಸಿಂಗ ಡಾ. ಕಿಚ್ಲೂ, ಸೆಟ ಜಮನಾಲಾಲ ಬಜಾಜ, ಶಿವಪ್ರಸಾದ ಗುಪ್ತ, ಡಾ. ಸಯ್ಯದ ಮಹಮ್ಮದ, ಇನ್ನೂ ಕೆಲವರು ಸಭೆಯಲ್ಲಿ ಕೂಡಿದ್ದರು. ವರ್ಕಿಂಗ ಕಮಿಟಿಯವರು ವಿಚಾರ ಮಾಡಿ ಕೊಂಡಿದ್ದರಿಂದ ಡಾ. ಅನಸಾರಿ, ಪಂಡಿತ ಮಾಲವೀಯರಾ ಇವರಾದರೂ ಸಭೆಗೆ ಆಗಮಿಸಿದ್ದರೆ ಕಮಿಟಿಯವರು ಕಷ್ಟದ ಸ್ಥಿತಿಯು ಸಂಬಂಧವಾಗಿ ಎರಡು ಗಂಟೆಗಳ ವರೆಗೆ ಚರ್ಚೆ ನಡಿಸಿ ಸಭೆಯನ್ನು ಮರುದಿವಸಕ್ಕೆ ಮುಂದರಿಸಿದರು.

ಪೇಶಾವರ ಪ್ರಾಂತದಲ್ಲಿ ಗೋಳೀಬಾರು

ಇಬ್ಬರಿಗೆ ಮರಣ ೬ ಜನರಿಗೆ ಗಾಯ

ಪೇಶಾವರ ಪ್ರಾಂತದ ಉಟಮಜಾಯಿ ಎಂಬಲ್ಲಿ ತಾ॥ ೨೧ ನೆಯ ದಿವಸ ಸಭೆಯು ಸೇರಿತ್ತು. ಸಭೆಯು ಕಾರ್ಯವು ನಡೆಯುತ್ತಿರುವಾಗ ಕೆಲವರು ಕಿಡಿಗೇಡಿಗಳು ಸಭೆಯ ಮೇಲೆ ಕಲ್ಲುಗಳನ್ನು ಎಸೆದರು. ಆಗ ಸಭೆಯಲ್ಲಿದ್ದ ಜನರು ಕೋಪಗೊಂಡು ಕಲ್ಲುಗಳನ್ನು ಎಸೆದವರನ್ನು ಹಿಡಿಯಲು ಓಡಿದರು. ಆಗ ಪೋಲೀಸರು ಗೋಳೀಬಾರು ಮಾಡಿದರು. ಇದರಿಂದ ಇಬ್ಬರು ಕೆಲವು ಜನರು ಮರಣ ಹೊಂದಿದ್ದು, ೬ ಜನರಿಗೆ ಗಾಯಗಳಾಗಿವೆ.

ಫೌಜದಾರರಿಗೆ ಗುಂಡಿನ ಪೊಡತ ಬಿತ್ತು

ಸಾಕಾರಾ ಜಿಲ್ಲೆಯ ತಾಕಗಾವ ತಾಲೂಕಿನ ಫೌಜದಾರರು ಒಬ್ಬ ಕಳ್ಳನನ್ನು ಹಿಡಿದು ಕೊಂಡು ಬರುವದಕ್ಕಾಗಿ ತುರಬಿ ಎಂಬ ಹಳ್ಳಿಗೆ ಹೋದಾಗ ಎಡೂರ ಸಕ್ಕದವರಲ್ಲಿ ಹೊಡೆದಾಟವಾಯಿತು. ಆಗ ಒರ್ವ ಹೆಂಗಸು ಒಬ್ಬ ಪೋಲೀಸನ ಕೈಯಲ್ಲಿಯ ಬಂದೂಕನ್ನು ಕಸಿದು ಕೊಂಡಳು, ಆ ಬಂದೂಕು ಒಮ್ಮಿಂದೊಮ್ಮೆ ಹಾರಿ ಆ ಹೆಂಗಸು ಹಾಗು ಫೌಜದಾರರಿಗೆ ತಗಲಿತು ಹೆಂಗಸು ಅಲ್ಲಿಂದಲೆ ಗತಪ್ರಾಣಳಾಗಿ ಬಿದ್ದಳು. ಫೌಜದಾರರು ಔಷಧೋಪಚಾರಕ್ಕಾಗಿ ಮಿರಜ ಆಸ್ಪತ್ರಿಗೆ ಕರೆದೊಯ್ಯಲ್ಪಟ್ಟಿದ್ದಾರೆ.

ಶಹಾಜಿಹಾನಪುರದಲ್ಲಿ ಬಾಂಬು ಹಾರಿತು

ಸಂಯುಕ್ತ ಪ್ರಾಂತದ ಶಹಾಜಿಹಾನಪುರದಲ್ಲಿ ತಾ॥ ೧೯ ನೆಯ ದಿವಸ ಅಲ್ಲಿಯ ಧರ್ಮಶಾಲೆಯ ಹತ್ತಿರ ಬಾಂಬು ಹಾರಿದ್ದು ಒಬ್ಬನಿಗೆ ಗಾಯವಾಗಿದೆ. ಗಾಯಹೊಂದಿದವನನ್ನು ಹಿಡಿದು ಇಬ್ಬರು ಕೈದು ಮಾಡಲ್ಪಟ್ಟಿದ್ದು, ಎಷ್ಟೋ ಮನೆಗಳು ಝಡತಿ ಮಾಡಲ್ಪಟ್ಟಿವೆ. ಕೆಲವು ಮನೆಗಳಲ್ಲಿ ಪೋಲೀಸರಿಗೆ ಪಿಸ್ತೂಲು ಹಾಗು ಬಾಂಬುಗಳು ಸಿಕ್ಕಿವೆ. ಅಂದಿನ ದಿನ ಮಿಶ್ರಿತ ಬೋರ್ಡಿನ ಸಭೆಯು ಸೇರತಕ್ಕದ್ದಿದ್ದರಿಂದ ಅಲ್ಲಿ ಬಾಂಬು ಇಡಲ್ಪಟ್ಟಿತ್ತಾಗಿ ತಿಳಿಯುತ್ತದೆ. ಗಾಯ ಹೊಂದಿದವನು ಮಿಶ್ರಿತ ಬೋರ್ಡ ಶಾಲೆಯ ಶಿಕ್ಷಕನಿದ್ದಾನೆ.

ಮಹಾತ್ಮಾಗಾಂಧಿಯವರಿಗೆ ಗಂಗಾಧರರಾಯರ ತಾರು

(ಶಂತಿಯ ವಾರ್ತೆ ಧಾರವಾಡ, ತಾ॥ ೨೩)

"ಕಾಂಗ್ರೆಸ್ ಹಾಗು ಸರಕಾರದ ನಡುವೆ ನಡೆದ ಸಂಧಾನದ ಮಾತುಕತೆಗಳ ಸಂಬಂಧವಾಗಿ ಏನೆಂದೂ ನಿರ್ಣಯವಾಗುವ ವರೆಗೆ ಸರಕಾರದವರು ಗಂಜರಾಧಳ್ಳಿ ಭೂಕಂದಾಯವನ್ನು ಎತ್ತುವ ಎತ್ತುಗಡೆ ಮಾಡಬಾರದೆಂ. ಹಾಗು ಈ ಬಗ್ಗೆ ಈ ೧ ಕೈಕೊಂಡ ಎಲ್ಲ ಉಪಾಯಗಳನ್ನೂ ಅವರು ಕೂಡಲೆ ನಿಲ್ಲಿಸಬೇಕು" ಹೀಗೆ ಮಹಾತ್ಮಾ ಗಾಂಧಿಯವರು ಸರಕಾರಕ್ಕೆ ಕರಾರು ಹಾಕುವವರಿದ್ದಾರಾಗಿ ತಿಳಿದು ಬಂದ ಕೂಡಲೆ, ದೇ. ಭ. ಗಂಗಾಧರರಾಯರು ಮಹಾತ್ಮರಿಗೆ ತಾರುಮಾಡಿ, ಕರ್ನಾಟಕದ ಲಿಸಿಸ ಅಂಕೋಲಾ, ಸಿರಸಿ, ಸಿದ್ದಾಪೂರ, ಹಿರೇಕೆರೂರ ತಾಲೂಕುಗಳಗಳ ಭೂಕಂದಾಯ ವಸೂಲಿಯು ಸಂಬಂಧವಾಗಿಯೂ ವೇಲಿನಂತೆಯೆ ಕೇಳಿಕೊಳ್ಳಬೇಕಾಗಿ ಅವರಿಗೆ ತಿಳಿಸಿದರು. ಮಹಾತ್ಮಾ ಗಾಂಧಿಯವರು ದೇ. ಭ. ಗಂಗಾಧರರಾಯರಿಗೆ ತಂತಿಯಿಂದ ಉತ್ತರಕೊಟ್ಟಿದ್ದು ಅದರಲ್ಲಿ ಅವರು, "ಎಲ್ಲದರ ಕಡೆಗೂ ತಮ್ಮ ಲಕ್ಷ್ಯವಿದೆಯೆಂದೂ, ಕಾಳಜಿಮಾಡುವ ಕಾರಣ ವಿಲ್ಲೆಂದೂ" ತಾಣಿಸಿದ್ದಾರೆ.

ವಿಜಾಪುರದ

ಶ್ರೀ. ದೇಶಪಾಂಡೆಯವರಿಗೆ ಳತಿಂ. ಕ. ಶಿಕ್ಷೆ

(ಶಂತಿಯ ವಾರ್ತೆ ವಿಜಾಪುರ ತಾ॥ ೨೩)

ಶನಿವಾರ ದಿವಸ ಇಲ್ಲಿ ಬಂಧನಕ್ಕೊಳಗಾದ "ಕ್ರಾಂತಿ" ಎಂಬ ಕರಪತ್ರದ ಸಂಪಾದಕರಾದ ಶ್ರೀ ಎ. ಕೆ. ದೇಶಪಾಂಡೆಯವರ ಖಟ್ಲೆಯ ವಿಚಾರಣೆಯು ಇವತ್ತಿನ ದಿವಸ ಇಲ್ಲಿಯ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ೩ ತಿಂಗಳ ಕಠಿಣ ಕಾರಾಗೃಹವಾಸ ಹಾಗು ೨೦೦ ರುಪಾಯಿ ದಂಡ ಇಲ್ಲವೆ ಮತ್ತೆ ೧ ತಿಂಗಳ ಕಾರಾಗೃಹವಾಸ ಹೀಗೆ ಶಿಕ್ಷೆಯನ್ನು ವಿಧಿಸುವದರಲ್ಲಿ ಜಾಣಿದೆ.

ಆಂಕೋಲೆಯ ಪೋಲೀಸರ ಸುಳಿದಾಟ

(ಸ್ವಂತ ಸುದ್ದಿಗಾರರಿಂದ)

ಮಹಾಶಿವರಾತ್ರಿಯ ನಿಮಿತ್ತವಾಗಿ ಎಲ್ಲೆಲ್ಲಿಯ ಜನರು ಗೋಳರ್ಣ ಕ್ಷೇತ್ರಕ್ಕೆ ಬರುತ್ತಿರುವಾಗ ನಮ್ಮಲ್ಲಿಯ ಪೋಲೀಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ತಿರುಗುತ್ತಿರುವರು! ಐದು, ಎಂಟು, ಹತ್ತು, ಹನ್ನೆರಡು ಜನರ ಗುಂಪುಗಳನ್ನು ಮಾಡಿಕೊಂಡು ಸಾಯುಧರಾಗಿ ದಿನಾಲು ಹಳ್ಳಿ ಹಳ್ಳಿಗೆ ಹೋಗಿ ಪರಸ್ಥರನ್ನು ಹುಡುಕುತ್ತಿರುವರು. ಹೋದ ಹೋದಲ್ಲಿ ಅವರಿಗೆ ಊಟ ಉಪಚಾರದ ಬಗ್ಗೆ ಅತ್ಯಂತ ತೊಂದರೆಯಾಗಹತ್ತಿದೆ. ಊರೊಳಗಿನ ಜನರು ಇವರಿಗೆ ಉಡಿಸು-ತಿನಿಸು, ಪಾತ್ರೆ ಪಗಡೆ, ನೀರು-ನಿಡಿ ಮೊದಲಾದವುಗಳನ್ನು ಕೊಡುವ ದಂತೂ ಒತ್ತಟ್ಟಿಗಿರಲಿ, ಇವರಿಗೆ ನಿಲ್ಲಲಿಕ್ಕೆ ಸ್ಥಳಸಹ ಕೊಡದಾಗಿದ್ದಾರೆ. ಅವರ ಪ್ರಶ್ನೆ ಕ್ಕೆಮವನ್ನೂ ಅಲ್ಲಲ್ಲಿ ಅವರಿಗುಂಟಾದ ಅಪರಾತಿಕ್ಕೆವನ್ನೂ ಸಂಕ್ಷಿಪ್ತವಾಗಿ ಕೆಳಗೆ ಹೇಳಲಾಗಿದೆ.

೧೭ ನೇ ತಾರೀಖಿನ ಬೆಳಿಗ್ಗೆ ಏವರು ಪೋಲೀಸರು ಹಿಚ್ಕಡಕ್ಕೆ ಬಂದು ಅತ್ಯತ್ತ ಸುಳಿದಾಡಿ ಗಾಂಧೀ ಬಾಗಕ್ಕೆ ಹೋದರು. ಅಲ್ಲಿ ತ್ರೀ ಕರಮರಳೆರರವರು ಎಲ್ಲಿರುವರೆಂದು ವಿಚಾರಿಸಲಾಗಿ ಜನರು ತಮಗೆ ಯಾವ ದೂಗೊತ್ತಿಲ್ಲವೆಂದರು. ಬಳಿಕ ಮತ್ತೆ ಹಿಚ್ಕಡಕ್ಕೆ ಹೋಗಿ ಕರಮರಳೆರರನ್ನು ಹುಡುಕಿದರು. ಅಲ್ಲಿ ಅವರು ಸಿಕ್ಕದಿರಲು ಪೋಲೀಸರ ಸವಾರಿಗಳು ಬಿಳಕಿಗೆ ಹೋದವು. ಇಲ್ಲಿ ಯಾರಾದರೂ ಊಟಕ್ಕೆ ಹಾಕಿ ಬಹುದೆಂದು ಅವರ ಆಶೆ! ಆದರೇನು? ಯಾರೂ ಇವರನ್ನು ಮಾತಾಡಿಸಲಿಲ್ಲ. ನೀರು ಸೇದುಕೊಳ್ಳಲಿಕ್ಕೆ ಕೊಡ ಹಗ್ಗಗಳೂ ಇವರಿಗೆ ಸಿಕ್ಕಲಿಲ್ಲ. ಹಳ್ಳಕ್ಕೆ ಹೋಗಿ ಉಕ್ಕೇ ಳಿದಿಸಿಕೊಂಡು ಅದನ್ನೇ ಹೊಟ್ಟೆತುಂಬ(!) ತಂದು ಹೋದು ಹೋದರು.

ಅಂದೇ ಮುಂಜಾವಿನಲ್ಲಿ ಮೂವರು ಪೋಲೀಸರು ಬಂದೂಕುಗಳನ್ನು ಹೆಗಲಮೇಲೆ ಹೇರಿಕೊಂಡು ಬಂದು ಮುಂಜಗುಳಿಯ ಧರ್ಮಶಾಲೆಯಲ್ಲಿ ಕಳವೂರಿ ಒರು. ನೀರು ಸೇದಲಿಕ್ಕೆಂದು ಒಬ್ಬ ರೈತನ ಹತ್ತರ ಕೊಡವನ್ನು ಕೇಳಲು ಅವನು ತನ್ನ ಮನೆ ದೂರವಿರುವದೆಂದು ಹೇಳಿ ಕಾದೆತಪ್ಪಿಸಬೇಕೆಂದನು. ಆದರೂ ಪೋಲೀಸರು ಅಂಗಡಿಗೆ ಹೋಗಿ ತೆಗೆದುಕೊಂಡುಬಾ ಎಂದೆನಲು ಅತನು ಹೋದನಂತೆ ನಟಿಸಿ ತಿರಿಗಿಬಂದು ಯಾರೂ ಕೊಡುವದಿಲ್ಲವೆಂದು ಹೇಳಿದನು. ಬಳಿಕ ಪೋಲೀಸರು ಒಬ್ಬ ಹೆಂಗಸಿನ ಹತ್ತರ ಕೊಡವನ್ನು ಬೇಡಲಾಗಿ ಅವಳೂ ತಿರಸ್ಕರಿಸಿಬಿಟ್ಟಳು. ಸರುವಾಯ ಈ ಮಹನೀಯರು ಒಂದು ಒಡಕು ಮಡಿಕೆಯಲ್ಲಿ ನೀರು ಸೇದಿಕೊಂಡುಹೋಗಿ ಅಡಿಗೆ ಮಾಡಿದರು. ನೆರೆಯಿನ ಅಸರ ಬಳ್ಳದಿಂದ ಬಿನಿಲು ಹಣ್ಣು ತಿನ್ನುತ್ತ ೩ ಗಂಟೆಯ ತರಿಗೆ ಕುಳಿತು ಹೋದರು.

ಸಿಂಕಣಮಕ್ಕೆ ಹೋಗಿದ್ದ ೪ ಜನ ಪೋಲೀಸರ ಸ್ಥಿತಿಯೂ ಹೀಗೆಯೇ ಆಯಿತು. ಶಾಲಾ ಮಾಸ್ತರರ ಬಳಿಯಲ್ಲಿ ಕೊಡವನ್ನು ಕೇಳಲು ಅವರು 'ನಾನು ನಮಗೆ ಯಾವ ಸಹಾಯವನ್ನೂ ಮಾಡಲಾರೆ. ಮೊನ್ನೆ ನಮ್ಮ ಮಾಮಲೇದಾರರಿಗೆ ಸಹಾಯಮಾಡಿದ್ದಕ್ಕೆ ನನಗೆ ಸಾಕುಬೇಕಾಗಿದೆ ನಾನು ಇನ್ನು ಮೇಲೆ ಇಲ್ಲಿ ಇರ್ಯವದೇ ಶಕ್ಯವಿಲ್ಲವಾದ್ದರಿಂದ ೧೫ ದಿನಗಳಲ್ಲಿಯೇ ಹೊರಟು ಹೋಗುವ ಯೋಚನೆಯಲ್ಲಿದ್ದೇವೆ. ಆದರಿಂದ ನನ್ನ ಹತ್ತರ ಏನೂ ಕೇಳಬೇಡರಿ ಎಂದರು. ಬಳಿಕ ಪೋಲೀಸರು ಒಂದು ಮನೆವರ್ಲಿ ಗಂದಸರಾರೂ ಇಲ್ಲದ್ದನ್ನು ಕಂಡು ಒಳಹೊಕ್ಕು ಒಂದು ಕೊಡವನ್ನು ತಂದರು. ಒಳಗಿದ್ದ ಹೆಣ್ಣು ವ್ಯಗಳು ಬೈಯ್ಕ ಹತ್ತಿದಳು. ಆಮೆ ವಾಕ್ಪ್ರಹಾರಕ್ಕೆ ಜರಜರಿತರಾಗಿ ಪೋಲೀಸ ಬಹದ್ದೂರರು ಶೀಘ್ರವಾಗಿ ಕೊಡವನ್ನು ತಂದು ಕೊಟ್ಟರು- ಚಟ್ಟಿ ಅರೆಯುವದಕ್ಕೆ ರುಬ್ಬುಗುಂಡು ಎಲ್ಲಿಯೂ ಸಿಕ್ಕಲಿಲ್ಲ. ಒಂದು ಮನೆಯಲ್ಲಿ ಹೇಗೆ ಹೇಗೋ ತರುವಿಕೊಂಡು ಬಂದರು. ಇಷ್ಟೆಲ್ಲ ಆಗ ಬೇಕಾದರೆ ೩ ಹೊಡೆಯತು. ಪೋಲೀಸರು ಇಲ್ಲಿ ಬಂದು ಕೇವಲ ಊಟ ಮಾಡಿ ಹೊರಟು ಹೋದಂತಾಯಿತು

ಬಾಸ್ಕೋರ ರಸ್ತೆಯ ಮೇಲೆ ೧೭ನೇ ತಾರೀಖಿನ ಬೆಳಿಗ್ಗೆ ೧೨ ಜನ ಪೋಲೀಸರು ಬಂದರು. ಜನರು ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಿದ್ದಕ್ಕೆ" ಎಂದು ಜನ ಗೋಳರ್ಣಕ್ಕೆ ನಾಲ್ವರು ಹಾಗೇ ಅಡ್ಡಾಡಲಿಕ್ಕೆ" ಎಂದರು ಅಂಗಡಿಕಾರನ ಹತ್ತರ ಅಡಿಗೆ ಮಾಡಿಕೊಳ್ಳುವ ಸಾಹಿತ್ಯವನ್ನು ಕೇಳಲು ಅತನು ನಕಾರ ಹೇಳಿದನು. ಬಾಳೆಹಣ್ಣು ಕೊಡೆಂದು ಕೇಳಲ್ಕೆ ಅತನು ಸ್ಪಷ್ಟವಾಗಿ ಕೊಡುವದಿಲ್ಲವೆಂದನು. ಉಡಿಯವ ನೀರನ್ನಾದರೂ ಕೊಡು ಎಂದು ಕೇಳಿದಾಗ ಅಂಗಡಿಕಾರನು ಬಾವಿಗೆ ಹೋಗಿರಿ ಎಂದು ಉತ್ತರ ಕೊಟ್ಟನು. ಅಷ್ಟರಲ್ಲಿಯೇ ಆ ದಾರಿಯಿಂದ ಕಳ್ಳನ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ಒಕ್ಕಲಿಗನ ಹತ್ತರ ಕಬ್ಬು ಕೇಳಲು ತನೂ ತಿರಸ್ಕರಿಸಿದನು, ಆದರೂ ಇವರು ಅತನ ಹಿಂದಿಂದ ಹೋಗಿ ಮೆಲ್ಲನೆ ಒಂದು ಕಬ್ಬು ಸೆಳೆದುಕೊಂಡರು. ಆ ರೈತನು ಇವರ ನಿರ್ಲಜ್ಜತನವನ್ನು ನೋಡಿ ಹೊರಟುಹೋದನು.

ಗುಡ್ಡಾ ತೋಡಿ ಇಲಿ ತೆಗೆದರು!

೧೮ ನೇ ತಾರೀಖಿನ ದಿವಸ ಪೋಲೀಸರು ಮತ್ತೆ ಪಯಣ ಬೆಳಸಿ ಹಿಚ್ಕಡ, ಬಾವಿಕೇರಿ, ಬೆಳಸಿ ಮುಂತಾದ ಕ್ಷೇತ್ರಗಳ ಸಂಚಾರ ಮುಗಿಸಿದರು. ಬೆಳಸಿಯಲ್ಲಿ ಗೋಡಬೋಲೆ ಎಂಬ ಸ್ವಯಂಸೇವಕನು ರಾಷ್ಟ್ರೀಯ ಕಾರ್ಯದ ಪ್ರಚಾರಮಾಡಲಿಕ್ಕೆ ಹೋದಾಗ ಅವನನ್ನು ಕೈದುಮಾಡಿ ಅಂಕೋಲೆಗೆ ಒಯ್ದರು. ೩-೪ ದಿನಗಳವರೆಗೆ ಸುಮ್ಮನೆ ಅಡ್ಡಾಡಿ ಊರಿಲ್ಲಿ ಪಾಜ್ಯಪೂಜ್ಯ ಮಾಡಿಕೊಂಡು ಪೋಲೀಸ ಬಿಡದ್ದರಿಂದ ಈ ಹುಡುಗನು ಶಿಕ್ಕಕೊಡಲಿ ಹಿಡಿಸಲಾರದಷ್ಟು ಸಂತೋಷವಾದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಇಲ್ಲಿಂದ ಜನರು ಮಾತ್ರ "ಇಷ್ಟೆಲ್ಲ ಗುಡ್ಡಾ ತೋಡಿದ್ದು ಇಷ್ಟಕ್ಕಾಗಿಯೇ ತಾನೆ!" ಬಂದು ಅಡಿಕೊಳ್ಳುತ್ತಿರುವರು.

ಬಾಗಲಕೋಟೆಯಲ್ಲಿ
ಪೋಲೀಸರ ಹವ್ಯಾಸ

ಇಲ್ಲಿಯ ಹಿಂದುಸ್ಥಾನೀ ಸೇವಾದಳದ ವ್ಯಾಯಾಮ ವಿದ್ಯಾಪೀಠವು ಕ್ರಿಮಿನಲ್ ಲಾ ಅಮೆಂಡಮೆಂಟ್ ಕಾಯಿದೆಯ ಅನ್ವಯ ಮುಂಬಯಿ ಸರಕಾರದವರಿಂದ ಕಾಯಿದೆಗೆ ವಿರುದ್ಧವಾಗಿರುವದೆಂದು ಸಾರಲ್ಪಟ್ಟ ಕೂಡಲೆ ಇಲ್ಲಿಯ ಅಧಿಕಾರಿಗಳು ಅದನ್ನು ಮುತ್ತಿ ಅಲ್ಲಿಯ ಕೆಲವು ಸಾಮಾನುಗಳನ್ನು ಜಪ್ತಮಾಡಿ ಅದನ್ನು ತಮ್ಮ ವಶಪಡಿಸಿಕೊಂಡರೆಷ್ಟೆ. ಆದರೆ ಕಳೆದ ನಾಲ್ಕು ದಿನಗಳಿಂದ ಅಧಿಕಾರಿಗಳು ವಿದ್ಯಾಪೀಠಕ್ಕೆ ಸಂಬಂಧಿಸಿದ ಜಂಗಮ ಆಸ್ತಿಯೆನ್ನಿಲಿಲಾವ ಮಾಡಹತ್ತಿರುವರು. ಈ ಸಾಮಾನುಗಳನ್ನು ಲಿಲಾವಿನಲ್ಲಿ ಬೇಡಲು ಸಾಕಷ್ಟು ಜನರು ಮುಂದೆ ಬರದ್ದರಿಂದ ಪೋಲೀಸರು ತಮ್ಮ ಅಧಿಕಾರವನ್ನೂ ವರ್ಚಸ್ಸನ್ನೂ ಉಪಯೋಗಿಸಿ ಜನರನ್ನು ಕದ್ದು ಮುಚ್ಚಿ ಕರೆದುಕೊಂಡು ಬಂದು ಅವರಿಗೆ ಲಿಲಾವಿನಲ್ಲಿ ಸಾಮಾನುಗಳನ್ನು ಕೊಳ್ಳಹಚ್ಚುತ್ತಿರುವರು. ಒಪ್ಪಂದದ ಮಾತುಕತೆಗಳು ಸಾಗಿರುವಾಗಲೇ ಶಿದ್ಧಿಸ್ಥಳದಲ್ಲಿ ನಡೆದಿದ್ದನ್ನು ನೋಡಿದಲ್ಲಿ, ಸರಕಾರದ ಪೃಥಯದಲ್ಲಿ ಸ್ವಲ್ಪವಾದ್ರಿ ಪರಿವರ್ತನೆ ಯಾಗಿದೆಯೆಂದೇ ಹೇಳಬೇಕಾಗುವದು.

ಇದಕ್ಕಿಂತಲೂ ಹೆಚ್ಚಿನ ಅನ್ಯಾಯಗಳು ಈಗ ಎಲ್ಲೆಲ್ಲಿಯೂ ನಡೆಯುತ್ತಿರುವದೇನೋ ನಿಜ. ಆದರೆ ಈ ಅನ್ಯಾಯವು ಮಾತ್ರ ಅವುಗಳೆಲ್ಲದರಕಿಂತಲೂ ತೀರ ವಿಚಿತ್ರವಾದದ್ದಾಗಿದೆ ಅಧಿಕಾರಿಗಳು ಇಷ್ಟು ತೀವ್ರವಾಗಿ ಈ ಉಪಾಯವನ್ನೆ ಕೈಕೊಳ್ಳುವ ಅಗತ್ಯವೇ ಇದ್ದಿಲ್ಲ. ಯಾಕೆಂದರೆ ಅವುಗಳ ದೇನಿನ ಸಾರ್ವಜನಿಕ ಶಾಂತತೆಗೆ ಧಕ್ಕೆ ಬರುತ್ತಿದ್ದಿಲ್ಲ. ಅಧಿಕಾರಿಗಳು ಸೇಡು ತೀರಿಕೊಳ್ಳುತ್ತಿರುವರೆಂಬುದು ಇದರಿಂದ ಕೈಗೆ ವಾಗುವದಿಲ್ಲವೇ!

ಪಿಕೆಟಿಂಗಕ್ಕೆ ವ್ಯಾಪಾರಿಯು ಹಣ್ಣಾದನು.

ಗದಗ—ಬೆಳಗೇರಿಯ ಸುದ್ದಿಯು

(ಸ್ವಂತದ ಪ್ರತಿನಿಧಿಗಳಿಂದ)

ಇವತ್ತಿನ ದಿವಸ ಪಿಳೆ,ಮಾಂಡ್ರೆಯವರ ಅಂಗಡಿಗೆ ಪಿಕೆಟಿಂಗ ಸುರು ಆಗಿ ಶಾಂತ ರೀತಿಯಿಂದ ಕೆಲಸವು ನಡೆಯಿತು. ನಿನ್ನಿನ ದಿವಸ ಈ ಸಹ್ಯ ಇವನು ಗೊಂದಲ ಹಾಕಿದ್ದು ಕೇಳಿ ಪಿಕೆಟಿಂಗ ನೋಡಲು ಈವಿಸ ಬಹಳ ಜನರು ಅಂಗಡಿಯ ಮುಂದೆ ನೆರೆದರು. ಜನರು ಟೋಳಿ ಕಟ್ಟಿಕೊಂಡು ಪಿಕೆಟಿಂಗ ನೋಡಿ ಆಶ್ಚರ್ಯ ಪಟ್ಟು ಹೋದರು. ಸಾಯಂಕಾಲಕ್ಕೆ ಒಬ್ಬ ಪೋಲೀಸನು ಅಂಗಡಿಯಿಂದ ಸಿಗರೇಟ ಒಯ್ಯಲು ಪ್ರಯತ್ನ ನಡಿಸಿದ್ದನ್ನು ಕಂಡು ಸ್ವಯಂಸೇವಕರು ಅವನ ಮುಂದೆ ಅಡ್ಡ ಬಿದ್ದರು. ಅದನ್ನು ಲೆಕ್ಕಿಸದೆ ಪೋಲೀಸನು ಅವರನ್ನು ತಳಿಯುತ್ತ ಹೋದನು. ಈರಪ್ಪನ ನಿನ್ನಿನ ಉದ್ವಾಮ ವೃತ್ತಿಯನ್ನು ಕೇಳಿ ಜನರು ಅನೇಕ ರೀತಿಯಿಂದ ಅವನಿಗೆ ಒತ್ತಾಯ ಮಾಡಿದ್ದರಿಂದ ಇವತ್ತಿನ ದಿವಸ ಮಧ್ಯಾನದಲ್ಲಿ ಒಪ್ಪಂದ ಮಾಡಿಕೊಳ್ಳಲಿಕ್ಕೆ ಕೇಳಿಕೊಂಡನು. ರಾ| ಹು ಳ್ಳೇರಿಯವರು ಅಳಸ್ಯಾಕ್ಕಾಗಿ ಧಾರವಾಡ ದಿಂದ ಇವತ್ತಿನ ದಿವಸ ಇಲ್ಲಿಗೆ ಆಗಮಿಸಲು ಅವರ ಮುಖಾಂತರ ಒಪ್ಪಂದದ ಮಾತು ಕತೆ ನಡೆದು ಈರಪ್ಪನು ಕೆಳಗೆ ಬರೆದ ಕರಾರುಗಳಿಗೆ ಒಪ್ಪಿಕೊಂಡನು. ೧ ಅಂಗಡಿಯಲ್ಲಿದ್ದ ಸಿಗರೇಟು ಗಳನ್ನ ಕಟ್ಟೆ ಮುದ್ರೆ ಸಾಕಿ ಶ್ರೀ ಭಂಗಾರಶೆಟ್ಟಿಯವರ ಅಂಗಡಿಯಲ್ಲಿಡತಕ್ಕದ್ದು ವ್ಯತ್ತು ಪರಸ್ಥಳಗಳಿಗೆ ಅವರ ಮುಖಾಂತರವಾಗಿಯೇ ಮಾರತಕ್ಕದ್ದ. ಇನ್ನು ಮೇಲೆ ಹೊಸದಾಗಿ ಸಿಗರೇಟ ಕರಿಸಬಾರದು. ಈ ವೊಡಲೇ ರೇಲ್ವೆದಲ್ಲಿ ಬಂದ ಸರಕನ್ನ ಈಗೂ ಬಿಟ್ಟು ಎರಡನೆಯ ಕಡಿಗೆ ಕಳಿಸಬೇಕು. ೨ ರಾಷ್ಟ್ರ ಧ್ವಜಕ್ಕೆ ಈರಪ್ಪನು ಮಾಡಿದ ಅಪಮಾನದ ದೆಶೆಯಿಂದ ರಾಷ್ಟ್ರಧ್ವಜಕ್ಕೆ ವಂದನೆ ಮಾಡಿ ಅದನ್ನು ಹುಳ್ಳೇರಿಯವರಿಗೆ ಒಪ್ಪಿಸಬೇಕು.

ಮೇಲೆ ಬರೆದ ಕರಾರುಗಳಿಗೆ ಈರಪ್ಪನು ಮತ್ತು ಮಾಂಡ್ರೆಯವನು ನೆರೆದ ಯಾವತ್ತೂ ಜನರ ಎದುರಿಗೆ ಕ್ಷಮೆ ಬೇಡಿಕೊಂಡ ನಂತರ ಪಿಕೆಟಿಂಗ ತೆಗೆಯುಲಾಯಿತ.,

ಸಿಂದಿ ಅಂಗಡಿಗಳ ಲಿಲಾವು ನಿಂಕು ಹೋಲಯಿತು

ಮುಂಬಯಿಯ ಜಾಂದ್ರಾ ವಿಧಾಗದ ವಾಮಲೇದಾರ ಕಚೇರಿಯಲ್ಲಿ ಕಾ||೨೦ ನೆಯ ದಿವಸ ಸಿಂದಿ ಅಂಗಡಿಗಳ ಲಿಲಾವು ನಡೆಯುತಕ್ಕದ್ದಿತ್ತು. ಅಧಿಕಾರಿಗಳು ೧೪೪ ನೆಯ ಕಲಮಿನನ್ವಯ ನೋಟೀಸು ಹೊರಡಿಸಿ ಪಿಕೆಟಿಂಗ ಮೊದಲಾದವುಗಳು ಜರುಗ ಕೊಡದಾಗಿ ಅಪ್ಪಣೆ ವಿಧಿಸಿದ್ದರು. ೭೦ ಜನ ಸ್ತ್ರೀಯರು ಅಪ್ಪಣೆಯನ್ನು ಅವಾಮ್ಯ ಮಾಡಿ ಪಿಕೆಟಿಂಗ ಮಾಡುವದಾಗಿ ಅಧಿಕಾರಿಗಳಿಗೆ ತಿಳಿಸಿ ಅಂದು ಕಚೇರಿಯವರೆಗೆ ಹೋಗಿ ನಿಂತುಕೊಂಡರು. ಪೋಲೀಸರಾದರೂ ಕಚೇರಿಯ ಸುತ್ತಲು ಕಾವಲು ರಚಿಸಿಕೊಂಡು ನಿಂತಿದ್ದರು.

ಇತ್ತ ಸಿಂಧಿ ಅಂಗಡಿಗಳನ್ನು ಲಿಲಾವಿನಲ್ಲಿ ಹಿಡಿಯತಕ್ಕವರೆಲ್ಲರೂ ಶ್ರೀ ಜೆ.ಬಿ. ಮುನಸೂಫರ ಮನೆಯಲ್ಲಿ ಒತ್ತಟ್ಟಿಗೆ ಕಲೆತು ಕಾಂಗ್ರೆಸ್ ಕಾರ್ಯಕರ್ತರೊಡನೆ ವಿಚಾರ ಮಾಡಿದರು. ಈ ದಿನ ಸಿಂಧಿ ಅಂಗಡಿಗಳನ್ನು ಲಿಲಾವಿನಲ್ಲಿ ಯಾರೂ ಹಿಡಿಯುತಕ್ಕದ್ದಲ್ಲವೆಂದೂ ಮಹಾತ್ಮಾ ಗಾಂಧಿ ಹಾಗು ವ್ಹಾಯಿಸರಾಯರ ನಡುವೆ ನಡೆದ ಚರ್ಚೆಯ ಫಲಿತಾಂಶವು ತಿಳಿದು ಬರುವವರೆಗೆ ಲಿಲಾವನ್ನು ಮುಂದರಿಸಬೇಕಾಗಿ ಕಲೆಕ್ಟರರಿಗೆ ಕೇಳಿಕೊಳ್ಳತಕ್ಕದ್ದೆಂದೂ ಅವರು ನಿರ್ಧರಿಸಿ ಕೊಡಂರು. ಕಲೆಕ್ಟರರಿಗೆ ಆದರಂತೆ ತಿಳಿಸಿದರು. ಕಲೇಕ್ಟರರು ಲಿಲಾವನ್ನು ೧೧ ನೆಯ ತಾರೀಖಿಗೆ ಮುಂದರಿಸಿದರು.

ಶ್ರೀ ಹಳ್ಳೇಕೇರಿಯವರಿಗೆ ೩ ತಿಂಗಳ ಕಠಿಣ ಶಿಕ್ಷೆ

ಹಾವೇರಿ ತಾಲೂಕಿನಲ್ಲಿಯು ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರಿಗೆ, ಇ. ಪಿ ಕೋಡಿನ ೧೧೭ ಹಾಗು ಉಪ್ಪಿನ ಕಾಯದೆಯ ೪೭ ನೆಯ ಕಲಮಿನನ್ವಯ, ೧೦೦ ರೂ. ದಂಡ ಇಲ್ಲವೆ ೩ ತಿಂಗಳ ಕಠಿಣ ಶಿಕ್ಷೆಯು ದೊರಕಿಸಿದ್ದು ಅವರು ದಂಡ ಕೊಡದೆ ಕಾರಾಗೃಹಕ್ಕೆ ತೆರಳಿದರು. ಹೋದ ತಿಂಗಳಲ್ಲಿ ಹೊಸರಿತ್ತಿಯಲ್ಲಿ ಜಾಶ್ತಿ ನಡೆದಾಗ ಅಲ್ಲಿ ಪಂದೇಶಿ ವಸ್ತುಗಳ ಬಹಿಷ್ಕಾರಕಾರ್ಯವನ್ನು ಇವರು ಒಳ್ಳೇ ಜೋರಿನಿಂದ ನಡಾಯಿಸಿದ್ದರು.

ಮಹಾತ್ಮರ ಸಂದೇಶ

"ಒಪ್ಪಂದದ ಕಡೆಗೆ ಲಕ್ಷ್ಯಕೊಡದೆ ಚಳವಳಿಯನ್ನು ಸಾಗಿಸಿರಿ"

ಮಹಾತ್ಮಾ ಗಾಂಧಿಯವರು ಈಗ ದಿಲ್ಲಿಯಲ್ಲಿ ಕಂಧಾನದ ಕಾರ್ಯದಲ್ಲಿ ತೊಡಗಿಕೊಂಡಿರುವದರಿಂದ ಗುಜರಾತಿನಲ್ಲಿ ಪ್ರತಾಸ ಮಾಡುವದು ಅವರಿಗೆ ಶಕ್ಯವಿರುವದಿಲ್ಲ ಆದ್ದರಿಂದ ಅವರು ತಮ್ಮ ಅನುಯಾಯಿಗಳಿಗೆ ಒಪ್ಪಂದದ ಕಡೆಗೆ ಲಕ್ಷ್ಯ ಕೊಡದೆ ಚಳವಳಿಯನ್ನು ಸಾಗಿಸಲು ಸಂದೇಶಕೊಟ್ಟಿದ್ದಾರೆ.

ಮಾಮಲೇದಾರರ ಸುಳ್ಳು ಹೊರಬಿತ್ತು

ಅಂಕೋಲಾ ತಾಲೂಕಿನ ಮಾಮಲೇದಾರದಾರರು ರೈತರಿಗೆ "ತೀರ್ವೆಯನ್ನು ಕೊಟ್ಟು ಬಿಡಿರಿ. ನಿಮ್ಮ ವೇಲೆ ಬಹಿಷ್ಕಾರ ಹಾಕ್ಲುವೆದಿಲ್ಲ ವೆಂದು ಡಾ.ಹರ್ಡೀಕರರು ಹೇಳಿದ್ದಾರೆ" ಎಂದು ದಾಗಿ ಉಪದೇಶಿಸುತ್ತಿರುವದು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆಯಷ್ಟೆ ಫ್ರೀಪ್ರೆಸ್‌ದ ಪ್ರತಿನಿಧಿಯು ಡಾ. ಹರ್ಡೀಕರರನ್ನು ಕಂಡುಕೊಂಡು ಈ ಸಂಬಂಧವಾಗಿ ಅವರ ಅಭಿಪ್ರಾಯ ಕೇಳಿದೆನು. ಆಗ ಡಾ.ಹರ್ಡೀಕರರು ಕೆಳಗಿನಂತೆ ತಿಳಿಸಿದರ್:

"ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಪ್ರಕಾರ ಮಾಮಲೇದಾರರು ಹೇಳಿದ್ದರೆ ಅದು ತೀರ ತಪ್ಪು ಇರುತ್ತದೆ. ಈ ಸಂಬಂಧವಾಗಿ "ಮಾಮಲೇದಾರರಿಗೆ ಇಲ್ಲವೆ ಇತರರಿಗೆ ನಾನು ಯಾವ ಅಶ್ವಾಸನವನ್ನೂ ಕೊಟ್ಟಿಲ್ಲ "ಮಾಮಲೇದಾರರೊಡನೆ ಮಾತಾಡುವ ಪ್ರಸಂಗವೇ ನನಗೆ ಬಿದ್ದಿಲ್ಲ. ಕಾರಣ ಇಂಥವುಗಳನ್ನು ನಂಬಿ ಯಾರೂ ಮೋಸ ಹೋಗಬಾರದು.

ಎಚ್ಚರಿಕೆ

ಯಾವತ್ತೂ ಖಾದೀಭಕ್ತರಿಗೆ ಈ ಮೂಲಕ ತಿಳಿಸುವದೇನಂದರೆ.

ಜವಳಿ ಖಾಂಡ ಸಂಸ್ಥಾನದ ಹುನ್ನೂರ ಚರಖಾ ಲಯದ ಮಾಧವ ಗೊವಿಂದ ಕುಲಕರ್ಣಿಯೆಂಬುವರು ನಮ್ಮ ಚರಖಾಸಂಘಕ್ಕೆ ಉದ್ಯೋಗದಲ್ಲಿ ಕೆಲವು ದಿನಗಳ ವರೆಗೆ ಕೆಲಸಮಾಡಿದ್ದು, ಈಗ ಅವರು ಅಕೆಲಸದಿಂದ ಬಿಡಿಸಲ್ಪಟ್ಟಿರುವರು. ಅವರು ಈಗ ನಮ್ಮ ಸಂಘದ ಹೆಸರಿನಿಂದ ತಮ್ಮ ಜವಳಿಯನ್ನು ಶುದ್ಧ ಖಾದಿಯೆಂದು ಮಾರುತ್ತಿರುವರೆಂದೂ, ಈಸಂಬಂಧವಾಗಿ ಕೆಲವು ಹಳ್ಳಿ ಪತ್ರಿಕೆಗಳನ್ನು ಹಂಚಿರುವರೆಂದೂ ನಮಗೆ ತಿಳಿದು ಬಂದಿದೆ. ಅವರಿಗೆ ಹೀಗೆ ಖಾದೀ ಮಾರಲು ನಮ್ಮ ಸಂಘದಿಂದ ಸರ್ಟಿಫಿಕೇಟು ಸಿಕ್ಕಿರುವದಿಲ್ಲ

ಬೆಳಗಾವಿ
೧೯-೨-೩೧

ಕ. ಬ. ಪೊರೋಹಿತ
ಕಾರ್ಯದರ್ಶಿ
ಅಖಿಲ ಕರ್ನಾಟಕ
ಚರಖಾಸಂಘ.

ವಿಜಾಪುರ ಜಿಲ್ಲೆಯ ರೈತರ ಪರಿಷತ್ತು
ಅಧ್ಯಕ್ಷರಾದ
ರಾ. ಬ. ಎಸ್. ಎನ್. ಅಂಗಡಿ ಇವರ ಭಾಷಣವು
(ನಿನ್ನಿನ ಸಂಚಿಕೆಯಿಂದ ಬಂದದ್ದು)

(ಕಳೆದ ಸಂಚಿಕೆಯಿಂದ ಒಂದ್ದು.)

ಸಹಕಾರೀ ಶಾಖೆಯು ಮುಖಾಂತರವೇ ಸ್ವಲ್ಪಗಾಯಿ ಸಾಲವನ್ನು ಕೊಡುವ ಪದ್ಧತಿಯು ಇದೀಗ ಪ್ರಾರಂಭವಾದೆ. ಇಲ್ಲಿ ಕೂಡ ಸಾಲದ ಅರ್ಜಿಯು ವಿಚಾರಣೆಗಾಗಿ ಮಂಡೂರಾಗಲು ಸ್ವಲ್ಪ ಪರ್ಸಗಳು ಬೇಕಾಗುತ್ತವೆಂಬುದನ್ನು ಕೇಳಿ ನನಗೆ ಸೋಜಿಗವಾಗಲಿಲ್ಲ. ವ್ಯವಹಾರ ದೃಷ್ಟಿಯಿಂದ ವಿಚಾರಿಸಿದರೆ ಸೊಸಾಯಿಟಿಗಳ ಬಜೆಟ್ಟಿನ ಬಜೆಟ್ಟಿಯು ದಂದಲ್ಲಿಯೂ ಸ್ಥಾನಿಕ ಸಾವಕಾರ ಬಡ್ಡಿಯ ಪ್ರಮಾಣದಲ್ಲಿಯೂ ಏಕೀಕೃತ ಆಭ್ಯಾತೆಯಿಲ್ಲದ್ದರಿಂದ ರೈತರಿಗೆ ಬೇಕಾದ ಜವಾಬ್ದಾರಿಕೆಯನ್ನು ಸಹಾಯವು ಸಿಕ್ಕಿಲಾರದಾಗಿದ್ದು.

ಹೊಲಬತ್ತೀ ಬ್ಯಾಂಕು

ಇನಗೆ ಗೊತ್ತಿದ್ದ ಮಟ್ಟಿಗೆ ರೈತರ ಸಾಲಗಾರಿಕೆಯನ್ನು ನಿರ್ಮೂಲಗೊಳಿಸಬೇಕೆಂದು ಸರಕಾರದ ಇಚ್ಛೆಯಿದ್ದರೆ ಒಂದೇ ಒಂದು ಉಪಾಯವು ಇರುತ್ತದ ಸರಕಾರದವರು ಪ್ರತಿ ಯೊಂದು ಜಿಲ್ಲೆಯಲ್ಲಿ ಒಂದು ಹೊಲಗಳನ್ನು ಒತ್ತೀ ಹಿಡಿಯುವ ಬ್ಯಾಂಕನ್ನು ಸ್ಥಾಪಿಸಿ ಅತ್ಯಂತ ಅಗ್ಗವಾದ ಬಡ್ಡಿಯ ದರದಿಂದ ಅಂದರೆ ನೂರಕ್ಕೆ ಐದು ರೂಪಾಯಿಗಳಂತೆ ಸಾಲವನ್ನು ಕೊಡಬೇಕು. ಈ ವಿಷಯಸ್ಥಿತಿಗೆ ಸರಕಾರದವರೇ ಸಂಪೂರ್ಣ ದೋಷಾರ್ಹರೆಂದು ಹೇಳಲಿಕ್ಕಾಗದು. ನಿಮ್ಮ ಸಾಲವನ್ನು ತೀರಿಸುವದಕ್ಕೆ ನಿಮ್ಮಿಂದಾಗದಿದ್ದರೆ ಅದಕ್ಕೆ ನಿಮ್ಮ ಸ್ಥಿತಿಯ ಭಾವಿಕತನವೂ ದುಂದುಗಾರಿಕೆಯೂ, ಅಂಥ ಅಲಹಗಳೂ ಕಾರಣಗಳು. ನೀವು ಬಡ್ಡಿಪ್ಪಟ್ಟವರಿಂದ ಕೈ ಬಿಗಿಹಿಡಿದು ವೆಚ್ಚವಾ ಗುವದು. ನಿಮ್ಮ ಕರ್ತವ್ಯವೆಂದೇ ನನ್ನ ಅಭಿ ಪ್ರಾಯ ನಿಮ್ಮ ಜೆಲ್ಲೆಯ ವಿಷಯವಾಗಿ ಹೇಳಬೇಕಾದರೆ ಇತಿಹಾಸ ಪ್ರಸಿದ್ಧ ತಮಾಷಾ ತಿಗಳಿಗಾಗಿ ನಿಮ್ಮೀ ನಗರವು ಪ್ರಸಿದ್ಧವಿದ್ದರೂ ಶಿವಮೆ ಮಳೆಗಾಗಿ ಹೆಸರಾಗಿರುವದು ವಿಜಾ ಪುರಂದಲ್ಲಿ ಇಲ್ಲೋ ದೆಳೆಯು ಬಂದಿದೆಯೆಂದರೆ ಅದೊಂದು ಉತ್ಸವದ ವಿಷಯ. ಯಾಕಂದರೆ ಶುರ್ವಾಟಕ್ಕಿದ್ದ ಇತರ ಸ್ಥಳಗಳಲ್ಲಿಯ ದೆಳೆಗಳು ಕೆಟ್ಟಿಲ್ಲವೆಂಬುದರ ಲಕ್ಷಣವದು. ಸಾಧಾರಣ ವಾಗಿ ನಿಮ್ಮ ಭೂಮಿಯನ್ನು (Dry tract) ನಲ್ಲಿ ಸೇರಿರಬಹುದು. ಇದಕ್ಕೆ ಒಡ್ಡುಗಳನ್ನು ಹಾಕುವದೊಂದೇ ಒಂದು ಉಪಾಯವು. ನಿಮ್ಮೊಳಗಿನವರೇ ಆದ ದಿವಾಣಬಹಾದ್ದೂರ ಕಂಬಳಿಯವರೇ ಈ ನ ಒಕ್ಕಲತನ ಖಾತೆಯ ವಂತ್ರಿಗಳಾಗಿರುವರು. ಕರ್ನಾಟಕಕ್ಕೋಸುಗ ವಿಶೇಷತಃ ವಿಜಾಪುರ ಜಿಲ್ಲೆಯ ವಿಷಯವಾಗಿ ಅವರು ಏನಾದರೂ ಮಾಡಿಯಾರೆಂದು ನಮ್ಮ ಅಪೇಕ್ಷೆ.

ಆಳವಾಗಿ ನೇಗಿಲವನ್ನು ಹೊಡೆಯಲು ಟ್ರ್ಯಾಕ್ಟರುಗಳನ್ನು ಉಪಯೋಗಿಸುವದು ಇನ್ನೊಂದು ಉಪಾಯವು. ಆದರೆ ಟ್ರ್ಯಾಕ್ಟರ ಗಳ ಬೆಲೆಯು ಬೆದರಿಸುವಂತಿದೆ. ಸರಕಾರದ ವರಿಂದ ಉದಾರಾಶ್ರಯವನ್ನು ಹೇರಂದಿ ಸ್ಥಾನಿಕ ಸಂಸ್ಥೆಗಳು ಈ ಟ್ರಾ ಕ್ಟರುಗಳನ್ನು ಬಾಡಿಗೆ ಯಿಲ್ಲದೆ ಒಕ್ಕಲಿಗರಿಗೆ ಉಪಯೋಗಕ್ಕಾಗಿ ಕೊಡ ಬೇಕೆಂದು ನಾನು ಸೂಚಿಸುತ್ತೇನೆ

ರೈತರ ಕಾನೂನು.

ಕರ್ನಾಟಕ ಸಹಿತವಾದ ಮುಂಬಯಿ ಇಲಾಖೆಯ ಟೆನನ್ಸಿಯ ಕಾಯದೆಯ ಅವಶ್ಯಕ ತೆಯು ಬಹಳವಾಗಿದೆ. ಮದ್ರಾಸ ಇಲಾಖೆ ಯಲ್ಲಿ ಇಂತಹದೇ ಒಂದು ಮಲಬಾರ ಟೆನನ್ಸಿ ಯೋಜನೆಯು ಕಾಯದೆಯಾಗಿ ಮಂಜೂರ ಮಾಡಲ್ಪಟ್ಟಿದೆ. ಅದರ ಕಲಮುಗಳನ್ನು ನಾನು ಅಭ್ಯಾಸ ಮಾಡಿಲ್ಲ. ಆದರೆ ನಮ್ಮ ಪ್ರಾಂತದ ಪರಿಸ್ಥಿತಿಗೆ ಅನ್ವಯಿಸತಕ್ಕ ಟೆನನ್ಸಿ ಕಾಯದೆ ಯನ್ನು ಕ್ಷಿಪ್ರದಲ್ಲಿಯೇ ಕೈಕೊಳ್ಳಬೇಕಾಗ ತ್ತದೆ. ಇದು ಮೂಲನೇ ಉಪಾಯವು. ಇನ್ನು ನಾಲ್ಕನೆಯ ಉಪಾಯವೆಂದರೆ ರಿಪ್ಡಿಜನ್‌ಸೆಟ ಲ್‌ಮೆಂಟುಗಳನ್ನು ಇನ್ನು ಮುಂದೆ ನಿಲ್ಲಿಸಿಬಿ ಡತಕ್ಕದ್ದು. ಸರಕಾರಕ್ಕೆ ಕಂದಾಯವು ಬೇಕಿ ದ್ದರೆ ಒಕ್ಕಲತನದ ಉತ್ಪನ್ನದಂತಹ ಬೇರೆ ಉಗವುಗಳನ್ನು ಶೋಧಿಸಲಿ. ಈ ರಿಪ್ಡಿಜನ್‌ಸೆಟಲ್‌ಮೆಂಟಿನ ವಿಷಯವಾಗಿರುವ ಮೆಸರ್ಸ ಬಡ್ರಿಮುಫೀಲ್ಡ ಮತ್ತು ವಮ್ಯಾಕ್ಸವೆಲ್ಲರ ವಾದ ಯು ನಮ್ಮ ಕಣ್ಣುಗಳಲ್ಲಿ ಅಂಜನವನ್ನು ಹಾ ಕಿದೆ. ಈ ನಿರ್ಣಾಯ ಪದ್ಧತಿಯ ಪರಿಶುದ್ಧತೆಯ ವಿಷಯವಾಗಿ ನಾವು ಸಾತಂಕರಾಗಿದ್ದೇವೆ. ಸಣ್ಣ ತುಂಡು ಹೊಲಗಳ ಒಡೆಯರಿಗೆ ಈಗಿದ್ದ ಕಂದಾಯ ಪದ್ಧತಿಯು ಬಹಳೇ ಬಾಧಕವಾಗಿದೆ. ಬರಗಾಲವಿದ್ದ ವರುಷಗಳಲ್ಲಿ ಕಂದಾಯವನ್ನು ತಾತ್ಪೂರ್ತಿಕವಾಗಿ ಬಂದು ಇಡುವದೂ ಸೂಟು ಬಿಡುವದೂ ಏನೇ ಉಪಾಯವು.

ವಿಜಾಪುರ ಹಾಗು ಇಂಡಿಯ ವ್ಯಾಪಾರಿಗಳ ಪತಿಜ್ಞೆ

(ತಂತಿಯ ವಾರ್ತೆ. ವಿಜಾಪುರ, ತಾ॥ ೨೪)

ವಿಜಾಪುರ ಹಾಗು ಇಂಡಿಯ ಜನಳ ವ್ಯಾಪಾರಸ್ಥರು ಇನ್ನು ಮುಂದೆ ಪರದೇಶಿ ಹಾಗು ಬಹಿಷ್ಕೃತ ಗಿರಣಿಗೆಳಲ್ಲಿ ತಯಾರಾದ ಬಟ್ಟೆಯನ್ನು ತರಿಸುವದಿಲ್ಲವಾಗಿ ವಚನಕೊಟ್ಟಿದ್ದಾರೆ.

ಮುಂಬಯಿಯಲ್ಲಿ ಮತ್ತೆ ಲಾರಿ ರಾಜ್ಯ

(ತಂತಿಯವಾರ್ತೆ ತಾ॥೨೩)

ವ್ಹಾಯಿಸರಾಯರಾದ ಲಾರ್ಡ ಅಯರ್ವಿನ ರಿಗೆ ಮಾನ ಪತ್ರ ಕೊಡದೇಕೆಂಬುದಾಗಿ ಮುಂಬಯಿ ಕಾರ್ಪೋರೇಶನದಲ್ಲಿ ಓರ್ವ ಸಭಾ ಸದರು ಇಂದು ಸೂಚನೆ ತರತಕ್ಕವರಿದ್ದರು. ಈ ಸಂಬಂಧವಾಗಿ ಕಾರ್ಪೋರೇಶನದಲ್ಲಿ ವಿಜಾ ೭ ವಡಿಸಿ ಕೊಡಬಾರದೆಂಬ ಉದ್ದೇಶದಿಂದ ಕೆ ಲವು ಸ್ವಯಂಸೇವಕರೂ ಹಾಗು ದೇಶಸೇವಿಕೆ ಯರೂ ಕಾರ್ಪೋರೇಶನಕ್ಕೆ ಸಾಗಿಹೋಗಿ ಅದ ನ್ನು ಮುತ್ತಿದರು. ಪೋಲೀಸರು ಅಲ್ಲಿಗೆ ಬಂದು ಅವರನ್ನು ಲಾರಿಗಳಿಂದ ಚದುರಿಸಲು ಪ್ರಯತ್ನ ಮಾಡಿ ೧೯ ಜನ ದೇಶ ಸೇವಿಕೆಯರನ್ನು ಸೆರೆ ಹಿಡಿದುಕೊಂಡು ಹೋದರು.

ಲಾಹೋರದಲ್ಲಿ

ಧುಮಡತಿಯು ಹಾವಳಿಯು

ಲಾಹೋರದ ಪೋಲೀಸ ಅಧಿಕಾರಿಗಳು ತಾ॥ ೨೦ ನೆಯ ದಿವಸ ಅಲ್ಲಿಯ ಹಿಂದುಸ್ಥಾನಿ ಸೇವಾದಳ,ಭಗತಸಿಂಗ ಸಹಾಯಕ ಮಂಡಳ, ಲಾಲಾ ಫಿರೋಜಚಂದ,ಸರದಾರ ಕೇಶನಸಿಂಗ, ಯುವತಿ ಲಜ್ಜಾವತಿ ಮೊದಲಾದವರ ಮನೆ, ಇವುಗಳನ್ನು ಧುಡತಿ ಮಾಡಿದರು, ಧುಡತಿಯ ಲ್ಲಿ ಅತ್ಯೇಷಾರ್ಹವಾದವುಗಳೇನೂ ಸಿಗಲಿಲ್ಲ.

ಬೋರೆಸಾದದ ಅತ್ಯಾಚಾರ!

ತಾ॥ ೧೫ ನೆಯ ಜನೆವರಿ ದಿವಸ ಸಾಬರ ಮತಿ ಸತ್ಯಾಗ್ರಹ ಆಶ್ರಮದ ಶ್ರೀಮತಿ ಲೀಲಾವತಿ ಬೇನಆಸಾರ ಇವರನ್ನು ಸೆರೆಹಿಡಿದೊಯ್ದು ಪೋಲೀಸ ಚೌಕಿಯಲ್ಲಿ ಅವರಿಗೆ ಹೊಡೆಯಲಾಯಿತು. ಅದರಂತೆ ಮೆರವಣಿಗೆಯಲ್ಲಿಯು ಉಳಿದ ಜನರಿಗೂ ಹೊಡತ ಬಿದ್ದವು ಈ ಪೋಲೀಸರ ಅತ್ಯಾಚಾರವನ್ನು ನಿಷೇಧಿಸವ ಕುರಿತು ತಾ॥ ೨೧ ನೆಯ ಜಾನೆವರಿ ದಿವಸ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ "ಪೋಲೀಸ ಅತ್ಯಾಚಾರ ನಿಷೇಧ ದಿನ"ವು ಪಾಲಿಸಲ್ಪಡಬೇಕಾಗಿ ಬೀಡಾ ಜಿಲ್ಲೆಯ ಕಾಂಗ್ರೆಸ್ ಕಮಿಟಿಯವರ ಅಪ್ಪಣೆ ಕೊಡಿಸಿದರು. ಈ ಆಜ್ಞೆಗನುಸಾರವಾಗಿ ಬೋರಸಾದದಲ್ಲಿ ಅಂದ. "ಪೋಲೀಸ ಅತ್ಯಾಚಾರ ನಿಷೇಧ ದಿನ"ವನ್ನು ಪಾಲಿಸಲಾಯಿತು. ಆ ದಿನ ಹೊ ಟ ಮೆರವಣಿಗೆಯಲ್ಲಿ ಕಾಯದೆ ಭಂಗ ಚಳವಳಿಯಲ್ಲಿ ಭಾಗ ತೆಗೆದುಕೊಂಡ ಪಟೇದಾರ ಜನರ ಸ್ತ್ರೀಯರು ಪ್ರಮುಖ ಭಾಗ ವಹಿಸಿದ್ದರು. ಮೆರವಣಿಗೆ ಅಧಿಕಾರಿಗಳು ಅಡ್ಡಿಯನ್ನುಂಟು ಮಾಡದಿದ್ದರೂ, ಪೋಲೀಸರು ಮೆರವಣಿಗೆಯಲ್ಲಿಯು ಸ್ತ್ರೀಯರ ಮೇಲೆ ಹಲ್ಲೆ ಮಾಡಿದರು. ಮತ್ತು ಮೆರವಣಿಗೆಯಲ್ಲಿ ಸೇರಿಕೊಳ್ಳದಿದ್ದ ಪುರುಷರನ್ನೂ ಯಥೇಚ್ಛವಾಗಿ ಥಳಿಸಿದರು.

ಈ ಪ್ರಕರಣದ ಸಂಬಂಧವಾಗಿ ವಿಚಾರಣೆ ಮಾಡಿಕೊಂಡು ಬರಲು ಭಾರತ ಸೇವಾ ಸಂಘದವರು ಶ್ರೀ ಖಾಪರ್ಡೆ ಮತ್ತು ಚಿಕಾಳೆಯವರ ಇವರನ್ನು ನಿಯುಮಿಸಿದರು. ಅವರು ಬೋರಸಾದಕೆ ಹೋಗಿ ಎಲ್ಲ ಸ್ಥಿತಿಗತಿಗಳನ್ನು ನಿರೀಕ್ಷಿಸಿ ಗಾಯ ಹೊಂದಿದವರ ಹಾಗು ಅವರ ಬಂಧು ಬಳಗದವರ ಜವಾಬು ತೆಗೆದುಕೊಂಡು ಸ್ವತಂತ್ರವಾಗಿ ವಿಚಾರಣೆ ನಡಿಸಿ, ಒಂದು ವರದಿಯನ್ನು ಪ್ರಸಿದ್ಧ ಮಾಡಿದ್ದು ಅದರ ಸಾರಾಂಶವೇನೆಂದರೆ

೧. ತಾ॥೧೫ ನೆಯ ಜಾನೆವರಿ ದಿವಸದ ಪೋಲೀಸರ ಅತ್ಯಾಚಾರವನ್ನು ನಿಷೇಧಿಸುವದ ಕ್ಕಾಗಿಯೇ ತಾ॥೨೧ ನೆಯ ಜಾನೆವರಿ ದಿವಸ ಮೆರವಣಿಗೆಯು ಹೊರಟಿತ್ತು. ೨ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳಲು ಎಂಟು ತಂಡಗಳು ಬೋರಸಾದಕ್ಕೆ ಬಂದಿದ್ದವು, ಅವುಗಳಲ್ಲಿ ಅರು ತಂಡದವರು ಧರ್ಮಶಾಲೆಗಳಲ್ಲಿ ಇಳಕೊಂಡಿದ್ದರು. ೩ ಮೆರವಣಿಗೆಯಲ್ಲಿ ೧೪೦೦ ಕ್ಕಿಂತ ಹೆಚ್ಚಿಗೆ ಜನರು ಭಾಗ ತೆಗೆದುಕೊಂಡಿದ್ದಿಲ್ಲ. ೪ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳುವ ಉದ್ದೇಶದಿಂದ ಹೊರಗಿನ ಊರವರು ತಾ॥೨೧ ನೆಯ ದಿವಸ ೧೦ ಘಂಟೆಯೊಳಗಾಗಿ ಬೋರಸಾದಕ್ಕೆ ಬಂದಿದ್ದಿಲ್ಲ. ೫, ಸ್ತ್ರೀಯರ ಇಲ್ಲವೆ ಮೆರವಣಿಗೆಯ ಸಂಗಡ ಹೋಗಿರುವ ಪುರುಷರ ಸಂಖೆಯು ೨೫ ಇಲ್ಲವೆ ೩೦ ಕ್ಕಿಂತ ಹೆಚ್ಚಿಗೆ ಇರಲಿಲ್ಲ. ೬, ಮೆರವಣಿಗೆಯಲ್ಲಿ ಕೇವಲ ಸ್ತ್ರೀಯರೇ ಭಾಗ ತೆಗೆದುಕೊಂಡಿದ್ದರು. ೭ ಬಾರಿಯಾ ಬಂದವರಿಗೆ ನೀರು ಸಿಗುವಂತೆ ಬೋರಸಾದ ಪಾಂಜರಪೋಳಿರುವದುಮ್ಮವಸೆಯ ನ್ನಿಟ್ಟಿದ್ದರು ಆದರೆ ಪೋಲೀಸರು ನೀರಿನ ಭಂಡಿಯನ್ನು ಒಡೆದು ನೀರನ್ನು ಜಲ್ಲಿದರೆಂದು ತಿಳಿದು ಬರುತ್ತದೆ. ೮ ಮಧ್ಯಾನದಲ್ಲಿ ೧೧॥ ಯಿಂದ ೧೩ ಘಂಟೆಯವರೆಗೆ ಪೋಲೀಸರು ಬರೇ ಸ್ಟ್ರೆಟರ್ಲ್ಲಿ ಸುಜಾನ ಆಶ್ರಿಂ ವ್ಯಾಪಾರಕ್ಕಾರಿಗೆ ಬಂಗಡಿಗಳನ್ನು ಮುಚ್ಚಹಚ್ಚಿದರು. ಈ ಮಯದಲ್ಲಿ ಅವರು ಕೆಲವು ಅಂಗಡಿಕಾರರಿಗೂ ಹಾಗು, ಗಿರಾಕಿಗಳಿಗೂ ಹೊಡೆದರು. ಅಲ್ಲಿಯ ವಾಹನಾಲಯದಲ್ಲಿ ಪೋಲೀಸರು ಒಳ ಹೊಕ್ಕು ಅಲ್ಲಿ ಓದುತ್ತ ಕುಳಿತ ಜನರನ್ನು ಹಾಗು ವ್ಯವಸ್ಥಾಪಕರನ್ನು ಹೊಡೆದರು. ೧೦, ಸರಕಾರದವರ ಎರಡನೇಯ ಪ್ರಕಟನೆಯಲ್ಲಿ ಗಾಯ ಹೊಂದಿದವರ ಹೆಸರುಗಳನ್ನು ಕೊಡಲ್ಪಟ್ಟಿದ್ದು ಅವರು ಮೆರವಣಿಗೆಯಲ್ಲಿ ಸೇರಿರದಿದ್ದರೂ. ಅವರಿಗೆ ಬಡತಗಳು ಬಿದ್ದವೆ ಗಾಯಹೊಂದಿದ ಪುರುಷರ ಹೆಸರುಗಳನ್ನ ಗಾಯ ಹೊಂದಿದ ಸ್ತ್ರೀಯರ ಪಟ್ಟಿಯಲ್ಲಿ ಸೇರಿಸಿ, ಅಲ್ಲಿಯ ಪರಿಸ್ಥಿತಿಯು ವಿಷಮವಾಗಿ ಜನರಲ್ಲಿ ತಪ್ಪು ತಿಳಿವಳಿಕೆಯನ್ನು ಮಾಡುವದಕ್ಕೂ, ಪೋಲೀಸರು ಸ್ತ್ರೀಯರನ್ನು ಹೊಡೆದದ್ದನ್ನು ಬಚ್ಚಿಟ್ಟು ಕೊಳ್ಳುವದಕ್ಕೂ ಸರಕಾರೀ ಪ್ರಕಟನೆಯಲ್ಲಿ ತಿಳಿದೂ ತಿಳಿದೂ, ಪ್ರಯತ್ನ ಮಾಡಲಾಗಿದೆ.

೧೧. ಬೇರೆ ಬೇರೆ ನಾಲ್ಕು ಸ್ಥಳಗಳಲ್ಲಿ ಬೇರೆ ಬೇರೆ ಸಮಯದಲ್ಲಿ ನಾಲ್ಕು ಮೆರವಣಿಗೆಗಳ ಮೇಲೆ ಎನಿಲ್ಲೆಂದರೂ ನಾಲ್ಕು ಸಾರಿ ಲಾಠಿ ಹಲ್ಲೆ ಮಾಡಲಾಯಿತು. ಮೆರವಣಿಗೆಯ ಮುಂಭಾಗದಲ್ಲಿದ್ದವರು ಹಾಗು ಕೈಯ್ಯಲ್ಲಿ ರಾಷ್ಟ್ರಧ್ವಜ ಹಿಡಿದವರು ಪೋಲೀಸರ ವಕ್ರದೃಷ್ಟಿಗೆ ಪಾತ್ರರಾದ್ದರಿಂದ,ಅವರಿಗೆ ಎಲ್ಲ ಜನರ ಕಿಂತಲೂ ಹೆಚ್ಚಾಗಿ ಹೊಡತ ಬಿದ್ದವು. ೧೨. ಈ ಲಾಠಿ ಪ್ರಹಾರದಲ್ಲಿ ಏನೋ ಸ್ತ್ರೀಯರಿಗೆ ಬಂದೂಕಿನ ತುದಿಯ ಪ್ರಸಾದವೂ ಸಿಕ್ಕಿದ್ದಲ್ಲದೆ, ಕೆಲವರಿಗೆ ಬಡತಗಳೂ ಬಿದ್ದವು. ಕೆಲವರ ಕೂದಲ ಹಿಡಿದು ಜಗ್ಗಿ ಅವರನ್ನು ದರದರ ಎಳೆದರು. ಈ ಮೂಲಕವಾಗಿ ಕೆಲವು ಸ್ತ್ರೀಯರು ಮೂರ್ಛೆ ಹೊಂದಿ ಬಿದ್ದರು. ೧೩. ಗಾಯ ಹೊಂದಿದವರಲ್ಲಿ ಬಂಧನಕ್ಕೊಳಗಾಗಿ ಶಿಕ್ಷೆಗೆ ಗುರಿಯಾದ ಜನರ ಹೊರತು ಗಾಯ ಹೊಂದಿದ ಇತರ ಜನರಿಗೆ ಸರಕಾರಿ ಅಧಿಕಾರಿಗಳು ಯಾವ ಔಷಧೋಪಚಾರವನ್ನೂ ಮಾಡಲಿಲ್ಲ. ಇಷ್ಟೇ ಅಲ್ಲದೆ ಅವರಿಗೆ ಒಂದು ಗುಟಕು ನೀರು ಸಹ ಕುಡಿಯಗೊಡಲಿಲ್ಲ. ಗಾಯ ಹೊಂದಿ ಬಂಧನಕ್ಕೊಳಗಾದವರು ಪೋಲೀಸ ಚೌಕಿಯಲ್ಲಿ ಇದ್ದಾಗಿ ಯಾರೂ ಅವರ ಸಂಬಂಧವಾಗಿ ಕಾಳಜಿಯನ್ನು ತೆಗೆದು ಕೊಳ್ಳಲಿಲ್ಲ. ೧೪. ಮೆರವಣಿಗೆಯಲ್ಲಿ ಪ್ರತ್ಯಕ್ಷವಾಗಿ ಯಾರಲಿ ಇಲ್ಲವೆ ಅಪ್ರತ್ಯಕ್ಷವಾಗಿಯಾಗಲಿ ಸೇರಿದ್ದ ಇಬ್ಬರು ವೃಶಸ್ಥರಿಗೆ ಒಬ್ಬ ಸೇಶಾಧಿಕಾರಿಯವನೆಯಲ್ಲಿ ತಳಿಸಿರುವಾಗ, ಪೋಲೀಸರು ಅಮಾನುಷವಾಗಿ ಹೊಡೆದು ಅವರನ್ನು ಹೊಡೆದರು. ೧೫ ಒಟ್ಟಿಗೆ ೧೫೯ ಜನ ಹೆಂಗಸರು ಹಾಗು ೧೩ ಜನ ಗಂಡಸರಿಗೆ ಗಾಯಗಳಾಗಿವೆ. ಗಾಯ ಹೊಂದಿದ ೧೧೧ ಜನ ಸ್ತ್ರೀಯರ ಹಾಗು ಕೆಲವು ಗಂಡಸರ ಜವಾಬುಗಳನ್ನು ನಾವು ತೆಗೆದು ಕೊಂಡೆವು.ಅವರಲ್ಲಿ ೭೬ ಇಪ್ಪು ಜನ ಸ್ತ್ರೀಯರ ದೇಹದ ಮೇಲಿನ ಗಾಯಗಳನ್ನು ನಾವು ನೋಡಿದೆವು. ೩೧ ಇಷ್ಟು ಜನ ಸ್ತ್ರೀಯರು ವೇದನೆಯಿಂದ ಬಳಲುತ್ತಿದ್ದರು. ೧೩ ಇಷ್ಟು ಜನ ಸ್ತ್ರೀಯರು ಪ್ರಹಾರದ ಮೂಲಕವಾಗಿ ಜ್ವರದಿಂದ ಪೀಡಿತರಾಗಿದ್ದರು. ೧೨ ಜನ ಸ್ತ್ರೀಯರನ್ನು ಕೂದಲ ಹಿಡಿದು ಜಗ್ಗಿ ದರದರ ಎಳೆದರೆಂದೂ, ೯ ಜನ ಸ್ತ್ರೀಯರು ಮೂರ್ಛೆ ಹೊಂದಿ ಬಿದ್ದರೆಂದೂ ಅವರ ಜವಾಬುಗಳ ಮೇಲಿಂದ ತಿಳಿಯಿತು.

೧೬ ಪೋಲೀಸರು ಮೆರವಣಿಗೆಯನ್ನು ದಿಕ್ಕಾಪಾಲು ಮಾಡುವ ನಿಶ್ಚಯವನ್ನೇ ಮಾಡಿದ್ದರು. ಅವರು ದಯಾಮಾಯಗಳನ್ನು ಎಳ್ಳಷ್ಟೂ ಹಿಡಿಯದೆ. ಸರಕಾರಿ ಸೂಚನೆಗಳನ್ನು ಕಟ್ಟಿಟ್ಟು ಪ್ರಹಾರ ಮಾಡಿದರು. ಈ ಪ್ರಹಾರವು ಬಹಳೇ ಭಯಂಕರ ಸ್ವರೂಪದ್ದಾಗಿತ್ತು. ೧೭, ಬೀಡಾ ಜಿಲ್ಲೆಯ ಮ್ಯಾಜಿಸ್ಟ್ರೇಟರು ಕೃಸಿನ್ದವಾಡಿದ ವ್ಯಕ್ತ್ಯಂಕಕ್ಕೂ, ಸರಕಾರದವರು ಪ್ರಕಟಿಸಿದ ವರಡು ಪ್ರಕಟನೆಗಳಿಗೂ,ಎಷ್ಟೋ ವ್ಯತ್ಯಾಸವು ಕಂಡು ಬರುತ್ತದೆ. ೧೮. ಈ ಮೂರೂ ಪ್ರಕಟನೆಗಳಲ್ಲಿ ಕೊರಸಿರುವ ವೆರವಣಿಗೆಯ ಕಾರಣ, ಮೆರವಣಿಗೆಯಲ್ಲಿ ಭಾಗ ತೆಗೆದು ಕೊಂಡ ಜನರ ಸಂಖ್ಯೆ ಕಲ್ಪು ಮಣ್ಣು ಒಗೆದಿದ್ದು ಮತ್ತು ಪೋಲೀಸರ ಪುಂಡಾಟಿಕೆ ಇವುಗಳಲ್ಲಿ ವ್ಯತ್ಯಾಸವಿದ್ದು, ಅವುಗಳಲ್ಲಿಯ ವಿಧಾನಗಳು ಪರಸ್ಪರ ವಿರುದ್ಧವಾಗಿವೆ.

೧೯ ಈ ಪ್ರಕಾರವಾಗಿ ಸರಕಾರದವರಿಂದ ಪ್ರಸಿದ್ಧಪಟ್ಟ ಪರಸ್ಪರ ವಿರೋಧಿವೃತ್ತಾಂತಗಳಿಂದ ಜೋಸಾದಳ್ಳಿ ಸಂಭವಿಸಿದ ಸಂಗತಿಯ ಬಗ್ಗೆ ಎಳ್ಳಷ್ಟೂ ನಿಜವಾದ ಬೆಳಕನ್ನೆ ಬರುವದಿಲ್ಲ. ಈ ಸರಕಾರೀ ಪ್ರಕಟನೆಯಲ್ಲಿ,ಪೋಲೀಸರ ಮೇಲಿನ ಅಪರಾಧವನ್ನು ಪರಿಹಾರ್ಯವನ್ನಾಗಿ ಮಾಡಿ ಅವರನ್ನು ರಕ್ಷಿಸುವ ಪ್ರಯತ್ನ ಮಾಡಿಲಾಗಿದೆ. ೨೦. ಜೋಸಾದಿಂದ ಜನರು ಹತ್ತಿರ ಭಯಂಕರ ಸ್ವರೂಪದ ಶಸ್ತ್ರಾಸ್ತ್ರಗಳು ಇದ್ದವೆಂದು ಹೇಳಿರುವ ಸ್ವಲ್ಪಾದರೂ ಆಧಾರವಿಲ್ಲ. ಪೋಲೀಸರು ತಮ್ಮ ರಕ್ಷಣೆಯ ಸಮರ್ಥನೆ ಮಾಡಿಕೊಳ್ಳಲು, ಮೆರವಣಿಗೆಯಲ್ಲಿ ಸೇರಿದ ಜನರು ಅನಕ್ಯಾಚಾರ ಪರ್ಯವನ್ನೆಸಗಿದರು ಎಂಬ ಕಪ್ಪು ಬಳಿಯಲಿಕ್ಕೂ ಹೀಗೆ ಪ್ರಯತ್ನವು ಮಾಡಲ್ಪಟ್ಟಿದೆ. ೨೧. ಪೋಲೀಸರ ಮೇಲೆ ಕಲ್ಲುಗಳನ್ನು ಬಿಸಿದ್ದಾಗಿ ಒಂದಿಲ್ಲ. ೨೨. ರಾತ್ರಿಪೋಲೀಸರಿಗೂ ಗುಂಪಿನವರಿಗೂ ಕಲಹವಾದಾಗ, ಕೆಲವು ಸ್ತ್ರೀಯರ ಕೈಯ್ಯಲ್ಲಿ ಕಲ್ಲುಗಳಿದ್ದವು ಎಂಬ ಅಭಿಪ್ರಾಯವು ಸುಳ್ಳು ಹುಟ್ಟಿಸಿದ. ೨೪. ಪರಿಸ್ಥಿತಿಯು ಯಾವ ಪ್ರಕಾರದಿಂದಲೂ ಬಿಕ್ಕಟ್ಟಾಗಿದ್ದಿಲ್ಲ. ಪರಿಸ್ಥಿತಿಯು ಹೀಗೆ ಇದೆ ಎಂಬುದನ್ನು ಪರೀಕ್ಷಿಸದ ಪೊಲೀಸರು ಲಂಗುಲಗಾಮ್ಯ ಪ್ರಾರಂಭಿಸಿದರು ಪೋಲೀಸರ ಈ ಕೃತ್ಯವು ಮೂಲಕವಾಗಿ ಪರಿಸ್ಥಿತಿಯು ಚಿಂತಾಜನಕವಾಯಿತು ಕು ೨೫. ಪೋಲೀಸರು ಬಿಡಿದು ಒಂದಿಬ್ಬರಿಲ್ಲವೆ ಹೊಂದಿದಿಂರಿ,ಅವರ ಲೀಲೆಯು ಮಾತ್ರ ಎಚ್ಚರಿಕೆಯ ಮೇಲೆ ಇದ ಜನರ ಕೃತಿಯಂತೆ ಇತ್ತು. ೨೬ ಹಿಂದುಸ್ಥಾನದ ಅರ್ವಾಚೀನ ಇತಿಹಾಸದಲ್ಲಿ ಉಲ್ಲೇಖಿಸಿಟ್ಟ ಅತ್ಯಾಚಾರಗಳಲ್ಲಿ 'ಜೋಸಾದಳ್ಳಿಯ ಪೋಲೀಸರ ಅತ್ಯಾಚಾರವೊಂದು ಹೊಸ ಸಂಗತಿಯಾಗಿದ್ದು, ಪೋಲೀಸರ ವರ್ತನವು ಬ್ರಿಟಿಶ ಸರಕಾರದ ಮರ್ಯಾದೆಯನ್ನೂ ಬಹಳೇ ಕಡಿಮೆಮಾಡಿತೆಂದು ನಮಗೆ ಎನಿಸುತ್ತದೆ.

ಶ್ರೀ ಭಗತಸಿಂಗನನ್ನು ಗಲ್ಲಿಗೇರಿಸುವರು.

(ಕಂತಿಯ ವಾರ್ತೆ, ತ್ಯಾ॥೨೬)

ಲಾಹೋರ ಒಳಸಂಚಿನ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದ ಶ್ರೀ ಭಗತಸಿಂಗನನ್ನು ಮಾರ್ಚ ೩ನೆಯ ತಾರೀಖಿನ ದಿವಸ ಗಲ್ಲಿಗೇರಿಸುವದಾಗಿ ತಿಳಿದು ಬರುತ್ತದೆ.

ಹುಬ್ಬಳ್ಳಿಯ
ಸರ್ವಾಧಿಕಾರಿಗೆ ಶಿಕ್ಷೆ

"ಸೈಕರ ದಿನದ" ದಿವಸ ನೆರೆದ ಸಭೆಯಲ್ಲಿ ಭಾಷಣ ಮಾಡಿದ ಸಂಬಂಧವಾಗಿ ಹುಬ್ಬಳ್ಳಿಯ ೭ನೆಯ ಸರ್ವಾಧಿಕಾರಿ ಶ್ರೀ ಶಿವರಾಮಪ್ಪ ದೇವಪ್ಪ ಇವರಿಗೆ ಕಡಿಮೆಯಿಲ್ಲದ ಕಾರಣವು ಒಡಿಸಿಸ್ಸದನ್ವಯ ೬ ವಾರಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದೆ.

ಧಾರವಾಡದಲ್ಲಿ
ಗುಂಪೀದಾರರ ಧರ್ಪಿತ

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಗರಂಚಿ, ಅಳ್ಳಾವರ ಮೊದಲಾದ ಪಾವರ ಸರಾಫಗಳ ಅಂಗಡಿಗಳ ಲಿಲಾವು ಶಾ॥ ೨೩ನೆಯ ದಿವಸ ಅಲ್ಲಿಯ ಅಲೆಕ್ಟ್ರಿಕ ಕಚೇರಿಯಲ್ಲಿ ನಡೆಯಿತು, ಸ್ವಯಂಸೇವಕರು ಪಿಟ್ಟಿಂಗ ಮಾಡುವರೆಂದು ತಿಳಿದು ಬಂದಿದ್ದರಿಂದ ವೆಂಡರ್ಸನ ಸ್ಥಳವನ್ನು ಬದಲಾಯಿಸಿ ಕಚೇರಿಯಲ್ಲಿ ಲಿಲಾವಿನ ಸ್ಥಳ ಸ್ಥೆ ಮಾಡಿದ್ದರು. ಆದರೆ ಜನ ಸ್ವಯಂಸೇವಕರು ಕರ್ತವ್ಯವೀರ ದಿವಾರರ ನೇತೃತ್ವದಲ್ಲಿ ಕಚೇರಿಗೆ ಸಾಗಿಹೋಗಿ, ಅಲ್ಲಿ ನಿಂತುಕೊಂಡರು. ಲಿಲಾವಿನಲ್ಲಿ ಹಿಡಿಸುಲ ಬಂದವರ ಮುಂದೆ ಅಡ್ಡ ಬಿದ್ದು ಹಾದಿ ಬಿಟ್ಟಿದರು. ಇದನ್ನೆಲ್ಲ ನೋಡಿ ಅಧಿಕಾರಿಗಳು ಗುತೆದಾರರನ್ನು ಹಿಂದಿನ ಬಾಗಿಲದಿಂದ ಕಚೇರಿಯಲ್ಲಿ ಕರೆದು ಕೊಂಡರು.

ಇಳೆವೃತ್ತ

ಚಿಕ್ಕೋಡಿಯ ಶ್ರೀಮತಿ ಪಾನಬಾಯಿಯವರು ತಾ॥೨೫ ನೇ ದಿವಸ ಸಂಜೆಯಲ್ಲಿ ಮುರಲೀಧರ ದೇವಾಲಯದಲ್ಲಿ ಸದ್ಯದ ಸ್ಥಿತಿಯ ವಿಷಯವಾಗಿ ಭಾಷಣ ಮಾಡಿದರು.

ಬಹು ದಿನಗಳಿಂದ ಬೀದಿಯ ಅಚ್ಚಿಜೆಗೆ ಒಗೆಸಿದ ಉಸುಳ್ಳನ್ನು ಮ್ಯುನಸಿಪಾಲಟಿಯ ವರು ಏನೋ ವಿನೋ ನಿನ್ನೆ ೨ನೆ ದಿವಸ ಬೀದಿಯ ಮೇಲೆ ಹಾಕಿಸಿ, ಕಾಲ ಸುಡುತ್ತಿರುವದನ್ನು ಹಾಗು ಧೂಳು ಅಡರುತ್ತಿರುವದನ್ನು ಹೋಗಲಾಡಿಸಲು ಉಪಕ್ರಮ ಮಾಡಿದ್ದಾರೆ. ಅಭಿನಂದಿಸಬೇಕು! ಯಾವಾಗಿರಿ ಇಷ್ಟು ಕರ್ತವ್ಯದಕ್ಷ ನಾಗಿರಲ್ಲಿ ಬಾಗಲಕೋಟೆಗೆ ದೊರೆತಿದ್ದು ಬಾಗಲಕೋಟೆಯವರ ಪುಣ್ಯ!

ಚಿಕ್ಕೋಡಿಯ ಶ್ರೀಮತಿ ಪಾನಬಾಯಿ ಗುಜ್ಜರಿಯವರು ತಾ॥ ೨೩ನೆಯ ದಿವಸ ಸಂಜೆಯಲ್ಲಿ ವೆಂಕಟೇಶ ಟಿಯ ವೆಂಕಟೇಶ ದೇವರ ಗುಡಿಯಲ್ಲಿ "ಸದ್ಯದ ಸ್ಥಿತಿಯ" ಸಂಬಂಧವಾಗಿ ಭಾಷಣಮಾಡಿದರು.

ಪೋಲೀಸರ ವಿಷಯಕ್ಕೆ ಅಸಂತೋಷವನ್ನು ಹುಟ್ಟಿಸಿದ ಸಂಬಂಧವಾಗಿ ಶ್ರೀ ಸುಗುಣೇಂದ್ರ ಕರೂರ ಇವರ ಮೇಲೆ ಹಾಕಲ್ಪಟ್ಟ ಖಟ್ಲೆಯ ವಿಚಾರಣೆಯು, ತಾ॥ ೨೪ ನೇ ದಿವಸ ಮಾರ್ಚ ಮಜಿಸ್ಟರನೆಯು ಕಾರಿಟ್ಟಿಗೆ ಮುಂದುವರಿಸಲ್ಪಟ್ಟಿತು.

"ಸರಕಾರದವರು ಸೇವಾದಲದ ನಾಮಾನುಗಳನ್ನು ಮಾಡಿಕೊಳ್ಳಲಿ, ಅಪ್ಪುಗಳನ್ನು ಕೊಂಡು ಕೊಳ್ಳಲಿ ನಮಗೆ ಸಂಬಂಧವಿಲ್ಲ ಹಾಗು ಹೋಗುವೆ." ಇದೆಯೆಂದು ಕೂಲ್ಲಿ ಹಸ್ತ ಪತ್ರಿಕೆಗಳು ಹಂಚಲ್ಪಟ್ಟಿವೆ.

ಮರಾಠಿ ಮಧ್ಯಪ್ರಾಂತದ
ಸರ್ವಾಧಿಕಾರಿಗೆ ಶಿಕ್ಷೆ

ಮರಾಠಿ ಮಧ್ಯಪ್ರಾಂತ ಸತ್ಯಾಗ್ರಹ ಯುದ್ಧದಲ್ಲಿ ನಡೆದ ಗಲಭೆಯ ಸರ್ವಾಧಿಕಾರಿಗಳಾದ ಶ್ರೀ ಕಾಲಿಚರಣ ಸರಫ ಇವರು ತಾ॥ ೨೫ನೆಯ ದಿವಸ ೩ ಪಿ. ಕೋಡಿನ ೧೫೭ ಹಾಗು ಜನಪ್ರಾಣಹತಿ ಕಾಯದೆಯ ೧೫೩ನೆ ಕಲಮಿನನ್ವಯ ೬ ವರ್ಷ ಕಠಿಣ ಶಿಕ್ಷೆಯಾಗಿ ಶಿಕ್ಷೆಯಾಗಿದ್ದಾರೆ.

ಬಂಗಾಲ ಗವರ್ನರರು
ದಿಲ್ಲಿಗೆ ಹೋಗುವರು.

ಬಂಗಾಲದ ಗವರ್ನರರು ಶ॥ ೨೫ನೆಯ ದಿವಸ ದಿಲ್ಲಿಗೆ ಹೋಗಿ ಪೊಲೀಸ ಅತ್ಯಾಚಾರಗಳ ಸಂಬಂಧವಾಗಿ ವೈಸಾಯಿಸರಾಯರೊಡನೆ ಚರ್ಚೆ ನಡಿಸಲಿರುವರಾಗಿ ತಿಳಿದು ಬಂದಿತ್ತದೆ.

ಹಿಂದುಸ್ಥಾನದಲ್ಲಿ
ಇನ್ನು ಬ್ರಿಟಿಶರ ಆಟ ಸಾಗದು.

ಮಿ. ಸ್ಪೆಡ್ ಇವರು ವಿಲಾಯತಿಯ "ನ್ಯೂಜ ಕ್ರಾನಿಕಲ್" ಪತ್ರಿಕೆಯಲ್ಲಿ ತೆಗೆದು ನಂತೆ ಉಲ್ಲೇಖಿಸಿದ್ದಾರೆ

ಹಿಂದೀ ಜನರ ಸಹಕಾರ ವಿಲ್ಲದೆ ಹಿಂದುಸ್ಥಾನದಲ್ಲಿ ನಾವು ಸತ್ತೆಯನ್ನು ನಡಿಸುವದು ಅತ್ಯಂತ ಕಷ್ಟ. ಪಶುಶಕ್ತಿಯನ್ನು ಪಯೋಗಿಸಿ ಸತ್ತೆ ನನ್ನು ಸಾಗಿಸುವದು ಇನ್ನು ಮೇಲೆ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ. ಜಾಲಿಯನ್ ವಾಲಾಬಾಗಿದಂತಹ ೫—೬ ಅತ್ಯಾಚಾರಗಳಾದರೆ ನಾವು ಕೆಲವು ಕಾಲ ಸತ್ತೆ ನಡಿಸ ಬಹುದು. ಅದರೆ ಕೂಡಲೆ ಬಿಕ್ಕಟ್ಟಿನ ಪರಿಸ್ಥಿತಿ ನಮ್ಮ ಮೇಲೆ ಬಂದೇ ಬರುವದು. ಹೊಸ ಪರಿಸ್ಥಿತಿಗೆ ಹೊಸ ಪದ್ಧತಿಯು ಅವಶ್ಯವಿದೆ. ಇದನ್ನು ನಾವು ಕೂಡಲೇ ಕೈಕೊಳ್ಳಬೇಕು. ಇಲ್ಲದೆ ಹೊದರೆ ಸತ್ಯಾಗ್ರಹದಿಂದ ನಾವು ಸೋಲಿಸಲ್ಪಡುವೆವು.

ಗದಗ—ಬೆಟಗೇರಿ ಅಖಿಲ ಭಾರತೀಯ ಸ್ವದೇಶಿ ಪ್ರದರ್ಶನದ ಅಧ್ಯಕ್ಷರಾದ
ಶ್ರೀ ಪಂಡಿತ ತಾರಾನಾಥರವರ ಭಾಷಣವು.

(ಹಿಂದಿನಿಂದ ಮುಂದೆಸಾಗಿದ್ದು)

ಎಲ್ಲ ದೇಶಗಳ ಒಟ್ಟುಆಸ್ತಿ— (ಭೂಮಿ, ಮನೆ, ಸಾಮಾನು, ಬೆಳ್ಳಿ, ಬಂಗಾರ ಇತ್ಯಾದಿ)

ಯುನಾಯಿಟೆಡ್ ಸ್ಟೇಟ್ಸ್ ಅಮೇರಿಕಾ	೪೯೧ ಪೌ.	ತಲೆ ಒಂದಕ್ಕೆ ಸರಾಸರಿ
ಇಂಗ್ಲಂಡ ಎಂಡ್ ವೇಲ್ಸ	೨೭೦	,,
ಆಸ್ಟ್ರೇಲಿಯಾ	೨೬೨	,,
ಕೆನಡಾ	೨೫೯	,,
ಜಪಾನ್	೫೨	,,
ಇಂಡಿಯಾ	೧೪	,,

ಇಷ್ಟು ಬಡತನವೇತಕ್ಕೆ? ನಿಜವಾಗಿಯೂ ಇಂಡಿಯದ ವ್ಯಾಪಾರವು ಅಷ್ಟು ಬಡತಾಗಿದೆಯೋ? ಈ ದೇಶವು ಇತರ ಅನೇಕ ದೇಶಗಳೊಡನೆ ಆಮದು ರಫ್ತು ನಡಿಸುತ್ತದೆ ಲೆಖ್ಖ ನೋಡಿದರೆ ನಮ್ಮ ಆಮದಿಗಿಂತಲೂ ರಫ್ತು ಎಷ್ಟೋ ಹೆಚ್ಚು. ಎಲ್ಲ ದೇಶಗಳ ಆವರ್ ರಫ್ತುಗಳನ್ನು ಹೋಲಿಸಿ ನೋಡಿದರೆ ಇಂಡಿಯದ ರಫ್ತು ಬಾಕಿ ಎಂಡನೆಯದು. ಅನೇಕದು ಮೊದಲನೆಯದು ರಫ್ತು ಬಾಕಿ ಪರದೇಶಗಳಮೇಲೆಷ್ಟು ಇವೆಯೋ ಅಷ್ಟೇ ಧನಾಢ್ಯವಾಗಿವೆ ನೇರವೆನ್ನಬೇಕಲ್ಲವೇ ಆದರೆ ಇಲ್ಲಿ ಒಂದು ತೊಡಕಿದೆ. ಇಂಡಿಯದ ವಿಷಯ ಹಾಗೆ ಹೇಳಲಿಕ್ಕಾಗುವದಿಲ್ಲ.

ಯು ಸ್ಟೇಟ್ಸ್ ಅಮೇರಿಕಾ	೨೬೩೦ ಲಕ್ಷ ಪೌಂಡಗಳು	ರಫ್ತಿಗಾಗಿ	ಬರತಕ್ಕೆ ಬಾಕಿ
ಆಸ್ಟ್ರೇಲಿಯಾ	೫೬೦ ,,	,,	,,
ಜೊಹೊ ಶ್ಲ ವೋಕಿಯಾ	೫೦೦ ,,	,,	,,
ಇಂಡಿಯಾ	೪೦೦ ರಿಂದ ೪೦೦ ,,	,,	,,
ದಕ್ಷಿಣ ಆಫ್ರಿಕಾ	೪೦ ,,	,,	,,

ಇಷ್ಟಿದ್ದರೂ ಈ ದೇಶದ ದಾರಿದ್ರ್ಯವು ಮಿತಿ ಮೀರಿದ್ದಾಗಿದೆ. ಏತಕ್ಕೆ? ಫ್ರಾನ್ಸ, ಜರ್ಮನಿ, ಇಂಗ್ಲಂಡ, ಜಪಾನ್, ತುರ್ಕಿ ಇವುಗಳಮೇಲೆ ತಾವು ಅವಲಂಬನವಾಗಿರುವದು ಸಾಮಾನಿಗೆ ಕೊಡತಕ್ಕೆ ಬಾಕಿಯೇ ಹೆಚ್ಚಾಗಿ ಇರುತ್ತಲೂ ಈ ದೇಶಗಳೇತಕ್ಕೆ ಊಜಿತವನ್ನೆಯಿಡ್ಡಿರಬೇಕು? ಇಂಡಿಯದ ದುಡ್ಡು ಎಲ್ಲಿ ಹೋಗುತ್ತದೆ ಅದಕ್ಕೆ ಇಂಡಿಯಾ ತನ್ನಲ್ಲಿಗೆ ತೆರಿಸಿದ ಆಮದನ್ನು ನೋಡಿರಿ: —

ಇಂಡಿಯಾಗೆ ಆಮದಾದ ಮಾಲು.

ಮಾಲಿನ ವಿವರ	ಇತರ ದೇಶಗಳಿಂದ		ಇಂಗ್ಲಂಡ ಎಂಡ ವೇಲ್ಸ	
ಹತ್ತಿಯದು (ಬಟ್ಟೆ ನೂಲು ಇತ್ಯಾದಿ)	೭೦	ಕೋಟಿ ರೂಪಾಯಿ	೬೫	ಕೋಟಿ ರೂ.
ಉಕ್ಕು ಕಬ್ಬಿಣ	೨೫	,,	೧೫	,,
ಇತರ ಧಾತುಗಳು	೭	,,	೪	,,
ಕತ್ತಿ ಪಾತ್ರೆ ಇತ್ಯಾದಿ ತಯಾರಾದ ಸಾಮಾನು	೫.೨	,,	೨	,,
ಆಹಾರದ ಸಾಮಗ್ರಿ	೬.೫	,,	೨ ೩	,,
ಸಾಣಿಯ	೩.೫	,,	೧-೪	,,
ಮಷಿನರಿ	೧೬	,,	೧೨-೫	,,
ರೇಲ್ವೆ ಸಾಮಾನು	೯ ೩	,,	೬ ೨	,,

ಇಷ್ಟು ಸಾಮಾನುಗಳಲ್ಲಿ ಉಕ್ಕು ಕಬ್ಬಿಣವನ್ನು ಪರದೇಶಗಳಿಂದ ತರಿಸುವದಕ್ಕಾಗಿಯೇ ಇಲ್ಲ. ಈ ದೇಶದಲ್ಲಿಯೇ ಇವು ಹುಟ್ಟುತ್ತಿವೆ. ಆದರೆ ಇವುಗಳ ಉತ್ಪತ್ತಿ ವೃದ್ಧಿಗೆ ಯಾವ ಪ್ರೋತ್ಸಾಹವೂ ಇಲ್ಲ. ತಮ್ಮ ದೇಶದ ಮಾಲಿಗಾಗಿ ನಮ್ಮ ದೇಶವು ಜಬರದಸ್ತಿಯ ಸಂತೆಯಾಗಿವೆ! ಮೇಲೆ ಸಾರಾಯಿ ನಮಗೆ ಅಧಿಕಾರ ವಿದ್ದಿದ್ದರೆ ಅದನ್ನು ನಿಲ್ಲಿಸಿಯೇ ಬಿಡುತ್ತಿದ್ದೆವು. ಆದರೆ ಸ್ವರಾಜ್ಯವಿಲ್ಲದೆ ಅವರ ಇಚ್ಛೆಯೇ ನಮ್ಮ ಗತಿಯಾಗಿ ಕೂತಿದೆ. ಬಾಕಿಯು ಸಾಮಗ್ರಿಗಳು ಸಹ ಇತರ ದೇಶಗಳಲ್ಲಿ ಎಷ್ಟೊ ಅಗ್ಗವಾಗಿ ಸಿಗುತ್ತವೆ. ಅವು ನಮ್ಮಲ್ಲಿ ಸದ್ಯಕ್ಕೆ ತಯಾರಾಗುವದಿಲ್ಲವಾದರೆ ಅವನ್ನಲ್ಲಿಂದ ತರಿಸಬಹುದು ಅವರೆ ಬ್ರಿಟನ್‌ದ ಬಲೆ ಹೇಗಿದೆ ಎಂದು ನೋಡಿ|

	ನಮ್ಮಲ್ಲಿ ಆಮದಾಗುವದು	ನಮ್ಮಿಂದ ರಫ್ತಾಗುವದು.
ಇಗ್ಲಂಡ ಎಂಡ್ ವೇಲ್ಸ	೪೭.೮ ಶೇಕಡಾ	೨೧. ೮ ಶೇಕಡಾ
ಯುನಾಯಿಟೆಡ್ ಸ್ಟೇಟ್ಸ ಅಮೇರಿಕಾ	೭.೯ ,,	೧೨. ೧ ,,
ಜಪಾನ್	೭ ೬ ,,	೧೩. ೩ ,,

ಇವರಿಂದೇನು ಕಾಣ್ತೆತ್ತದೆ? ಬ್ರಿಟಿಶರು ನಮ್ಮಿಂದ ಕೊಂಡುಕೊಳ್ಳುವದು ಕಮ್ಮಿ ನಮಗೇ ಮಾರುವದು ಇತರದೇಶಗಳಿಗಿಂತಲೂ ಹೆಚ್ಚು. ಅಂದಮೇಲೆ ನಮ್ಮಿಂದ ಕೊಂಡುಕೊಳ್ಳುವವರಲ್ಲಿಯೇ ನಾವೂ ಅವರಿಂದ ಕೊಂಡುಕೊಂಡು ಏತಕ್ಕೆ ಲೆಕ್ಕಾಚಾರ ಸರಿಮಾಡಿಕೊಳ್ಳಬಾರದು. ನಮ್ಮ ಬಡತನದ ಕಾರಣ ಇದ್ದಿದೆ. ಬ್ರಿಟಿಶರು ನಮ್ಮ ಮೇಲೆ ಹೇರಿಸಿದ ವ್ಯಾಪಾರನೀತಿ ರೀತಿನೀತಿ ಳೇ ನಮ್ಮ ದಾರಿದ್ರ್ಯಕ್ಕೆ ಮೊಖ್ಯ ಕಾರಣ ಮತ್ತು ಪರಿಣತಿಯೊಗಿ ನಡೆಸಿದರೇನೇ ಅವರ ಬಾಳೂ ಸಜ್ಜಾಗಿ ನಡೆಯುವದು. ಅವರು ನಮ್ಮ ಕೃಷಿ ಉದ್ಯಮ ವ್ಯಾಪಾರಗಳನ್ನು ವಿಕಾಸಗೊಳ್ಳಲು ಸಹಾಯ ಪಲಕರಣೆಗಳನ್ನು ಕೊಡುವರೋ? ಅದಕ್ಕೆ ಅವರವನೇ ಆದ ಪಾರ್ಲಿಮೆಂಟಿಗೆ ಮೆಂಬರನಾದ ಫೆನರ್ ಬ್ರಾಕ್‌ವೇ ಹೀಗೆನ್ನುತ್ತಾನೆ.

ನ್ನನ್ನ ದೇಶಕ್ಕೆ ಇಂಡಿಯದಲ್ಲಿ ಮೂರು ಸ್ವಾರ್ಥಗಳವ:—

ಅವ ೧ ಬ್ರಿಟಿಶ ಹಾವಸ್ತು ಬಾಸ ಲಾಭವನ್ನು ಹೊಂದುವದಕ್ಕೆಂದು ರಂಗ.

೨. ಬ್ರಿಟಿಷ್ ಸಾಮಾನುಗಳಗೊಂದು ಮಾರ್ಕೆಟ್.

೩. ಬ್ರಿಟಿಷ್ ನೌಕರರಿಗೊಂದು ದ್ರವ್ಯವನ್ನು ತರುವ ಒಂದು ಬುಗ್ಗೆ.

ಈ ಮೂರರ ಬುಗ್ಗೆಯು ಬೌರ್ಭಾಗ್ಯೆ ಶಿಪಾಮಣಿಯಾದ ಭರತಖಂಡವೇ.

೧ ನೆಯದಕ್ಕಾಗಿ ಅವರು ೭೦,೦೦೦,೦೦೦ ಪೌಂಡ್ ಪರ್ಯಂತ ಇಲ್ಲಿ ದೇಶದಲ್ಲಿ ಪಾಕಿದ್ದಾರೆ. (ಸ್ಟೇಟ್ ಸಾಲ, ರೇಲ್ವೇಸಾಲ, ಯುದ್ಧದಸಾಲ) ಇದ್ದಿ ಮತ್ತು ಹೊಂಗೆರ್ಡಿಜ್ಜರಂದ ಎಲ್ಲ ಕಂಪನಿಗಳ ಬಂಡವಾಳ)

೨ ನೆಯದಾಗಿ ತಳಿಯುವ ಮಾಲಿನ ಬೆಲೆ ೯೦,೦.೦,೦೦೦ ಪೌ.

೩ ಇದ್ದಿಂದ ಪೆನ್‌ಷನ್ ತಕ್ಕೆಂಡುಹೋಗಿ ಅದ್ದಿ ಕೊಡು ತಿ ನಗೆ ನಮ್ಮಲ್ಲಿಂದ ಹೋಗುವ ಹಣ ೩೦ ಲ ೦

ಇವು ಳು ರೆ ಇವು ಅನೇಕ ನಿಘವಾದ ಲಾಭಗಳವೆ ಹೀಗಿದ್ದಾಗ ಸ್ವಾದಾದ ರಫ್ತು ಬಾಕಿಯಿಂದ ನಾವು ಬರುವದೇನು? ಅದರ ದೆಶಸ್ಥಿಂತವನ್ನು ಬ್ರಿಟಿಷರು ತಮ್ಮ ಹುಟುಕ್ಕಾಗಿ ಸಂಪಡಿಸಿಕೊಳ್ಳುತ್ತಾರೆ. ಇಂಡಿಯದಲ್ಲಿ ಅವರಿಗಿರುವ ಪ್ರೀತಿಯು ಕಾರಣವು ಹೀಗಿದೆ. ಇದನ್ನವರು ಬಿಡುವರೋ? ಬಿಡಲಿಕ್ಕಾದೀತೋ? ಅಲ್ಲಿಯ ಒಬ್ಬೊಬ್ಬ ವ್ಯಕ್ತಿಯೂ ಒಬ್ಬ ಮಹಾತ್ಮ ಗಾಂಧಿಯಾಗಬೇಕು. ಹಾಗಾಗಬೇಕಾದರೆ? ಇದು ಸಾಧ್ಯವೋ?

ಇಲ್ಲವಾದರೆ ನಾವೇನು ಮಾಡಬೇಕು? ಜೀವನ ಸಂಗ್ರಾಮವು ಬಿಡಲಾರದ ಧರ್ಮ. ನಾವು ಸಾಯಬೇಕೇ? ಇದಕ್ಕೆಲ್ಲರ ನಮ್ಮ ಮುಂದಾಳುಗಳು ೧೯೦೬ನೆಯ ಇಸವಿಯಲ್ಲಿಯೇ ಹೇಳಿ ಬಿಟ್ಟಿದ್ದಾರೆ ನಮ್ಮ ಮಾತೃ ನಿಲವು ಕೊಂಡೊಯ್ಯಿಲ್ಲವೆಂದಲ್ಲ ಇದಕ್ಕೆ ಒಂಯಕಿಂಪ್ ಎಂದು ಹೆಸರು. ಎಂದರೆ ಇತರರ ದ್ವೇಷವಲ್ಲ, ಆತ್ಮಪ್ರೇಮವೇ ಇದರ ಪ್ರೇರಣೆ ಇದ್ದಂಥಾಗೆ ಬಿಡಲಕ್ಕಾಗುವದಲ್ಲ ಇದನ್ನು ಬದ್ಧರಿಕೆಲ್ಲ ಮೊಪ್ಪಿಂಗೆ ಒಕ್ಕೂಟನ್ನ ಸುವಿಷಾಯಿಂದ ಅದರ ಪರಿಣಾಮವು ದೇಶಸೇವೆಯೇ ಎಂಬ ಪಂಥವನ್ನಿಟ್ಟೇಳು.

ಇಂಡಿಯಾದ ಸ್ವಾತಂತ್ರ್ಯವು ಬ್ರಿಟಿಷರ ಟೊಪ್ಪಿಗೆಗಿಂದಲೇ ಆಗಲಿ ಎಷ್ಟಿಷ್ಟಿಗೆ ಶಿಷ್ಟಸ್ವಾಮಿಯಿಂದಲೇ ಆಗಲಿ ಎಂದಿಗೂ ಬಿಡಲಕ್ಕಿಲ್ಲ. ಅದು ಪೂರ್ತಿ ಇಂಗ್ಲೀಷರ ಕಪ್ಪಿಂದೂ ಬೇಳಲಕ್ಕಾಗದು. ಇದು ಜೀವಂತಿಗಳಲ್ಲಿ ಬದುಕಿಗಿಂಗಿ ಅನಿವಾರ್ಯವಾಗಿ ನಡೆಯುವ ಸಂಗ್ರಾಮವು. ಇದಕ್ಕೆ ಜಯ ಕ್ಕೆ ವೆಂದಿಲು ಬೇಕಾದಷ್ಟು ಸಿರಿಗಳಿಲ್ಲ, ಎಷ್ಟೇದೂ ಸಂಹಿಸು, ಬೇರೆಯವರ ಮಾಲನ್ನು ಕೊಂಡುಕೊಳ್ಳುವಿಲ್ಲ ಎಂಬ ಧೃಢಸಂಕಲ್ಪವು ಮಾಡಲಾಗಬೇಕು. ಈ ೨೦ ಅವಶ್ಯಕವಾದ ಮಾಲುಗಳನ್ನು ನಮ್ಮಲ್ಲಿಯೇ ತಯಾರಿಸಬೇಕು, ಪ್ರೋಫೆಸ್ಸರುಗಿರಿ, ಬಕ್ಕೀಲರುಗಳು ಹೀಗಾಗುವದರಿಂದ ಹೊಂಗ ಹೋಗುವ ದುಡ್ಡು ನಮ್ಮಲ್ಲಿಯೇ ಉಳಿಯುವದಷ್ಟೇ ಅಲ್ಲದೆ ಉಳ್ಳಾಮವ ನಾನಾ ಭಾಗಗಳಲ್ಲಿ ಅನೇಕಾನೇಕರಿಗೆ ಕೆಲಸವು ಸಿಕ್ಕು ಅನ್ನ ಬಟ್ಟೆಗೂ ದುರಾಕುವವು ದೇಶದ ದಾರಿದ್ರ್ಯವು ಅವಮಿಂಬಂಟಾಗುವ ಅನಾಚಾರವೂ ಅಗಾಧವಾಗಿ ಕಡಿಮೆಯಾಗಿಯೇ ತೀರುವದು. ಸ್ವದೇಶಿಯ ಚಳವಳಿಯ ತಿರುಳೆಂದರೆ ಇದೇ ಎಂದು ಮತ್ತೆ. ಅದಕ್ಕೆ ಏಳುವಾಗ, ಕೂಡುವಾಗ, ಆಡುವಾಗ, ಮಾಡುವಾಗ ಒಂದೇ ಜೀವ ಬೇಕಾದುದು. "ಉದ್ಧರೇದಾತ್ಮನಾತ್ಮಾನಂ"

ಇದಕ್ಕೆ ಕೆಲವು ಅಂಕಿಗಳಿಗೆ ಆಧಾರಗಳು:—
ಸರ್ ಎಮ್. ವಿಶ್ವೇಶ್ವರಯ್ಯರವರ "ರಿಕನ್ ಸ್ಟ್ರಕ್ಷನಿಂಗ ಇಂಡಿಯಾ" ಫೆರರ್ ಬ್ರಾಕವೇಯವರ "ದಿ ಇಂಡಿಯನ್ ಕ್ರೈಸಿಸ್" ಗವರ್ನಮೆಂಟ್ ಆಫ್ ಇಂಡಿಯಾದ "ಲೆಟೆಸ್ಟ್ ರಿಪೋರ್ಟ್"

ವಾಙ್ಮಯ ಪರಿಚಯ

ಆರೋಗ್ಯ ಚಂದ್ರಿಕೆ:—

ಮಾಸ ಪತ್ರಿಕೆ; ಸಂಪಾದಕರು ದಿ. ಅನಂತೇಷಯ್ಯ ಡಾ॥ ಯ್ಯ. ಪ್ರಾಮರಿಂದ ಪ್ರಾರಂಭವಾದ ಈ ಪತ್ರಿಕೆಯು ಕೃಷ್ಣರಾವ ಎಂ ಬಿ. ಬಿ. ಎಸ್, ವಾರ್ಷಿಕ ಚಂದಾ ೧– ೮—೦; ಪತ್ರಿಕೆ ಪ್ರಕಟಿಸುವ ಸ್ಥಳ– ೬೦ ೩ನೆಯ ಕ್ರಾಸು, ತಂಬು ಚೆಟ್ಟಿ ಬೀದಿ. ಬೆಂಗಳೂರು.

ಜಾನೇವರಿ ಹಾಗು ಫೆಬ್ರುವರಿ ಸಂಚಿಕೆಗಳು ನಮ್ಮ ಕೈಸೇರಿದ್ದು, ವೈದ್ಯವಿದ್ಯಾಸಂಶೋಧನೆಯಿಂದ ಒಕ್ಕೂಟ್ಟಿದ ವಿಚಾರಪೂರ್ಣವಾದ ಲೇಖನಗಳು ಇವುಗಳಲ್ಲಿ ಪ್ರಕಟವಾಗಿವೆ. ಎಲ್ಲರಿಗೂ ತಿಳಿಯುವಂತೆ ಸರಳವಾದ ಭಾಷೆಯಲ್ಲಿ ಆರೋಗ್ಯ ವಿಷಯವನ್ನು ಬೋಧಿಸುವ ಮಾಸ ಪತ್ರಿಕೆಯೆಂದರೆ ಕನ್ನಡದಲ್ಲಿ ಇದು ಒಂದೇ. ಈ ಮಾಸ ಪತ್ರಿಕೆಯು ತೆಲಗು, ತಮಿಳು, ಇಂಗ್ಲೀಷ ಭಾಷೆಗಳಲ್ಲಿಯಾವಾಗಲೂ ಪ್ರಕಟಿಸಿಕೊಂಡುತ್ತಿರುವವು. ಈ ಪತ್ರಿಕೆಯೊಳಗಿನ ಲೇಖನಗಳನ್ನೋದಿ ಅವರಂತೆ ನಡೆಯುವವರಿಗೆ ವೈದ್ಯರ ಆವಶ್ಯಕತೆಯೇ ಬೀಳುವದಿಲ್ಲ. "ಆರೋಗ್ಯ ಜಂಟ್ರಿಕಯು" ಉತ್ತರೋತ್ತರ ಅಭಿವೃದ್ಧಿ ಹೊಂದುವಂತೆ ಕನ್ನಡಿಗರೆಲ್ಲರೂ ಪ್ರಯತ್ನಿಸಬೇಕು.

ಕರ್ತವ್ಯ:—

ಮಾಸ ಪತ್ರಿಕೆ; ಹನ್ನೆರಟ್ಟಣ; ವಾರ್ಷಿಕ ಚಂದಾ ೧—೪—೦.

ಜಾನೇವರಿ ಹಾಗು ಫೆಬ್ರುವರಿ ಸಂಚಿಕೆಯು ನಮ್ಮ ಕೈಸೇರಿದ್ದು, ಅದರಲ್ಲಿ ವೈದ್ಯ ಸಾಯ, ಇತಿಹಾಸ ಮೊದಲಾದ ವಿಷಯಗಳ ಮೇಲೆ ಲೇಖನಗಳು ಒಂದಿವೆ. ವಿದ್ಯಾವಿಶಾರದ ಎಚ್. ಎಂ. ಗೌಡರು ಒರೆದ "ಚಹಾ ರಸಾಯನಮಹಾಸಭೆ" ಯೆಂಬ ಬರಹವನ್ನು ಚಹಾಭಕ್ತರೆಲ್ಲರೂ ಓದಿ ಮನನ ಮಾಡಿಕೊಳ್ಳಬೇಕು. "ಕರ್ತವ್ಯಾನಿಗೆ ಕನ್ನಡಿಗರೆಲ್ಲರೂ ಬಿಡ್ಡಾ ಯಿಂದ ಸಹಾಯಮಾಡಿ, ಅವನು ತನ್ನ ಕರ್ತವ್ಯವನ್ನು ನೆವೇರಿಸುವಂತೆ ಮಾಡಬೇಕು.

ಸ್ವಾರ್ಥತ್ಯಾಗ:—

ಸಣ್ಣ ಕತೆ; ಲೇಖಕರು— ಸಿಂಪಿ ಲಿಂಗಣ್ಣನವರು; ಪ್ರಕಾಶಕರು ತುಂಟರ ತಂಡ, ಬೆಳಗಾವಿ;

ಸ್ವಾರ್ಥತ್ಯಾಗದಿಂದ ಪ್ರಸಿದ್ಧಿಯನ್ನು ಹೊಂದಿದ ದಧೀಚಿಯ ಹಿರಿಯ ಅಸ್ಥಿಯಿಂದ ಇಂದ್ರಾದಿ ದೇವತೆಗಳು ವೃತ್ರಾಸುರಪಕ್ಷವನ್ನು ಸದೆ ಬಡಿದಿದ್ದೇ ಈ ಕತೆಯ ವಿಷಯವಾಗಿದೆ. ಶ್ರೀ ಸಿಂಪಿ ಲಿಂಗಣ್ಣನವರು ಬರೆದಿರುವರೆಂದಮೇಲೆ ಭಾಷೆ, ಶೈಲಿ, ಮೊದಲಾವುವಾಗಿ ವಿಷಯವು ಬರೆಯಬೇಕಾದೇ ಬೇಡ. ಲೇಖಕರು ಈ ಕತೆಯನ್ನು ಕಣ್ಣಿದ ಪರಿಸ್ಥಿತಿಗೆ ಹೋಲಿಸಿ, ಸತ್ಯ, ಅಹಿಂಸೆ, ಸ್ವಾರ್ಥತ್ಯಾಗ ಇವುಗಳಿಗೆ ಎಂದಾದರೂ ಗೆಲುವು ಕಟ್ಟಟ್ಟಿದ್ದೇ ಎಂಬುದನ್ನು ಬಹು ಮಾರ್ಮಿಕವಾಗಿ ಸಿದ್ಧ ಮಾಡಿ ತೋರಿಸಿದ್ದಾರೆ. ಇಂತಹ ಗ್ರಂಥಗಳು ಕನ್ನಡದಲ್ಲಿ ಈ ವರೆಗೂ ಪ್ರಕಟವಾಗಿಲ್ಲ. ಈ ಕೊರತೆಯನ್ನು ಹೋಗಲಾಡಿಸಿದ್ದಕ್ಕಾಗಿ ತುಂಟರ ತಂಡದವರನ್ನು ಕೊಂಡಾಡಿ, ಜನತೆಗೆ ಅತ್ಯಪಯೋಗ ಪರಿಸ್ಥಿತಿಗನುಗುಣವಾದ ಪ್ರಾಜ್ಞರಾವಸ್ಥೇ ನಿರ್ಮಿಸುತ್ರ ಹೊಂ ಬೇಕಾಗಿ ನಾವು ಅವರಲ್ಲಿ ಕೇಳಿಕೊಂಡು "ತುಂಟರ ತಂಡ" ದವರಿಗೆ ಕೃತಜ್ಞತಾ ಪೂರ್ವಕವಾಗಿ ಸಹಾಯ ಮಾಡಿರೆಂದು ಕನ್ನಡಿಗರಲ್ಲಿ ಬೇಡಿಕೊಳ್ಳುತ್ತೇವೆ.

— ಚತುರಂತ

ಸ್ವೀಕಾರ.

ಗಿ ಹಣ್ಣಾದ ಇಂಬಲಿಕೆ. ೨ ನೆಯ ಸಾಯಾದಗಿ ಕರ್ನಾಟಕ ಸಾರ್ವಜನಿಕ ವಾಚನಾಲಯದ ಎಂಟನೆಯ ವರ್ಷದ ವರದಿ, ಇವುಗಳು ನಮ್ಮ ಕೈಸೇರಿದ್ದು, ಇವುಗಳ ವಿಮರ್ಶೆಯನ್ನು ಯಥಾವಕಾಶವಾಗಿ ಮಾಡುವದರಲ್ಲಿ ಹಿರುವದು. —ಸಂ. ಕ.

ಅಹಮ್ಮದನಗರದ ಶ್ರೀ ಎಸ್ ಈ ನವರೆಯವರು ಮುಂಬಯಿ ಕಾಯಿದೆ ಮಂಡಳದ ಕಾರ್ಯಾಧ್ಯಕ್ಷರಿಂದ ಆರಿಸಲ್ಪಟ್ಟಿದ್ದಾರೆ.

ಜಾಹಿರಾತು.॥ ಜಾಹಿರಾತು

ಕಾಮಶಾಸ್ತ್ರವು

ಆರೋಗ್ಯವು ಧನವು, ಸುಖವು, ಮತ್ತು ಶುಭ್ರಮಂಜುಸಂತಸ್ಥಿಕೆ ಇತಿಗಳನ್ನು ವಿನೆರವಾಗಿ ತೀಯಪತಿಸುವ ಈ ಮೇಲ್ಕಂಡ ಕಾಮಶಾಸ್ತ್ರವೆಂಬುವ ಪುಸ್ತಕವನ್ನು ತೀಳುವವರಿಗೆ, ಇನಾಮಾಗಿಯೂ ಮತ್ತು ಅಂಚೆ ಖರ್ಚಾಗಿಯೂ ಇಲ್ಲದೇನೆ ಕಳುಹಿಸಲ್ಪಡುವದು:—

ಈವಿನವೇ ನಮ್ಮಗಳ ವಿಳಾಸವನ್ನು ಬರೆದು ಕಳುಹಿಸಿರಿ. ಇದು ಪರಿವರ್ತನಗಾಗಿ, ೩೭ ೦೦೦ ಪುಸ್ತಕಗಳನ್ನು ಭಾಷೆಗಳಲ್ಲಿ ಪ್ರಿಂಟು ಮಾಡಿ, ಈ ಭೂಪಂಚದ ಎಲ್ಲಾ ಭಾಗಗಳಿಗೂ ಕಳುಹಿಸಲ್ಪಡವಮು:—ಪ್ರತಿ ಒಂದು ಮನೆಯಲ್ಲಿಯೂ ಅವಶ್ಯಕವಾಗಿರಬೇಕು.

ಪುಸ್ತಕ ರಕ್ಷಣೆ ಇದು ಒಂದು ಪುಸ್ತಕವು

ಮಹಾತ್ಮರು.

ಆಂಕನಿಗ್ರಹ
ಔಷಧಾಲಯ,
ನಂ೨೬, ಬ್ರಾಡ್ವೇ, ಮದರಾಸು.

ಹಣವ ಕೆಂಪನಿಗಳೂ ಈ ವರೆಗೂ ಕೊಡದಷ್ಟು ಲಾಭವನ್ನು ಈ ೩ ವರ್ಷಗಳವರಿಗೆ ಒಂದೇಸವನೆ ಹಂಚಿದೆ!

ಜನರಲ್

ಅಶ್ಯೂರನ್ಸ್ ಸೊಸಾಯಿಟಿ. ಲಿ. ಅಜಮೀರ.

ಈ ಸೊಸಾಯಿಟಿಯ ಆಸ್ತಿಯು ೨೫ ಲಕ್ಷ ರೂ. ಗಳಿಗಿಂತಲೂ ಮಿಕ್ಕಿದೆ

ಲಾಭ.

ವಿಮಾದಾರರಿಗೆ ಕೊಟ್ಟ ಹಣವು ೧೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದೆ

ತನ್ನ ೨೨ ನೇ ವರ್ಷದಲ್ಲಿ ಹಿಂದೆ ಎಂದೂ ಕಂಪನಿಯು ಕೊಟ್ಟಿ ಅತ್ಯಂತ ಹೆಚ್ಚು

ಲಾಭದ ಹಣಕ್ಕಿಂತಲೂ ಕಡಿಮೆ ಇಲ್ಲದಷ್ಟು ಲಾಭವನ್ನು ನಾವೂ ಹಂಚಿರುವೆವು.

೧೯೩೪ ನೇ ಮಾರ್ಚ ೩೧. (ಇದೇ ಆಯುಷ್ಯದ ತತ್ಸಮಾನ ವಿಮೆಯಿತಕ್ಕೆನ್ನು)
ವರ್ಷವೊಂದಕ್ಕೆ ೧೨ ½ ರೂ.

ಒರ್ಷ.
೧೯೩೬
೧೯೩೭
೧೯೩೮

೧೯೩೫ ನೇ ಡಿಸೆಂಬರ ೩೧. (ಇದೇ ಆಯುಷ್ಯದ ತತ್ಸಮಾನ ವಿಮೆಯಿತಕ್ಕೆನ್ನು)
ವರ್ಷವೊಂದಕ್ಕೆ ೨೧ ½ ರೂ.

ವಾರ್ಷಿಕ ಉತ್ಪನ್ನ.
½೬,೪೮,೪೭೦
೭,೧೨,೩೫೪
೯,೩೫,೫೦೧

೧೯೩೬ ನೇ ಡಿಸೆಂಬರ ೩೧. (ಕಡಮೆಯಿಲ್ಲದ ದೊರೆಯುತಕ್ಕೆನ್ನು)
ವರ್ಷವೊಂದಕ್ಕೆ ೨೨½ ೦/೦ ರೂ

ಹೊಸ ವ್ಯವಹಾರ.
೧೯,೨೫,೫೦೦
೩೮,೦೧,೫೦೦
೬೦,೦೦,೦೦೦

ಬಹು ಆಚ್ಛಾದ್ಯವಾದ ಪದ್ಧತಿಯಿಂದ ಪ್ರಗತಿ ಹೊಂದುತ್ತಿರುವ ಈ ವಿಮೆಕಂಪನಿಯಲ್ಲಿ ಇಂದೇ ನಿಮ್ಮ ವಿಮೆ ಇಳಿಸಿ ಕಡಿಮೆದರಕ್ಕೆ ಅತ್ಯಂತ ವೋಪಯವಾದ ಗಳಿಕೆ ಇವುಗಳ ಪೂರ್ಣ ಲಾಭವನ್ನು ಹೊಂದಿರಿ.

ಬಾಗಲಕೋಟೆಯ ಏಜಂಟರು:— ವ್ಹಿ. ಜೆ. ಪರ್ವತಿಕರ ಮತ್ತು ಮಕ್ಕಳು

ಚೀಫ ಏಜಂಟರು— ಎಸ್. ಆರ್. ಸಾದೇಸಾಯಿ, ಮುಂಬೈ ನಂ ೪.

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದ
ವನಸ್ಪತಿಗಳ ಅದ್ಭುತ ಮಿಶ್ರಣ.

* ಬಾಲಾರ್ಕಮಧು. *



ಇದನ್ನು ಮಕ್ಕಳು ಆನಂದದಿಂದ ಸೇವಿಸುತ್ತಾರೆ. ಇದು ಧಾರವಾಗಿದೆ. ಚಿಕ್ಕ ಮಕ್ಕಳಿಗೆ ಇದನ್ನು ಕೊಡುವದರಿಂದ ಹಾವು ಹಾಲೂ ಅನ್ನವೂ ಮೈಗೆಹತ್ತಿ, ಶರೀರದಲ್ಲಿ ಪೌಷ್ಟಿಕ ಪದಾರ್ಥವಾಗಿ ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಸಾಂಸ ಬೆಳೆದು ಮಕ್ಕಳಿಗೆ ಬಹು ಶಕ್ತಿಯೂ ದೇಹಧಾರ್ಢ್ಯವೂ ಹೆಚ್ಚುವದು. ಕೇವಲ ವೈದ್ಯ ಹೊಗಳಿಕೆಯೆಂದು ತಾತ್ಕಾಲಿಕ ಮಾಡದೆ ಒಂದೇಒಂದು ಶೀಸೆ ತರಿಸಿಕೊಂಡಲ್ಲಿ ಇವರ ಆಪಾರ ಗುಣವು ಕಾಣಾಗಿ ತಿಳಿಯುವದು.

ಬೆಲೆ ಶೀಸೆ ೧ ಕ್ಕೆ ೦—೧೨—೦ ಪೋ. ಖ. ೦—೪—೦.

ಆರ್ಡರ ಜೊತೆಯಲ್ಲಿ ಅಡ್ವಾನ್ಸ ಪೊಬಲಗು ಕಳುಹಿಸಿಕೊಡತಕ್ಕದ್ದು. ಅಡ್ವಾನ್ಸ ಇಲ್ಲದ ಆರ್ಡರಗಳನ್ನು ಗಮನಿಸುವದಿಲ್ಲ.

M. V. Prasadika Oushadhalaya, SHIMOGA.
Mysore State.

ವಾಸುದೇವ ಪುಸ್ತಕಾಲಯದಲ್ಲಿ.

೧	ಸುರಕ್ಷ ನಗರದ ಶ್ರೀಮತಿ ನಾಟಕ.	೧—೪—೦
೨	ಇಂದಿರೆ (ಸಚಿತ್ರ ಸಾ. ಕಾದಂಬರಿ)	೨—೮—೦
೩	ನೀಲ್ಕತೆಗಳು ಭಾಗ ೧.	೧—೪—೦
೪	ಪತಿವಶೀಕರಣ ನಾಟಕ.	೦—೧೨—೦
೫	ಅಬ್ರಹಾಂಲಿಂಕನ್ ಚರಿತ್ರೆ.	೧—೮—೦
೬	ಮಾಧವಕರುಣಾ ವಿಲಾಸ.	೩—೧೨—೦
೭	ಲಕ್ಷ್ಮೀಬಾಯಿ ಝಾನ್ಸಿ ಚರಿತ್ರೆ.	೨—೦—೦
೮	ಶೈವ ಸುಧಾರ್ಣವ (ಸಚಿತ್ರ)	೩—೮—೦

ಕಟಲಾಗಿಗೆ ಬರೆಯಿರಿ.

ಸ್ವಾಮಿ. ರಾ. ಕರೂರ
ವಾಸುದೇವ ಪುಸ್ತಕಾಲಯ ಬಾಗಲಕೋಟೆ.

ಬಾಲಗೃಹ ಚೂರ್ಣ
ಬಾ. ಕಿ. ೧—೪—೦

ಡಾ. ಬೈಲೂರ.

ಥಂಡಿ ಉರಿಯ ಗುಳಿಗೆಗಳು
ಬಾ. ಕಿ. ೦—೮—೦

ಇವರ ಔಷಧಗಳು

ಕಾಫ್‌ಸಾಯಿರಪ್ ೫—ನೆಗಡಿ, ಗೊಬ್ಬರ, ಪೈಲಿ, ಹಪೆಯಿಂದುಂಟಾಗುವ ಪುಪ್ಪುಸದವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ ಹಾರುವಿಕೆ (ಡಬಾ), ಕೋಡಗಗೆಮ್ಮು, ಇವುಗಳಮೇಲೆ ಹೊರ್ತಾಗಿ ಸಣ್ಣ ಹುಡುಗರ ಅಥವಾ ದೊಡ್ಡ ಮನುಷ್ಯರ ನಿಮೋನಿಯಾ ಬೇನೆಯಮೇಲೆ ನಮ್ಮ ಕಾಫ್‌ಸಾಯಿರಪ್ ಔಷಧದ ಉಪಯೋಗವು ಚನ್ನಾಗಿ ಆಗುವದರಿಂದ ಎಲ್ಲರಿಗೂ ತಿಳಿಸಿರುತ್ತೇವೆ. ಈ ಕಾಫ್‌ಸಾಯಿರಪ್‌ನ್ನು ಸಣ್ಣ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ ಸ್ಥಿತಿಯಲ್ಲಿ ಅನುಪಾನ ಪತ್ರಕದಲ್ಲಿ ಬರೆದಂತೆ ಕೊಡಲು ಅತಂಕವಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕಿ. ಸಣ್ಣ ಬಾ. ೦—೬—೦ ದೊಡ್ಡ ಬಾ. ೦—೧೨—೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.

೩ ರೂ. ಕಂತ ಹೆಚ್ಚಿಗೆ ಔಷಧಗಳನ್ನು ತರಿಸಿಕೊಳ್ಳುವವರಿಗೆ ೧೨ ಟಕ್ಕೆ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಪತ್ರ:— ಡಾ॥ ಹರೀ ಮಹಾದೇವ ಬೈಲೂರ. ದ. ಬೆಳಗಾವ.

ವಿಲಿಶವಿಪೆಟ್ ಎಜನ್ಸಿ.

ನಾವು ಶವರಲೇಟ ಮೋಟರ ಕಂಪನಿಯ ಬೆಳಗಾಂವ ಮೋಟರ ವರ್ಸ್ ಟ್ರಾನ್ಸ ಪೋರ್ಟ ಕಂಪನಿಯ ಹಾಗೂ ವಿಲಿಕ್ ವಿಪೆಟ್ ಕಂಪನಿಯ ಎಜಂಟರಿರುತ್ತೇವೆ ಈ ಗಾಡಿಗಳನ್ನು ತರಿಸಿಕೊಳ್ಳುವವರು ನಮ್ಮ ಕಡಿಯಿಂದಲೆ ತರಿಸಿಕೊಳ್ಳಬೇಕು. ಬಹಳ ಸೋವಿಯಾಗುವದು. ಬಾಗಲಕೋಟೆಯಿಂದ ಬಿಜಿಯ ಸುತ್ತುಮುತ್ತಲಿನ ಖಾಸಗಿ ವ ಸರ್ವಿಸಿನ ಮೋಟರ ಮಾಲಕರ ಗೈಡಸೋವಿ ದೂರವಾಗಬೇಕೆಂದು ಒಂದು ಜನರಲ್ ಮೋಟರಸರ್ವಿಸ್ ಇಟ್ಟಿರುತ್ತೇವೆ. ನಮ್ಮ ಸರ್ವಿಸ ಬಾಗಲಕೋಟೆಯಿಂದಾ ವಿಜಾಪುರ ಇಲಕಲ್ಲ ನದಗುಂದ ಮುಂತಾದ ಸ್ಥಳಗಳಿಗೆ ಹೋಗುವದು.

ಪ್ರವಾಸಿಕರ ಗೈಡಸೋವಿದೂರಾಬೇಕೆಂದು. ತಾ. ೩೧-೩-೩೦ ನೇ ದಿವ್ಸ (ಜೈತ್ರಶುದ್ಧ ಪ್ರತಿಪದಾ ಸೋಮವಾರ) ದಿಂದ

ಇಲಕಲ್ಲ—ಗದಗ

(ಮೋಟರ ಸರ್ವಿಸ ಪ್ರಾರಂಭವಾಗಿದೆ)

ಇಲಕಲ್ಲದಿಂದಾ ೯॥ಘಂಟೆಗೆ ಹೋಟು ಹುನಗುಂದ, ಅಮಿನಗಡ, ಕಮತಗಿ, ಗುಳೇದಗಡ್ಡ, ಬದಾಮಿ, ಶ್ರೀ ಬನಶಂಕರಿದೇವಸ್ಥಾನ, ಹೊಸಪೇಟೆ ಹಳಿಪ, ಜಾಲಿಹಾಳ, ಹೀರೆಹಾಳ, ಕೊಪಬಾಳ, ರೊಣ, ಅಬ್ಬಿಗೇರಿ, ನರೇಗಲ್ಲ, ಕೊಟುಮಚಗಿ, ನಾರಾಣಾಪುರ, ವಾಗರ್ಗವಾಗಿ ಗದಿಗ್ಗೆ ದಿವಸ ಸಂಜೆಯ ೫ ಘಂಟೆಗೆ ಹೊಗುತ್ತದೆ. ಅಂತದೆವಂದು ಗಾಡಿಯು ತಿರುಗಿ ಅದೇಮಾರ್ಗದಿಂದಾ ಗದಗದಿಂದಾ ಮುಂಜಾನೆ ೧೦ ಘಂಟೆಗೆ ಹೊರಟು ಸಂ ೫ ಘಂಟೆಗೆ ಇಲಕಲ್ಲಿಗೆ ಬಂದು ಮುಟ್ಟುತ್ತದೆ. ಠರಾಸಿದ ವೇಳೆಗಿಂತಾ ೧೫ ನಿನಿಟ ಮುಂಚಿತವಾಗಿ ಪ್ಯಾಸಿಜರರು ಸ್ಪ್ರಿಂಡಿನ ಮೇಲೆ ಹಾಜರ ಇಲ್ಲದ್ದು ಡ್ರಾಯವರನಕಡಿಯಿಂದಾ ಮೋಟರಿನಲ್ಲಿ ಸ್ಥಳವಿದ್ದಬಗ್ಗೆ ಖಾತ್ರಿಮಾಡಿಕೊಂಡು ಟಕೀಟು ತೆಗೆದು ಕೊಳ್ಳಬಹುದ್ದು.

ಇದು ಅಲ್ಲದೆ ನಮ್ಮಲ್ಲಿ ಮೋಟರ ರಿಪೆರಿ ವರ್ಕಶಾಪ್ ಇರುತ್ತದೆ ಮತ್ತು ಹೊಸದಾಗಿ ಎಲ್ಲ ನಮುನೇಯ ಗಾಡಿಗಳಿಗೆ ಬಾಡಿಗಳನ್ನು ತಯಾರಿ ಮಾಡುತ್ತೇವೆ.

ಎಸ್. ಜಿ. ಮೋಟರ ಸರ್ವಿಸ—

ರಾಯಲ್ ಮೇಲ ಕಾಂಟ್ರ್ಯಾಕ್ಟರ್ಸ ವಿಲಿಶವಿಪೆಟ್ ಸೋಲ ಎಜಂಟ್ಸ ಅಂಡ ಡಾಡಿಬಿಲರ್ಸ ಬಾಗಲಕೋ ಟ

ಜಾಹೀರಾತಿನ ಸಲುವಾಗಿ

ಈ ಪತ್ರಿಕೆಯು ವಂಕಟೇಶ ಶೇಷಗಿರಿರಾಮಾಚಾರ್ಯ ರವರು ಇವರಿಂದ ಬಾಗಲಕೋಟೆ ವಿದ್ಯಾಲಂಕಾರ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟು ಅಲ್ಲಿಂದ ಅವರಿಂದಲೇ ಪ್ರಸಿದ್ಧಿಪಡಿಸಲ್ಪಟ್ಟಿತು.